
ಸಿ.ಎನ್. ಮುಕ್ತಾ

# ಮನಸು ಮಂದಾರ



ಗ್ರಂಥ ಸ್ವಾಮ್ಯ ವಿಭಾಗ
ರಾಜ್ಯ ಕೇಂದ್ರ ಗ್ರಂಥಾಲಯ
ಬೆಂಗಳೂರು
894.814 308 3
MUK N96
ಗ್ರಂಥ ಸ್ವಾಮ್ಯ ವಿಭಾಗ

# ಮನಸು ಮಂದಾರ

(ಸಾಮಾಜಿಕ ಕಾದಂಬರಿ)

10,317 1996

ಸಿ. ಎನ್. ಮುಕ್ತಾ

ರಾಜಲಕ್ಷ್ಮೀ ಪ್ರಕಾಶನ
ಬಳೇಪೇಟೆ ಚೌಕ, ಬೆಂಗಳೂರು-560 053

META ENTERED

MANASU MANDARA—A Social Novel by Smt. C. N. Muktha, I Edition : March 1996, Published by Rajalakshmi Prakashana, Balepet Square, Bangalore-560 053.
Pages 192 Price : Rs. 50-00

ಪ್ರಥಮ ಮುದ್ರಣ : ಮಾರ್ಚ 1996

894.814 308 3
MUK N96
69712CR.

ಹಕ್ಕುಗಳು : ಲೇಖಕಿಯದು

ಅಧಿಕೃತ ಮಾರಾಟಗಾರರು :
**ಗೀತಾ ಏಜನ್ಸೀಸ್**
(ಸಗಟು ಪುಸ್ತಕ ವ್ಯಾಪಾರಿಗಳು)
ಬಳೇಪೇಟೆ ಚೌಕ, ಬೆಂಗಳೂರು-53
ದೂರವಾಣಿ : (2874226)

**ಬೆಲೆ : ರೂ. 50-00**

ಮುದ್ರಕರು : ಜೈಗೌರಿ ಮುದ್ರಣಾಲಯ, ಕೆ. ಎಚ್. ಬಿ. ಕಾಲೋನಿ,
2ನೇ ಹಂತ, ಬಸವೇಶ್ವರನಗರ, ಬೆಂಗಳೂರು-79.

# ಒಂದು ಮಾತು

'ಮನಸು ಮಂದಾರ' ವಿಭಿನ್ನ ರೀತಿಯ ಕಥಾವಸ್ತು ಹೊಂದಿರುವ ಕಥೆ. 'ಪ್ರೇಮ ವಿವಾಹ' ಹಾಗೂ 'ಮಕ್ಕಳಿಲ್ಲದವರ ಸಮಸ್ಯೆ' ಕಾದಂಬರಿಯ ಕಥಾ ಹಂದರದಲ್ಲಿದೆ. ಈ ಕಾದಂಬರಿಗೆ ಕಥಾವಸ್ತು ಒದಗಿಸಿದ ನನ್ನ ಚಿಕ್ಕಮ್ಮ ತುಮಕೂರಿನ ಪ್ರಮೀಳ ನಾಗರಾಜ್ ಇವರಿಗೆ ನಾನು ಆಭಾರಿ.

ಕಥಾವಸ್ತುವಿಗೆ ಒಂದು ಸುತ್ತು ರೂಪ ನೀಡಲು ಸಹಕರಿಸಿದ ಆತ್ಮೀಯರಾದ ಅಮ್ಮ ರಾಜೇಶ್ವರಿ ಭಾರತಿ ಹಾಗೂ ವಿ. ಜಯಮ್ಮ ಇವರಿಗೆ ನನ್ನ ಕೃತಜ್ಞತೆಗಳು.

ನನ್ನ ಬರಹಗಳನ್ನು ಪುಸ್ತಕ ರೂಪದಲ್ಲಿ ತಂದು ಪ್ರೋತ್ಸಾಹ ನೀಡುತ್ತಿರುವ ರಾಜಲಕ್ಷ್ಮೀ ಪ್ರಕಾಶನದ ಶ್ರೀ ಕೆ. ಆರ್. ಶ್ರೀನಿವಾಸಮೂರ್ತಿ ಹಾಗೂ 'ಗೀತಾ ಏಜನ್ಸೀಸ್'ನ ಶ್ರೀ ಕೆ. ರಾಮಚಂದ್ರಯ್ಯ ಇವರಿಗೆ ತುಂಬು ಹೃದಯದ ವಂದನೆಗಳು.

ನನ್ನ ಕಥೆ, ಕಾದಂಬರಿಗಳನ್ನು ಸ್ವಾಗತಿಸಿ, ಪ್ರೋತ್ಸಾಹಿಸುತ್ತಿರುವ ನನ್ನ ನೆಚ್ಚಿನ ಓದುಗರಿಗೆ ನನ್ನ ಕೃತಜ್ಞತೆಗಳು. ಅಂದವಾಗಿ ಮುದ್ರಿಸಿರುವ ಅಚ್ಚುಕೂಟದವರಿಗೆ, ಸುಂದರವಾದ ಮುಖ ಚಿತ್ರ ಬರೆದಿರುವ ಕಲಾವಿದರಿಗೆ ನಾನು ಆಭಾರಿ.

ನಿಮ್ಮ

**ಸಿ. ಎನ್. ಮುಕ್ತಾ**

ಮೈಸೂರು,
ನವೆಂಬರ್ 1995

## ಬರಲಿರುವ ಕಾದಂಬರಿಗಳು

| | |
|---|---|
| ನಿನಗಾಗಿ ನಾನೋಡಿ ಬಂದೆ ! | ಉಷಾ ನವರತ್ನರಾವ್ |
| ತಲ್ಲಣಿಸದಿರು ಮನವೇ | ” |
| ಶ್ರಾವಣ ಸಿರಿಸಂಜೆ | ಹೆಚ್. ಜಿ. ರಾಧಾದೇವಿ |
| ಮಧುರ ವೀಣಾ ಲೋಲ | ” |
| ಯಾರು ಹಿತವರು ? | ಸಿ.ಎನ್. ಮುಕ್ತಾ |
| ಜೀವನ ಸಂಘರ್ಷ | ಪದ್ಮಜಾ ಸುಂದರೇಶ್ |

**ರಾಜಲಕ್ಷ್ಮೀ ಪ್ರಕಾಶನ**
ಬಳೇಪೇಟೆ ಚೌಕ, ಬೆಂಗಳೂರು–560 053

# ಮಾನಸ ಮಂದಾರ

# ೧

ಡೈನಿಂಗ್ ಹಾಲ್‌ನಲ್ಲಿ ಮಗನಿಗಾಗಿ ಕಾಯುತ್ತಾ ಕುಳಿತಿದ್ದ ಗಾಯಿತ್ರಿ ದೇವಿ ತಮ್ಮ ಎಡಗೈಯಲ್ಲಿದ್ದ ಚಿನ್ನದ ಸರಪಳಿಯ ಗಡಿಯಾರವನ್ನು ಹತ್ತನೇ ಬಾರಿ ನೋಡಿಕೊಂಡು ಸಿಡಿಮಿಡಿಗೊಂಡರು.

"ಪ್ರಮೋದ್, ಪ್ರಮೋದ್...."

"ಬಂದೆ ಅಮ್ಮ" ಪ್ರಮೋದ್ ಮತ್ತೆ ತನ್ನ ರೂಮ್‌ನಿಂದ ಕೂಗಿದ. ಆದರೆ ಅವನು ಮಾತ್ರ ಹೊರಗೆ ಬರಲಿಲ್ಲ.

ಅಷ್ಟರಲ್ಲಿ ಪದ್ಮಿನಿ ತೆರೆದಿದ್ದ ಬಾಗಿಲಿನಿಂದ 'ಅತ್ತೆ, ಎಂದು ಕೂಗುತ್ತಾ ಒಳಗೆ ಬಂದಳು. ಅವಳನ್ನು ನೋಡಿ ಅವರ ಹುಬ್ಬುಗಳು ಗಂಟಿಕ್ಕಿದವು. ಪದ್ಮಿನಿ ಕೈಯ್ಯಲ್ಲಿದ್ದ ಪಾತ್ರೆಯನ್ನು ಟೇಬಲ್ ಮೇಲಿಟ್ಟು 'ಪ್ರಮೋದ್ ತಿಂಡಿ ತಿಂದಾಯ್ತಾ ಅತ್ತೆ ?' ಎಂದು ಕೇಳಿದಳು.

"ಇನ್ನೂ ಇಲ್ಲ. ಒಂದು ಗಂಟೆಯಿಂದ ಕೂಗ್ತಾ ಇದ್ದೀನಿ, ಬಂದಿದ್ರೆ ಕೇಳು."

ಅವರು ದೂರುತ್ತಿರುವಾಗಲೇ ಅವನು ಒಳಗೆ ಬಂದ. "ಏನೇ ಪಮ್ಮಿ? ಏನು ತಂದಿದ್ದೀಯ ?"

"ಅಮ್ಮ ಅಕ್ಕಿರೊಟ್ಟಿ, ಬದನೆಕಾಯಿ ಪಲ್ಯ ಮಾಡಿದ್ರು. ನಿನಗೆ ಅಕ್ಕಿರೊಟ್ಟಿ ತುಂಬಾ ಇಷ್ಟ ಅಲ್ವಾ ?" ಅದಕ್ಕೆ ಕೊಟ್ಟು ಬಾ ಅಂತ ಹೇಳಿದ್ರು."

"ಅತ್ತೆ ರೊಟ್ಟಿ ಕಳುಹಿಸಿದ್ದಾರಾ ?" ಅವನು ಪಾತ್ರೆಯಿಂದ ರೊಟ್ಟಿ, ಪಲ್ಯ ತೆಗೆದು ತಟ್ಟೆಗೆ ಹಾಕಿಕೊಂಡ.

"ನೀನು ದಿನಾ ಹೀಗೆ ತಿಂಡಿ ತಂದುಕೊಟ್ರೆ ನಮ್ಮನೆ ತಿಂಡಿ ತಿನ್ನೋರ್ಯಾರೆ ? ಪ್ರಮೋದಂಗೆ ಇಷ್ಟಾಂತ ರವೆ ಇಡ್ಲಿ ಮಾಡಿಸಿದ್ದೆ."

"ಸಾರಿ ಅತ್ತೆ, ಪ್ರಮೋದ್ ನೀನು ಇಡ್ಲಿ ತಿನ್ನು. ರೊಟ್ಟಿ ರುಚಿ ನೋಡಿದ್ರೆ ಸಾಕು."

"ನಾನು ರೊಟ್ಟೀನ್ನೂ ತಿಂತೀನಿ, ಇಡ್ಲೀನ್ನೂ ತಿಂತೀನಿ. ನೀವಿಬ್ರೂ ಯೋಚನೆ ಮಾಡಿಬೇಡ."

ಪದ್ಮಿನಿಯ ಮುಖ ಅರಳಿದರೆ ಗಾಯಿತ್ರಿದೇವಿಯ ಮುಖ ಪೆಚ್ಚಾಯಿತು.

"ನಾನು, ಇವಳು ಇಬ್ಬರೂ ಇವನ ದೃಷ್ಟಿಯಲ್ಲಿ ಒಂದೇನೆ ? ತಾಯಿ ಅನ್ನುವ ಮಮಕಾರವೇ ಇಲ್ಲವಲ್ಲಾ ? ಒಬ್ಬನೇ ಮಗ ಎಂದು ಮುದ್ದು ಮಾಡಿ ಬೆಳೆಸಿದ್ದು ತಪ್ಪಾಯಿತೇನೋ ?'

"ಪಮ್ಮಿ, ನೀನೆರಡು ಇಡ್ಲಿ ತಿನ್ನು."

"ಊಹುಂ, ನಮ್ಮ ಸೈನ್ಯಕ್ಕೆ ರೊಟ್ಟಿಮಾಡಿ ಕೊಡಬೇಕು. ನೀನು ಕಾಲೇಜಿಗೆ ಹೋಗ್ತೀಯಲ್ಲಾಂತ ಬಂದೆ."

"ಕಾಫೀನ್ನಾದ್ರೂ ಕುಡಿ."

ಅವನ ಬಲವಂತಕ್ಕೆ ಕಾಫಿ ಕುಡಿದು ಪದ್ಮಿನಿ ಮನೆಯತ್ತ ಹೊರಟಳು.

ಪ್ರಮೋದ್ ತಿಂಡಿ ತಿಂದು ಬೈಕ್ ಹತ್ತುವ ವೇಳೆಗೆ ತಮ್ಮ ಮನೆಯ ಗೇಟಿನ ಬಳಿ ನಿಂತು ಕೈಯ್ಯಾಡಿಸಿದಳು ಪದ್ಮಿನಿ. ಬಾಲ್ಕನಿಯಲ್ಲಿ ನಿಂತಿದ್ದ ಗಾಯಿತ್ರಿದೇವಿ ದೊಡ್ಡದಾಗಿ ಉಸಿರೆಳೆದುಕೊಂಡರು.

ಹನ್ನೊಂದು ಗಂಟೆಯ ಹೊತ್ತಿಗೆ ಪದ್ಮಿನಿ ಬಂದಾಗ ಗಾಯಿತ್ರಿದೇವಿ ಉಯ್ಯಾಲೆಯಲ್ಲಿ ಕುಳಿತು ತೂಗಿಕೊಳ್ಳುತ್ತಿದ್ದರು.

"ಅತ್ತೆ ಪೇಪರ್ ಓದಿ ಹೇಳಲಾ ?"

"ಬೇಡ ಕಣೇ, ಯಾಕೋ ಮೂಡ್ ಇಲ್ಲ."

"ಔಷಧಿ ತೊಗೊಂಡ್ರಾ ?"

"ದಿನಾ ಆ ಪಿಲ್ಸ್‌ನುಂಗಕ್ಕೆ ಬೇಜಾರು."

"ನೀವು ಬೇಜಾರೂಂದ್ರೆ ನಿಮ್ಮ ಬಿ.ಪಿ. ಕೇಳಬೇಕಲ್ಲಾ ?" ಅವಳು ಜಿಂಕೆಯಂತೆ ರೂಂಗೆ ಹಾರಿ, ಒಂದು ಕೈಲಿ ಪಿಲ್ಸ್ ಮತ್ತೊಂದು ಕೈಲಿ ನೀರಿನ ಲೋಟ ಹಿಡಿದು ಬಂದಳು.

"ಅಮ್ಮ ಏನ್ಮಾಡ್ತಿದ್ರು ?"

"ತಿಂಡಿ ತಿಂದು ತಲೆಬಾಚಿಕೊಳ್ತಿದ್ರು."

"ನಿಮ್ಮಜ್ಜಿ ಹೇಗಿದ್ದಾರೆ ?"

"ಯಥಾಪ್ರಕಾರ ತುಂಬಾ ಮೊಂಡುತನ ಮಾಡ್ತಾರೆ. ನಾವು ಹೇಳೋ ಮಾತು ಕೇಳೋದೇ ಇಲ್ಲ."

"ನಿಮ್ಮ ತಂದೆ ಮನೆಯಲ್ಲಿದ್ರಾ ?"

"ಅವರೆಲ್ಲಿರ್ತಾರೆ ಅತ್ತೆ ? ತಿಂಡಿ ತಿಂದು ಒಂದು ರೌಂಡ್ ಹೊರಟರು."

"ಎಂ. ಎ.ಗೆ ಸೇರ್ತಿಯೇನೆ ?"

"ನಮ್ತಂದೆ ಬೇಡ ಅಂದ್ರು. ನಮ್ಮಮ್ಮ ಎಷ್ಟು ಹೇಳಿದ್ರು ಕೇಳಲಿಲ್ಲ."

"ಬಿ. ಇಡಿ. ಗಾದ್ರೂ ಸೇರಿದ್ದಿದ್ರೆ ಚೆನ್ನಾಗಿರ್ತಿತ್ತು. ಆಮೇಲೆ ನಾನೇ ಎಲ್ಲಾದ್ರೂ ಕೆಲಸ ಕೊಡಿಸ್ತಿದ್ದೆ."

"ನಂಗೆ ಟೀಚರ್ ಕೆಲಸ ಬೇಜಾರು...."

"ಗಂಡು ನೋಡ್ತಿದ್ದಾರೇನೆ ?"

ಅವರ ಪ್ರಶ್ನೆ ಕೇಳಿ ಅವಳಿಗೆ ಕ-ವಿಸಿಯಾದರೂ ತೋರಿಸಿಕೊಳ್ಳದೆ ಹೇಳಿದಳು. "ನಂಗೊತ್ತಿಲ್ಲ ಅತ್ತೆ, ಗಂಡು ನೋಡಿದ್ರೂ ಮದುವೆ ಮಾಡಕ್ಕೆ ಹಣ ಬೇಡ್ವಾ ? ಅದು ಅಲ್ದೆ ನನಗೆ ಈಗಲೇ ಮದುವೆಯಾಗಕ್ಕೆ ಇಷ್ಟಾನೂ ಇಲ್ಲ."

"ನಿಮ್ತಂದೆಗೆ ಓದಿಸಕ್ಕೂ ಇಷ್ಟವಿಲ್ಲ, ಮದುವೆ ಮಾಡಕ್ಕೂ ಕೈಲಾಗಲ್ಲ. ಎದೆ ಎತ್ತರಕ್ಕೆ ಬೆಳೆದ ಮಗಳನ್ನು ಮನೇಲಿ ಇಟ್ಟುಕೊಂಡು ಏನ್ಮಾಡ್ತಾರಂತೆ....ಯಾವುದಾದ್ರೂ ಕೆಲಸಕ್ಕೆ ಸೇರಿಸಬಾರದಾ ?"

"ನನ್ನದಿನ್ನೂ ರಿಸಲ್ಟೇ ಬಂದಿಲ್ಲವಲ್ಲ ಅತ್ತೆ. ಅದೂ ಅಲ್ಲದೆ ನಾನು ಓದಿರುವ ಬಿ.ಎ.ಗೆ ಯಾರು ಕೆಲಸ ಕೊಡ್ತಾರೆ ?"

"ನಾನೆಲ್ಲಾದ್ರೂ ಟ್ರೈಮಾಡ್ತೀನಿ, ಕೆಲಸಕ್ಕೆ ಸೇರ್ತೀಯಾ ?"

"ನಮ್ಮ ತಾಯೀನ್ನ ಕೇಳ್ತೀನಿ. ಅಮ್ಮಂಗೆ ಹೆಣ್ಮಕ್ಳು ಕೆಲಸಕ್ಕೆ ಸೇರೋದು ಇಷ್ಟವಿಲ್ಲ."

"ಬಡತನವಿದ್ರೂ ಕೊಬ್ಬು ಜಾಸ್ತಿ" ಎಂದುಕೊಂಡರು ಗಾಯಿತ್ರಿದೇವಿ.

"ಅತ್ತೆ ಕಥೆಪುಸ್ತಕ ತೆಗೆದುಕೊಳ್ಳಲಾ ?"

"ಹುಂ."

ಅವಳು ಮಹಡಿ ಹತ್ತಿ, ಲೈಬ್ರರಿ ರೂಂ ಹೊಕ್ಕು ತನಗೆ ಬೇಕಿದ್ದ ನಾಲ್ಕು ಪುಸ್ತಕ ತೆಗೆದುಕೊಂಡಳು. ಎದುರಿಗಿದ್ದುದೇ ಪ್ರಮೋದನ ರೂಂ. ಮೆಲ್ಲದೆ ಇಣುಕಿದಳು ಎಂದಿನಂತೆ ಅವನು ಬಟ್ಟೆ, ಪುಸ್ತಕ ಹರಡಿದ್ದ ಹಾಸಿಗೆ ಸರಿಮಾಡಿ ಬಟ್ಟೆ, ಪುಸ್ತಕ ಓರಣವಾಗಿಟ್ಟಳು.

"ಪಮ್ಮಿ ಅಲ್ಲೇ ಪ್ರಮೋದನ ಬಟ್ಟೆಗಳಿವೆ. ತೊಗೊಂಡು ಬಾ, ಐರನ್‌ಗೆ ಕೊಡಬೇಕು."

ಅವಳು ನಾಲ್ಕು ಪ್ಯಾಂಟ್, ನಾಲ್ಕು ಷರಟು ತೆಗೆದುಕೊಂಡು ಕೆಳಗಿಳಿದಳು. ಆ ವೇಳೆಗೆ ಗಾಯಿತ್ರಿದೇವಿ ಬೇರೆ ಸೀರೆಯುಟ್ಟು ಸಿದ್ಧವಾಗಿದ್ದರು.

"ಇವತ್ತು 'ಸರ್ವೋದಯ ಶಾಲೆಯ ಬೆಟರ್‌ಮೆಂಟ್ ಕಮಿಟಿ ಮೀಟಿಂಗ್ ಇದೆ. ನಾನು ಹೋಗಬೇಕು. ಒಂದು ಕೆಲಸ ಮಾಡಿ ಕೊಡ್ತೀಯಾ ?"

"ಹೇಳಿ ಅತ್ತೆ."

"ನೀನೇನಾದ್ರೂ ಹೊರಗೆ ಹೋದ್ರೆ 'ವೈಭವಿ ಟೈಕ್ಸ್‌ಟೈಲ್ಸ್' ನಿಂದ 20 ಮೀಟರ್ ಡೋರ್‌ಕರ್ಟನ್ ಬಟ್ಟೆ ತಂದುಬಿಡು. ದುಡ್ಡು ಆಮೇಲೆ ಕಳುಹಿಸ್ತಾರೇಂತ ಹೇಳಿಬಿಡು."

"ಆಗಲಿ ಅತ್ತೆ" ಎಂದಳು ಪದ್ಮಿನಿ

ಅವಳು ಮನೆಗೆ ಬಂದಾಗ ತರಕಾರಿ ಹಚ್ಚುತ್ತಾ ಕುಳಿತಿದ್ದ ಸೀತಮ್ಮ ಸಿಡುಕಿದರು. "ಎಷ್ಟು ಹೊತ್ತಿಗೆ ಮನೆಗೆ ಬರೋದು? ಪೇಪರ್ ಓದಿ ಬರಕ್ಕೆ ಇಷ್ಟು ಹೊತ್ತು ಬೇಕಾ ? ಹುಡುಗ್ರು ತಿಂಡಿ ತಿಂದು ಸ್ಕೂಲಿಗೆ ಹೋಗಾಯ್ತು. ಇನ್ಮೇಲೆ ನೀನು ಬೆಳಗಿನ ಹೊತ್ತು ಅಲ್ಲಿಗೆ ಹೋಗಬೇಡ."

"ನೀನು ಈ ರೀತಿ ಹೇಳ್ತಿರೋದು ನೂರೊಂದನೇ ಸಲ."

"ಸಾವಿರ ಸಲ ಹೇಳಿದ್ರೂ ನೀನೆಲ್ಲಿ ನಿನ್ನ ಬುದ್ಧಿ ಬಿಡ್ತೀಯ ?"

"ಸುಮ್ಮನೆ ಗೊಣಗಬೇಡ, ಏನು ಕೆಲಸವಿದೆ ಹೇಳು."

"ಕಾಫಿ ಪಾತ್ರೆ, ತಿಂಡಿ ತಟ್ಟೆ–ಲೋಟ ತೊಳೆದುಬಿಡು."

ಅವಳು ಪಾತ್ರೆ ತೊಳೆಯುವ ಕೆಲಸ ಮುಗಿಸಿ ಕುಕ್ಕರ್ ಇಟ್ಟಳು.

ಸೀತಮ್ಮ ಅವಳು ತಂದಿದ್ದ ಕಾದಂಬರಿಗಳನ್ನು ತಿರುಗಿಸಿ ನೋಡುತ್ತಾ ಕೇಳಿದರು "ಗಾಯತ್ರಿ ಎಲ್ಲಿಗೆ ಹೋದಳು ?"

"ಯಾವುದೋ ಮೀಟಿಂಗ್‌ಗೆ ಹೋದರು."

"ಯಾಕೆ ಮುಂದೆ ಓದಲ್ಲಾಂತ ಕೇಳಿದ್ರು ಗಂಡು-ಗಿಂಡು ನೋಡಿದ್ದಾರೇನೇಂತ ವಿಚಾರಿಸಿಕೊಂಡ್ರು ಕೆಲಸಕ್ಕೆ ಸೇರ್ತೀಯ, ನಾನೇ ಕೊಡಿಸ್ತೀನಿ ಅಂದ್ರು."

"ಹಾಗಂದ್ರಾ ಗಾಯಿತ್ರಿ ? ನೀನು ಏನು ಹೇಳಿದೆ ?"

"ಏನೋ ಹೇಳಿದೆ ಬಿಡು."

"ನಿಂಗೆ ಕೆಲಸಮಾಡುವಂತಹ ಸ್ಥಿತಿ ಏನ್ಬಂದಿದೆಯಂತೆ ? ಆಕೆಗೆ ಅತಿ ಆಸೆ ಬಿಡು...."

"ಏನಮ್ಮ ಹಾಗಂದ್ರೆ ? ನಾನು ಸಂಪಾದನೆ ಮಾಡಿದ್ರೆ ನಮಗೆ ತಾನೆ ಅನುಕೂಲ ? ಅದಕ್ಕೂ ಅವರಿಗೂ ಏನು ಸಂಬಂಧ ?"

"ಅಷ್ಟೊಂದು ಆಸ್ತಿ-ಪಾಸ್ತಿ ಇಟ್ಟುಕೊಂಡು ಸೊಸೆ ಕೈಲಿ ದುಡಿಸು ವಂತಹ ದುರ್ಬುದ್ಧಿ ಯಾಕೆ ಅವಳಿಗೆ ?"

"ಏನ್ಮಾತಾಡ್ತಿದ್ದೀಯಮ್ಮ ನೀನು ? ಯಾರು ಸೊಸೆ ?"

"ನೀನೇ ಅವಳ ಸೊಸೆ ! ಅವಳು ಚಿಕ್ಕಂದಿನಲ್ಲೇ ಮಾತು ಕೊಟ್ಟಿದ್ದಾಳೆ. ಅವಳು ಖಂಡಿತಾ ನಿನ್ನನ್ನು ಸೊಸೆ ಮಾಡಿಕೊಳ್ತಾಳೆ."

"ಅಮ್ಮ. ದಯವಿಟ್ಟು ನೀನು ಸುಮ್ನಿರು, ಒಟ್ಟಿಗೆ ಬೆಳೆದಿರೋದ್ರಿಂದ ನಮ್ಮಲ್ಲಿ ಸಲಿಗೆ ಇರಬಹುದು. ಆದರೆ ನಾನು ಅಂತಹ ಆಸೆ ಇಟ್ಟುಕೊಂಡಿಲ್ಲ. ಇಷ್ಟರ ಮೇಲೆ ಪ್ರಮೋದ್‌ಗೆ ಏನು ಕಡಿಮೆಯಾಗಿದೆ ? ಅವನು ಮದುವೆ ಆಗ್ತೀನಿ ಅಂದ್ರೆ ಸಾವಿರಾರು ಜನ ಹೆಣ್ಣು ಕೊಡ್ತಾರೆ.

"ಇದೇನೆ ಹೀಗೆ ಹೇಳ್ತಿದ್ದೀಯ ನೀನು ? ನೀನೇ ಅವಳ ಸೊಸೇಂತ ನಾವೆಲ್ಲಾ ತೀರ್ಮಾನಿಸಿದ್ದೇವೆ. ನಿಮ್ಮಜ್ಜಿಯಂತೂ ನಿನ್ನ ಮದುವೆ ನೋಡಕ್ಕೇ ಜೀವ ಇಟ್ಕೊಂಡಿದ್ದಾರೆ. ಪ್ರಮೋದ್ ಪರೀಕ್ಷೆ ಆಗುವುದನ್ನೇ ಕಾಯ್ತಿದ್ದಾರೆ.

"ನಾವೆಲ್ಲಾಂದ್ರೆ ಯಾರು ? ನೀನು ಅಪ್ಪ, ಅಜ್ಜಿ ತಾನೆ ? ಪ್ರಮೋದ್ ಅಥವಾ ಅವನಮ್ಮ ಈ ಬಗ್ಗೆ ಏನಾದ್ರೂ ಹೇಳಿದ್ದಾರಾ ?"

"ಗಾಯಿತ್ರಿಗೆ ನಿನ್ನನ್ನು ಸೊಸೊಮಾಡಿಕೆಳ್ಳಕ್ಕೆ ಇಷ್ಟವಿಲ್ಲವೇನೆ ?"

"ಇಲ್ಲಾಂತ ಕಾಣುತ್ತೆ. ಇದ್ದಿದ್ರೆ ಅವರ್‍ಯಾಕೆ 'ಗಂಡು ನೋಡ್ತಿದ್ದಾರೇನೆ?' ಅಂತ ಕೇಳ್ತಿದ್ರು."

"ನಾಳೆಯಿಂದ ನೀನು ಅವರ್ಮನೆಗೆ ಹೋಗಬೇಡ. ಅವನ ಜೊತೇನೂ ಮಾತಾಡಬೇಡ."

ಅವಳು ಜೋರಾಗಿ ನಕ್ಕಳು. "ನಾನು ಹೋಗಲಿಲ್ಲಾಂದ್ರೆ ಅವರ್ಮನೇಲಿ ಬೆಳಗಾಗೋದೆ ಇಲ್ಲವೇನೋ ?" ಅನ್ನುವಂತೆ ಅಮ್ಮ ಮಾತಾಡ್ತಿದ್ದಾಳಲ್ಲಾ ? ಅನ್ನಿಸಿತು.

ಅವಳು ಬಟ್ಟೆ ಒಗೆದು ಅಡಿಗೆಮನೆಯಲ್ಲಿ ತಾಯಿಗೆ ಸಹಾಯ ಮಾಡಿ, ಮಹಡಿ ಮೇಲಿದ್ದ ತನ್ನ ಕೋಣೆಗೆ ಹೋಗಿ ಕಾದಂಬರಿ ಹಿಡಿದು ಚಾಪೆಯ ಮೇಲೆ ಉರುಳಿಕೊಂಡಳು. ಪುಸ್ತಕದ ಮೇಲೆ ಪ್ರಮೋದ್ ತನ್ನ ಹೆಸರು ಬರೆದಿದ್ದ. ಅವಳು ಅದನ್ನು ಬೆರಳುಗಳಿಂದ ಸವರಿ ತುಟಿಗೊತ್ತಿಕೊಂಡಳು. ಪ್ರಮೋದ್‌ನ ನೆನಪಾದೊಡನೆ ಅವಳ ಮೈ ಪುಳುಕಿತವಾಯ್ತು. ಅವಳಿಗಿಂತ ಮೂರು ವರ್ಷ ದೊಡ್ಡವನು, ಇಬ್ಬರೂ ಒಟ್ಟಿಗೆ ಆಡಿ ಬೆಳೆದಿದ್ದರು.

ಗಾಯಿತ್ರಿದೇವಿಯ ಪತಿ ಗೋವರ್ಧನರಾಯರು ದೊಡ್ಡ ಕಂಟ್ರಾಕ್ಟರ್, 'ಗಾಯಿತ್ರಿ ಕನ್‌ಸಲ್ಟೆಂಟ್ಸ್' ಎಂದು ಅವರು ಆರಂಭಿಸಿದ್ದ ಸಂಸ್ಥೆ ಇಂದು ಬೃಹದಾಕಾರವಾಗಿ ಬೆಳೆದು ಈಗ 'ಪ್ರಮೋದ್ ಕನ್‌ಸ್ಟ್ರಕ್ಷನ್ಸ್' ಎಂಬ ಲಾಂಛನದಡಿ ಕೆಲಸಮಾಡುತ್ತಿತ್ತು. ಗಾಯಿತ್ರಿದೇವಿಯ ತಮ್ಮ ಭಗವಾನ್ ರಾಯರ ಮರಣದ ನಂತರ ಭಾವನ ವಹಿವಾಟನ್ನು ಸಂಪೂರ್ಣ ವಹಿಸಿಕೊಂಡಿದ್ದರು. ಅವರಿಗಿದ್ದ ಇಬ್ಬರು ಗಂಡುಮಕ್ಕಳೂ ಅಮೇರಿಕಾದಲ್ಲಿದ್ದರು. ಇಬ್ಬರೂ ಡಾಕ್ಟರ್ಸ್. ಕೈತುಂಬಾ ಸಂಪಾದಿಸುತ್ತಿದ್ದರು. ಗಾಯಿತ್ರಿದೇವಿಗೆ ತಮ್ಮನಲ್ಲಿ ತುಂಬಾ ನಂಬಿಕೆಯಿತ್ತು.

ರಾಯರು ಬೆಂಗಳೂರಿಗೆ ಬಂದಾಗ 25ರ ತರುಣ ಬಿ.ಇ. ಮುಗಿದು, ಗಾಯಿತ್ರಿಯನ್ನು ಪ್ರೇಮವಿವಾಹ ಮಾಡಿಕೊಂಡಿದ್ದರು. ಗಾಯಿತ್ರಿಯ ತಾಯಿ–ತಂದೆ ಮಧ್ಯಮವರ್ಗದವರಾದರೂ, ಗಾಯಿತ್ರಿ ದೊಡ್ಡಮ್ಮನಿಗೆ 'ದತ್ತು' ಆಗಿದ್ದಳು. ಆಕೆಗೆ ಅಪಾರ ಆಸ್ತಿಯಿತ್ತು. ಅವರ ಮನೆಗೆ ವಾರಾನ್ನಕ್ಕೆ

ಬರುತ್ತಿದ್ದ ಗೋವರ್ಧದ ಗಾಯಿತ್ರಿಯ ಮನಸ್ಸು ಕದ್ದಿದ್ದ. ಗೋವರ್ಧನ್ ಬಡವನೆಂದು ತಿಳಿದಿದ್ದರೂ ಗಾಯಿತ್ರಿ ಒಲಿದಿದ್ದಳು. ದೊಡ್ಡಮ್ಮನ ಅಪಾರ ಆಸ್ತಿಗೆ ತಾನೇ ಹಕ್ಕುದಾರಿಣಿಯಾಗಿರುವುದರಿಂದ ತನ್ನ ಸಿರಿತನಕ್ಕೆ ಕುಂದಿಲ್ಲ ವೆಂದು ಅವಳು ಭಾವಿಸಿದ್ದಳು.

ಆದರೆ ಗಾಯಿತ್ರಿಯ ದೊಡ್ಡಮ್ಮ ಈ ಮದುವೆಗೆ ಒಪ್ಪಿರಲಿಲ್ಲ ನಾಲ್ಕು ದಿನ ಕಳೆದರೆ ಸರಿಹೋಗಬಹುದೆಂಬ ಭಂಡ ಧೈರ್ಯದಿಂದ ಗಾಯಿತ್ರಿ ಗೋವರ್ಧನನನ್ನು ವರಿಸಿದ್ದಳು. ಆದರೆ ಅವಳ ದೊಡ್ಡಮ್ಮ ಆಸ್ತಿಯನ್ನೆಲ್ಲಾ ಗಂಡನ ಅಣ್ಣನ ಮಕ್ಕಳಿಗೆ ಬರೆದು ಕಣ್ಮುಚ್ಚಿದ್ದರು.

ಗೋವರ್ಧನ್ ಮದುವೆಯ ನಂತರ 2 ವರ್ಷ ದಾವಣಗೆರೆಯಲ್ಲಿದ್ದು ನಂತರ ಕೆಲಸ ಸಿಕ್ಕಿದೊಡನೆ ಬೆಂಗಳೂರಿಗೆ ಬಂದಿದ್ದ. ಸಣ್ಣ ಮನೆ ಮಾಡಿ ಹೆಂಡತಿಯನ್ನು ಕರೆಸಿಕೊಂಡಿದ್ದ. ಗಾಯಿತ್ರಿಯ ಮನೆಯ ಪಕ್ಕದಲ್ಲೇ ಕನ್ನಡ ಪಂಡಿತರಾದ ರಾಮಚಂದ್ರ ಶಾಸ್ತ್ರಿಗಳಿದ್ದರು. ಅವರ ಪತ್ನಿ ಸೀತಮ್ಮ ಸ್ನೇಹಜೀವಿ ಗಾಯಿತ್ರಿ ಅವರ ಜೊತೆ ಸ್ನೇಹ ಬೆಳೆಸಿದ್ದಳು. ಆ ವೇಳೆಗೆ ಸೀತಮ್ಮನಿಗೆ ವತ್ಸಲಾ ಹುಟ್ಟಿದ್ದಳು. ಗಾಯಿತ್ರಿ ಗರ್ಭಿಣಿಯಾದಾಗ ಗಂಡನ ಕಡೆಯವರಾಗಲಿ ತವರಿನವರಾಗಲಿ ಸಹಾಯಕ್ಕೆ ಬಂದಿರಲಿಲ್ಲ. ಸೀತಮ್ಮ ಅವಳನ್ನು ತುಂಬಾ ಚೆನ್ನಾಗಿ ನೋಡಿಕೊಂಡಿದ್ದರು. ಬಾಣಂತನ ತಾವೇ ಮಾಡಿದ್ದರು. ಗಾಯಿತ್ರಿ ಅವರಿಂದ ಪಡೆದ ಉಪಕಾರಕ್ಕೆ ಕೊನೆ ಮೊದಲಿರಲಿಲ್ಲ. ಪ್ರಮೋದ್‌ಗೆ 3 ವರ್ಷ ತುಂಬಿತ್ತು. ಗಾಯಿತ್ರಿದೇವಿಗೆ ಮೇಲಿಂದ ಮೇಲೆ ಮೈ ಇಳಿದು ಹೋಗಿ ತುಂಬಾ ನಿಶ್ಯಕ್ತರಾಗಿದ್ದರು. ಇದೇ ಸಂದರ್ಭದಲ್ಲಿ ಸೀತಮ್ಮ ನಿಗೆ ಪದ್ಮಿನಿ ಹುಟ್ಟಿದ್ದಳು. ಕಪ್ಪು ಗಂಗುರು ಕೂದಲು, ಕಪ್ಪು ಕಣ್ಣುಗಳು ಕೆನೆಹಾಲಿನಬಣ್ಣ ನೋಡಿ ಗಾಯಿತ್ರಿ ಮೈಮರೆತ್ತಿದ್ದರು ಅವರೇ 'ಪದ್ಮಿನಿ' ಎಂದು ಹೆಸರಿಟ್ಟಿದ್ದರು.

"ಸೀತಮ್ಮ, ನಿಮ್ಮ ಮಗಳು ನನ್ನ ಸೊಸೆ" ಎಂದಿದ್ದರು ಕೂಡ.

ಕ್ರಮೇಣ ರಾಯರು ಜೀವನದಲ್ಲಿ ಮೇಲೇರುತ್ತಾ ಹೋಗಿದ್ದರು. ಪ್ರಮೋದ್ ಹುಟ್ಟಿದ5–6ವರ್ಷಗಳಲ್ಲಿ ಸ್ವಂತಮನೆ ಮಾಡಿದ್ದರು. ಗಾಯಿತ್ರಿಗೆ ಬೇಕಾದಷ್ಟು ಒಡವೆ ಮಾಡಿಸಿದ್ದರು. ಆದರೆ ಗಾಯಿತ್ರಿಗೆ ಪದ್ಮಿನಿಯ ಬಗ್ಗೆ

ಇದ್ದ ಪ್ರೀತಿ ಕುಗ್ಗಿರಲಿಲ್ಲ. ಪ್ರಮೋದ್ ಕೂಡ ಪದ್ಮಿನಿಯೆಂದರೆ ಕುಣಿಯು ತ್ತಿದ್ದ. ಸ್ವಂತಮನೆಗೆ ಹೋದಮೇಲೂ ಪ್ರತಿ ಶನಿವಾರ ಪದ್ಮಿನಿಯನ್ನು ತಮ್ಮ ಮನೆಗೆ ಕರೆಸಿಕೊಂಡು ಸೋಮವಾರ ವಾಪಸ್ಸು ಕಳುಹಿಸುತ್ತಿದ್ದರು. ಪ್ರಮೋದ್ ಹೈಸ್ಕೂಲ್‌ಗೆ ಬರುವ ವೇಳೆಗೆ ಪದೇಪದೇ ಆದ ಗರ್ಭಪಾತದಿಂದ ಗಾಯಿತ್ರಿ ಜೀವಂತಶವದಂತಾಗಿದ್ದರೆ, ಸೀತಮ್ಮ ಪದ್ಮಿನಿಯ ನಂತರ ಮೂರು ಮಕ್ಕಳಿಗೆ ಜನ್ಮ ನೀಡಿದ್ದರು. ಪದ್ಮಿನಿಯ ನಂತರ ಇಂದುಮತಿ, ಗುರುರಾಜ, ಆನಂದ ಹುಟ್ಟಿದ್ದರು.

ರಾಮಚಂದ್ರ ಶಾಸ್ತ್ರಿಗಳು ಕನ್ನಡ ಪಂಡಿತರಾಗಿದ್ದರೂ, ಪೌರೋಹಿತ್ಯ ಮಾಡುತ್ತಿದ್ದರು. ಮನೆಯಲ್ಲಿ ಸಂಸ್ಕೃತಪಾಠ ಹೇಳುತ್ತಿದ್ದರು. ಹೊಟ್ಟೆ ಬಟ್ಟೆಗೆ ತೊಂದರೆಯಿರಲಿಲ್ಲ. ಸೀತಮ್ಮನೂ ಜಾಣೆ ಬರುತ್ತಿದ್ದ ಆದಾಯದಲ್ಲಿ ಅಚ್ಚುಕಟ್ಟಾಗಿ ಸಂಸಾರ ಮಾಡುತ್ತಿದ್ದರು. ಹಿರಿಯ ಮಗಳನ್ನು ಬ್ಯಾಂಕ್ ಉದ್ಯೋಗಿಯೊಬ್ಬನಿಗೆ ಕೊಟ್ಟು ಮದುವೆ ಮಾಡಿದ್ದರು. ಅವಳು ಸದ್ಯದಲ್ಲಿ ಮೈಸೂರಿನಲ್ಲಿದ್ದಳು.

ಸೀತಮ್ಮ ಆನಂದನಿಗೆ ಜನ್ಮಕೊಡುವ ವೇಳೆಗೆ ಗಾಯಿತ್ರಿದೇವಿ ತುಂಬಾ ಬದಲಾಯಿಸಿದ್ದರು. ಅವರೀಗ ಜಯನಗರದಲ್ಲಿ ದೊಡ್ಡ ಬಂಗಲೆಯಲ್ಲಿದ್ದರು. ನೂರಾರು ಸಂಘ ಸಂಸ್ಥೆಗಳಿಗೆ ಸದಸ್ಯರಾಗಿದ್ದರು. ಮನೆ ವೈಭವದಲ್ಲಿ ಮುಳುಗಿತ್ತು. ಆದರೆ ಆಕೆಗೆ ಆರೋಗ್ಯವೇ ಸರಿಯಾಗಿರಲಿಲ್ಲ.

ಒಮ್ಮೆ ಪ್ರಮೋದ್ ಹೈಸ್ಕೂಲ್‌ನಲ್ಲಿದ್ದಾಗ ಗಾಯಿತ್ರಿದೇವಿಗೆ ಟೈಫಾಯ್ಡ್ ಆಯಿತು. ಔಷಧಿಗಳ ವ್ಯತ್ಯಾಸದಿಂದ ಆಕೆಯ ಬಲಗೈ ಬಲ ಗಾಲು ಬಿದ್ದುಹೋಗಿತ್ತು. ರಾಯರು ಆಗ ಶಾಸ್ತ್ರಿ ದಂಪತಿಗಳನ್ನು ಭೇಟಿ ಮಾಡಿ ಸೀತಮ್ಮನ ಸಹಾಯ ಕೋರಿದ್ದರು. ಸೀತಮ್ಮ ಅತ್ತಿಗೆ ಮನೆಯ ಜವಾಬ್ದಾರಿ ವಹಿಸಿ ಗಾಯಿತ್ರಿಯ ಸೇವೆ ಮಾಡಿದ್ದರು. ರಾಯರು ತಮ್ಮ ಮನೆಯ ಎದುರಿಗಿದ್ದ ಒಂದು ಹಳೆಯ ಮನೆ ಕೊಂಡು, ರಿಪೇರಿ ಮಾಡಿಸಿ ಶಾಸ್ತ್ರಿಗಳ ಸಂಸಾರವನ್ನು ಅಲ್ಲಿಗೆ ತಂದಿಟ್ಟಿದ್ದರು. ಶಾಸ್ತ್ರಿಗಳು ಅದಕ್ಕೆ 50 ರೂ. ಬಾಡಿಗೆ ಕೊಡುತ್ತಿದ್ದರು. ಸುಮಾರು 4-5 ವರ್ಷ ಗಾಯಿತ್ರಿ ಮಲಗಿದ್ದಲ್ಲೇ ಮಲಗಿದ್ದರು. ಪದ್ಮಿನಿ ತಾಯಿಯ ಹಿಂದೆ ಪ್ರತಿದಿನ ಅವರ ಮನೆಗೆ ಹೋಗಿ ಬರುತ್ತಿದ್ದಳು.

ಗಾಯಿತ್ರಿದೇವಿಗೆ ಸೀತಮ್ಮನ ಬಗ್ಗೆ ತುಂಬಾ ವಿಶ್ವಾಸವಿತ್ತು. ಅವರ ಮಕ್ಕಳ ಬಗ್ಗೆ ಪ್ರೀತಿ ಇತ್ತು ಅದರಲ್ಲೂ ಪದ್ಮಿನಿಯ ಬಗ್ಗೆ ಹೆಚ್ಚಿನ ಅಭಿಮಾನ ವಿತ್ತು. ಆದರೆ ಮಧ್ಯಮ ವರ್ಗದ ಕುಟುಂಬದ ಪದ್ಮಿನಿ ತಮ್ಮ ಸೊಸೆಯಾಗಿ ಬರುವುದು ಅವರಿಗೆ ಕೊಂಚವೂ ಇಷ್ಟವಿರಲಿಲ್ಲ. ಈ ವಿಚಾರ ಯಾರಿಗೆ ಚೆನ್ನಾಗಿ ಅರ್ಥವಾಗದಿದ್ದರೂ, ಪದ್ಮಿನಿಗೆ ಅರ್ಥವಾಗಿತ್ತು.

ಪದ್ಮಿನಿಯ ತಂಗಿ, ತಮ್ಮಂದಿರಿಗೆ ಗಾಯಿತ್ರಿದೇವಿಯ ಬಗ್ಗೆ ತುಂಬಾ ಭಯವಿತ್ತು. ಆದ್ದರಿಂದ ಅವರು ಹೆಚ್ಚಾಗಿ ಅವರ ಮನೆಗೆ ಹೋಗುತ್ತಿರಲಿಲ್ಲ. ಆದರೆ ಪದ್ಮಿನಿಗೆ ಅವರ ಮನೆಯಲ್ಲಿ ತುಂಬಾ ಸಲಿಗೆ. ದಿನಕ್ಕೆ ನಾಲ್ಕು ಬಾರಿ ಯಾದರೂ ಅಲ್ಲಿಗೆ ಹೋಗದಿದ್ದರೆ ಅವಳ ಮನಸ್ಸಿಗೆ ಸಮಾಧಾನ ವಿರುತ್ತಿರಲಿಲ್ಲ.

ಪದ್ಮಿನಿ ಹೈಸ್ಕೂಲಿಗೆ ಬರುವ ವೇಳೆಗೆ ಗಾಯಿತ್ರಿದೇವಿ ಕೊಂಚ ಚೇತರಿಸಿಕೊಂಡಿದ್ದರು. ಪದ್ಮಿನಿ ಪ್ರತಿದಿನ ಹೋಗಿ ಅವರಿಗೆ ಸ್ನಾನಮಾಡಲು ಸಹಾಯ ಮಾಡಿ. ಜಡೆಹಾಕಿ ಸೀರೆ ಸರಿಯಾಗಿ ಉಡಿಸಿ ಬರುತ್ತಿದ್ದಳು. ನಂತರ ಹನ್ನೊಂದು ಗಂಟೆಗೆ ಹೋಗಿ ಅಂದಿನ ಪೇಪರ್ ಓದಿ ಹೇಳುತ್ತಿದ್ದಳು.

ಸೀತಮ್ಮ ಏನೇ ಮಾಡಲಿ ಪ್ರಮೋದನಿಗೆ ಕೊಡದಿದ್ದರೆ ಸಮಾಧಾನ ವಿರುತ್ತಿರಲಿಲ್ಲ. ಶಾಸ್ತ್ರಿಗಳು ಒಮ್ಮೊಮ್ಮೆ ಹಾಸ್ಯ ಮಾಡುತ್ತಿದ್ದರು. "ಅವನು ಚಿನ್ನದ ಚಮಚ ಬಾಯಲ್ಲಿ ಇಟ್ಟುಕೊಂಡು ಹುಟ್ಟಿರುವ ಹುಡುಗ; ಈಗಿನ ಕಾಲದ ತಿಂಡಿ ತಿಂದ ಅವನಿಗೆ ನಿನ್ನ ತೊಗರಿನುಚ್ಚಿನ ಉಂಡೆ, ಥಾಲಿಪಿಟ್ಟು, ಕೊಚ್ಚಿದ ಕಡಬು, ಕುಟ್ಟವಲಕ್ಕಿ ಹಿಡಿಸುತ್ತದೇನೆ ?" ಎಂದು ತಮಾಷೆ ಮಾಡುತ್ತಿದ್ದರು.

"ನನ್ನ ತಿಂಡಿಗಳಿಗಿರುವ ರುಚಿ ಅವನ ಹೋಟೆಲ್ ತಿಂಡಿಗಳಿಗೆಲ್ಲಿಂದ ಬರಬೇಕು ?" ಎನ್ನುತ್ತಿದ್ದರು ಸೀತಮ್ಮ. ಆಕೆಯ ಕೈ ತುಂಬಾ ಧಾರಾಳ ಪ್ರಮೋದನಿಗೆಂದು ಕಳುಹಿಸಿದ್ದರೂ ಗಾಯಿತ್ರಿಗೂ ಅದರಲ್ಲಿ ಪಾಲಿರುತ್ತಿತ್ತು.

ಕಾಲೇಜಿಗೆ ಬರುವ ವೇಳೆಗೆ ಅರಳಿದ್ದ ಪದ್ಮಿನಿ, ಚಿನ್ನದ ಹೂವಿಗೆ ಪರಿಮಳ ಬಂದಂತಾಗಿದ್ದಳು. ಶಾಸ್ತ್ರಿಗಳಿಗೆ ಆಧುನಿಕ ಉಡುಗೆ-ತೊಡುಗೆ ಇಷ್ಟವಾಗುತ್ತಿರಲಿಲ್ಲ ಆದ್ದರಿಂದ ಪದ್ಮಿನಿ ಯಾವಾಗಲೂ ಸೀರೆ ಉಡ ಬೇಕಾಗಿತ್ತು 100–225ರೂ. ವಾಯಿಲ್ ಸೀರೆಯಲ್ಲೂ ಅವಳು ರಾಣಿಯಂತೆ

ಕಾಣುತ್ತಿದ್ದಳು. ಅವಳಿಂದ ಅವಳುಟ್ಟ ಸೀರೆಗೆ ಬೆಲೆ ಬರುತ್ತಿತ್ತು. ಮಗನ ಮೆಚ್ಚುಗೆಯ ನೋಟ ಅವಳ ಮೇಲೆ ಹರಿದಾಡುವುದನ್ನು ಗಾಯಿತ್ರಿದೇವಿಯ ಕಣ್ಣುಗಳು ಗಮನಿಸಿದ್ದವು.

ಪದ್ಮಿನಿ ಎಸ್ ಎಸ್ ಎಲ್.ಸಿ. ಯಲ್ಲಿದ್ದಾಗ ಪಿ.ಯು.ಸಿ 2ನೇ ವರ್ಷದಲ್ಲಿದ್ದ ಪ್ರಮೋದ ಖಾಯಿಲೆ ಬಿದ್ದಿದ್ದ. ವೈರಲ್ ಜ್ವರದಿಂದ ನರಳುತ್ತಿದ್ದ ಪ್ರಮೋದ್ ಪರೀಕ್ಷೆಗೆ ಹೋಗಲಾಗಿರಲಿಲ್ಲ. ತನಗೆ ಪರೀಕ್ಷೆ ಇದ್ದರೂ ಪದ್ಮಿನಿ ಅವನ ಪಕ್ಕ ಬಿಟ್ಟು ಕದಲಿರಲಿಲ್ಲ. ಅವಳು ಒಂದು ಕ್ಷಣ ಕಾಣದಿದ್ದರೆ ಪ್ರಮೋದನೂ ಕೂಗಾಡುತ್ತಿದ್ದ. ಮಗ ದಿನದಿನಕ್ಕೆ ಪದ್ಮಿನಿಯ ಕಡೆ ಸೆಳೆಯಲ್ಪಡುತ್ತಿರುವುದು ಗಾಯಿತ್ರಿದೇವಿಗೆ ನುಂಗಲಾರದ ತುತ್ತಾಗಿತ್ತು. ಈಗ ಪ್ರಮೋದ ಬಿ.ಇ ಸಿವಿಲ್ ಕೊನೆಯ ವರ್ಷದಲ್ಲಿದ್ದ. ಗಾಯಿತ್ರಿದೇವಿಗೆ ಮಗನಿಗೆ ಒಳ್ಳೆಯ ಕಡೆಯಿಂದ ಹೆಣ್ಣು ತಂದು ಅದ್ದೂರಿಯಾಗಿ ಮದುವೆ ಮಾಡಬೇಕೆಂಬ ಆಸೆ ಇತ್ತು. ಆದರೆ ಅದಕ್ಕೆ ಮಗ ಒಪ್ಪುತ್ತಾನೋ ಇಲ್ಲವೋ ಎಂಬ ಶಂಕೆಯೂ ಇತ್ತು. ಆಗಾಗ್ಗೆ ಅವರು ಪದ್ಮಿನಿಯ ಮುಂದೆ ಹೇಳುತ್ತಿದ್ದರು.

"ನಮ್ಮ ಪ್ರಮೋದ್‌ಗೆ ತುಂಬಾ ಚೆನ್ನಾಗಿರುವ, ವಿದ್ಯಾವಂತೆಯಾಗಿರುವ ಶ್ರೀಮಂತ ಕುಟುಂಬದ ಹುಡುಗಿಯನ್ನ ತರಬೇಕು ಕಣೆ."

"ಹುಂ ಹಾಗೆ ಮಾಡಿ" ಎಂದು ಹೇಳಲು ಪದ್ಮಿನಿಗೆ ಬಾಯಿ ಬರುತ್ತಿರಲಿಲ್ಲ.

"ಸರ್ಕಾರದ ಕೆಲಸದಲ್ಲಿದ್ದು ಕೈತುಂಬಾ ಸಂಬಳ ತೆಗೆದುಕೊಳ್ತಿದ್ರೆ ಬಡವರ ಮನೆ ಹುಡುಗೀನ್ನ ಮದುವೆ ಮಾಡಿಕೊಂಡ್ರೂ ನಡೆಯುತ್ತೆ. ಆದ್ರೆ ಪ್ರೈವೇಟಾಗಿ ಬಿಸಿನೆಸ್ ಮಾಡುವ್‌ಗ ಮಾವನ ಮನೆ ಸಪೋರ್ಟ್ ಇರಬೇಕು."

ಅವರು ಏನೇ ಹೇಳಲಿ, ಪದ್ಮಿನಿ ಮಾತಾಡುತ್ತಿರಲಿಲ್ಲ. ಅವಳು ಏನು ಮಾತಾಡಲು ಸಾಧ್ಯ ? ತಾನು ಪ್ರಮೋದನ ಕೈ ಹಿಡಿಯಲು ಸಾಧ್ಯವಿಲ್ಲವೆಂದು ಅವಳಿಗೆ ಮನದಟ್ಟಾಗಿತ್ತು. ಆದರೂ ಅವನೆಂದರೇನೋ ಸೆಳೆತ. ಅದೇನೋ ಆಕರ್ಷಣೆ, ಅವನ ಧ್ವನಿ ಕೇಳಿದರೆ ಪುಂಗಿಯ ನಾದಕ್ಕೆ ಸಿಕ್ಕಿ ನಲಿದಾಡುವ ಹಾವಿನಂತಾಗುತ್ತಿದ್ದಳು. ಗಾಯಿತ್ರಿದೇವಿಗೆ ಮಗ ಎಲ್ಲಿಗೆ ಹೋಗುತ್ತಾನೆ, ಏನೇನು ಮಾಡುತ್ತಾನೆ ಎಂಬ ವಿವರಗಳು ಗೊತ್ತಾಗುತ್ತಿರಲಿಲ್ಲ.

ಪ್ರಮೋದ್ ಸಾಮಾನ್ಯವಾಗಿ ತಿಂಗಳಿಗೆ 2 ಬಾರಿಯಾದರೂ ಪದ್ಮಿನಿಯನ್ನು ಸಿನಿಮಾಗೆ ಕರೆದೊಯ್ಯುತ್ತಿದ್ದ....ತನ್ನ ಬರ್ತ್‌ಡೇದಿನ, ತನ್ನ ರಿಸಲ್ಟ್ ಬಂದ ದಿನ ಅವಳನ್ನು ಒಳ್ಳೆಯ ಹೋಟೆಲ್‌ಗೆ ಕರೆದುಕೊಂಡು ಹೋಗಿ ತಿಂಡಿ ಕೊಡಿಸುತ್ತಿದ್ದ. ಅವಳ ಬರ್ತ್‌ಡೇ ದಿನ ಹಠಮಾಡಿ ಅವಳಿಂದ ಸ್ವೀಟ್ಸ್ ಪಡೆದು ಒಳ್ಳೆಯ ಉಡುಗೊರೆ ಕೊಡುತ್ತಿದ್ದ. ಕಾಲೇಜ್‌ನಿಂದ ಟೂರ್ ಹೋದಾಗ ಅವಳಿಗೆ ಏನಾದರೊಂದು ಸಾಮಾನು ತರುತ್ತಿದ್ದ. ಸೀತಮ್ಮನಿಗೆ ಮಗಳು ಅವನ ಜೊತೆ ಸಿನಿಮಾ, ನಾಟಕ ಎಂದು ಸುತ್ತುವುದು ಆಶ್ಚರ್ಯದ ಅಥವಾ ಚಿಂತೆಯ ವಿಷಯವಾಗಿರಲಿಲ್ಲ. 'ಎಷ್ಟಾದರೂ ಅವನ ಹೆಂಡತಿಯಾಗುವವಳು' ಎಂಬ ಧೋರಣೆ ಅವರಲ್ಲಿತ್ತು. ಪದ್ಮಿನಿಯನ್ನು ಮಾತ್ರ ಇತ್ತೀಚೆಗೆ ಒಂದು ರೀತಿಯ ಭಯ ಆವರಿಸಿತ್ತು. ಪ್ರಮೋದ್‌ನನ್ನು ಮದುವೆಯಾಗುವುದು ಕನಸಿನ ಮಾತು....ಆದರೆ ಅಮ್ಮ-ಅಪ್ಪ ತನಗೆ ಬೇರೆ ಮದುವೆ ಮಾಡದಿರುವರೆ ? ಪ್ರಮೋದ್‌ನನ್ನು ಮರೆತು ಬೇರೆಯವರನ್ನು ಹೇಗೆ ಮದುವೆಯಾಗುವುದು ? ಅವನನ್ನು ಒಂದು ದಿನ ನೋಡದಿರಲು ತನಗೆ ಸಾಧ್ಯವೇ ? ಅವನೇ ನನ್ನ ಸರ್ವಸ್ವ ಎಂದುಕೊಂಡಿರುವಾಗ ಅವನು ನನಗೇನೂ ಅಲ್ಲ ಎಂದು ಹೇಗೆ ಭಾವಿಸುವುದು ?

ಯೋಚನೆ ಮಾಡುತ್ತಿದ್ದಂತೆ ಪದ್ಮಿನಿಗೆ ಅಳು ಬಂದಂತಾಯ್ತು.

"ಪದ್ಮಿನಿ, ಊಟಕ್ಕೆ ಬಾರೆ" ಸೀತಮ್ಮ ಕೂಗಿದಾಗ ಪದ್ಮಿನಿ ಕೆಳಗಿಳಿದು ಬಂದಳು. ಅಜ್ಜಿಯ ಊಟ ಮುಗಿದಿತ್ತು. ಮಕ್ಕಳು ಯಾರೂ ಮಧ್ಯಾಹ್ನದ ಊಟಕ್ಕೆ ಬರುತ್ತಿರಲಿಲ್ಲ. ಸೀತಮ್ಮ ಮಗಳಿಗೆ ಹೇಳಿದರು. "ನಿಂಗೆ ನಿಮ್ಮಪ್ಪಗೆ ತಟ್ಟೆ ಲೋಟ ಇಟ್ಟು ಉಪ್ಪು ತುಪ್ಪ ಬಡಿಸು."

ಶಾಸ್ತ್ರಿಗಳು ಬಂದು ಕುಳಿತರು. ಪದ್ಮಿನಿ ನೀರು ಬಡಿಸಿ ತಂದೆಯ ಪಕ್ಕ ಕುಳಿತಳು. ಸೀತಮ್ಮ ಮಲ್ಲಿಗೆ ಹೂವಿನಂತಹ ಅನ್ನ ಹಾಕಿ ಮುಂದೆ ಉಪ್ಪಿನ ಕಾಯಿ, ಹಾಗಲಕಾಯಿ ಗೊಜ್ಜು ಬಡಿಸಿದರು. ಶಾಸ್ತ್ರಿಗಳು ಊಟ ಶುರು ಮಾಡಿದರು. ಪದ್ಮಿನಿಯ ಗಂಟಲಲ್ಲಿ ಅನ್ನ ಇಳಿಯಲಿಲ್ಲ. 'ಪ್ರಮೋದ್‌ಗೆ ಹಾಗಲಕಾಯಿ ಗೊಜ್ಜೊಂದ್ರೆ ಅದೆಷ್ಟು ಇಷ್ಟ ! ಅಮ್ಮ ಇವತ್ತು ಯಾಕೆ ಕಳುಹಿಸಲಿಲ್ಲ ?'

"ಗಾಯಿತ್ರಿಗೆ ನಮ್ಮ ಪದ್ಮಿನೀನ್ನ ಸೊಸೆ ಮಾಡಿಕೊಳ್ಳುವುದಕ್ಕೆ ಇಷ್ಟ ವಿಲ್ಲಂತೆ...."

"ನಿನಗ್ಯಾರು ಹೇಳಿದ್ರು ?"

"ಪದ್ಮಿನೀನೇ ಹೇಳಿದ್ಳು"

"ಅವರು ಹಾಗಂತ ನಿನ್ನ ಹತ್ತಿರ ಬಾಯಿಬಿಟ್ಟು ಹೇಳಿದ್ರೇನಮ್ಮ ?"

"ಇಲ್ಲಪ್ಪ, ಅವರು ನೇರವಾಗಿ ಏನೂ ಹೇಳಲಿಲ್ಲ. 'ಮುಂದೆ ಯಾಕೆ ಓದಲ್ಲ ? ನಿಮ್ಮಪ್ಪ ಗಂಡು ಹುಡುಕ್ತಿದ್ದಾರೇನೆ ?' ಅಂತ ಕೇಳಿದ್ರು."

"ಅವರು ಶ್ರೀಮಂತರು ಸೀತ. ಪದ್ಮಿನಿಗಿಂತ ಚೆನ್ನಾಗಿರುವ ಶ್ರೀಮಂತ ಹುಡುಗೀನ್ನ ಅವರು ನೋಡಿರಬಹುದು. ನೀನು ನೀನಾಗಿ ಈ ವಿಚಾರ ಅವರ ಹತ್ತಿರ ಮಾತನಾಡಬೇಡ ಪ್ರಮೋದ್‌ನ ಓದು ಮುಗಿಯಲಿ ನೋಡೋಣ."

ಶಾಸ್ತ್ರಿಗಳು ಶಾಂತವಾಗಿ ಹೇಳಿದರು. ಸೀತಮ್ಮನ ಅಸಹನೆ ಕಡಿಮೆಯಾಗಲಿಲ್ಲ....ಗಂಡ ಎದ್ದು ಹೋದ ಮೇಲೆ ಮಗಳಿಗೆ ಹೇಳಿದರು.

"ನೀನು ಇನ್ಮೇಲೆ ದಿನಕ್ಕೆ ನಾಲ್ಕು ಸಾರಿ ಅವರ್ಮನೆಗೆ ಹೋಗುವುದನ್ನು ನಿಲ್ಲಿಸು....ನಿಮ್ಮ ಓಡಾಟ ಸಾಕು. !"

ಪದ್ಮಿನಿ ತಟ್ಟೆ ತೆಗೆದು ಗೋಮೆ ಹಚ್ಚಿದಳು. ಅವಳು ಸೀತಮ್ಮನಿಗೆ ಬಡಿಸುವಾಗ ಅವರು ಮಗಳಿಗೆ ಹೇಳಿದನ್ನು ಪುನಃ ಹೇಳಿದರು. ಪದ್ಮಿನಿ ಹಾ ಹೂಂ ಅನ್ನಲಿಲ್ಲ ಎದುರು ಮನೆಯಲ್ಲಿದ್ದುಕೊಂಡು ಪ್ರಮೋದನ ಜೊತೆ ಮಾತನಾಡದಿರಲು ಸಾಧ್ಯವೆ ?

"ಬೇಗ ಒಂದು ಕೆಲಸಕ್ಕೆ ಸೇರಬೇಕು" ಎಂದುಕೊಂಡಳು.

# ೨

ಪ್ರಮೋದ ಮಧ್ಯಾಹ್ನ ಊಟಕ್ಕೆ ಬಂದಾಗ ಎರಡು ಗಂಟೆ ದಾಟಿತ್ತು. ಅವನು ಬಟ್ಟೆ ಬದಲಾಯಿಸಿ ಕೈ ಕಾಲು ಮುಖ ತೊಳೆದು ಬರುವ ವೇಳೆಗೆ ಗಾಯಿತ್ರಿದೇವಿ ತಟ್ಟೆ, ಲೋಟ ಇಟ್ಟುಕೊಂಡು ಕಾದಿದ್ದರು. ಅವನು ಕೂರುತ್ತಿದ್ದಂತೆ ಅನ್ನ ಹಾಕಿ ತುಪ್ಪ ಹಾಕಿದರು.

"ಪದ್ಮಿನಿ ಬರಲಿಲ್ವಾಮ್ಮ ?'

"ಇಲ್ಲಪ್ಪ ಬರಲಿಲ್ಲ."

"ಇವತ್ತೇನೂ ತಂದುಕೊಡಲಿಲ್ವಾ ?"

ಗಾಯಿತ್ರಿದೇವಿಗೆ ಮಗನ ಪ್ರಶ್ನೆ ಕೇಳಿ ರೇಗಿತು....ತಾವು ಪಂಚಭಕ್ಷ್ಯ ಪರಮಾನ್ನ ಮಾಡಿಸಿ ಬಡಿಸಿದರೂ ಇವನಿಗೆ ಪದ್ಮಿನಿಯ ಮನೆಯ ಗೊಡ್ಡು ಸಾರೇ ಇಷ್ಟವೇನೋ ? ಎಂದುಕೊಂಡರು....ಸಿಡುಕಿದರೆ ಅವನು ಊಟ ಬಿಟ್ಟು ಹೋಗುತ್ತಾನೆಂದು ಅವರಿಗೆ ಗೊತ್ತಿತ್ತು. ಆದ್ದರಿಂದ ಶಾಂತವಾಗೇ ಹೇಳಿದರು. "ನಿಂಗೇಂತ ಆಲೂಗೆಡ್ಡೆ ಈರುಳ್ಳಿ ಹುಳಿ ಮಾಡಿಸಿ, ಹಪ್ಪಳ ಸಂಡಿಗೆ ಕರಿಸಿಟ್ಟಿದ್ದೀನಿ. ಮಿಡಿಗಾಯಿ ಉಪ್ಪಿನಕಾಯಿ ಇದೆ. ಹೊಟ್ಟೆ ತುಂಬಾ ಊಟಮಾಡು."

ಹೊಟ್ಟೆ ಹಸಿದಿತ್ತು, ಪ್ರಮೋದ ಉಂಡು ಮಲಗಿದ 'ಪಮ್ಮಿ ಮ್ಯಾಟ್ನಿಗೆ ಹೋಗಿದ್ದಾಳೇನೋ ?' ಎಂದುಕೊಂಡ. ಮಲಗಿದೊಡನೆ ನಿದ್ರೆ ಬಂತು. ಐದು ಗಂಟೆಗೆ ಎಚ್ಚರವಾಯಿತು ಅವನು ಮುಖ ತೊಳೆದು ಕಾಫಿ ಹೀರುತ್ತಿದ್ದಾಗ ಗಾಯಿತ್ರಿದೇವಿ ಕೇಳಿದರು.

"ಇದ್ಯಾಕೋ ಹೀಗಿದ್ದೀಯಾ ? ಹೊರಗೆ ಹೋಗಲ್ವಾ ?"

"ಯಾಕೋ ತಲೆನೋವು."

'ಪದ್ಮಿನಿಯನ್ನು ನೋಡದೆ ಹೊರಗೆ ಹೋಗುವುದೆ ?' ಎನ್ನಿಸಿತವನಿಗೆ. ಆದ್ದರಿಂದ ನಾಲಿಗೆ ಸುಳ್ಳಾಡಿತು. ಅವನು ಟಿ.ವಿ. ಆನ್ ಮಾಡಿದ. ಅರ್ಧ ಗಂಟೆ ಕಳೆಯುವಷ್ಟರಲ್ಲಿ ಬೋರಾಯಿತು. ಅವನು ಬಾಲ್ಕನಿಯಲ್ಲಿ ಬಂದು

ನಿಂತಾಗ ಪದ್ಮಿನಿ ಕಾಣಿಸಿದಳು. ಗೆಳತಿಯೊಬ್ಬಳ ಜೊತೆ ಹರಟುತ್ತಾ ಗೇಟಿನ ಬಳಿ ನಿಂದಿದ್ದ ಪದ್ಮಿನಿ ಒಮ್ಮೆಯೂ ಈ ಕಡೆ ತಿರುಗಲಿಲ್ಲ.

'ರೂಪದ ಮದ ಈ ಹುಡುಗಿಗೆ' ಎಂದುಕೊಂಡ ಪ್ರಮೋದ್ ರೆಡಿಯಾಗಿ ಕೆಳಗಿಳಿದು ಬಂದ ಅವನ ಬೈಕ್ ಸದ್ದು ಕೇಳಿ ಅವಳು ತಲೆ ಎತ್ತಿ ತುಟಿ ಅರಳಿಸಿ ಕೈ ಬೀಸಿದಳು. ಬೈಕ್ ಅವಳ ಮುಂದೆ ನಿಲ್ಲಿಸಿ ಕರೆದ. "ಬರ್‍ತೀಯ ಒಂದು ರೌಂಡ್ ಹೋಗಿ ಬರೋಣ."

"ನಾ ಬರಲ್ಲಪ್ಪ ನಮ್ಮಮ್ಮ ಬೈತಾರೆ."

"ನಿಮ್ಮಮ್ಮ ಬೈತಾರಾ ?" ಅವನು ಅಚ್ಚರಿಯಿಂದ ಕೇಳಿದ.

"ಹೌದು ಕಣೋ, ಇನ್ಮೇಲೆ ಅವನ ಜೊತೆ ಓಡಾಡಬೇಡ ಅಂತ ಹೇಳಿದ್ದಾರೆ."

"ಯಾಕಂತೆ ? ನಾನೇನು ನಿನ್ನನ್ನು ಹಾರಿಸಿಕೊಂಡು ಹೋಗಿ ಬಿಡ್ತೀನಾ ?"

"ನನಗೇನು ಗೊತ್ತು ?"

"ನೀನ್ಯಾಕೆ ಮಧ್ಯಾಹ್ನ ಏನೂ ತರಲಿಲ್ಲ ?"

"ಇನ್ಮೇಲೆ ಏನೂ ತರಲ್ಲ. ಇನ್ಮುಂದೆ ನಿಮ್ಮ ಭಟ್ಟ ಮಾಡಿದ್ದೇ ನಳಪಾಕ ಅಂದ್ಕೊಂಡು ತಿಂದ್ಕೋ."

"ನಿಮ್ಮಮ್ಮ ಮಾಡುವ ರೀತಿ ನಮ್ಮ ಭಟ್ಟ ಮಾಡಲ್ಲ ಕಣೆ."

ಅಷ್ಟರಲ್ಲಿ ಸೀತಮ್ಮ ಹೊರಗೆ ಬಂದರು.

"ಯಾಕತ್ತೆ ಇವತ್ತು ಮಧ್ಯಾಹ್ನ ಏನೂ ಕಳುಹಿಸಲಿಲ್ಲ ?"

"ಕಳುಹಿಸುವಂತಹ ಸ್ಪೆಷಲ್ ಏನೂ ಮಾಡಿರಲಿಲ್ಲಪ್ಪ...."

"ಕೊತ್ತಂಬರಿ ಸೊಪ್ಪಿನ ಚಟ್ನಿ ಯಾಕೆ ಮಾಡಲಿಲ್ಲ ? ನೆನ್ನೆ ಮಾವ ಅಷ್ಟೊಂದು ಕೊತ್ತಂಬರಿ ಸೊಪ್ಪು ತಂದ್ರಲ್ಲಾ ?"

ಸೀತಮ್ಮ ಪೆಚ್ಚಾದರು 'ಎಂತಹ ನಿಗರ್ವಿ ಈ ಹುಡುಗ !' ಎನ್ನಿಸಿತು.

"ಬರ್‍ತೀನಿ ಅತ್ತೆ, ಈ ಬಡಪಾಯಿನ್ನ ಮರೆಯಬೇಡಿ" ಎಂದು ಬೈಕ್ ಸ್ಟಾರ್ಟ್ ಮಾಡಿದ.

'ನೀನ್ಯಾಕಪ್ಪ ಬಡಪಾಯಿ ಆಗ್ತೀಯ ? ನಾವು ಬಡಪಾಯಿಗಳು' ಎಂದುಕೊಂಡರು ಸೀತಮ್ಮ.

ಪದ್ಮಿನಿ ಅವನು ಹೊದೊಡನೆ ಪಕ್ಕದಲ್ಲೇ ಇದ್ದ ಲತಾಳ ಮನೆಗೆ ಹೋಗಿ ಟಿ.ವಿ. ನೋಡುತ್ತಾ ಕುಳಿತಳು. ಲತಾಳ ತಾಯಿ–ತಂದೆ ಮನೆಯಲ್ಲಿರಲಿಲ್ಲ.

"ಎಲ್ಲೇ ನಿಮ್ಮಮ್ಮ–ಅಪ್ಪ ?"

"ಹಮ್ ಆಪ್‌ಕೆ ಹೈ ಕೌನ್‌ಗೆ ಹೋಗಿದ್ದಾರೆ."

"ನೀನು ಯಾಕೆ ಹೋಗಲಿಲ್ಲ ?"

"ನಾನು ನಾಲ್ಕು ಸಲ ನೋಡಾಯ್ತು, ನೀನು ನೋಡಲಿಲ್ವಾ ?"

"ಉಹುಂ, ಪ್ರಮೋದ್ ಕರ್‍ಕೊಂಡು ಹೋಗ್ತೀನೀಂತ ಹೇಳಿದ್ದ. ಆದರೆ ಅವನಿಗೆ ಬಿಡುವೇ ಆಗಿಲ್ಲ."

"ನಾಳೇನೇ ಕೊನೆಯ ದಿನ ಕಣೆ."

"ನಾಳೆ ಹೋಗೋಣ್ವಾ ?"

"ಯಾಕೆ, ಪ್ರಮೋದ್ ಜೊತೆ ಹೋಗಲ್ವಾ ?"

"ಸ....ರಿ, ಅವನಿಗೆ ಕಾಯ್ತಿದ್ರೆ ಆಯ್ತು...."

"ಹಾಗಾದ್ರೆ ನಾಳೆ ಮಧ್ಯಾಹ್ನ ಹೋಗೋಣ. ನನಗಂತೂ ಆ ಸಿನಿಮಾ ಎಷ್ಟು ಸಲ ನೋಡಿದ್ರೂ ತೃಪ್ತಿಯಿಲ್ಲ."

"ನಮ್ಮಮ್ಮನ್ನ ಕೇಳಿ ನಾಳೆ ಬೆಳಗ್ಗೆ ಬರ್‍ತೀನೋ ಇಲ್ವೋ ಹೇಳ್ತೀನಿ" ಎಂದಳು ಪದ್ಮಿನಿ.

"ಬರದಿದ್ರೆ ನಿನಗೇ ನಷ್ಟ" ಎಂದಳು ಲತಾ.

ಅಂದು ರಾತ್ರಿ ಊಟಕ್ಕೆ ಕುಳಿತಾಗ ಶಾಸ್ತ್ರಿಗಳು ಹೇಳಿದರು. "ಅವಧಾನಿಗಳು ಸಿಕ್ಕಿದ್ರು ಕಣೆ....ಫಾರಿನ್ ವರ ಬಂದಿದೆ. ಪದ್ಮಿನಿಗೆ ಹೇಳಿ ಮಾಡಿಸಿದಂತಿದೆ. ಮದುವೆ ಮಾಡ್ತೀರಾಂತ ಕೇಳಿದ್ರು."

"ನಾನೀಗಲೇ ಮದುವೆಯಾಗಲ್ಲಪ್ಪ."

"ಮನೇಲಿ ಕೂತ್ಕೊಂಡು ಮತ್ತೇನು ಮಾಡ್ತೀಯ ?" ಸೀತಮ್ಮ ಸಿಡುಕಿದರು.

"ನಾನು ಕೆಲಸಕ್ಕೆ ಪ್ರಯತ್ನಪಡ್ತೀನಿ. ಹೇಗೂ ನನಗೆ ಟೈಪ್‌ರೈಟಿಂಗ್, ಶಾರ್ಟ್‌ಹ್ಯಾಂಡ್ ಆಗಿದೆಯಲ್ಲಾ ?"

"ನಿನಗೆ ಯಾರು ಕರೆದು ಕೆಲಸ ಕೊಡ್ತಾರೆ ? ತೆಪ್ಪಗೆ ನಾವು ನೋಡಿದ ಹುಡುಗನ್ನ ಮದುವೆಯಾಗು."

"ಒಂದೆರಡು ವರ್ಷ ಹಾಯಾಗಿರಲಿ ಬಿಡೆ, ಮಗು ಕೆಲಸಕ್ಕೆ ಹೋಗು ವುದಾದ್ರೆ ಹೋಗಲಿ ಬಿಡು" ಎಂದರು ಶಾಸ್ತ್ರಿಗಳು.

ರಾತ್ರಿ ಪಾತ್ರೆ ತೊಳೆದು, ಅಡಿಗೆ ಮನೆ ಸಾರಿಸಿ ಮಲಗುವ ಮೊದಲು ಪದ್ಮಿನಿ ತಾಯಿಗೆ ಹೇಳಿದಳು "ಅಮ್ಮ ನಾನು ನಾಳೆ ಸಿನಿಮಾಕ್ಕೆ ಹೋಗಲಾ ?"

"ಯಾರ ಜೊತೆ ?"

"ಲತಾ ಜೊತೆ, ನಾಳೇನೆ ಆ ಸಿನಿಮಾ ಕಡೆಯ ದಿನ."

"ಆ ಸಿನಿಮಾ ನೋಡದಿದ್ರೆ ಏನಾಗುತ್ತೆ ?"

"ನೀನೊಂದು ದಿನ ಪುರಾಣ ಕೇಳದಿದ್ರೆ ಏನಾಗುತ್ತೆ ?" ಅದೇ ಧ್ವನಿ ಯಲ್ಲಿ ಅವಳು ಕೇಳಿದಾಗ ಸೀತಮ್ಮ ಹುಬ್ಬುಗಂಟಿಕ್ಕಿ ಹೇಳಿದರು. "ಹಾಳಾಗಿ ಹೋಗು, ನನಗೇನಂತೆ ?"

"ನಾಳೆ ನಂಗೆ ಸಿನಿಮಾಕ್ಕೆ ದುಡ್ಡು ಕೊಡಬೇಕು....ಬೆಳಗಾಗ್ತಿರೋ ಹಾಗೆ ಇಲ್ಲದ ಕಾರಣ ಹೇಳಿ ತಪ್ಪಿಸಬೇಡ." ಮುಸುಕಿನೊಳಗಿಂದ ಪದ್ಮಿನಿ ಗೊಣಗಿದಳು. ಸೀತಮ್ಮ ಮಾತಾಡಲಿಲ್ಲ. 'ನಾನು ಬೇಡಾಂದ್ರೆ ನೀನು ಕೇಳೋಳು ಬಜಾರಿ' ಎಂದುಕೊಂಡು ದೀಪ ಆರಿಸಿದರು.

ο ο ο ο

ಪ್ರಮೋದ್ ತಿಂಡಿಗೆ ಬಂದು ಕುಳಿತವನು ಎದುರು ಮನೆಯ ಕಡೆ ಗೊಮ್ಮೆ ಕಣ್ಣುಹಾಯಿಸಿ ಕೇಳಿದ. "ಅಮ್ಮ, ನೆನ್ನೆ ಬೆಳಗ್ಗೆ ಪದ್ಮಿನಿ ನಮ್ಮ ಮನೆಗೆ ಬಂದಾಗ ಯಾವ ಕಾರಣಕ್ಕಾದ್ರೂ ನೀನವಳನ್ನು ಬೈದೆಯಾ ?"

"ಇಲ್ವಲ್ಲಾ....!"

"ಮತ್ತೆ ಯಾಕೆ ಅವಳು ಬಂದೇಯಿಲ್ಲ ?"

ಅಷ್ಟರಲ್ಲಿ ಇಂದುಮತಿ ಒಂದು ಡಬ್ಬಿ ಹಿಡಿದು ಬಂದಳು.

"ಏನೇ ಅದು ಇಂದು ?"

"ತೊಗರಿನುಚ್ಚಿನ ಉಂಡೆ."

"ಕೊಡಿಲ್ಲಿ" ಅವನು ಡಬ್ಬಿ ತೆಗೆದುಕೊಂಡು ತಟ್ಟೆಗೆ ಹಾಕಿಕೊಂಡ.

"ಇಂದು, ಪೂರಿ ಸಾಗು ತಿನ್ನುತ್ತೀಯ ?"

"ಬೇಡಪ್ಪಾ, ನಾನು ತಿಂಡಿ ತಿಂದಾಯ್ತು" ಎಂದು ಹೊರಗೋಡಿದಳು.

"ಶಾಸ್ತ್ರಿಗಳ ಮನೆ ಹುಡುಗಿಯರಿಗೆ ಸ್ವಾಭಿಮಾನ ಜಾಸ್ತಿ."

ತಾಯಿಯ ಧ್ವನಿಯಲ್ಲಿದ್ದ ವ್ಯಂಗ್ಯ ಅವನಿಗರ್ಥವಾಯ್ತು. ತಾನು ಪದ್ಮಿನಿ ಮನೆಯ ತಿಂಡಿಗೆ ಹಂಬಲಿಸುವುದು ತಾಯಿಗಿಷ್ಟವಿಲ್ಲವೆಂದು ಅವನಿಗೆಂದೋ ಅರ್ಥವಾಗಿತ್ತು. ಅವನಿಗೆ ತಟ್ಟೆಯಲ್ಲಿದ್ದ ತಿಂಡಿ ರುಚಿಸಲಿಲ್ಲ. ಪದ್ಮಿನಿ ತರುವ ತಿಂಡಿಗೂ, ಇಂದು ತರುವ ತಿಂಡಿಗೂ ಅದೆಷ್ಟು ವ್ಯತ್ಯಾಸ ! ಎನ್ನಿಸಿತು.

"ಪ್ರಮೋದ್, ಒಂದ್ಮಾತು ಹೇಳಲಾ ?"

"ಹೇಳಮ್ಮ."

"ಪದ್ಮಿನಿ ಪುಟ್ಟ ಹುಡುಗಿ ಅಲ್ಲ. ನೀನು ಅವಳ ಜೊತೆ ಮೊದಲಿನ ಹಾಗೆ ಹುಡುಗಾಟವಾಡಿಕೊಂಡಿರೋದು ಚೆನ್ನಾಗಿರಲ್ಲ. ಅವಳು ಮದುವೆಯಾಗುವ ಹುಡುಗಿ ಶಾಸ್ತ್ರಿಗಳು ಅವಳಿಗೆ ಗಂಡು ನೋಡ್ತಿದ್ದಾರೆ. ಹಸೆಮಣೆ ಏರುವ ಹುಡುಗಿ ದಿನಕ್ಕೆ ನಾಲ್ಕುಸಲ ನಮ್ಮನೆಗೆ ಬರ್ತಿದ್ರೆ ಏನು ಚೆನ್ನಾಗಿರತ್ತೆ ?"

ಅವನು ಮಾತಾಡಲಿಲ್ಲ ಕಾಲೇಜ್‌ಗೆ ಹೋದರೂ ಅಲ್ಲಿರಲು ಮನಸ್ಸಾಗಲಿಲ್ಲ. ಅವನು ಮನೆಗೆ ಹಿಂದಿರುಗುತ್ತಿದ್ದಾಗ ಅಶೋಕ ಎದುರಾದ.

"ಸಿನಿಮಾಕ್ಕೆ ಬರ್ತಿಯೇನೋ ?"

"ಯಾವ ಸಿನಿಮಾ ?"

"ಹಮ್ ಆಪ್ ಕೆ ಹೈ ಕೌನ್ ಇವತ್ತೇ ಕೊನೇ ದಿನ."

ಒಂದು ಕ್ಷಣ ಯೋಚಿಸಿ ಅವನು ಹೇಳಿದ. "ನಾನು ಮನೆಗೆ ಹೋಗಿ ಥಿಯೇಟರ್ ಹತ್ತಿರ ಬರ್ತೀನಿ ಮೂರು ಟಿಕೆಟ್ಸ್ ತೊಗೋ."

"ಯಾರನ್ನು ಕರ್ಕೊಂಡು ಬರ್ತೀಯಾ ?"

"ಪದ್ಮಿನೀನ್ನ...."

"ಹಾಗೆ ಮಾಡು."

ಪ್ರಮೋದ್ ಅವನ ಕೈಲಿ 100ರೂ. ಇಟ್ಟು ಮನೆಯತ್ತ ಧಾವಿಸಿದ. ನೇರವಾಗಿ ತನ್ನ ಮನೆಗೆ ಹೋಗದೆ ಎದುರು ಮನೆಗೆ ನುಗ್ಗಿದ.

"ಪದ್ಮಿನಿ ಎಲ್ಲತ್ತೆ ?"

"ಪಕ್ಕದ್ಮನೆ ಲತಾ ಜೊತೆ ಸಿನಿಮಾಕ್ಕೆ ಹೋದಳು."

"ಯಾವ ಸಿನಿಮಾಕ್ಕೆ ?"

"ಯಾವುದೋ ಹಿಂದಿ ಸಿನಿಮಾ, ಇವತ್ತೆ ಕಡೇ ದಿನಾಂತ ಹಠಮಾಡಿ ಕೊಂಡು ಹೋದಳು."

ಅವನು ಆತುರಾತುರವಾಗಿ ಊಟ ಮಾಡಿಕೊಂಡು ಥಿಯೇಟರ್‌ಗೆ ಧಾವಿಸಿದ. ಅಶೋಕ್ ಟಿಕೆಟ್‌ಕೊಂಡಿದ್ದ.

"ಎಲ್ಲೋ ನಿನ್ನ ಅಪ್ಸರೆ ?"

"ಅವಳೂ ಇದೇ ಫಿಲಂಗೆ ಫ್ರೆಂಡ್ ಜೊತೆ ಬಂದಿದ್ದಾಳೆ."

ಲತಾ, ಪದ್ಮಿನಿ ಸಿನಿಮಾ ತುಂಬಾ ಎಂಜಾಯ್ ಮಾಡಿದರು. ಮೋಡಿ ಹಾಕುತ್ತಿದ್ದ ಹಾಡುಗಳಿಗೆ ಮುದ್ದಾಗಿ ಕಾಣುತ್ತಿದ್ದ ಮಾಧುರಿ ದೀಕ್ಷಿತ್‌ಗೆ ಪದ್ಮಿನಿ ಮನಸೋತಳು.

ಸಿನಿಮಾ ಮುಗಿಯುತ್ತಿದ್ದಂತೆ ಲತಾ ಹೇಳಿದಳು "ಇವತ್ತು ನಮ್ಮ ಚಿಕ್ಕಮ್ಮನ ಮನೇಲಿ ಮಗು ಹುಟ್ಟಿದ ಹಬ್ಬ ನಮ್ಮನೆಯವರೆಲ್ಲಾ ಈಗ ಅಲ್ಲಿಗೆ ಬಂದಿರ್ತಾರೆ, ನೀನೂ ಬಾ ಹೋಗೋಣ."

"ಉಹುಂ, ನಾನು ಬರಲ್ಲಪ್ಪ ನೀನು ಹೋಗು" ಎಂದಳು ಪದ್ಮಿನಿ.

ಲತಾ ಹೆಚ್ಚು ಒತ್ತಾಯಿಸದೆ ತನ್ನ ವೆಹಿಕಲ್ ಹತ್ತಿ ಹೊರಟಳು.

ಪದ್ಮಿನಿ ಬಸ್ಟಾಪ್‌ಗೆ ಹೋಗಬೇಕೆಂದುಕೊಳ್ಳುತ್ತಿದ್ದಾಗ ಪ್ರಮೋದ್ "ಪಮ್ಮಿ, ಬಾ ಮನೆಗೆ ಹೋಗೋಣ."

ಅವನನ್ನು ನೋಡಿ ಅವಳ ಮುಖ ಅರಳಿತು.

"ಏನು ನೋಡ್ತಿದ್ದೀಯ ? ಹತ್ತು"

ಬಸ್‌ನಲ್ಲಿ ಹೋಗುವುದಕ್ಕಿಂತ ಬೈಕ್‌ನಲ್ಲಿ ಹೋಗುವುದೇ ಒಳ್ಳೆಯದೆನ್ನಿಸಿತು. ಅವಳು ಹೆಚ್ಚು ಹೇಳಿಸಿಕೊಳ್ಳದೆ ಬೈಕ್ ಹತ್ತಿದಳು, ಪ್ರಮೋದ್ ಹೋಟೆಲ್ ಮುಂದೆ ಬೈಕ್ ನಿಲ್ಲಿಸಿದ.

"ಬಾ ತಿಂಡಿ ತಿನ್ನೋಣ."

"ನನಗೆ ಬೇಡ, ಲೇಟಾದ್ರೆ ಅಮ್ಮ ಬಯ್ತಾರೆ."

"ನೀನು ಬಸ್ನಲ್ಲಿ ಹೋಗುವುದಕ್ಕಿಂತ ಬೇಗ ಕರ್ಕೊಂಡು ಹೋಗ್ತೀನಿ ಬಾ."

ತಿಂಡಿಗೆ ಆರ್ಡರ್ ಮಾಡಿ ಪ್ರಮೋದ್ ಅವಳತ್ತ ತಿರುಗಿ ಕೇಳಿದ.

"ಫಿಲಂ ಚೆನ್ನಾಗಿತ್ತಾ ?"

"ಹುಂ, ತುಂಬಾ ಚೆನ್ನಾಗಿತ್ತು. ನೀನೂ ಫಿಲಂಗೆ ಬಂದಿದ್ದೆಯಾ ?"

"ಹುಂ....ನಿನ್ನನ್ನು ಕರೆದುಕೊಂಡು ಬರೋಣಾಂತ ಮನೆ ಹತ್ತಿರ ಹೋಗಿದ್ದೆ. ಆದ್ರೆ ನೀನಿರಲಿಲ್ಲ."

"ನಾನಿದ್ದಿದ್ರೂ ನಿನ್ನ ಜೊತೆ ಬರ್ತಿರಲಿಲ್ಲ."

"ಯಾಕೆ ?"

"ನಮ್ಮಮ್ಮ ಬಯ್ತಾರೆ."

"ಪಮ್ಮಿ ಮದುವೆಯೇನಾದ್ರೂ ಗೊತ್ತಾಗಿದೆಯೇನೆ ?" ಅವನ ಧ್ವನಿಯಲ್ಲಿ ಆತಂಕವಿತ್ತು.

"ಇಲ್ಲಪ್ಪ, ನಮ್ಮಮ್ಮಂಗೆ ಈಗಲೇ ಮದುವೆ ಮುಗಿಸಿ ಕಾಟ ಕಳೆದು ಕೊಳ್ಳುವಾಸೆ ನಾನು ಒಪ್ತಾಇಲ್ಲ....! 'ನೋಡೋಣ ಒಂದೆರಡು ವರ್ಷ ಅವಳು ಹಾಯಾಗಿರಲಿ' ಅಂತಿದ್ದಾರೆ ನಮ್ಮಪ್ಪ."

"ಎಂ.ಎ.ಗೆ ಸೇರು, ಮನೇಲಿದ್ದು ಏನ್ಮಾಡ್ತೀಯ ?"

"ಮುಂದೆ ಓದಿಸಕ್ಕೆ ನಮ್ಮ ತಂದೆಗಾಗಲ್ಲ. ಅದಕ್ಕೆ ಕೆಲಸಕ್ಕೆ ಸೇರೋಣಾಂತಾ ಇದ್ದೀನೆ."

"ನಿನಗೆ ಯಾರೆ ಕೆಲಸ ಕೊಡ್ತಾರೆ ?"

"ಯಾರಾದ್ರೂ ಪುಣ್ಯಾತ್ಮರು ಕೊಡ್ತಾರೆ."

"ಕೆಲಸಕ್ಕೆ ಸೇರಬೇಡ. ಮುಂದೆ ಓದು. ನಾನು ಓದಿಸ್ತೀನೆ."

"ನೀನ್ಯಾಕೆ ನನ್ನನ್ನು ಓದಿಸ್ತೀಯ ?" ಪ್ರಶ್ನೆಯ ಬಾಣವೆಸೆದು ಅವಳು ತನ್ನ ಮುಂದೆ ಇದ್ದ ಜಾಮೂನು ತಿನ್ನತೊಡಗಿದಳು.

ಅವನು ತಿಂಡಿ ತಿನ್ನುತ್ತಾ ಎದುರಿಗೆ ಕುಳಿತಿದ್ದ ಚೆಲುವೆಯತ್ತ ಕಣ್ಣು ಹಾಯಿಸಿದ. ಬಿಳಿ ಕೆಂಪು ಚುಕ್ಕಿಗಳಿದ್ದ ತಿಳಿಹಳದಿ ಸೀರೆಯುಟ್ಟು,

ಮೊಣಕೈವರೆಗೂ ಬರುವ ಅದೇ ಬಣ್ಣದ ಬ್ಲೌಸ್ ಧರಿಸಿದ್ದಳು ಪದ್ಮಿನಿ. ಅವಳ ಕೊರಳಿನಲ್ಲಿ ಎರಡು ಎಳೆಯ ಕೃತಕ ಮುತ್ತಿನ ಹಾರವಿತ್ತು ಕಿವಿಗಳಲ್ಲಿ ಮುತ್ತಿನ ಸ್ಟಾರ್, ಬಲಗೈನಲ್ಲಿ ದಪ್ಪ ಮುತ್ತಿನ ಬಳೆ ಇತ್ತು. ಆ ಸರಳವಾದ ಅಲಂಕಾರ ದಲ್ಲೂ ಅವಳು ಮುದ್ದಾಗಿ ಕಾಣುತ್ತಿದ್ದಳು. ಅವಳ ಗುಂಗುರು ಕೂದಲು, ದುಂಬಿ ಕಣ್ಣು, ನೀಳನಾಸಿಕ, ಸುಳಿಗಲ್ಲ, ಹವಳದ ತುಟಿ, ಕೆನೆಹಾಲಿನ ಬಣ್ಣ, ಅವಳ ಅಂದ ಹೆಚ್ಚಿಸಿದ್ದವು. ತಕ್ಷಣ ಅವಳ ಕೈ ಹಿಡಿದು "ನಾನು ನಿನ್ನನ್ನೇ ಮದುವೆಯಾಗ್ತೇನೆ ಅದಕ್ಕೆ ಓದಿಸ್ತೇನೆ" ಎಂದು ಹೇಳಬೇಕೆನ್ನಿಸಿತು. ಆದರೆ ಧೈರ್ಯವಾಗಲಿಲ್ಲ.

ಚಿಕ್ಕಂದಿನಿಂದ ಒಟ್ಟಿಗೆ ಬೆಳೆದಿರುವುದರಿಂದ ಅವಳಿಗೆ ನನ್ನಲ್ಲಿ ಸಲಿಗೆ ಇರಬಹುದು. ಅವಳ ಮನಸ್ಸು ಅರಿಯದೆ ಮದುವೆಯ ವಿಚಾರ ಮಾತನಾಡು ವುದು ಬೇಡ' ಎಂದುಕೊಂಡ.

ತಿಂಡಿ ತಿಂದು ಮುಗಿದರೂ ಅವನಿಂದ ಉತ್ತರ ಬಾರದಿದ್ದಾಗ ಪದ್ಮಿನಿ ತಲೆಕೆಡಿಸಿಕೊಳ್ಳದಿದ್ದರೂ, ಒಂದು ಕ್ಷಣ ಮುಖ ಪೆಚ್ಚುಮಾಡಿಕೊಂಡಳು.

"ಪಮ್ಮಿ ನಾನು ನಿನ್ನನ್ನು ಮೆಚ್ಚಿದ್ದೇನೆ....ನಿನ್ನನ್ನು ಮದುವೆ ಯಾಗ್ತೇನೆ. ಅದಕ್ಕೆ ನಿನ್ನನ್ನು ನಾನು ಓದಿಸ್ತೇನೆ' ಎನ್ನಬಾರದಿತ್ತೆ ಎಂದು ಕೊಂಡಳು.

ಬೈಕ್ ಹತ್ತಿ ಕುಳಿತಾಗ ಅವಳು ಹೇಳಿದಳು "ಪ್ರಮೋದ್, ನನ್ನನ್ನು ಸರ್ಕಲ್ ಹತ್ತಿರಾನೇ ಇಳಿಸಿಬಿಡು. ಅಲ್ಲಿಂದ ನಡೆದುಕೊಂಡು ಹೋಗ್ತೀನಿ."

"ಯಾಕೆ ?"

"ಅಮ್ಮ ಬೈಯ್ತಾರೇ...."

ಅವನಿಗೆ ರೇಗಿತ್ತು. 'ಇಷ್ಟುದಿನ ಇಲ್ಲದಿದ್ದ ಅಡೆ-ತಡೆ ಈಗ ಯಾಕೆ ?' ಅನ್ನಿಸಿತು.

ಅವನು ಬೈಕನ್ನು ಸರ್ಕಲ್‌ನಲ್ಲಿ ನಿಲ್ಲಿಸದೆ ಸೀದಾ ಹೋಗಿ ಅವಳ ಮನೆಯ ಮುಂದೆ ನಿಲ್ಲಿಸಿ, ಅವಳ ಜೊತೆ ತಾನೂ ಇಳಿದು ಒಳಗೆ ಪ್ರವೇಶಿಸಿದ. ಅನ್ನಕ್ಕಿಡುತ್ತಿದ್ದ ಸೀತಮ್ಮ ಮಗಳನ್ನು ನೋಡಿ ಸಿಡುಕುತ್ತಾ ಕೇಳಿದರು "ಲತಾ ಎಲ್ಲಿ ?"

"ಅತ್ತೆ, ನಿಮ್ಮ ಮಗಳಿಗೆ ಕೊಂಚಾನೂ ಬುದ್ಧಿಯಿಲ್ಲ. ನೀವ್ಯಾಕೆ ಅವಳನ್ನು ಲತಾ ಜೊತೆ ಸಿನಿಮಾಕ್ಕೆ ಕಳುಹಿಸಿದ್ರಿ ? ನಾನಿವತ್ತು ಇವಳನ್ನು ನೋಡ್ದೆ ಇದ್ದಿದ್ರೆ ಏನಾಗ್ತಿತ್ತೋ ಏನೋ ?"

"ಯಾಕಪ್ಪಾ ಏನಾಯ್ತು ?"

"ಲತಾ ಅದ್ಯಾರದೋ ಮನೆಗೆ ಹೊರಟುಹೋದಳು. ಇವಳೊಬ್ಬಳೇ ಬಸ್ಟಾಪ್‌ನಲ್ಲಿ ನಿಂತಿದ್ದಳು. ಅದ್ಯಾವುದೋ ಮೆರವಣಿಗೆ ಬಂತು. ಕಣ್ಣುಮುಚ್ಚಿ ತೆರೆಯುವುದರಲ್ಲಿ ಗಲಾಟೆ ಶುರುವಾಯ್ತು. ಬಸ್‌ಗಳಿಗೆಲ್ಲಾ ಕಲ್ಲೆಸೆಯಕ್ಕೆ ಪ್ರಾರಂಭಮಾಡಿದ್ರು. ನಾನು ಫ್ರೆಂಡ್ ಜೊತೆ ಸಿನಿಮಾಕ್ಕೆ ಹೋಗಿ ಬರ್ತಿದ್ದ ವನು ಅಕಸ್ಮಾತ್ ಇವಳನ್ನು ನೋಡಿದೆ."

"ಅಯ್ಯೋ ರಾಮ, ಅದೇನಪ್ಪಾ ಗಲಾಟೆ ?"

"ಯಾರಿಗೊತ್ತು ? ಗಲಾಟೆ ಮಾಡುವವರಿಗೇ ಕೆಲವು ಸಲ ತಾವ್ಯಾಕೆ ಗಲಾಟೆ ಮಾಡ್ತಿದ್ದೀವೀಂತ ಗೊತ್ತಿರಲ್ಲ. ನಿಮ್ಮ ಮಗಳು ಮನೇಲಿ ಹುಲಿ ತರಹ ಆಡ್ತಿರ್ತಾಳಲ್ಲಾ—ಅಲ್ಲಿ ನೋಡಬೇಕಿತ್ತು, ಮುದುರಿ ಮೂಲೆ ಸೇರಿ ಅಳ್ತಾ ನಿಂತಿದ್ಲು. ನಾನು ನೋಡಿ ಕರ್ಕೊಂಡು ಬಂದೆ."

"ಒಳ್ಳೆದಾಯ್ತಪ್ಪ, ಸದ್ಯ ನೀನಿದ್ದಿದರಿಂದ ಇವಳು ಸುರಕ್ಷಿತವಾಗಿ ಮನೆ ಸೇರುವಂತಾಯ್ತು" ಹೃದಯ ತುಂಬಿ ಬಂದು ನುಡಿದರವರು.

ಅವನು ಅವಳತ್ತ ನೋಡಿ ಕಣ್ಣು ಮಿಟುಕಿಸಿದ. ಅವಳ ಮುಖದಲ್ಲೂ ನಗೆ ಅರಳಿತು.

ಗಾಯಿತ್ರಿದೇವಿ ಬಾಲ್ಕನಿಯಲ್ಲಿ ನಿಂತಿದ್ದವರು ಬೈಕ್‌ನಲ್ಲಿ ಜೊತೆ ಯಾಗಿ ಬಂದು ಶಾಸ್ತ್ರಿಗಳ ಮನೆ ಹೊಕ್ಕ ಜೋಡಿಯನ್ನು ನೋಡಿ ಹುಬ್ಬು ಗಂಟಿಕ್ಕಿದರು.

ಮಗ ಒಳಗೆ ಬಂದೊಡನೆ ಕೇಳಿದ್ದರು "ಯಾಕೋ ನೀನು ಪದ್ಮಿನೀನ್ನ ಕಟ್ಟಿಕೊಂಡು ತಿರುಗ್ತೀಯ ?"

"ಅದರಲ್ಲಿ ತಪ್ಪೇನು ? ಅವಳ ಜೊತೆ ನಾನು ತಿರುಗೋದು ಹೊಸದೇ ನಲ್ಲವಲ್ಲಾ ?"

"ನೋಡು ಪ್ರಮೋದ್....ಅವಳು ವಯಸ್ಸಿಗೆ ಬಂದಿರುವ ಹುಡುಗಿ, ನೀನು ಅವಳ ಜೊತೆ ಸುತ್ತಾಡ್ತಿದ್ರೆ ನಾಳೆ ಅವಳನ್ನು ಯಾರು ಮದುವೆ ಯಾಗ್ತಾರೆ ?" ಅವರು ಗದರಿದರು.

"ಯಾರ್‍ಯಾಕೆ ಆಗಬೇಕು, ನಾನೇ ಆಗ್ತೀನಿ ಬಿಡು" ಎಂದ ಅವರ ಸುಪುತ್ರ. ಅವರೆದೆ ನಗಾರಿಯಾಯಿತು. 'ಮಗನಿಗೆ ಅವಳಲ್ಲಿ ಅಷ್ಟೊಂದು ಮೆಚ್ಚುಗೆಯೆ ? ಕುಬೇರರಾದ ನಾವು ಅಂತಹ ದರಿದ್ರರ ಮನೆಯಿಂದ ಹೆಣ್ಣು ತರುವುದೆ ? ಈಗ ಇವನಿನ್ನೂ ವಿದ್ಯಾರ್ಥಿ. ಈಗಲೇ ಯಾಕೆ ಮದುವೆಯ ಓಡಾಟ ? ಎಂದುಕೊಂಡರು. ಆದರೆ ಬಾಯಿ ಬಿಟ್ಟು ಆ ಮಾತುಗಳನ್ನು ಹೇಳಲಿಲ್ಲ.

"ಮೊದಲು ಓದು ಮುಗಿಸು, ಆಮೇಲೆ ಮದುವೆಯ ಚಿಂತೆ" ಎಂದಷ್ಟೇ ಹೇಳಿದರು.

ಪ್ರಮೋದನಿಗೆ ನಗು ಉಕ್ಕಿ ಬಂತು. 'ಪದ್ಮಿನಿ ಅಮ್ಮನಿಗೆ ಸೀತಮ್ಮನ ಮಗಳಾಗಿ ಪ್ರೀತಿಪಾತ್ರಳೆ ಹೊರತು ಸೊಸೆಯಾಗಿ ಅಲ್ಲ. ನಾನು ಮದುವೆ ಯಾಗೋದಾದ್ರೆ ಅವಳನ್ನೇ ಎಂದು ಈಗಾಗಲೇ ನಿರ್ಧರಿಸಿಯಾಗಿದೆ. ಮೊದಲು ಓದು ಮುಗಿಯಲಿ, ನಂತರ ಮದುವೆ ವಿಚಾರ. ಈಗಲಿಂದಲೇ ಮನೆಯನ್ನೇಕೆ ಕುರುಕ್ಷೇತ್ರ ಮಾಡುವುದು ?" ಎಂದುಕೊಂಡ.

ಅವನು ಅಂದು ನಿರಾತಂಕವಾಗಿ ನಿದ್ರಿಸಿದ. ಪದ್ಮಿನಿ ಇನ್ನೂ ಎರಡು ವರ್ಷ ಮದುವೆಯಾಗುವುದಿಲ್ಲ ಅಲ್ಲವೆ ? ಆದರೆ ಗಾಯಿತ್ರಿದೇವಿ ಒಂದು ಕ್ಷಣ ಕಣ್ಮುಚ್ಚಲಿಲ್ಲ....ಪದ್ಮಿನಿಯ ಜೊತೆ ಮಗನ ಮದುವೆಯೆ ? ಸ್ನೇಹ ಬೇರೆ ಸಂಬಂಧ ಬೇರೆ. ಪ್ರಮೋದ್‌ಗೆ ಅವಳು ತಕ್ಕ ಜೋಡಿಯಾಗಿರಬಹುದು ಆದರೆ ನಮ್ಮ ಅಂತಸ್ಥೇನು, ಅವರ ಅಂತಸ್ಥೇನು ? ಪದ್ಮಿನಿಯನ್ನು ಸೊಸೆಮಾಡಿ ಕೊಂಡರೆ ನಮ್ಮ ಅಂತಸ್ಥಿಗೆ ಧಕ್ಕೆ ಬರುವುದಿಲ್ಲವೆ ?"

ಅವರು ನಿದ್ರೆ ಬಾರದೆ ಎದ್ದು ಕುಳಿತು, ನೀರು ಕುಡಿದರು....ಅವರ ಮನಸ್ಸು ತನ್ನ ತವರಿನ ಬಗ್ಗೆ ಯೋಚಿಸಿತು. "ಗಾಯಿತ್ರಿ, ನೀನೂ ಸಾಮಾನ್ಯ ಕುಟುಂಬದಲ್ಲಿ ಹುಟ್ಟಿರುವವಳು. ಅದೃಷ್ಟವಿತ್ತು. ಶ್ರೀಮಂತ ಕುಟುಂಬದಲ್ಲಿ ಬೆಳೆದೆ ನೀನು ಕೈಹಿಡಿದಾಗ ಗೋವರ್ಧನ್ ಬಳಿ ಏನಿತ್ತು ? ನಿನ್ನ ಮಗನಿಗೆ ಆ ಹುಡುಗಿ ಇಷ್ಟ, ಮದುವೆ ನಡೆಸು" ಅವರ ಮನ ಹೇಳಿತು.

"ಬಡತನದಿಂದ ಬಂದ ನಾನು ಪದ್ಮಿನಿಯನ್ನು ನಮ್ಮ ಮನೆಗೆ ಬೇಡ ಅನ್ನಲು ಅವಳ ಬಡತನವೊಂದೇ ಕಾರಣವೆ ?" ಅವರು ತಮ್ಮನ್ನು ಪ್ರಶ್ನಿಸಿ ಕೊಂಡರು.

ಅವರು ಕಣ್ಮುಚ್ಚಿಕೊಂಡು ಪದ್ಮಿನಿಯ ಬಗ್ಗೆ ಯೋಚಿಸಿದರು. ರೂಪಿನಲ್ಲಿ ಅವಳನ್ನು ತೆಗೆದುಹಾಕುವಂತಿಲ್ಲ. ವಿದ್ಯಾವಂತೆ. ಆದರೆ ಬಡತನವಿದ್ದರೂ ಅವಳ ಉದ್ದಕ್ಕೂ ಸ್ವಾಭಿಮಾನ ತುಂಬಿತ್ತು. ಅವಳು ಅನ್ಯಾಯ ಸಹಿಸುತ್ತಿರಲಿಲ್ಲ. ಯಾರಿಗೂ ತಲೆ ಬಾಗುತ್ತಿರಲಿಲ್ಲ. ತನ್ನ ಅಧಿಕಾರಕ್ಕಾಗಿ ಹೋರಾಡುವ ಛಲವಿತ್ತು. ಕೊಂಚ ಅವಮಾನವಾದರೂ ಪ್ರತಿಭಟಿಸುವ ಧೈರ್ಯವಿತ್ತು. ಗಾಯಿತ್ರಿದೇವಿ ತಮ್ಮ ಸೊಸೆಯಾಗುವವರು ತಾವು ಹೇಳಿದಂತೆ ಕೇಳಬೇಕೆಂದು ಬಯಸುತ್ತಿದ್ದರು. ಹೊಸ ಹುಡುಗಿಯಾದರೆ ತಮ್ಮ ಇಚ್ಛೆಗೆ ತಕ್ಕಂತೆ ಪಳಗಿಸಬಹುದೆಂಬ ಆಸೆಯಿತ್ತು. ಜೊತೆಗೆ ಹೊಸ ಬೀಗರಾದರೆ ಒಂದು ರೀತಿಯ ಮರ್ಯಾದೆ. ಅವರು ಶ್ರೀಮಂತರಾದರೆ ಇನ್ನೂ ಮರ್ಯಾದೆ. ಸೀತಮ್ಮ ಒಳ್ಳೆಯ ಹೆಂಗಸಾದರೂ, 'ತಮ್ಮಿಂದ ಗಾಯಿತ್ರಿ ಉಪಕೃತಳಾದವಳು' ಎಂಬ ಭಾವನೆ ಇಲ್ಲದಿರುತ್ತದೆಯೇ ? ಅದರಲ್ಲೂ ಅವರು 'ಗಾಯಿತ್ರಿ ನೀನು–ತಾನು' ಎಂದರೆ ಏನು ಮರ್ಯಾದೆ ಇರುತ್ತದೆ ಎಂಬ ಧೋರಣೆಯೂ ಇತ್ತು." ಎಲ್ಲಕ್ಕಿಂತ ಮುಖ್ಯವಾಗಿ ಮಗನಿಗೆ ಪದ್ಮಿನಿ ಹಾಗೂ ಅವಳ ಮನೆಯವರ ಬಗ್ಗೆ ಇದ್ದ ಪ್ರೀತಿ–ವಿಶ್ವಾಸ ಅವರ ಮನಸ್ಸಿನ ಭಾರ ಹೆಚ್ಚಿಸಿತ್ತು. 'ಪದ್ಮಿನಿಯೆಂದರೆ ಹುಚ್ಚನಂತೆ ಆಡುವ ಮಗ ನಾಳೆ ಮದುವೆಯಾದ ಮೇಲೆ ನನಗೆ ಮರ್ಯಾದೆ ಕೊಡುತ್ತಾನೆಯೇ ?' ಎಂಬ ಅಂಜಿಕೆಯೂ ಇತ್ತು. ಒಟ್ಟಿನಲ್ಲಿ ಪದ್ಮಿನಿ ಸೊಸೆಯಾಗಿ ಬರುವುದು ಅವರಿಗೆ ಕೊಂಚವೂ ಇಷ್ಟವಿರಲಿಲ್ಲ.

o o o o

ಮರುದಿನ ಬೆಳಗ್ಗೆ ಮಗ ಕಾಲೇಜ್‌ಗೆ ಹೋದ ಮೇಲೆ ಗಾಯಿತ್ರಿದೇವಿ ಪದ್ಮಿನಿಗೆ ಹೇಳಿಕಳುಹಿಸಿದರು.

ಪದ್ಮಿನಿ ಹನ್ನೊಂದು ಗಂಟೆಯ ಹೊತ್ತಿಗೆ ಬಂದಳು.

"ಏನತ್ತೆ ?"

"ಕೂತ್ಕೋ, ನಿನ್ನ ಹತ್ತಿರ ಕೊಂಚ ಮಾತಾಡಬೇಕು."

ಅವಳು ವಿಧೇಯ ವಿದ್ಯಾರ್ಥಿನಿಯಂತೆ ಅವರ ಮುಂದೆ ಕುಳಿತಳು.

"ಪದ್ಮಿನಿ, ಒಂದಾನೊಂದು ಕಾಲದಲ್ಲಿ ನಾವು....ನಿಮ್ಮ ಮನೆಯವರು ತುಂಬಾ ಸ್ನೇಹಿತರಾಗಿದ್ದೆವು. ನಿಮ್ಮ ತಾಯಿ ನನ್ನನ್ನು ಒಡಹುಟ್ಟಿದವರಿಗಿಂತ ಹೆಚ್ಚಾಗಿ ನೋಡಿಕೊಳ್ತಿದ್ರು. ನಮ್ಮ ಅದೃಷ್ಟ ಚೆನ್ನಾಗಿದ್ದುದರಿಂದ ಶ್ರೀಮಂತರಾದೆವು. ಆಗಲೇ ನನಗೆ ಖಾಯಿಲೆ ಶುರುವಾಯಿತು. ನನ್ನನ್ನು ನೋಡಿಕೊಳ್ಳಲಿ ಅನ್ನುವ ಉದ್ದೇಶದಿಂದಲೇ ನಿಮ್ಮ ತಾಯಿ-ತಂದೆಯನ್ನು ನಮ್ಮ ಮನೆ ಹತ್ತಿರ ಕರೆದುಕೊಂಡು ಬಂದೆವು."

ಪದ್ಮಿನಿ ಮಾತಾಡಲಿಲ್ಲ. 'ನನಗೆ ಗೊತ್ತಿರುವ ವಿಚಾರವನ್ನು ಇವರ್‍ಯಾಕೆ ಹೇಳುತ್ತಿದ್ದಾರೆ ?' ಎಂದುಕೊಂಡಳು.

"ನೀನಾಗ ಸಣ್ಣ ಮಗು, ನಾನು ನಿನ್ನನ್ನು ಮಗಳ ತರಹ ನೋಡ್ಕೊಂಡೆ. ನೀನಾಗಿ ನೀನೇ ಬಂದು ನನ್ನ ಹತ್ತಿರ ಕೂರ್‍ತಿದ್ದೆ ಮನೆ ತುಂಬಾ ಓಡಾಡ್ತಿದ್ದೆ ಹೆಣ್ಣು ಮಕ್ಕಳಿಲ್ಲದ ನನಗೆ ನೀನೇ ಮಗಳಾದೆ. ನಾನು ಖಾಯಿಲೆ ಬಿದ್ದಮೇಲೆ ನಿನ್ನ ಕೈಲಿ ಮಗಳ ತರಹ ಸೇವೆ ಮಾಡಿಸಿಕೊಂಡೆ ನೀನು ಈ ಮನೆ-ಮಗಳು-ಸೊಸೆಯಾಗಕ್ಕೆ ಪ್ರಯತ್ನಿಸಬೇಡ...."

"ಅತ್ತೆ...."

"ಪದ್ಮಿನಿ, ನನಗೆ ನಿನ್ನನ್ನು ಸೊಸೆ ಮಾಡಿಕೊಳ್ಳುವುದಕ್ಕೆ ಕೊಂಚಾನೂ ಇಷ್ಟವಿಲ್ಲ. ನಮ್ಮ ಬಿಸಿನೆಸ್ ಈಗ ಅಷ್ಟು ಚೆನ್ನಾಗಿ ನಡೆಯುತ್ತಿಲ್ಲ. ಆದ್ದರಿಂದ ನಮ್ಮ ಬಿಸಿನೆಸ್‌ಗೆ ಸಹಾಯ ಮಾಡುವ ದೊಡ್ಡ ಮನುಷ್ಯರ ಮನೆಯ ಹುಡುಗೀನ್ನ ತರಬೇಕೂಂತ ನನಗಾಸೆ. ಆದರೆ ನೀನು ಅದಕ್ಕೆ ಅಡ್ಡಿಯಾಗಿದ್ದೀಯ."

"ಅತ್ತೆ, ನಾನಾಗಲಿ ಪ್ರಮೋದಾಗಲಿ ಮದುವೆ ವಿಚಾರ ಮಾತಾಡಿಲ್ಲ, ಅಥವಾ ನಾನು ನಿಮ್ಮ ಮುಂದೆ ಬಂದು ನಿಂತು 'ನನ್ನನ್ನು ಸೊಸೆ ಮಾಡಿಕೊಳ್ಳಿ' ಅಂತ ಬೇಡ್ಕೋತಿಲ್ಲ ನಾನು, ಪ್ರಮೋದ್ ಒಳ್ಳೆಯ ಸ್ನೇಹಿತರು."

"ಒಂದು ವಯಸ್ಸು ಮುಟ್ಟುವವರಿಗೂ ಗಂಡು, ಹೆಣ್ಣುಗಳ ನಡುವೆ ಸ್ನೇಹ ಚೆನ್ನಾಗಿರುತ್ತೆ ಪದ್ಮಿನಿ. ನೀನೀಗ ದೊಡ್ಡ ಹುಡುಗಿ, ಅವನಿಂದ ದೂರ ವಿರು."

"ನಾನಾಗಿ ನಾನೇ ಮೇಲೆ ಬಿದ್ದು ಅವನನ್ನು ಮಾತಾಡಿಸ್ತಿಲ್ಲ."

"ನೀನು ನಮ್ಮನೆಗೆ ಪದೇಪದೇ ಬರ್ತಿದ್ರೆ ನಿಮ್ಮ ಸ್ನೇಹ ಮುಂದುವರಿಯುತ್ತಾ ಹೋಗುತ್ತದೆ. ಆದ್ದರಿಂದ ನೀನು ಇವತ್ತಿನಿಂದ ಅವನಿರುವಾಗ ನಮ್ಮನೆಗೆ ಬರಬೇಡ. ಅವನ ಜೊತೆ ಎಲ್ಲೂ ಸುತ್ತಾಡಬೇಡ. ನೆನ್ನೆ ಸಾಯಂಕಾಲ ಕೂಡ ನೀವಿಬ್ರೂ ಒಟ್ಟಿಗೆ ಬಂದ್ರಿ."

"ಆಗಲಿ ಅತ್ತೆ, ನಾನು ಇನ್ಮೇಲೆ ನಿಮ್ಮನೆಗೆ ಬರಲ್ಲ" ಪದ್ಮಿನಿ ಅವರ ಉತ್ತರಕ್ಕೂ ಕಾಯದೆ ಹೊರಗೆ ಬಂದಳು. ಅಪ್ರಯತ್ನವಾಗಿ ಕಣ್ಣೀರು ಸುರಿಯಿತು.

ಒಂದು ವಾರ ಕಳೆಯಿತು. ಪದ್ಮಿನಿ ಅವರ ಮನೆಯ ಕಡೆ ಸುಳಿಯಲಿಲ್ಲ. ಪ್ರಮೋದ ಅವಳನ್ನು ಕಾಣದೆ ಚಡಪಡಿಸತೊಡಗಿದ. ತಾಯಿಯಿಂದ ಸರಿಯಾದ ಉತ್ತರ ಸಿಗಲಿಲ್ಲ. ಪದ್ಮಿನಿಯ ಮನೆಗೇ ನಾಲ್ಕೈದು ಬಾರಿ ಹೋಗಿ ವಿಚಾರಿಸಿದ. ಪ್ರತಿಸಲವೂ ಸೀತಮ್ಮ ಒಂದೇ ಉತ್ತರ ಕೊಟ್ಟರು. "ಪದ್ಮಿನಿ ಮನೆಯಲ್ಲಿಲ್ಲ. ಹೊರಗೆ ಹೋಗಿದ್ದಾಳೆ."

ಮಗನ ಚಡಪಡಿಕೆ ಕಂಡು ಗಾಯಿತ್ರಿದೇವಿ ಕೂಗಾಡಿದರು. "ನಿನಗೇನೋ ಆಗಿದೆ ? ಅವಳು ಮನೆಗೆ ಬರದಿದ್ರೆ ನಿನಗೇನು ನಷ್ಟ ? ಓದು ಮುಗಿಯುವವರೆಗೂ ಅವಳಿಗೆ ನಮ್ಮ ಸಹಾಯ ಬೇಕಿತ್ತು, ಈಗ ಯಾಕೆ ಬೇಕು ಹೇಳು....ಈಗಂತೂ ಈ ಕಡೆ ತಿರುಗಿಯೂ ನೋಡಲ್ಲ. ನೀನಾಗಿ ನೀನೇ ಯಾಕೆ ಹುಡುಕ್ಕೊಂಡು ಹೋಗ್ತೀಯ ? ಓದು ಮುಗಿಸುವ ಕಡೆ ಗಮನ ಕೊಡು."

ಪ್ರಮೋದ್ ಮಾತಾಡಲಿಲ್ಲ. ತಾಯಿ ಹೇಳಿದ್ದರಲ್ಲಿ ಸತ್ಯಾಂಶವಿಲ್ಲ. ಪದ್ಮಿನಿ ನಮ್ಮ ಮನೆಗೆ ಬರದೇ ಇರುವುದಕ್ಕೆ ಅಮ್ಮನೇ ಕಾರಣವಿರಬಹುದು, ಎನ್ನಿಸಿತು.... ಒಂದು ದಿನ ಬೆಳಗ್ಗೆ ಆರು ಗಂಟೆಗೇ ಎದ್ದು ಹೊರಗೆ ಬಂದ.... ಪದ್ಮಿನಿ ಮನೆಯ ಮುಂದೆ ರಂಗವಲ್ಲಿ ಇಡುತ್ತಿದ್ದಳು. ಅವನು ತಮ್ಮ ತೋಟದಿಂದ ಕೆಂಪು ಗುಲಾಬಿಯೊಂದನ್ನು ಕಿತ್ತು ತಂದು ಅವಳ ಮುಂದೆ ನಿಂತ.

"ತೊಗೋ ಪಮ್ಮಿ."

ಅವಳು ತಲೆ ಎತ್ತಿದಳು, ಅವನನ್ನು ನೋಡಿ ಅವಳ ಕಣ್ಣುಗಳು ಮಿಂಚಿದವು. ಅವಳು ಹೂವಿಗಾಗಿ ಕೈ ಚಾಚಿದಳು.

"ಯಾಕೆ ಪದ್ಮಿ ಮನೆ ಕಡೆ ಬರ್ತಿಲ್ಲ ?"

"ನಮ್ಮಮ್ಮ ಹೋಗಬೇಡ ಅಂದಿದ್ದಾರೆ."

"ಯಾಕೆ ?"

"ನಿನಗೇನು ಅಲ್ಲಿ ಕೆಲಸ. ಮೊದಲಾದ್ರೆ ತಲೆಬಾಚಿ, ಪೇಪರ್ ಓದಿ ಬರ್ತಿದ್ದೆ. ಈಗ ಗಾಯಿತ್ರಿ ಹುಷಾರಾಗಿದ್ದಾಳಲ್ಲಾ ಅಂತಾರೆ."

"ಅಮ್ಮನಿಗೆ ಸಹಾಯ ಮಾಡಕ್ಕೆ ಮಾತ್ರ ನಮ್ಮನೆಗೆ ಬರ್ತಿದ್ದೆಯಾ ?"

"ಇನ್ನೇನು ಮತ್ತೆ ? ನಿನ್ನ ಮುದ್ದು ಮುಖ ನೋಡಕ್ಕೆ ಬರ್ತಿದ್ದೆ ಅಂತ ಅಂದ್ಕೊಂಡಿದ್ದೀಯ ? ನೀನು ನನ್ನ ಫ್ರೆಂಡ್...."

"ನನ್ನನ್ನು ನೋಡಬೇಕೂಂತ ನಿನಗೆ ಅನ್ನಿಸೋದೇ ಇಲ್ವಾ ?"

"ಆಗಲೇ ಹೇಳಿದ್ನಲ್ಲಾ ನೀನು ನನ್ನ ಸ್ನೇಹಿತರಲ್ಲಿ ಒಬ್ಬ, ಒಂದು ದಿನ ನಿನ್ನನ್ನು ನೋಡದಿದ್ರೆ ನನ್ನ ಕಣ್ಣೇನು ಒಡೆದು ಹೋಗಲ್ಲ "

"ಪದ್ಮಿನಿ ಇತ್ತೀಚಿಗೆ ನಿನಗೆ ತುಂಬಾ ಜಂಬ ಬಂದಿದೆ."

"ಯಾಕೆ ಬರಬಾರದು ಹೇಳು. ಜಂಬಪಡೋದು ಶ್ರೀಮಂತರ ಹಕ್ಕು ಅಂದ್ಕೊಂಡಿದ್ದೀಯಾ ?"

ಅಷ್ಟರಲ್ಲಿ ತಾಯಿ ಕೂಗಿದ್ದರಿಂದ ಅವಳು ಒಳಗೆ ಓಡಿದಳು. 'ಪದ್ಮಿನಿ ಎಂದಿನಂತಿಲ್ಲ, ಏನೋ ಆಗಿದೆ' ಎಂದುಕೊಂಡ.

ಮರುದಿನ ಅವಳು ಎದ್ದು ಹೊರಗೆ ಬರುವ ವೇಳೆಗೆ ಕೆಂಪು ಗುಲಾಬಿಯೊಂದು ಹೊಸಿಲಬಳಿ ನಗುತ್ತಿತ್ತು. ಪದ್ಮಿನಿ ಅದನ್ನು ಕೈಯಲ್ಲಿ ಹಿಡಿದು, ಸುತ್ತ ಮುತ್ತ ನೋಡಿ ಎದೆ ಗೊತ್ತಿಕೊಂಡು ತುಟಿಗೆ ಸೋಕಿಸಿದಳು. ಬಾಲ್ಕನಿಯಲ್ಲಿ ಅವಳಿಗೆ ಕಾಣದಂತೆ ನಿಂತಿದ್ದ ಪ್ರಮೋದ್‌ನ ಹೃದಯ ಆ ಹೂವಿನಂತೆ ಅರಳಿತು.

ಅವನು ಪ್ರತಿದಿನ ಒಂದು ಹೂವು ತಂದಿಡುತ್ತಿದ್ದ. ಅವಳು ಅದನ್ನು ಮುಡಿಗೇರಿಸುತ್ತಿದ್ದಳು. ಒಂದು ವಾರ ಕಳೆಯಿತು. ಅಂದು ಪದ್ಮಿನಿಯ ಹುಟ್ಟಿದ ಹಬ್ಬ. ಪದ್ಮಿನಿ ಬೇಗ ಎದ್ದು ಸ್ನಾನ ಮಾಡಿದಳು.

"ರಾಯರ ಮಠದಲ್ಲಿ ಪಂಚಾಮೃತಾಭಿಷೇಕಕ್ಕೆ ಕೊಟ್ಟಿದ್ದೇನೆ. ನೀನು ಹೋಗಿ ನಮಸ್ಕಾರ ಹಾಕಿ ಪಂಚಾಮೃತ ತೊಗೊಂಡು ಬಾ" ಎಂದಿದ್ದರು ತಾಯಿ.

ಅವಳು ಬಾಗಿಲಿಗೆ ನೀರು ಹಾಕುವಾಗ ಎಂದಿನಂತೆ 'ಗುಲಾಬಿ ಹೂ' ಕಾಣಲಿಲ್ಲ. ಆದರೆ ಪ್ರಮೋದ್ ಬಾಗಿಲಲ್ಲೇ ಪ್ರತ್ಯಕ್ಷನಾದ. "ಪಮ್ಮಿ, ಹುಟ್ಟು ಹಬ್ಬದ ಶುಭಾಶಯಗಳು."

"ಥ್ಯಾಂಕ್‌ಯೂ."

ಅವನು ತನ್ನ ಕೈಲಿದ್ದ ಪ್ಯಾಕೆಟ್ ಅವಳ ಕೈಗಿತ್ತ.

"ಇದೇನಿದು ?"

"ತೆಗೆದುನೋಡು."

ಅವಳು ಕುತೂಹಲದಿಂದ ಬಿಚ್ಚಿದಳು. ಬೆಲೆಬಾಳುವ ವ್ಯಾನಿಟಿ ಬ್ಯಾಗ್ ಕವರ್‌ನಲ್ಲಿತ್ತು.

"ಇಷ್ಟು ಭಾರಿ ಉಡುಗೊರೆ ಯಾಕೆ ?"

"ಇದೆಂತಹ ಭಾರೀ ಉಡುಗೊರೆ ? ನಾನು ಸಂಪಾದಿಸಕ್ಕೆ ಶುರುಮಾಡಿದ ಮೇಲೆ ಇನ್ನೂ ಚೆನ್ನಾಗಿರುವ ಉಡುಗೊರೆ ಕೊಡ್ತೀನಿ. ಆಗ ಈ ಮಾತು ಹೇಳು. ಹೇಗೂ ಕೆಲಸಕ್ಕೆ ಸೇರಬೇಕೂಂತಿದ್ದೀಯ, ಈ ಉಡುಗೊರೆ ಉಪಯೋಗವಾಗಬಹುದು."

"ತುಂಬಾ ಚೆನ್ನಾಗಿದೆ, ಥ್ಯಾಂಕ್ಸ್."

"ಹುಟ್ಟಿದ ಹಬ್ಬದ ಸಿಹಿ ಕೊಡಲ್ವಾ ?"

"ಅಮ್ಮ ಪಾಯಿಸ ಮಾಡ್ತಿದ್ದಾರೆ, ಬಂದು ಕುಡಿ."

"ಊಹುಂ, ನಂಗೆ ಪಾಯ್ಸ ಬೇಡ, ಇವತ್ತು ಸಾಂಯಕಾಲ ಪಾರ್ಟಿ ಕೊಡು."

"ನಾನೇನು ಸಂಪಾದಿಸ್ತಿದ್ದೀನಾ ನಿಂಗೆ ಪಾರ್ಟಿ ಕೊಡಕ್ಕೆ ? ನಾನು ಕೆಲಸಕ್ಕೆ ಸೇರಿದ ಮೇಲೆ ಪಾರ್ಟಿ ಕೊಡ್ತೇನೆ."

"ನಾನು ಸಾಲ ಕೊಡ್ತೇನೆ, ಕೊಡಿಸೇ."

"ಏನೂ ಬೇಡ. ನಂಗೆ ಸಾಲ ಮಾಡಕ್ಕೆ ಇಷ್ಟವಿಲ್ಲ."

"ಮಹಾ ಜಿಪುಣಿ ನೀನು. ನಾನು ತಿಂಡಿ ಕೊಡಿಸಿದಾಗ ಮಾತ್ರ ಬಿಂಕ ವಿಲ್ಲದೆ ತಿಂದುಬಿಡ್ತೀಯ. ನಾನು ತಿಂಡಿ ಕೇಳಿದ್ರೆ ಕಾಸು ಬಿಚ್ಚಕ್ಕೆ ಅಳ್ತೀಯ ನಂಗೆ ಪಾಯ್ಸ–ಗೀಯ್ಸ ಬೇಡ. ಕೊಡಿಸೋದಾದ್ರೆ ಹೋಟೆಲ್‌ನಲ್ಲಿ ಸ್ವೀಟ್ಸ ಕೊಡಿಸು."

"ಹೋಗ್ಲಿ ಬಿಡು, ಸಾಯಂಕಾಲ ತಿಂಡಿ ಕೊಡಿಸ್ತೇನೆ."

"ಹಾಗ್ಬಾ ದಾರಿಗೆ. ಯಾವ ಹೋಟೆಲ್‌ನಲ್ಲಿ ಕೊಡಿಸ್ತೀಯಾ ?"

"ತಿಂಡಿ ಕೊಡಿಸೋಳು ನಾನು. ನಾನು ಕರ್ಕೊಂಡು ಹೋಗುವ ಹೋಟೆಲ್‌ಗೆ ತೆಪ್ಪಗೆ ಬಾ."

"ಎಷ್ಟು ಹೊತ್ತಿಗೆ ಹೋಗೋಣ ?"

"ನಾಲ್ಕು ಗಂಟೆಯ ಹೊತ್ತಿಗೆ ನಾನು ಬಸ್ಟಾಪ್‌ನಲ್ಲಿರ್ತೇನೆ ಅಲ್ಲಿಗೆ ಬಾ."

"ನಿಮ್ಮಮ್ಮ ಏನೂ ಅನ್ನಲ್ವಾ ?" ಅವನು ರೇಗಿಸಿದ.

"ಹೋಗೋ" ಎಂದವಳು ಒಳಗೆ ನಡೆದಳು.

ಅವನು ಒಳಗೆ ಬರುವುದನ್ನೇ ಕಾಯುತ್ತಿದ್ದ ಗಾಯಿತ್ರಿದೇವಿ ಕೇಳಿದರು "ಏನೋ ಅವಳ ಜೊತೆ ಅಷ್ಟೊಂದು ಹರಟ್ತಿದ್ದೆ ?"

"ಇವತ್ತು ಅವಳ ಹುಟ್ಟಿದ ಹಬ್ಬ ಅಲ್ವಾ, ವಿಷ್ ಮಾಡಿ ಬಂದೆ."

"ಏನು ಪ್ರೆಸೆಂಟೇಷನ್ ಕೊಟ್ಟೆ ?"

"ವ್ಯಾನಿಟಿಬ್ಯಾಗ್...."

"ಅವಳು ತಮ್ಮನೆಗೆ ಊಟಕ್ಕೆ ಕರೆಯಲಿಲ್ವಾ ?"

"ಉಹುಂ, ಮನೆಗೇ ಸ್ವೀಟ್ಸ್ ಕಳಿಸ್ತಾಳೇನೋ...."

"ಒಳ್ಳೆಯದಾಯ್ತು ಬಿಡು...." ಎಂದರು ತಾಯಿ.

ಮಧ್ಯಾಹ್ನ ಒಂದೂವರೆ ಹೊತ್ತಿಗೆ ಸೀತಮ್ಮ ವಾಂಗಿಭಾತ್ ಬೊಂಬಾಯಿ ಬೊಂಡಾ, ಶ್ಯಾವಿಗೆ ಪಾಯಿಸ, ಕೊಬ್ಬರಿ ಮಿಠಾಯಿ ತಂದರು.

"ಇವತ್ತು ನಮ್ಮ ಪದ್ಮಿನಿ ಹುಟ್ಟುಹಬ್ಬ. ಗಾಯಿತ್ರಿ ಅದಕ್ಕೆ ಸ್ವೀಟು ಖಾರ ಕೊಟ್ಟು ಹೋಗೋಣಾಂತ ಬಂದೆ."

"ಗೊತ್ತಾಯ್ತು, ಪ್ರಮೋದ್ ಹೇಳಿದ."

"ಪ್ರಮೋದ್ ಮನೇಲಿಲ್ವಾ?"

"ಇಲ್ಲ, ಕಾಲೇಜ್‌ಗೆ ಹೋಗಿದ್ದಾನೆ, ಕೂತ್ಕೊಳ್ಳಿ. ಸೀತಮ್ಮ, ನಾನು ನಿಮ್ಮ ಜೊತೆ ಕೊಂಚ ಮಾತಾಡಬೇಕಿತ್ತು."

ಸೀತಮ್ಮ ಕುಳಿತರು.

"ಸೀತಮ್ಮ, ನೀವು ನನಗೆ ಅಕ್ಕನಿಗಿಂತ ಹೆಚ್ಚಾಗಿದ್ದೀರಿ. ನನಗೆ ನೂರೆಂಟು ತರಹ ಸಹಾಯ ಮಾಡಿದ್ದೀರಿ."

"ಛೆ....ಬಿಡಮ್ಮ, ಏನು ಮಾತೂಂತ ಆಡ್ತೀಯ. ನೀನು ಮಾಡಿರುವ ಸಹಾಯ ಕಡಿಮೇನಾ ? ನಾವು ಈ ದಿನ ಇಷ್ಟರಮಟ್ಟಿಗೆ ಇರುವುದಕ್ಕೆ ನೀನೇ ಕಾರಣ ಅಲ್ವೆ ?"

"ಸೀತಮ್ಮ ,ನಾನು ಪದ್ಮಿನೀನ್ನ ನನ್ನ ಮಗಳೂಂತಾನೇ ಭಾವಿಸಿದ್ದೇನೆ."

"ಹೌದಮ್ಮ, ಅವಳು ನನ್ನ ಮಗಳಲ್ಲ ನಿನ್ನ ಮಗಳು."

"ಅವಳು ಕೊನೆಯವರೆಗೂ ನನ್ನ ಮಗಳಾಗೇ ಉಳಿಯಬೇಕೇ ಹೊರತು ಸೊಸೆಯಾಗುವ ಕನಸು ಕಾಣಬಾರದು."

"ಗಾಯಿತ್ರಿ ಪದ್ಮಿನಿ ಹುಟ್ಟಿದಾಗ ನೀನೇ ಹೇಳಿರಲಿಲ್ವಾ ಇವಳೇ ನನ್ನ ಸೊಸೆ ಅಂತ."

"ನಿಜ, ಆಗ ಹೇಳಿದ್ದೆ. ಆದರೆ ಆ ಮಾತನ್ನು ಉಳಿಸಿಕೊಳ್ಳುವುದಕ್ಕೆ ಈಗ ಆಗ್ತಿಲ್ಲ. ನಮಗೆ ನಮ್ಮ ವ್ಯವಹಾರದಲ್ಲಿ ತುಂಬಾ ನಷ್ಟ ಆಗ್ತಿದೆ. ನಮಗೆ ಧನಸಹಾಯ ಮಾಡಿ, ಹೆಣ್ಣು ಕೊಡುವವರು ಬೇಕು. ಪ್ರಮೋದನಿಗೂ ನಾಲ್ಕಾರು ಕಡೆಯಿಂದ ಒಳ್ಳೆಯ ಸಂಬಂಧ ಬಂದಿದೆ."

"ಪ್ರಮೋದ್ ಏನಂತಾನೆ ?"

"ಅವನ ಹತ್ತಿರ ನಾನು ಈ ವಿಚಾರ ಮಾತೇ ಆಡಿಲ್ಲ. ಅವನಿಗೆ ಅಂತಹ ಭಾವನೆ ಇರಲಾರದು. ಒಟ್ಟಿಗೆ ಬೆಳೆದವರಾಗಿದ್ದರಿಂದ ಸಲಿಗೆಯಿಂದ ವರ್ತಿಸ ಬಹುದು. ಆದರೆ ವಯಸ್ಸನ್ನು ನಂಬಕ್ಕಾಗಲ್ಲ....ಪದ್ಮಿನಿ ಮಿಂಚಿನಬಳ್ಳಿ ತರಹ ನಮ್ಮನೇಲಿ ಓಡಾಡ್ತಿದ್ರೆ, ಪ್ರಮೋದ್ ಹೇಗೆ ತಾನೆ ನಮ್ಮ ಮಾತು ಕೇಳ್ತಾನೆ ? ನೀವು ಅವಳನ್ನು ಅವನಿರುವಾಗ ನಮ್ಮನೆಗೆ ಕಳುಹಿಸಲೇಬೇಡಿ."

"ಹಾಗೇ ಆಗಲಮ್ಮ" ಎಂದರು ಸೀತಮ್ಮ ಪೆಚ್ಚಾಗಿ.

"ಅವಳು ಅವನ ಜೊತೆ ಸಿನಿಮಾ, ನಾಟಕ, ಹೋಟೆಲ್ ಅಂತ ಸುತ್ತುತ್ತಾ ಇರ್ತಾಳೇಂತ ನನಗೆ ಗೊತ್ತು ಅವಳನ್ನು ಕೊಂಚ ಕಂಟ್ರೋಲ್ ಮಾಡಿ."

"ಆಯ್ತಮ್ಮ" ಎಂದರು ಸೀತಮ್ಮ ಸೋತ ಧ್ವನಿಯಲ್ಲಿ.

"ಅಪರೂಪಕ್ಕೆ ಬಂದಿದ್ದೀರ. ಕೊಂಚ ಹಾಲು ತರ್ತೀನಿ ಇರಿ" ಎನ್ನುತ್ತಾ ಎದ್ದರು ಗಾಯಿತ್ರಿ. ಸೀತಮ್ಮನಿಗೆ ತುಂಬಾ ದುಃಖವಾಗಿತ್ತು. ಮಗಳು ಈ ಮನೆಯ ಸೊಸೆಯಾಗುತ್ತಾಳೆಂದು ಅವರು 19 ವರ್ಷದಿಂದ ಕಂಡಿದ್ದ ಕನಸು

ಚೂರಾಗಿತ್ತು. ಹಾಗೆಂದು ಅವರು ಗಾಯಿತ್ರಿಯ ಜೊತೆ ವೈಮನಸ್ಯ ಬೆಳೆಸಲು ಸಿದ್ಧವಿರಲಿಲ್ಲ. ಶ್ರೀಮಂತ ಗಾಯಿತ್ರಿಯ ಜೊತೆ ತಾವು ವಾದ ಮಾಡಲು ಸಾಧ್ಯವೆ ? ಹಠಮಾಡಿ ಒಪ್ಪಿಸಲು ಸಾಧ್ಯವೆ ? ಒಟ್ಟಿನಲ್ಲಿ ನಮಗೆ ಅದೃಷ್ಟವಿಲ್ಲ" ಎಂದುಕೊಂಡರು.

ಗಾಯಿತ್ರಿದೇವಿ ಒಂದು ಲೋಟದ ತುಂಬಾ ಹಾಲು ತಂದಿತ್ತು ಹೇಳಿದರು. "ಸೀತಮ್ಮ, ಪದ್ಮಿನಿಗೆ ಒಳ್ಳೆಯ ಸಂಬಂಧ ನೋಡಿ. ನಾನು ಹಣದ ಸಹಾಯ ಮಾಡ್ತೀನೆ....ನೀವು ವರದಕ್ಷಿಣೆ ಕೊಡಕ್ಕಾಗಲ್ಲಾಂತ ಕೆಲಸಕ್ಕೆ ಬಾರದವನಿಗೆ ನಮ್ಮ ಪದ್ಮಿನಿಯನ್ನು ಕೊಡಬೇಡಿ."

"ನೀನು ಮನುಷ್ಯಳಲ್ಲಮ್ಮ ದೇವತೆ. ನೀನು ಇನ್ನುಮೇಲೆ ನಿಶ್ಚಿಂತೆಯಿಂದಿರು, ನಾನು ಪದ್ಮಿನಿಗೆ ಬುದ್ಧಿ ಹೇಳ್ತೀನಿ."

"ಪದ್ಮಿನಿಗೆ ಎಲ್ಲಾದ್ರೂ ಕೆಲಸ ಸಿಕ್ಕಿತಾ ?"

"ಇಲ್ಲಮ್ಮ ನಾಲ್ಕಾರು ಕಡೆ ಪ್ರಯತ್ನ ಮಾಡಿದ್ದಾರೆ. ಎಲ್ಲಿ ಸಿಗುತ್ತದೆಯೋ ನೋಡಬೇಕು."

ಗಾಯಿತ್ರಿದೇವಿ ತಾವು ಉಡದೇ ಇಟ್ಟಿದ್ದ ಪ್ರಿಂಟೆಡ್ ಸಿಲ್ಕ್ ಸೀರೆಯೊಂದರ ಜೊತೆ ಬ್ಲೌಸ್ ಪೀಸ್ ಇಟ್ಟು ಸೀತಮ್ಮನ ಕೈಯ್ಯಲ್ಲಿ ಕೊಟ್ಟು ಹೇಳಿದರು. "ಸೀತಮ್ಮ, ಇದನ್ನು ಪದ್ಮಿನಿಗೆ ಕೊಡಿ ನನ್ನ ಆಶೀರ್ವಾದ ಅವಳಿಗೆ ಯಾವಾಗಲೂ ಇದ್ದೇ ಇರುತ್ತದೆ."

ಸೀತಮ್ಮ ಮಾತನಾಡದೆ ಆ ಸೀರೆ ತೆಗೆದುಕೊಂಡು ಮನೆಗೆ ಬಂದರು. ಆ ವೇಳೆಗೆ ಪದ್ಮಿನಿ ಚಟ್ನಿಹಾಕಿ ಉಪ್ಪು ತುಪ್ಪ ಬಡಿಸಿ, ನೀರಿಟ್ಟಿದ್ದಳು. ಸೀತಮ್ಮ ಮಗಳನ್ನು ನೋಡಿ ನಿಟ್ಟುಸಿರುಬಿಟ್ಟರು. ತಾಯಿಯ ಕೈಲಿದ್ದ ಕವರ್ ನೋಡಿ ಪದ್ಮಿನಿ ಕೇಳಿದಳು. "ಏನಮ್ಮ ಅದು ?"

"ಗಾಯಿತ್ರಿ ನಿನಗೆ ಸೀರೆ ಕಳುಹಿಸಿದ್ದಾಳೆ ನೋಡು."

ಪದ್ಮಿನಿ ಅದನ್ನು ಕೈಯಿಂದಲೂ ಮುಟ್ಟಲಿಲ್ಲ. ಸೀತಮ್ಮನ ಮುಖ ಪೆಚ್ಚಾಗಿತ್ತು. ಗಾಯಿತ್ರಿಯ ಮಾತುಗಳಿಂದ ಅವರ ಕನಸುಗಳು ಕರಗಿ ಹೋಗಿದ್ದವು.

"ಯಾಕಮ್ಮ ಒಂದು ತರಹ ಇದ್ದೀಯ ?"

"ಯಾಕಿಲ್ಲ, ಊಟಮಾಡು."

ಊಟಮಾಡಿ ಶಾಸ್ತ್ರಿಗಳು ಅಡ್ಡಾದಾಗ ಸೀತಮ್ಮ ಪಿಸುಗುಟ್ಟಿದ್ದರು.

"ಗಾಯಿತ್ರಿ ಬಾಯಿಬಿಟ್ಟು ಇವತ್ತು ಹೇಳಿದಳೂರಿ. ಪದ್ಮಿನಿ ನನ್ನ ಮಗಳಾಗೇ ಇರಬೇಕು, ಸೊಸೆಯಾಗೋದು ಬೇಡಾಂತ. ಪದ್ಮಿನಿಗೆ ಬೇರೆ ಗಂಡು ಹುಡುಕಿ, ಮದುವೆಗೆ ನಾನು ಸಹಾಯ ಮಾಡ್ತೀನೀಂತ ಹೇಳಿದಳು ಪದ್ಮಿನಿ ಅವರ ಸೊಸೆ ಆಗ್ತಾಳೇಂತ ನಾನೆಷ್ಟು ಕನಸು ಕಂಡಿದ್ದೆ ಗೊತ್ತಾ ?" ಅವರು ಮಾತಾಡುತ್ತಾ ದಳದಳ ಕಣ್ಣೀರು ಸುರಿಸಿದರು.

"ನೀನು ಯಾಕೇಂತ ಕೇಳಲಿಲ್ವಾ ?"

"ಅವರಿಗೇನೋ ವ್ಯವಹಾರದಲ್ಲಿ ತುಂಬಾ ನಷ್ಟವಾಗಿದೆಯಂತೆ ಅದಕ್ಕೆ ಶ್ರೀಮಂತರ ಮನೆಯಿಂದ ಹೆಣ್ಣು ತಂದು ಪ್ರಮೋದ್‌ಗೆ ಮದುವೆ ಮಾಡ್ತಾರಂತೆ. ಚೆನ್ನಾಗಿ ಜಗಳವಾಡೋಣ ಅನ್ನಿಸ್ತು. ಆದರೆ ಮನಸ್ಸಾಗಲಿಲ್ಲ."

"ನೀನು ಜಾಣೆ ಬಿಡು ಜಗಳವಾಡಿ ಬರುವ ಸಹಾಯನ್ನ ಯಾಕೆ ಕಳೆದು ಕೊಳ್ತೀಯ ? ನೀನು ಇನ್ನು ಈ ವಿಚಾರದಲ್ಲಿ ತಲೆಕೆಡಿಸಿಕೊಳ್ಳಬೇಡ. ಅವರು ಈಗಾಗಲೇ ನಮಗೆ ಸಾಕಷ್ಟು ಸಹಾಯ ಮಾಡಿದ್ದಾರೆ. ಮುಂದೂ ಮಾಡ್ತಾರೆ. ಆಕಾಶದೀಪಕ್ಕೆ ಕೈಚಾಚಿ ದುಃಖಪಡೋದು ಬೇಡ."

"ಪದ್ಮಿನೀನ್ನ ನಮ್ಮ ಮನೆಗೆ ಕಳುಹಿಸಬೇಡಿ. ಅವಳು ಮಿಂಚಿನ ಬಳ್ಳಿ ಹಾಗೆ ಓಡಾಡ್ತಿದ್ರೆ ಪ್ರಮೋದ ಹೇಗೆ ಸಂಯಮದಿಂದ ಇರಲು ಸಾಧ್ಯ—ಅಂತ ಹೇಳಿದ್ರು."

"ಆಗಲಿ, ಅವಳಿಗೆ ಬುದ್ಧಿ ಹೇಳೋಣ. ಇವತ್ತು ನೀನವಳಿಗೆ ಏನೂ ಹೇಳ ಬೇಡ....ಹುಟ್ಟಿದ ಹಬ್ಬದ ದಿನ ಅವಳು ನೊಂದುಕೊಳ್ಳೋದು ಬೇಡ."

"ಅದನ್ನು ನೀವು ನನಗೆ ಹೇಳಬೇಕಾ ?" ಸೀತಮ್ಮ ಸಿಡುಕಿದರು.

## ೩

ಕನ್ನಡಿಯ ಮುಂದೆ ನಿಂತಿದ್ದ ಪದ್ಮಿನಿ ಕಡೆಯ ಬಾರಿ ಕನ್ನಡಿ ನೋಡಿ ಕೊಂಡಳು. ನವಿಲುಬಣ್ಣದ ಮಾರ್ಬಲ್ ಷಿಫಾನ್ ಸೀರೆಯುಟ್ಟು ಕನ್ನಡಿಯ

ಚಿತ್ತಾರವಿದ್ದ ಉದ್ದತೋಳಿನ ಬ್ಲೌಸ್ ಧರಿಸಿ, ಅದಕ್ಕೆ ಒಪ್ಪುವ ಕೃತಕಾಭರಣ ಗಳನ್ನು ಹಾಕಿಕೊಂಡಿದ್ದಳು. ತನ್ನ ಕೂದಲನ್ನು ಸೇರಿಸಿ ಕ್ಲಿಪ್ ಹಾಕಿ ಮಧ್ಯಾಹ್ನ ಪ್ರಮೋದ ಇಂದುವಿನ ಕೈಲಿ ಕಳುಹಿಸಿದ್ದ ಗುಲಾಬಿ ಮುಡಿ ದಿದ್ದಳು. ಅಪ್ಸರೆಯಂತೆ ಕಾಣುತ್ತಿದ್ದ ಮಗಳನ್ನು ಮೆಚ್ಚುಗೆಯಿಂದ ನೋಡಿದ ಸೀತಮ್ಮ ಪ್ರಶ್ನಿಸಿದರು. "ಎಲ್ಲಿಗೆ ಹೊರಟಿದ್ದೀಯ ?"

"ಹೋಗಮ್ಮ ಹೊರಟಿರುವಾಗ ಎಲ್ಲಿಗೇಂತ ಕೇಳಬೇಡ."

"ಯಾವ ರಾಜಕಾರ್ಯಕ್ಕೆ ಹೊರಟಿದ್ದೀಯ....ಅದನ್ನಾದ್ರೂ ಹೇಳು."

"ಲತಾ ಬರ್ತ್‌ಡೇ ಸ್ವೀಟ್ಸ್ ಕೊಡಿಸೂಂತ ಕೇಳ್ತಿದ್ದಾಳೆ. ಅದಕ್ಕೆ ಅವಳನ್ನು ಕರೆದುಕೊಂಡು ಹೋಗಿ ತಿಂಡಿ ಕೊಡಿಸ್ತೇನೆ."

"ಮಧ್ಯಾಹ್ನ ಊಟಕ್ಕೆ ಕರೆದಿದ್ದಿದ್ರೆ ಆಗ್ತಿರಲಿಲ್ವಾ ?"

"ಕರೆದಿದ್ದೆ....ಅವಳು ನನಗೆ ಮನೆ ಊಟ ತಿಂಡಿ ಬೇಡಾಂದಳು."

"ನಿಮ್ಮದೆಲ್ಲಾ ವಿಚಿತ್ರ, ಬೇಗ ಬಂದುಬಿಡು."

ಅವಳು ಚಪ್ಪಲಿ ಮೆಟ್ಟಿಕೊಳ್ಳುತ್ತಿದ್ದಾಗ ಕೇಳಿದರು. "ಹೋಟೆಲ್‌ಗೆ ದುಡ್ಡಿದೆಯೇನೆ ?"

"ಜಯಮ್ಮನ ಮನೆಯವರು ಗೌರಿಹಬ್ಬದ ಬಟ್ಟೆ ಹೊಲಿದಿದ್ದಕ್ಕೆ 250 ರೂ. ಕೊಟ್ಟಿದ್ದಾರೆ."

ಅವಳು ನೆರಿಗೆ ಚಿಮ್ಮಿಸುತ್ತಾ ಹೊರಗೆ ಬಂದಾಗ ಬಾಲ್ಕನಿಯಲ್ಲಿ ನಿಂತಿದ್ದ ಪ್ರಮೋದ್ ಕೈ ಬೀಸಿದ. ಅವಳು ಲತಾಳ ಜೊತೆ 'ಸ್ಕೂಟರ್' ಏರಿದಳು.

"ಯಾರನ್ನು ಕೊಲ್ಲಕ್ಕೆ ಈ ಅಲಂಕಾರ ?"

"ಅಲಂಕಾರದಿಂದ ಯಾರನ್ನಾದ್ರೂ ಕೊಲ್ತಾರ ?"

"ಪ್ರಮೋದ್ ಈಗಾಗ್ಲೆ ನಿನ್ನ ಮೆಚ್ಚಿಯಾಗಿದೆ. ನೀನು ಹೇಗಿದ್ರೂ ಚೆನ್ನಾಗೇ ಕಾಣ್ತೀಯ....ಆದರಿವತ್ತು ತುಂಬಾ ಮುದ್ದಾಗಿ ಕಾಣುತ್ತಿದ್ದೀಯ. ಪ್ರಮೋದ್ ಜೊತೆ ಹೋಗ್ತಿದ್ದೀಯ ಹುಷಾರ್."

ಅವಳ ಮುಖ ರಂಗೇರಿತು.

ಬಸ್ಟಾಪ್ ಹತ್ತಿರ ಅವಳನ್ನು ಇಳಿಸಿ ಲತಾ ಹೇಳಿದಳು. "ನಾನು ಮೀನಾಕ್ಷಿ ಮನೆಗೆ ಹೋಗಿ 7–30ಗೆಲ್ಲಾ ಇಲ್ಲಿರ್ತೀನಿ. ಆ ವೇಳೆಗೆ ನೀನಿಲ್ಲಿರ ಬೇಕು."

"ಹುಂ ಕಣೆ, ನನಗೆ ಸಹಾಯ ಮಾಡಿರುವುದಕ್ಕೆ ತುಂಬಾ ಥ್ಯಾಂಕ್ಸ್."

ಅವಳು ಸ್ಕೂಟರ್ ಸ್ಟಾರ್ಟ್ ಮಾಡಿದಳು. ಐದು ನಿಮಿಷಗಳಲ್ಲಿ ಪ್ರಮೋದ್ ಬೈಕ್‌ನಲ್ಲಿ ಬಂದ.

"ಹತ್ತು ರಥ."

ಅವಳು ಹತ್ತಿದಳು.

"ಯಾವ ಹೋಟೆಲ್‌ಗೆ ಹೋಗೋಣ ?"

"ಯಾವುದಾದ್ರೂ ಪರವಾಗಿಲ್ಲ."

"ಪರ್ಸ್‌ನಲ್ಲಿ ದುಡ್ಡಿದೆಯೇನೆ ?"

"ನಿಂಗ್ಯಾಕೆ ಆ ಚಿಂತೆ ? ದುಡ್ಡಿಲ್ಲದಿದ್ರೆ ಹೋಟೆಲ್‌ನಲ್ಲಿ ಹಿಟ್ಟು ರುಬ್ತೀನಿ ಬಾ."

ಅವನು ಜೋರಾಗಿ ನಕ್ಕು ಬೈಕ್ ಸ್ಟಾರ್ಟ್ ಮಾಡಿದ.

'ಅಶೋಕ ಪಿಲ್ಲರ್' ಬಳಿ ಹೊಸದಾಗಿ ಆರಂಭವಾಗಿದ್ದ ಹೋಟೆಲ್ಲೊಂದರ ಮುಂದೆ ಬೈಕ್ ನಿಂತಿತು. ಇಬ್ಬರೂ ಫ್ಯಾಮಿಲಿರೂಂನಲ್ಲಿ ಕುಳಿತರು.

"ಏನು ಬೇಕೋ ಆರ್ಡರ್ ಮಾಡು ಪ್ರಮೋದ್."

ಅವನು ತಿಂಡಿಗೆ ಹೇಳಿ ತನ್ನೆದುರು ಕುಳಿತಿದ್ದ ಚೆಲುವೆಯನ್ನು ನೋಡಿ ಹೇಳಿದ, "ನೀನಿವತ್ತು ತುಂಬಾ ಚೆನ್ನಾಗಿ ಕಾಣ್ತಿದ್ದೀಯ ಪಮ್ಮಿ."

ಅವನ ಮಾತು ಕೇಳಿ ಖುಷಿಯಾದರೂ ಅದನ್ನು ತೋರಿಸಿಕೊಳ್ಳದೆ ಹೇಳಿದಳು. "ಥ್ಯಾಂಕ್‌ಯೂ"

"ಎಲ್ಲಾದರೂ ಕೆಲಸ ಸಿಕ್ತಾ ಪಮ್ಮಿ ?"

"ಊಹುಂ, ಬೇರೆ ಊರುಗಳಲ್ಲೂ ಪ್ರಯತ್ನಪಡ್ತಿದ್ದೇನೆ."

"ನಾನೇ ಕೆಲಸ ಕೊಡ್ತೀನಿ, ಬರ್ತೀಯಾ ?"

"ಏನು ಕೆಲಸ ?"

"ಇನ್ನೆರಡು ತಿಂಗಳಿಗೆ ನನ್ನ ಬಿ.ಇ. ಮುಗಿಯುತ್ತದೆ. ನಮ್ಮ ಆಫೀಸ್‌ಗೆ ಸ್ಟೆನೋ ಆಗಿ ಬಂದುಬಿಡು. ಇಬ್ಬರೂ ಒಟ್ಟಿಗೆ ಕೆಲಸಕ್ಕೆ ಹೋಗಿ ಬರಬಹುದು."

"ಹಾಗೇನಾದ್ರೂ ಮಾಡಿದ್ರೆ ನಿಮ್ಮಮ್ಮ ನನ್ನನ್ನು ಊರೇ ಬಿಟ್ಟು ಓಡಿಸಿಬಿಡ್ತಾರಷ್ಟೆ."

ಅವಳ ಮಾತು ಕೇಳಿ ಅವನು ಏನೋ ಹೊಳೆದಂತಾಗಿ ಕೇಳಿದ. "ಪಮ್ಮಿ, ನೀನು ನಮ್ಮ ಮನೆಗೆ ಬರದೇ ಇರುವುದಕ್ಕೆ ಅಮ್ಮನೇ ಕಾರಣಾನಾ ?"

"ಛೆ, ಛೆ....ಹಾಗೇನಿಲ್ಲಪ್ಪ."

"ನಿಜ ಹೇಳು, ಅಮ್ಮ ಏನಾದ್ರೂ ಅಂದ್ರಾ ?"

"ಪ್ಲೀಸ್ ಪ್ರಮೋದ್, ಏನೇನೋ ಕೇಳಿ ನನ್ನ ಮೂಡ್ ಹಾಳ್ಮಾಡಬೇಡ ತಿಂಡಿ ತಿನ್ನು."

"ನೀನು ಹೇಳುವವರೆಗೂ ನಾನು ತಿಂಡಿ ತಿನ್ನಲ್ಲ" ಅವನು ಹಠಮಾಡಿದ

"ತಿನ್ನದಿದ್ರೆ ಬಿಡು, ಆದ್ರೆ ನಾನು ತಿನ್ನುವವರೆಗೂ ತೆಪ್ಪಗಿರು...."

ಅವಳು ಬಾಸುಂದಿ ತಿನ್ನುತ್ತಾ ಹೇಳಿದಳು. ಅವನು ನಕ್ಕು ಹೇಳಿದ. "ಅದಕ್ಕೆ ನನಗೆ ನೀನಿಷ್ಟ ಪಮ್ಮಿ....ನೀನೊಂದು ತರಹ ಮೊಂಡು ಹಠಮಾಡಿ. ಈ ಗುಣ ನಂಗೆ ತುಂಬಾ ಮೆಚ್ಚುಗೆ."

ಅವನು ಹೋಟೆಲ್‌ನಿಂದ ಹೊರಗೆ ಬಂದೊಡನೆ ಅವಳನ್ನು ಕೇಳಿದ. "ಮತ್ತೆ ಯಾವಾಗ ಸಿಕ್ತೀಯಾ ?"

"ನಾನ್ಯಾಕೆ ಸಿಗಬೇಕು ?"

"ಮುಂದಿನ ವಾರದಿಂದ ನಮ್ಮ ಪ್ರಾಜೆಕ್ಟ್ ವರ್ಕ್ ಶುರು ನಾನು ತುಂಬಾ ಬಿಜಿಯಾಗಿರ್ತೀನೆ, ನೀನು ನಮ್ಮನೆಗೆ ಬರುವಂತಿದ್ದಿದ್ದರೆ ಬೆಳಗ್ಗೆ ಬಂದು ಮುಖ ತೋರಿಸಿ ಹೋಗು ಅನ್ನಬಹುದಿತ್ತು...."

"ಅದಕ್ಯಾಕೆ ಯೋಚನೆ ? ದಿನಾ ಬೆಳಗ್ಗೆ ಹೇಗೂ ಬಾಗಿಲಿಗೆ ನೀರು ಹಾಕುವಾಗ ಕಾಣಿಸ್ತೀನಲ್ಲಾ ?"

"ನಿನ್ನ ಮಾತು ಕೇಳಬೇಕು ಅನ್ನಿಸಿದ್ರೆ ಏನ್ಮಾಡಲಿ ?"

ಅವನ ಪ್ರಶ್ನೆ ಕೇಳಿ ಅವಳ ಹೃದಯ ಹಿಗ್ಗಿತು.

"ಖಾಲಿ ಕ್ಯಾಸೆಟ್ಸ್ ಇದ್ರೆ ಕೊಡು, ನನ್ನ ಮಾತು ರೆಕಾರ್ಡ್ ಮಾಡಿ ಕಳಿಸ್ತೀನೆ."

"ನಿನ್ನ ತಲೆಯಲ್ಲಿ ಏನು ತುಂಬಿದೆಯೋ ಆ ದೇವರಿಗೇ ಗೊತ್ತು."

"ನನ್ನ ತಲೆಯ ಬಗ್ಗೆ ನಾನೇ ಯೋಚಿಸಲ್ಲ; ನೀನ್ಯಾಕೆ ಯೋಚಿಸಿ ತಲೆ ಕೆಡಿಸಿಕೊಳ್ತೀಯ ? ಹೇಗು ಇನ್ನೇನು ಬಿ.ಇ. ಮುಗಿಯುತ್ತಲ್ಲ....ಮುಂದೇ ನ್ಮಾಡ್ತೀಯ ಹೇಳು."

''ಆ ಪಾರ್ಕಿನಲ್ಲಿ ಕುಳಿತು ಮಾತಾಡೋಣ" ಎಂದ ಪ್ರಮೋದ್.

ಇಬ್ಬರೂ ಎದುರಿಗಿದ್ದ ಪಾರ್ಕ್ ಹೊಕ್ಕರು.

''ಮುಂದೇನ್ಮಾಡ್ತೀಯ ಪ್ರಮೋದ್ ?"

"ಬಿ.ಇ. ಮುಗಿದ ಮೇಲೆ ಒಂದಾರು ತಿಂಗಳು ಅಮೇರಿಕಾಕ್ಕೆ ಹೋಗಿ ಬಾ ಅಂತಿದ್ದಾರೆ ಅಮ್ಮ ಅಲ್ಲಿ ನಮ್ಮ. ತಂದೆ ಫ್ರೆಂಡ್ ಇದ್ದಾರೆ. ಅವರ ಹತ್ರ ಕೆಲಸ ಮಾಡಿದ್ರೆ ಅನುಭವ ಸಿಗುತ್ತೆ. ಭಗವಾನ್ ಅಂಕಲ್ ಬಾಂಬೆಗೆ ಹೋಗಿ ಬಾ ಅಂತಿದ್ದಾರೆ ನೋಡಬೇಕು."

ಅವನ ಮಾತು ಕೇಳಿ ಅವಳ ಮುಖ ಪೆಚ್ಚಾಯಿತು.

"ಯಾಕೆ ಮೌನವಾಗಿಬಿಟ್ಟೆ ಪಮ್ಮಿ ?"

"ಏನಿಲ್ಲಪ್ಪ, ಫಾರಿನ್‌ಗೆ ಹೋದ ಮೇಲೆ ನಿನಗೆ ನಮ್ಮೆಲ್ಲರ ನೆನಪು ಇರುತ್ತದೆಯೋ ಇಲ್ಲವೋಂತ ಯೋಚಿಸ್ತಿದ್ದೆ."

"ಯಾರನ್ನು ಮರೆತರೂ ನಿನ್ನನ್ನು ಮರೆಯುವುದಿಲ್ಲ ಪದ್ಮಿನಿ" ಎಂದನವನು.

ಅವಳಿಗೆ ಖುಷಿಯಾದರೂ ಅನುಮಾನದಿಂದ ಕೇಳಿದಳು. "ನನಗೇನೋ ನಿನ್ನ ಮಾತಿನಲ್ಲಿ ನಂಬಿಕೆಯಿಲ್ಲ. ಅಲ್ಲಿಯ ವೈಭವ ನೋಡಿದ ಮೇಲೆ ಅಲ್ಲಿಯ ಬಿಳಿ ಹುಡುಗಿಯರನ್ನು ನೋಡಿದ ಮೇಲೆ ನಿನಗೆ ಇಂಡಿಯಾ ಎಲ್ಲಿ ಜ್ಞಾಪಕ ವಿರುತ್ತೆ ?"

"ಏನೇನೋ ಹೇಳಬೇಡ....ನಾನು ಎಲ್ಲಿಗೇ ಹೋಗಲಿ, ಎಲ್ಲೇ ಇರಲಿ, ನಿನ್ನನ್ನು ಮರೆಯಲ್ಲ" ಅವನು ಹುಲ್ಲಿನ ಮೇಲಿದ್ದ ಅವಳ ಕೈ ಹಿಡಿದು ಹೇಳಿದ ಅವಳು ವರ್ಣಿಸಲಾಗದ ಆನಂದದಲ್ಲಿ ಮುಳುಗಿಹೋದಳು.

"ಇನ್ನು ಹೊರಡೋಣ್ವಾ ಪಮ್ಮಿ?" ಎಂದನವನು ಇಬ್ಬರೂ ಬೈಕ್ ಬಳಿ ಬಂದಾಗ ಅವರ ಬೀದಿಯಲ್ಲೇ ಇದ್ದ ವಿನಾಯಕ ಎದುರಾದ. ಇವರಿಬ್ಬರೂ ಅವನನ್ನು ನೋಡಿದರೂ ನೋಡದವರಂತೆ ಮುಂದೆ ನಡೆದರು.

'ಇನ್ನು ಮುಗೀತು, ಚೆಂಡೆತ್ತುತ್ತಾರೆ' ಎಂದುಕೊಂಡ ಪ್ರಮೋದ್.

ಪದ್ಮಿನಿಯನ್ನೂ ಅದೇ ಭಯ ಕಾಡಿತು....ಅವಳು ಸರಿಯಾಗಿ 7–30ಗೆ ಬಸ್ಟಾಪ್‌ನಲ್ಲಿದ್ದಳು. ಲತಾಳ ಜೊತೆ ಬಂದ ಮಗಳನ್ನು ನೋಡಿ ಸೀತಮ್ಮ ಸಮಾಧಾನದ ನಿಟ್ಟುಸಿರು ಬಿಟ್ಟರು.

ಮರುದಿನ ಬೆಳಗ್ಗೆ ಅವರು ರಂಗೋಲಿ ಇಡುತ್ತಿದ್ದಾಗ ಪ್ರಮೋದ್ ಕಾಣಿಸಲಿಲ್ಲ.

"ಅತ್ತೆ ನೆನ್ನೆರಾತ್ರಿ 'ಕ್ಲಾಸ್' ತಗೊಂಡಿರಬೇಕು, ಅದಕ್ಕೆ ಆಸಾಮಿ ಪತ್ತೆ ಇಲ್ಲ" ಎಂದುಕೊಂಡಳು.

ಎಂಟು ಗಂಟೆಯ ಹೊತ್ತಿಗೆ ಇಂದು ಆರು ಗಲಾಬಿ ಹೂವುಗಳನ್ನು ತಂದು ಹೇಳಿದಳು. "ಅಕ್ಕಾ, ನಿಂಗೆ ಯಾವ ಹೂವು ಬೇಕೋ ಇಟ್ಟುಕೋ...."

"ನಂಗೆ ಬೇಡ ಹೋಗೆ...."

"ಪ್ರಮೋದ್ ಕಳಿಸಿದ್ದಾನೆ ಕಣೆ...."

ಕಸ ಗೂಡಿಸುತ್ತಿದ್ದ ಪದ್ಮಿನಿ ಪರಕೆ ಕೆಳಗೆ ಹಾಕಿ ಹೂವು ಕೈಗೆ ತೆಗೆದು ಕೊಂಡಳು....ಸೀತಮ್ಮ ಅದನ್ನು ಗಮನಿಸಿ ಗದರಿದರು.

"ಏನೇ ಪಮ್ಮಿ, ನಿನಗೆ ಯಾವಾಗಲೇ ಬುದ್ಧಿ ಬರೋದು ? ಗಾಯಿತ್ರಿಗೆ ನಿನ್ನನ್ನು ಕಂಡರೆ ಮೊದಲಿನ ವಿಶ್ವಾಸವಿಲ್ಲ; ನೀನ್ಯಾಕೆ ಅವನ ಹತ್ತಿರ ಸ್ನೇಹ ಇಟ್ಟುಕೊಳ್ತೀಯ ?"

ಪದ್ಮಿನಿಗೆ ರೇಗಿಹೋಯಿತು. "ಏನಮ್ಮ ಹೀಗಂತೀಯ ? ನಾವಿಬ್ಬರೂ ಮೊದಲಿನಿಂದ ಒಟ್ಟಿಗೆ ಬೆಳೆದಿದ್ದೇವೆ. ಸ್ನೇಹಿತರಾಗಿದ್ದೇವೆ ನೀನು—ಅತ್ತೆ ಹೇಳಿದ್ರೀಂತ ನಾವು ನಮ್ಮ ಸ್ನೇಹ ಬಿಟ್ಟುಬಿಡುವುದಕ್ಕಾಗುತ್ತದೆಯಾ ?"

"ಹಾಗಲ್ಲಮ್ಮ."

"ಹಾಗೂ ಇಲ್ಲ, ಹೀಗೂ ಇಲ್ಲ. ನೀನೇ ಮೊದಲು ಅವರ ಮನೆಗೆ ಹೋಗೂಂತ ತಳ್ತಿದ್ದೆ. ಪ್ರಮೋದನ ಜೊತೆ ಎಲ್ಲಾ ಕಡೆ ಕಳುಹಿಸ್ತಿದ್ದೆ. ಈಗ ಹೋಗಬೇಡ, ಅವನ ಜೊತೆ ಮಾತಾಡಬೇಡ ಅಂತೀಯ. ನನ್ನನ್ನು ಗೊಂಬೆ ಅಂದ್ಕೊಂಡಿದ್ದೀಯ ? ನನಗೂ ಹೃದಯ, ಮನಸ್ಸು ಎಲ್ಲಾ ಇದೆ. ನೀನು ನನಗೆ ಈ ವಿಚಾರದಲ್ಲಿ ಬುದ್ಧಿ ಹೇಳಬೇಡ."

"ಪ್ರಮೋದ ನಿನ್ನ ಮದುವೆಯಾಗಕ್ಕೆ ಗಾಯಿತ್ರಿ ಒಪ್ಪಲ್ಲ ಕಣೆ."

"ಪ್ರಮೋದ್ ಮದುವೆಯಾಗದಿದ್ರೆ ನಾನು ಅವಿವಾಹಿತಳಾಗೇ ಉಳಿದು ಬಿಡ್ತೀನಿ ನೀವು ದಯವಿಟ್ಟು ಇನ್ಮುಂದೆ ನನ್ನೆದುರಿಗೆ ಮದುವೆ ಮಾತಾಡ ಬೇಡ"

ಸೀತಮ್ಮ ತೆಪ್ಪಗಾದರು....ಪ್ರಮೋದ್ ಮದುವೆಯಾಗದಿದ್ರೆ

ಕೆರೇನೋ—ಭಾವಿನೋ ನೋಡಿಕೊಳ್ತೀನೆ ಎನ್ನಲಿಲ್ಲವಲ್ಲ ಮಗಳು ಎಂದು ಕೊಂಚ ಸಮಾಧಾನವಾಯ್ತು.

ಪದ್ಮಿನಿ ಬಟ್ಟೆ ಒಗೆದು ಒಣಹಾಕುತ್ತಿದ್ದಾಗ ಪ್ರಮೋದ್ ಮನೆಯ ಕೆಲಸದವಳು ಮುನಿಯಮ್ಮ ಬಂದು ಕೂಗಿದಳು.

"ಪದ್ಮಮ್ನೋರೆ ನಿಮ್ಮನ್ನು ಅಮ್ಮಾವ್ರು ಕರೀತಾವ್ರೆ."

"ಯಾಕೆ ?"

"ನಂಗೇನ್ಗೊತ್ತವ್ವ ಅತ್ತೆ-ಸೊಸೆಯರ ಸಮಾಚಾರ ?" ಎಂದಳು ಮುನಿಯಮ್ಮ ನಗುತ್ತಾ.

ಅವಳು ತಲೆ ಬಾಚಿಕೊಂಡು ಪ್ರಮೋದ್ ಕೊಟ್ಟಿದ್ದ ವ್ಯಾನಿಟಿ ಬ್ಯಾಗ್ ತೆಗೆದುಕೊಂಡು ಹೊರಟಳು.

"ಅಮ್ಮ ಅತ್ತೆ ಮನೆಗೆ ಹೋಗಿ ಹಾಗೇ ಪೋಸ್ಟಾಫೀಸ್‌ಗೆ ಹೋಗಿ ಬರ್ತೀನೆ."

"ಪೋಸ್ಟ್ ಆಫೀಸ್‌ಗೆ ಯಾಕೆ ?"

"ಅಪ್ಪ ಹೇಳಿದ್ರಲ್ಲಾ ಆ ಅಡ್ರೆಸ್‌ಗೆ ಅಪ್ಲೈ ಮಾಡ್ತಿದ್ದೀನೆ."

"ಗಾಯಿತ್ರಿ ಜೊತೆ ಯದ್ವಾ-ತದ್ವಾ ಮಾತಾಡಬೇಡ. ಅವಳು ಏನಾದರೂ ಅಂದ್ಕೊಳ್ಳಲ್ಲ."

ಪದ್ಮಿನಿ ಉತ್ತರಕೊಡದೆ ಗೇಟು ದಾಟಿದಳು, ಅವಳು ಪ್ರಮೋದ್ ಮನೆಗೆ ಬಂದಾಗ ಗಾಯಿತ್ರಿದೇವಿ ಪೇಪರ್ ಓದುತ್ತಾ ಕುಳಿತಿದ್ದರು.

"ಅತ್ತೆ...."

ಅವರು ತಲೆ ಎತ್ತಿ ಅವಳತ್ತ ನೋಡಿದರು....ಮನೆಯಲ್ಲಿ ಉಡುವ ಹಳೆಯ ಪಾಲಿಸ್ಟರ್‌ಸೀರೆ ಉಟ್ಟಿದ್ದಳವಳು....ಆ ಹಳೆಯ ಸೀರೆಯಲ್ಲೂ ಅವಳು ಮನ ಸೆಳೆಯುವಂತಿದ್ದಳು.

"ಓ, ಪದ್ಮಿನೀನಾ, ಬಾಮ್ಮ ಕೂತ್ಕೋ...."

ಅವಳು ಅವರೆದುರು ಕುಳಿತಳು.

"ನೆನ್ನೆ ನಿನ್ನ ಹುಟ್ಟಿದ ಹಬ್ಬವಂತೆ...."

"ಹುಂ...."

"ನಾನು ಸೀರೆ ಕಳುಹಿಸಿದ್ದೆ."

"ಅಮ್ಮ ಕೊಟ್ರು."

"ಅದನ್ನು ಉಟ್ಟುಕೊಂಡು ಬಂದು ನಮಸ್ಕಾರ ಮಾಡಬಾರದಿತ್ತಾ- ಒಳ್ಳೆಯ ಗಂಡ ಸಿಗಲೀಂತ ಆಶೀರ್ವಾದ ಮಾಡ್ತಿದ್ದೆ."

"ಇವತ್ತು ಹೇಳಿಕಳುಹಿಸಿದಂತೆ ನೆನ್ನೇನೂ ಹೇಳಿಕಳುಹಿಸಿ ಸೀರೆ ಕೊಟ್ಟಿದ್ದಿದ್ರೆ ಉಟ್ಕೊಂಡು ಬಂದು ನಮಸ್ಕಾರ ಮಾಡ್ತಿದ್ದೆ...."

"ಆ ವಿಚಾರ ಬಿಡು. ನೀನ್ಯಾಕೆ ಅನಾವಶ್ಯಕವಾಗಿ ಖರ್ಚುಮಾಡಿ ಪ್ರಮೋದ್‌ಗೆ ಹೋಟೆಲ್‌ನಲ್ಲಿ ತಿಂಡಿಕೊಡಿಸಿದೆ ?"

ಅವರು ತನ್ನನ್ನು ಕರೆಸಿರುವ ಉದ್ದೇಶ ಅರಿವಾದೊಡನೆ ಅವಳ ಮುಖ ಗಂಭೀರಭಾವ ತಳೆಯಿತು.

"ಫ್ರೆಂಡ್ಸ್‌ಗೆ ಖರ್ಚುಮಾಡುವುದನ್ನು ನಾನು ಅನಾವಶ್ಯಕ ಖರ್ಚು ಅಂತ ಭಾವಿಸಿಲ್ಲ ಅತ್ತೆ...."

"ಅವನೆಲ್ಲಿ ಫ್ರೆಂಡ್ ನಿನಗೆ ? ಅವನ ಅಂತಸ್ಥೇನು, ನಿನ್ನ ಅಂತಸ್ಥೇನು ? ಯಾರ ಜೊತೆ ಹೇಗಿರಬೇಕೂಂತ ನಿನಗೆ ಗೊತ್ತಿಲ್ಲಾ ?"

"ನೀವು ಹೇಳ್ತಿರೋದೇನು ?"

"ನಾನು ಏನು ಹೇಳ್ತಿದ್ದೇನೆ ಅನ್ನುವುದನ್ನು ಚೆನ್ನಾಗಿ ಅರ್ಥಮಾಡ್ಕೋ ನೀನು ಪ್ರಮೋದ್ ಕೈಹಿಡಿಯುವ ಕನಸು ಕಂಡಿದ್ದರೆ ಅದನ್ನು ಮರೆತುಬಿಡು ರೂಪ ಇದೇಂತ ಅವನ ಮುಂದೆ ನವಿದನ ಹಾಗೆ ನಲಿದಾಡಿ ಅವನನ್ನು ನಿನ್ನ ಕಡೆಗೆ ಎಳೆದುಕೊಳ್ಳಕ್ಕೆ ಪ್ರಯತ್ನ ಪಡಬೇಡ. ಬಡವರೂಂತ ಹತ್ತಿರ ಸೇರಿಸಿದ್ರೆ ತಲೆಯ ಮೇಲೆ ಕುಳಿತುಕೊಳ್ಳುವುದಾ ?"

ಅವರ ಮಾತು ಕೇಳಿ ಪದ್ಮಿನಿ ಕೆಣಕಿದ ಫಣಿಯಂತೆ ಎದ್ದು ನಿಂತಳು.

"ಅತ್ತೆ ನಾವು ಬಡವರೂಂತ ಕರುಣೆಯಿಂದ ನೀವು ಕರೆದುಕೊಂಡು ಬಂದಿಲ್ಲಾಂತ ನನಗೂ ಗೊತ್ತು. ನಿಮಗೂ ಗೊತ್ತು. ನಿಮ್ಮ ಅನುಕೂಲಕ್ಕೆ ನೀವು ಕರೆದುಕೊಂಡು ಬಂದ್ರಿ, ನಾನು ನಿಮ್ಮ ಮಗ ಯಾವತ್ತು ಮದುವೆಯ ಬಗ್ಗೆ ಮಾತಾಡಿಲ್ಲ. ನಿಮಗೆ ನನ್ನನ್ನು ಕಂಡ್ರೆ ಮೊದಲಿನ ಅಭಿಮಾನವಿಲ್ಲಾಂತ ತಿಳಿದ ಮೇಲೆ ನಾನು ನಿಮ್ಮ ಮನೆಯ ಹೊಸಿಲು ತುಳಿದಿಲ್ಲ. ಈ ದಿನ ನೀವು ಹೇಳಿಕಳುಹಿಸಿದ್ದಕ್ಕೆ ನಾನು ಬಂದಿದ್ದು...."

"ನನ್ನ ಮಗನ ಜೊತೆ ಯಾಕೆ ಸುತ್ತಾಡ್ತಿದ್ದೀಯ ?"

"ಪ್ರಮೋದ್ ನನ್ನ ಸ್ನೇಹಿತ ಚಿಕ್ಕಂದಿನಿಂದ ನಾವಿಬ್ರೂ ಒಟ್ಟಿಗೆ

ತಿರುಗ್ತಿದ್ದೇವೆ. ಈಗ ಅದನ್ನು ಬಿಡಕ್ಕಾಗಲ್ಲ. ಸುತ್ತಾಡುವ ಪ್ರೋಗ್ರಾಂಗಳನ್ನು ಹಾಕೋದು ನಿಮ್ಮ ಮಗನೇ ಹೊರತು ನಾನಲ್ಲ. ಪ್ರತಿದಿನ ಅವನು ನನಗೆ ಹೂವು ಕಳಿಸ್ತಾನೆ. ಪ್ರತಿ ವರ್ಷ ನನ್ನ ಹುಟ್ಟಿದ ಹಬ್ಬಕ್ಕೆ ಒಳ್ಳೆಯ ಪ್ರೆಸೆಂಟೇಶನ್ ಕೊಡ್ತಾನೆ......ಬುದ್ಧಿ ಹೇಳುವುದಾದದ್ರೆ ನಿಮ್ಮ ಮಗನಿಗೆ ಹೇಳಿ"

"ಪದ್ಮಿನಿ, ಯಾರಿಗೆ ಬುದ್ಧಿ ಹೇಳಬೇಕೂಂತ ನನಗೆ ಗೊತ್ತಿದೆ. ನೀನು ಇನ್ಮೇಲೆ ಅವನ ಜೊತೆ ಮಾತಾಡಕೂಡದು. ಅವನ ಜೊತೆ ಎಲ್ಲಿಗೂ ಹೋಗಕೂಡದು."

"ಅತ್ತೆ, ಅವನಾಗಿ ಕರೆದರೆ ಹೇಗೆ ಬರಲ್ಲ ಅನ್ನಲಿ ? ಅವನಾಗಿ ಮಾತನಾಡಿಸಿದರೆ ಹೇಗೆ ಮಾತಾಡದೆ ಸುಮ್ಮನಿರಲಿ ?"

"ಅವನು ಮದುವೆ ಮಾಡ್ಕೋಂತ ಕೇಳ್ತಾನೆ ಮಾಡಿಕೊಂಡುಬಿಡು" ವ್ಯಂಗ್ಯವಾಗಿ ಹೇಳಿದರು ಗಾಯಿತ್ರಿದೇವಿ.

"ಯಾಕಾಗಬಾರದು ? ಪ್ರಮೋದ್ ಅವನಾಗಿ ಕೇಳಿದ್ರೆ ಮದುವೆಯಾಗುವುದಕ್ಕೆ ನಾನು ಸಿದ್ಧ."

"ಪದ್ಮಿನಿ !"

"ಯಾಕತ್ತೆ ಅಷ್ಟು ಆಶ್ಚರ್ಯ ! ಪ್ರಮೋದ್‌ನಂತಹ ಶ್ರೀಮಂತ ವಿದ್ಯಾವಂತ, ಸುಂದರ ಯುವಕನನ್ನು ವರಿಸುವ ಅವಕಾಶವನ್ನು ಯಾರು ತಾನೆ ಕಳೆದುಕೊಳ್ತಾರೆ ? ಆದರೆ ಧೈರ್ಯವಾಗಿರಿ. ನಾನಾಗಿ ನಾನೇ ಮೇಲೆ ಬಿದ್ದು ನಿಮ್ಮ ಮಗನ್ನ ಮದುವೆಯಾಗೂಂತ ಕೇಳಲ್ಲ. ಅವನಾಗೇ ಕೇಳಿದ್ರೂ ನಿಮ್ಮ ಒಪ್ಪಿಗೆಯಿಲ್ಲದೆ ಈ ಮನೆ ಸೊಸೆಯಾಗಿ ಖಂಡಿತಾ ಬರಲ್ಲ. ಸಾಧ್ಯವಾದ್ರೆ ನಿಮ್ಮ ಮಗನಿಗೆ ಬುದ್ಧಿ ಹೇಳಿ" ಪದ್ಮಿನಿ ಅಷ್ಟುಮಾತ್ರ ಹೇಳಿ ಬಿರುಗಾಳಿಯಂತೆ ಹೊರಗೆ ಹೊರಟಳು.

ಗಾಯಿತ್ರಿದೇವಿ ಸುಸ್ತಾಗಿ ಸೋಫಾಗೆ ಒರಗಿ ಕುಳಿತರು.

"ಪ್ರಮೋದನಿಗೆ ಬುದ್ಧಿ ಹೇಳುವ ಶಕ್ತಿ ನನಗಿದೆಯೇ ? ನಾನು ಹೇಳಿದ್ರೆ ಅವನು ಕೇಳ್ತಾನಾ ? ಮೊದಲಿನಿಂದ ನಾನು ಎಚ್ಚರದಿಂದ ಇರಬೇಕಿತ್ತು. ಏನೋ ಹುಡುಗ್ರು ತಾನೇಂತ ಸುಮ್ಮನಿದ್ದುದೇ ತಪ್ಪಾಯ್ತು. ಇವಳನ್ನು ನಾನು ಹೇಗೆ ಸೊಸೇಂತ ಒಪ್ಪಿಕೊಳ್ಳಲಿ ? ಈಗಲೇ ದಬಾಯಿಸ್ತಾಳೆ. ಈ

ಮನೆ ಸೊಸೆಯಾಗಿ ಬಂದ ಮೇಲೆ ನನಗೆ ಬೆಲೆ ಕೊಡುತ್ತಾಳಾ ? ಇವರಿಬ್ಬರ ಸ್ನೇಹ ತಪ್ಪಿಸಬೇಕು" ಎಂದುಕೊಂಡರು.

ವಾರ ಕಳೆಯಿತು, ಪದ್ಮಿನಿ ನಾಲ್ಕಾರು ಕಡೆಗೆ ಇಂಟರ್‌ವ್ಯೂಗೆ ಹೋಗಿ ಬಂದಳು....ಕೊನೆಗೆ ಪ್ಯಾಕೇಜ್ ಇಂಡಸ್ಟ್ರಿಯೊಂದರಲ್ಲಿ ಟೈಪಿಸ್ಟ್ ಕೆಲಸ ಸಿಕ್ಕಿತು. ಆ ಇಂಡಸ್ಟ್ರಿಯಿದ್ದುದು ಶಿವಾಜಿನಗರದಲ್ಲಿ. ಬೆಳಗ್ಗೆ ಎಂಟು ಗಂಟೆಗೆ ಮನೆಬಿಟ್ಟರೆ ಅವಳು ವಾಪಸ್ಸಾಗುತ್ತಿದ್ದುದು ರಾತ್ರಿ ಏಳು ಗಂಟೆಗೆ. 800ರೂ. ಸಂಬಳ ಜೊತೆಗೆ ಬಸ್‌ಚಾರ್ಜ್ ಸಿಗುತ್ತಿತ್ತು. ಪ್ರಮೋದನ ಭೇಟಿ ತುಂಬಾ ಅಪರೂಪ ವಾಗಿಹೋಯ್ತು. ಭಾನುವಾರಗಳಲ್ಲಿ ಅವಳು ಏಳುತ್ತಿದ್ದುದೇ ಎಂಟೂವರೆಗೆ. ತನ್ನ ಸೀರೆಗಳನ್ನು ಒಗೆದು ಇಸ್ತ್ರಿಮಾಡಿ, ತಲೆಗೆ ಸ್ನಾನಮಾಡಿ, ಊಟ ಮುಗಿ ಸುವ ವೇಳೆಗೆ ಮಧ್ಯಾಹ್ನ 2 ಗಂಟೆಯಾಗುತ್ತಿತ್ತು. ನಂತರ ಲತಾ ಮನೆಗೆ ಹೋಗಿ ಸಿನಿಮಾ ನೋಡಿ, ಅವಳ ಜೊತೆ ಒಂದು ರೌಂಡ್ ಹೋಗಿ ಬರು ತ್ತಿದ್ದಳು ಒಮ್ಮೊಮ್ಮೆ ಪ್ರಮೋದ್ ಎದುರಾಗುತ್ತಿದ್ದ. ಅವನ ಜೊತೆ ಸ್ನೇಹಿತರಿರುತ್ತಿದ್ದರು, ಮಾತಾಡಲಾಗುತ್ತಿರಲಿಲ್ಲ. ಮುಗುಳ್ನಗೆಯ ವಿನಿಮಯ ನಡೆಯುತ್ತಿತ್ತು. ಒಮ್ಮೊಮ್ಮೆ ಅವನೇ ಬೈಕ್ ನಿಲ್ಲಿಸಿ 'ಹೇಗಿದ್ದೀಯ ?' ಎನ್ನುತ್ತಿದ್ದ.

೪

ಒಂದು ಭಾನುವಾರ ಅವಳು ಏಳುವ ಹೊತ್ತಿಗೆ ಅವನು ಕಾಣಿಸಿದ.

"ಏನೇ ಈಗ ಏಳ್ತಿದ್ದೀಯ ಸೋಮಾರಿ?"

"ದಿನಾ ಅಲೆದಾಡಿ ಎಷ್ಟು ಸಾಕಾಗಿರುತ್ತೆ ಗೊತ್ತಾ ? ರಜ ಸಿಕ್ಕಿದರೆ ಸಾಕು ಅನ್ನಿಸ್ತಿರತ್ತೆ."

ಅವಳತ್ತಲೇ ನೋಡುತ್ತಾ ಅವನು ಹೇಳಿದ. "ಅದಕ್ಕೆ ತುಂಬಾ ಇಳಿದು ಹೋಗಿದ್ದೀಯ."

"ಏನ್ಸಮಾಚಾರ ರಾಯರು ಇಲ್ಲಿಯವರೆಗೂ ಪಾದ ಬೆಳೆಸಿದ್ದೀರಲ್ಲಾ ?"

"ನಿಂಗೆ ವಿಷಯ ಗೊತ್ತಿಲ್ವಾ ?"

"ಏನು ವಿಷಯ ?"

"ನನ್ನ ರಿಸಲ್ಟ್ ಬಂತು; ನಾನು ಮೂರನೇ ರ್‍ಯಾಂಕ್ ಬಂದಿದ್ದೇನೆ."

"ಅಭಿನಂದನೆಗಳು."

"ಥ್ಯಾಂಕ್ಸ್. ಸ್ವೀಟ್ಸ್ ಬೇಡ್ವಾ ?"

"ತಂದಿದ್ದೀಯಾ ?"

ಅವನು ಸ್ವೀಟ್ಸ್ ಪ್ಯಾಕೆಟ್ ಇಂದು ಕೈಲಿತ್ತು ಹೇಳಿದ.

"ಅಮ್ಮಂಗೆ ಕೊಡು."

ಇಂದು ಒಳಗೆ ಓಡಿದಳು.

"ಇವತ್ತು ಸಾಯಂಕಾಲ ಸಿಗ್ತೀಯ ? ಸ್ವೀಟ್ಸ್ ಕೊಡಿಸುತ್ತೇನೆ."

ಒಂದು ಕ್ಷಣ ಅವಳ ಮನ ಹಿಂಜರಿಯಿತು. ಆದರೆ ಮರುಕ್ಷಣ ಅವನ ಜೊತೆ ಕಾಲ ಕಳೆಯುವ ಅವಕಾಶವನ್ನು ತಪ್ಪಿಸಿಕೊಳ್ಳದಿರಲು ಮನ ಬಯಸಿತು. ಆದ್ದರಿಂದ ಕೇಳಿದಳು "ಆಗಲಿ ಎಷ್ಟು ಹೊತ್ತಿಗೆ ಹೋಗೋಣ ?"

"ಐದು ಗಂಟೆಗೆ ಹೊರಡೋಣ, ಬಸ್ಸ್ಟಾಪ್‌ನಲ್ಲಿರು."

"ನಿಮ್ಮಮ್ಮ ಏನೂ ಅನ್ನಲ್ವಾ ?"

"ಅವರ್‍ಯಾಕೆ ಅನ್ನುತ್ತಾರೆ ?" ಇವನು ಆಶ್ಚರ್ಯದಿಂದ ಕೇಳಿದ.

ಅವಳು ನಸುನಕ್ಕಳು....ಗಾಯಿತ್ರಿದೇವಿ ಮಗನಿಗೆ ಬುದ್ಧಿ ಹೇಳಲಾರ ರೆಂದು ಅವಳಿಗೆಂದೋ ತಿಳಿದಿತ್ತು.

"ಕಾಫಿ ಕೊಡ್ತೀನಿ ಇರು."

"ನಿನ್ನ ಅಮೃತಹಸ್ತದಿಂದ ಕಾಫಿ ಕುಡಿಯಕ್ಕೂ ಪುಣ್ಯ ಮಾಡಿರಬೇಕು, ತೊಗೊಂಡು ಬಾ."

ಅವನು ಕಾಫಿ ಕುಡಿದು ಹೊರಟ.

"ನಾನು ಕಾಯ್ತಿರ್ತೀನೆ, ಮರೆಯಬೇಡ" ಎಂದು ಮತ್ತೊಮ್ಮೆ ಹೇಳಲು ಮರೆಯಲಿಲ್ಲ.

ಅವಳು ತಾಯಿಯೊಡನೆ ಏನೂ ಹೇಳಲಿಲ್ಲ. ಹಿಂದಿನ ದಿನವೇ ಅವಳು ತಾಯಿಯ ಬಳಿ ತಾನು ಫ್ಯಾಕ್ಟರಿಯ ಗೆಳತಿಯೊಬ್ಬಳ ಮಗುವಿನ ಹುಟ್ಟಿದ ಹಬ್ಬಕ್ಕೆ ಹೋಗುವುದರ ಬಗ್ಗೆ ಹೇಳಿದ್ದಳು. ಅಲ್ಲಿಗೆ ಹೋಗುವುದರ ಬದಲು ಪ್ರಮೋದ್ ಜೊತೆ ಹೋಗಿಬಂದರಾಯ್ತೆಂದುಕೊಂಡಳು.

ಸಾಯಂಕಾಲ ಅವಳು ಜಾರ್ಜೆಟ್ ಸೀರೆಯುಟ್ಟು ಸಿದ್ಧವಾದಾಗ ತಾಯಿ ಗದರಿದರು "ಹುಟ್ಟಿದ ಹಬ್ಬಕ್ಕೆ ಈ ಸೀರೆಯಲ್ಲಿ ಹೋಗ್ತೀಯ ? ನನ್ನ ದ್ಯಾವುದಾದರೂ ರೇಷ್ಮೆ ಸೀರೆ ಉಡು."

ಅವಳು ತನ್ನದೆ ಬಿಳಿಯ ವೈಕಾಪ್ರಿಂಟ್ ಸೀರೆಯುಟ್ಟು ಸಿದ್ಧವಾದಳು. ಕೈಗೆ ಬಿಳಿ ಹರಳಿನ ಬ್ರೇಸ್‌ಲೆಟ್ ಧರಿಸಿ, ಅದೇ ಮಾದರಿಯ ದಪ್ಪ ಹರಳಿನ ಓಲೆ, ಒಂದೇ ಒಂದು ದೊಡ್ಡ ಹರಳಿನ ಪದಕವಿದ್ದ ಸರ ಧರಿಸಿದಳು. ಮುದ್ದಾಗಿ ಕಾಣುತ್ತಿದ್ದ ಮಗಳನ್ನು ನೋಡಿ ಸೀತಮ್ಮ ಎಚ್ಚರಿಸಿದರು : "ಕತ್ತಲಾಗುವುದ ಕ್ಕಿಂತ ಮೊದಲೇ ಮನೆಗೆ ಬಾ."

ಅವಳು ಐದುಗಂಟೆಗೆ ಐದು ನಿಮಿಷವಿರುವಾಗಲೇ ಬಸ್ಸ್ಟಾಪ್‌ಗೆ ಬಂದಳು. ಐದುಗಂಟೆಗೆ ಪ್ರಮೋದ್ ಹಾಜರಾದ.

"ಚಾರ್ಮಿಂಗ್—ಕಿಲ್ಲಿಂಗ್. ಮೋಹಿನಿತರಹ ಕಾಣಿಸ್ತಿದ್ದೀಯ."

"ಸುಮ್ನಿರಪ್ಪ, ನೀನು ಏನೇನೋ ಹೇಳಬೇಡ."

"ಚೆನ್ನಾಗಿ ಕಾಣಿಸ್ತಿದ್ದೀಯಾಂತ ಹೇಳಿದ್ರೂ ನಿನಗೆ ಜಂಬ."

ಅವಳು ನಕ್ಕಳು.

ಪಾಶ್ ಹೋಟೆಲ್ಲೊಂದರಲ್ಲಿ ಅವರು ತಿಂಡಿ ತಿಂದರು. ನಂತರ ಹತ್ತಿರ ದಲ್ಲೇ ಇದ್ದ ಪಾರ್ಕ್‌ನಲ್ಲಿ ಕುಳಿತರು.

"ಪದ್ಮಿನಿ, ಬಹುಶಃ ಮುಂದಿನವಾರ ನಾನು ಬಾಂಬೆಗೆ ಹೋಗ್ತಿದ್ದೇನೆ."

"ಯಾಕೆ ?"

"ಅಲ್ಲಿ ನನ್ನ ದೂರದ ರಿಲೇಟಿವ್ ಇದ್ದಾರೆ ಅವರೂ ಕಂಟ್ರಾಕ್ಟರ್. ಅಮ್ಮ ಅವರ ಹತ್ತಿರ 3–4 ತಿಂಗಳಿದ್ದು ಬಾ ಅಂತಿದ್ದಾರೆ."

"ಮತ್ತೆ ಫಾರಿನ್‌ಗೆ ಹೋಗ್ತೀನಿ ಅಂತಿದ್ದೆ."

"ಅಮ್ಮನ ಆರೋಗ್ಯ ಅಷ್ಟು ಚೆನ್ನಾಗಿಲ್ಲ. ನನಗೆ ಹೋಗಕ್ಕೆ ಧೈರ್ಯ ವಿಲ್ಲ. ಭಗವಾನ್ ಅಂಕಲ್ ಎಲ್ಲಿಗೆ ಹೋಗೋದೂ ಬೇಡ ಅಂತಿದ್ದಾರೆ. ಆದ್ರೆ ಅಮ್ಮನದು ಒಂದೇ ಹಠ."

"ಅಂತೂ ಇನ್ಮೇಲೆ ಓಡಾಟ ಶುರು."

"ಪದ್ಮಿನಿ, ನಾನು ಕಾಗದ ಬರೆದರೆ ಉತ್ತರ ಬರೆಯುತ್ತೀಯ ?"

"ನೋಡೋಣ."

"ನಿಂಗೆ ವಾರಕ್ಕೆರಡು ಸಲ ಫೋನ್ ಮಾಡ್ತೀನಿ. ನೀನೂ ಮಾಡಬೇಕು."

"ನೋಡೋಣ...."

"ಯಾಕೆ ಹಾಗೆ ಉತ್ತರ ಕೊಡ್ತಿದ್ದೀಯ ? ನನ್ನ ಕಾಗದ, ಫೋನ್ ಯಾವುದೂ ಬೇಡವಾ ನಿನಗೆ ?"

"ಪ್ರಮೋದ್, ಒಂದ್ಮಾತು ಹೇಳಲಾ ?"

69712

"ಹೇಳು."

"ಇದುವರೆಗೂ ನಾವು ಚಿಕ್ಕವರು ಅನ್ನಿಸಿಕೊಳ್ತಿದ್ದೆವು, ಈಗ ನಾನು ಕೆಲಸಕ್ಕೆ ಸೇರಿರುವ ಜವಾಬ್ದಾರಿ ಹೊತ್ತಿರುವ ಯುವತಿ ; ನೀನೂ ಅಷ್ಟೆ, ನಿನ್ನ ಮನೆಯ ಯಜಮಾನ....ನಮ್ಮ ಸ್ನೇಹ ಒಂದು ಮಿತಿಯಲ್ಲಿದ್ರೆ ಒಳ್ಳೆಯದು."

"ಪದ್ಮಿನಿ, ನೀನು ಈ ಮಾತು ಹೇಳ್ತಿದ್ದೀಯ ?"

"ಹೌದು, ಈ ನಮ್ಮ ಸ್ನೇಹದ ಸಂಕೋಲೆ ನಿನ್ನ ಪಾಲಿಗೆ ಉರುಳಾಗ ಬಾರದು.

894 814 3083

"ಉರುಳ್ಯಾಕಾಗುತ್ತೆ ? ಸ್ನೇಹ ಪ್ರೇಮವಾಗಬಹುದು. ಪದ್ಮಿನಿ ಇದು ವರೆಗೂ ನಾನು ವಿದ್ಯಾರ್ಥಿಯಾಗಿದ್ದೆ....ಪ್ರೀತಿ, ಪ್ರೇಮದ ಬಗ್ಗೆ ಮಾತಾಡಕ್ಕೆ ಸಂಕೋಚವಾಗಿತ್ತು. ಆದರೆ ಇವತ್ತು ಆ ಸಂಕೋಚ ನನ್ನನ್ನು ಕಾಡ್ತಿಲ್ಲ, ಐ ಲವ್ ಯೂ ಪದ್ಮಿನಿ. ನಾನು ಮದುವೆಯಾಗುವುದಾದರೆ ನಿನ್ನನ್ನೇ."

ಅವಳು ಅವನ ಮಾತು ಕೇಳಿ ಮೈಮರೆತಳು. ಸುಮಾರು 6–7 ವರ್ಷ ಗಳಿಂದ ಅವಳ ಪುಟ್ಟ ಹೃದಯ ಅವನ ಈ ಮಾತುಗಳನ್ನು ಕೇಳಲು ಬಯಸಿತ್ತು. ಅವಳಿಗೆ ಅವನು ತನ್ನನ್ನು ಪ್ರೀತಿಸುತ್ತಿದ್ದಾನೆಂದು ತಿಳಿದಾಗ ಹೂವಿನ ರಾಶಿಯಲ್ಲಿ ಹೊರಳಾಡಿದಂತಾಯ್ತು. ಹೃದಯಕ್ಕಾದ ಆನಂದ ಅವಳ ತುಟಿಗಳಲ್ಲಿ ನಗೆಯಾಗಿ ಅರಳಿತು. ಮರುಕ್ಷಣ ಗಾಯಿತ್ರಿ ದೇವಿಯ ಮಾತುಗಳು ನೆನಪಾದವು.

"ಯಾಕೆ ಪದ್ಮಿನಿ, ಸುಮ್ಮನೆ ಕುಳಿತೆ ? ನೀನು ನನ್ನನ್ನು ಪ್ರೀತಿಸಲ್ವಾ ?"

ಅವಳು ನಗೆ ಚೆಲ್ಲಿ ಹೇಳಿದಳು "ನಾನು ನಿನ್ನನ್ನು ಇದುವರೆಗೂ ಆ ದೃಷ್ಟಿಯಿಂದ ನೋಡಿಲ್ಲಪ್ಪ. ನಿನ್ನ ಅಂತಸ್ಥೇನು, ನನ್ನ ಅಂತಸ್ಥೇನು ? ಮುಗಿಲ ಮಲ್ಲಿಗೆಗೆ ನಿಮ್ಮಂತಹವರು ಕೈ ಚಾಚಬಾರದು."

"ಪ್ರೀತಿ ಪ್ರೇಮಕ್ಕೆ ಅಂತಸ್ತು ಅಡ್ಡಿ ಬರಲ್ಲ ಪದ್ಮು. ನೀನು ನನ್ನನ್ನು ಪ್ರೀತಿಸ್ತೀಯೋ ಇಲ್ಲವೋ ಹೇಳು."

'ನಾನು ನಿನ್ನನ್ನು ತುಂಬಾ ಪ್ರೀತಿಸ್ತೇನೆ ಪ್ರಮೋದ್, ನಿನ್ನಲ್ಲಿ ನನ್ನ ಜೀವ ಇಟ್ಟುಕೊಂಡಿದ್ದೇನೆ' ಎಂದವಳ ಮನಸ್ಸು ಚೀರಿತು. ಆದರೆ ಮಾತು ಗಳು ತುಟಿಯಿಂದ ಹೊರಗೆ ಬರಲಿಲ್ಲ.

"ನನ್ನ ಮಾತುಗಳು ಅವರ ಮನೆಯ ನೆಮ್ಮದಿಯನ್ನು ಹಾಳ್ಮಾಡುತ್ತದೆ. ಅವನ ಮನಸ್ಸನ್ನೂ ಗೊಂದಲಮಯವನ್ನಾಗಿ ಮಾಡುತ್ತದೆ ನಾನು 'ಪ್ರೀತಿಸ್ತಿಲ್ಲ' ಎಂದರೆ ಅವನು ಆರಾಮವಾಗಿ ತಾಯಿ ತೋರಿದ ಹುಡುಗಿಯನ್ನು ಮದುವೆಯಾಗ್ತಾನೇನೋ ?"

"ಪದ್ಮಿನಿ, ನನ್ನ ಪ್ರಶ್ನೆಗೆ ಉತ್ತರ ಹೇಳು."

"ಇಲ್ಲ ಪ್ರಮೋದ್, ನಾನು ನಿನ್ನನ್ನು ಪ್ರೀತಿಸ್ತಿಲ್ಲ. ನೀನು ನನ್ನ ಒಳ್ಳೆಯ ಸ್ನೇಹಿತ. ಹಾಗೆಂದು ನೀನು ನನ್ನ ಅಣ್ಣನ ಹಾಗೆ ತಮ್ಮನ ಹಾಗೇಂತ ಸುಳ್ಳು ಹೇಳಲಾರೆ. ಗೆಳೆತನದ ಮೇರೆ ಮೀರಿ ನಾನೆಂದೂ ಯೋಚಿಸಿಲ್ಲ. ನನ್ನನ್ನು ಕ್ಷಮಿಸು."

ಅವನು ಮಾತನಾಡದೆ ಎದ್ದು ಪಾರ್ಕ್‌ನಿಂದ ಹೊರನಡೆದ. ಅವಳೂ ಅವನನ್ನು ಹಿಂಬಾಲಿಸಿ ಬಂದು ಬೈಕ್ ಬಳಿ ನಿಂತಾಗ ಹೇಳಿದ. "ಇದು ಪಾರ್ಕ್ ಅಲ್ಲದಿದ್ದರೆ ನಿನ್ನನ್ನು ನಾನೇನ್ಮಾಡ್ತಿದ್ದೆ ಗೊತ್ತಾ ? ಕೊಂದುಬಿಡ್ತಿದ್ದೆ. ನನ್ನ ಹೃದಯದಲ್ಲಿ ಇಂದಿನವರೆಗೂ ಆಸೆಯ ಬಳ್ಳಿ ಹಬ್ಬಿಸಿ, ಈಗ ಮೋಸಮಾಡು ತ್ತಿರುವ ನಿನ್ನನ್ನು ನಾನೆಂದೂ ಕ್ಷಮಿಸಲ್ಲ."

ಅವಳು ನಿಂತಿರುವುದನಗ್ನೂ ಗಮನಿಸದೆ ಅವನು ಬೈಕ್ ಸ್ಟಾರ್ಟ್ ಮಾಡಿದ. ಅವಳು ಬಸ್ ಹತ್ತಿ ಮನೆ ತಲುಪಿದಾಗ 8–30 ಗಂಟೆಯಾಗಿತ್ತು.

"ಇದೇನೇ ಬರೀಕೈಲಿ ಬಂದಿದ್ದೀಯ, ತಾಂಬೂಲ ಕೊಡಲಿಲ್ವಾ ?" ಸೀತಮ್ಮ ಕೇಳಿದರು.

"ಹುಟ್ಟಿದ ಹಬ್ಬಕ್ಕೆಲ್ಲಾ ಯಾರು ತಾಂಬೂಲ ಕೊಡ್ತಾರಮ್ಮ?" ಎಂದು ಸಿಡುಕಿದಳು ಪದ್ಮಿನಿ.

ಬಟ್ಟೆ ಬದಲಾಯಿಸಿ ಹಾಸಿಗೆಯ ಮೇಲೆ ಉರುಳಿದೊಡನೆ ಕಣ್ಣಿನ ಮುಂದೆ ಪ್ರಮೋದನ ಮುಖ ತೇಲಿಬಂತು. ಜೊತೆಯಲ್ಲಿಯೇ ಅಳು ಉಕ್ಕಿ ಬಂತು.

"ಪ್ರಮೋದ್, ನಾನು ನಿನ್ನನ್ನು ನನ್ನ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸ್ತೀನಿ. ಆದರೇನು ಮಾಡಲಿ, ನಿಮ್ಮತಾಯಿ ಈ ಮದುವೆಗೆ ಒಪ್ಪಲ್ಲ. ನಾವೇ ಅವರನ್ನು ಧಿಕ್ಕರಿಸಿ ಮದುವೆಯಾದ್ರೆ ಅವರು ಒಂದು ಪೈ ಆಸ್ತಿ ನಿನಗೆ ಕೊಡಲ್ಲ. ನನ್ನಿಂದ ನೀನು ಬಡತನ ಅಪ್ಪಬೇಕಾಗುತ್ತದೆ. ನನ್ನಿಂದ ನಿಮ್ಮ ಮನೆ ಕುರು ಕ್ಷೇತ್ರವಾಗುತ್ತದೆ ನಾನೇನು ಮಾಡಲಿ ಪ್ರಮೋದ್ ? ನಿನ್ನನ್ನು ಬೇರೆಯವರಿಗೆ ಬಿಟ್ಟುಕೊಡುವುದು ನನಗೆಷ್ಟು ದುಃಖ ತಂದಿದೆ ಗೊತ್ತಾ ? ಆದರೆ ನಿನ್ನ ಒಳಿತಿಗೋಸ್ಕರ ಸುಮ್ಮನಿರಬೇಕಾಗಿದೆ."

ಅವಳು ರಾತ್ರಿಯೆಲ್ಲಾ ನಿದ್ರೆಯಿಲ್ಲದೆ ಹೊರಳಾಡಿದಳು. ಮರುದಿನ ಬೆಳಗ್ಗೆ ಅವಳು ಕೆಲಸಕ್ಕೆ ಹೋಗಲು ತಯಾರಿ ನಡೆಸುತ್ತಿದ್ದಾಗ ಸೀತಮ್ಮ ಹೇಳಿದರು. "ನೆನ್ನೆ ರಾತ್ರಿ ಪ್ರಮೋದ್ ತುಂಬಾ ಕುಡಿದು ಬೈಕ್ ನಡೆಸ್ತಿದ್ದಾಗ ಆಕ್ಸಿಡೆಂಟ್ ಆಯಿತಂತೆ, ತಲೆಗೆ ಪೆಟ್ಟುಬಿದ್ದಿದೆಯಂತೆ. 'ಪ್ರಶಾಂತ್ ನರ್ಸಿಂಗ್' ಹೋಂನಲ್ಲಿದ್ದಾನಂತೆ. ಪಾಪ ಗಾಯಿತ್ರಿ ತುಂಬಾ ಹೆದರಿಬಿಟ್ಟಿದ್ದಾಳೆ. ನಿಮ್ಮಪ್ಪ ಅಲ್ಲೇ ಇದ್ದಾರೆ."

ಪದ್ಮಿನಿಯ ಎದೆಯ ಬಡಿತ ಜೋರಾಯ್ತು. 'ನನ್ನ ಮಾತುಗಳಿಂದ ನೊಂದು ತುಂಬಾ ಕುಡಿದನೋ ಏನೋ ? ಅಮಲಿನಲ್ಲಿ ರೈಡ್ ಮಾಡುವಾಗ ಆಕ್ಸಿಡೆಂಟಾಯ್ತೇನೋ ? ನಾನೀಗ ಏನ್ಮಾಡಲಿ ? ಪ್ರಮೋದನಿಗೆ ಬಾಯಿ ಬಿಟ್ಟು ಏನೂ ಹೇಳುವಂತಿಲ್ಲ. ಅವನ ಕೈಹಿಡಿದರೆ ಗಾಯಿತ್ರಿದೇವಿಯ ಜೊತೆ ದ್ವೇಷ ಕಟ್ಟಿಕೊಳ್ಳಬೇಕು. ಈ ಸಮಸ್ಯೆಗೆ ಪರಿಹಾರವೆಲ್ಲಿಂದ ?'

ಅವಳು ತನ್ನ ಮನದ ಭಾವನೆಗಳಿಗೆ ತೆರೆಹಾಕಿ ತಾಯಿಗೆ ಹೇಳಿದಳು. "ಅಮ್ಮ, ನಾನಿವತ್ತು ರಜ ಹಾಕ್ತೀನಿ. ನೀನು ಹೋಗಿ ಅತ್ತೆ ಜೊತೆ ಇರು."

"ನೀನು ಬರಲ್ವೇನೆ ?"

"ನಾನು ಬಂದ್ರೆ ಅತ್ತೆ ಬಿ.ಪಿ. ಜಾಸ್ತಿ ಆಗುತ್ತೆ. ನೀನು ಹೋಗಿ ಬಾ."

ಸೀತಮ್ಮ ಪುನಃ ಬಲವಂತಮಾಡಲಿಲ್ಲ. ಅವರು ಹೊರಟು ನಿಂತಾಗ ಅವಳೇ ಹೇಳಿದಳು. "ಅಮ್ಮ, ಪ್ರಮೋದ್ ಹೇಗಿದ್ದಾನೇಂತ ಲತಾ ಮನೆಗೆ ಫೋನ್ ಮಾಡಿ ತಿಳಿಸು."

"ಆಗಲಿ, ನೀನು ಅಡಿಗೆಗಿಡು" ಎನ್ನುತ್ತಾ ಆಕೆ ಹೊರಗೆ ಹೊರಟರು.

ತಮ್ಮ ಫ್ಯಾಕ್ಟರಿಗೆ ಹತ್ತಿರದ ಬೂತ್‌ನಿಂದ ಫೋನ್‌ಮಾಡಿ ರಜದ ಬಗ್ಗೆ ಹೇಳಿ ಅವಳು ಕುಕ್ಕರ್ ಇಟ್ಟಳು. ತರಕಾರಿ ಹೆಚ್ಚುತ್ತಿದ್ದಾಗ ಲತಾ ಒಳಗೆ ಬಂದಳು.

"ಇದೇನೇ ನೀನು ಇಲ್ಲೀ ಇದ್ದೀಯ ?"

"ಇವತ್ತು ರಜ ಹಾಕಿದ್ದೇನೆ."

"ನಾನು ನರ್ಸಿಂಗ್ ಹೋಂನಿಂದ ಬರ್‍ತಿದ್ದೇನೆ."

"ಪ್ರಮೋದ್ ಹೇಗಿದ್ದಾನೆ ?"

"ಜ್ಞಾನ ಬಂದಿದೆ, ಗಾಬರಿಗೆ ಕಾರಣವಿಲ್ಲ."

"ಹೌದಾ ? ತುಂಬಾ ಪೆಟ್ಟು ಬಿದ್ದಿದೆಯಾ ?"

"ಬಲಗೈ, ಬಲಮಂಡಿ ತರಚಿದೆ. ಮುಖದ ಎಡಭಾಗ ತರಚಿದೆ. ತಲೆ ಹತ್ತಿರ ಗಾಯ ಆಗಿದೆ. ಆದ್ರೆ ಏನೂ ತೊಂದರೆಯಾಗಿಲ್ಲ. ಚೆನ್ನಾಗಿ ಮಾತಾಡ್ತಿದ್ದಾನೆ. ಅಬ್ಸರ್ವೇಷನ್‌ಗೋಸ್ಕರ ಮೂರುದಿನ ಇಟ್ಕೊಳ್ತಾರಂತೆ."

"ಸದ್ಯ ಹುಷಾರಾಗಿದ್ದಾನಲ್ಲಾ ?" ಎನ್ನುತ್ತಾ ಒಳಗೆ ಹೋಗಿ ಇಬ್ಬರಿಗೂ ಕಾಫಿ ತಂದಳು. ಕಾಫಿ ಕುಡಿದು ಕಪ್ ಕೆಳಗಿಡುತ್ತಾ ಲತಾ ಕೇಳಿದಳು. "ನೀನ್ಯಾಕೇ ನೋಡಕ್ಕೆ ಬರಲಿಲ್ಲ? ನನ್ನನ್ನು ನೋಡಿದ ತಕ್ಷಣ ಕೇಳಿದ, 'ಪದ್ಮಿನಿ ಬರಲಿಲ್ಲವಾ'ಂತ ?"

ಪದ್ಮಿನಿ ಮಂಡಿಗೆ ಮುಖವೂರಿ ಬಿಕ್ಕಿದಳು.

"ಏನಾಯ್ತು ಪದ್ಮಿನಿ ?"

ಅವಳು ಪ್ರಮೋದ್‌ನ ಪ್ರೇಮ, ಗಾಯಿತ್ರಿದೇವಿಯ ಹಠದ ಬಗ್ಗೆ ಹೇಳಿದಳು.

"ನೀನು ಪ್ರಮೋದ್‌ನ ಪ್ರೀತಿಸ್ತಿದ್ದೀಯೋ ಇಲ್ವೋ ?"

"ಅದನ್ನೂ ಬಾಯಿಬಿಟ್ಟು ಹೇಳಬೇಕೇನೆ ? ನಿನಗೇ ಗೊತ್ತಿದೆ. ಆದರೆ ಹಾಗೆಂದು ಅವನೆದುರು ಒಪ್ಪಿಕೊಳ್ಳುವಂತಿಲ್ಲ."

"ನೀನು ಅವನಮ್ಮನ ಹತ್ತಿರ ಹೇಳಿರುವುದೇನು ಜ್ಞಾಪಿಸಿಕೋ. ಅವನಾಗಿ ಪ್ರಪೋಸ್ ಮಾಡಿದರೆ ಮದುವೆ ಮಾಡಿಕೊಳ್ತೀನೀಂತ ತಾನೆ ?"

"ಹಾಗೆ ಹೇಳಿರಬಹುದು. ಆದ್ರೆ ಅದೆಲ್ಲಾ ನಡೆಯುವ ಮಾತೇನೆ ? ನನ್ನಿಂದ ಅವರ್ಮನೆ ಶಾಂತಿ ಹಾಳಾಗಬಾರದು."

"ಅವನೇನೀಗ ತಾಳಿ ಹಿಡಿದು ಕಟ್ಟುವುದಕ್ಕೆ ಸಿದ್ಧವಾಗಿ ನಿಂತಿದ್ದಾನಾ ? ಪಾಪ ಆಕ್ಸಿಡೆಂಟಾಗಿ ಹಾಸಿಗೆ ಹಿಡಿದಿದ್ದಾನೆ. ಮೊದಲು ಹೋಗಿ ನೋಡು. ಮದುವೆ ವಿಚಾರ ಆಮೇಲೆ."

"ನಮ್ಮಮ್ಮ ಬಂದ್ಮೇಲೆ ಹೋಗಿ ಬರ್ತೀನೆ."

"ಹಾಗೇ ಮಾಡು" ಎನ್ನುತ್ತಾ ಲತಾ ಹೊರಗೆ ಹೋದಳು.

ಮಧ್ಯಾಹ್ನ ಎರಡು ಗಂಟೆಯ ಹೊತ್ತಿಗೆ ಸೀತಮ್ಮ ಶಾಸ್ತ್ರಿಗಳು ವಾಪಸ್ಸು ಬಂದರು.

"ಪ್ರಮೋದ್ ಹೇಗಿದ್ದಾನಮ್ಮ ?"

"ಹುಷಾರಾಗಿದ್ದಾನೆ. ನಿದ್ರೆಗೆ ಇಂಜೆಕ್ಷನ್ ಕೊಟ್ಟಿದ್ದಾರೆ."

"ಅತ್ತೆ ಮನೆಗೆ ಬಂದ್ರಾ ?"

"ಹುಂ, ಭಟ್ಟರು ಅಲ್ಲಿದ್ದಾರೆ....ಗಾಯಿತ್ರಿ ಐದೂವರೆ ಹೊತ್ತಿಗೆ ಪುನಃ ಹೋಗ್ತಾಳೆ. ನೀನು ಹೋಗಿ ನೋಡಲ್ವೇನು ?"

ಪದ್ಮಿನಿ ಮಾತಾಡಲಿಲ್ಲ.

"ಹೋಗಿಬಾಮ್ಮ ಪದ್ಮಿನಿ, ಇಂತಹ ಸಂದರ್ಭದಲ್ಲಿ ಹೋಗಿ ನೋಡದಿದ್ರೆ ಚೆನ್ನಾಗಿರಲ್ಲ" ಎಂದರು ಶಾಸ್ತ್ರಿಗಳು.

ಸುಮಾರು ನಾಲ್ಕು ಗಂಟೆಯ ಹೊತ್ತಿಗೆ ಅವಳು ನರ್ಸಿಂಗ್ ಹೋಂಗೆ ಹೊರಟಳು....ಪ್ರಮೋದ್ ಕಣ್ಮುಚ್ಚಿ ಮಲಗಿದ್ದ. ನೆಲದ ಮೇಲೆ ಜಮಖಾನ ಹಾಸಿಕೊಂಡು ಮಲಗಿದ್ದ ಭಟ್ಟರು ಗಾಢನಿದ್ರೆಯಲ್ಲಿದ್ದರು.

ಅವಳು ಸದ್ದು ಮಾಡದೆ ಕುರ್ಚಿಯಲ್ಲಿ ಕುಳಿತು ಪ್ರಮೋದನ ಹಣೆಯ ಮೇಲೆ ಕೈ ಇಟ್ಟಳು. ಅವಳ ತಣ್ಣನೆಯ ಸ್ಪರ್ಶ ಅವನನ್ನು ಎಚ್ಚರಗೊಳಿಸಿತು. ನಿಧಾನವಾಗಿ ಕಣ್ಣುಬಿಟ್ಟ.

"ಹೇಗಿದ್ದೀಯಾ ಪ್ರಮೋದ್ ?"

"ಇನ್ನೂ ಸತ್ತಿಲ್ಲ, ಬದುಕಿದ್ದೇನೆ ?"

"ಛೆ, ಯಾಕೆ ಹಾಗಂತೀಯಾ ?"

"ನಿಜ ಹೇಳು ಪಮ್ಮಿ.... ನನಗೆ ಆಕ್ಸಿಡೆಂಟ್ ಆದ ವಿಚಾರ ಕೇಳಿ ನಿನಗೆ ದುಃಖವಾಗಿದೆಯಾ ?"

"ನೀನೇನು ನನ್ನ ಶತ್ರೂನಾ ? ನಿನಗೆ ಆಕ್ಸಿಡೆಂಟ್ ಆದ ವಿಚಾರ ಕೇಳಿ ನನ್ನೆದೆ ಒಡೆದು ಹೊಯ್ತು."

"ಬೆಳಗ್ಗೇನೆ ಯಾಕೆ ಬರಲಿಲ್ಲ ?"

ಅವಳು ಉತ್ತರಿಸಲಿಲ್ಲ.

"ನಮ್ಮಮ್ಮ ಏನಾದ್ರೂ ಅಂದಿದ್ದಾರಾ ಪಮ್ಮಿ? ನೀನು ಅವರ ಮಾತು ಗಳಿಗೆ ಬೆಲೆಕೊಟ್ಟು ನನ್ನನ್ನು ದೂರ ಮಾಡ್ತಿದ್ದೀಯಾಂತ ಅನ್ನಿಸ್ತಿದೆ ನನಗೆ."

"ಏನೇನೋ ಮಾತಾಡಬೇಡ ಪ್ರಮೋದ್...."

"ಹಾಗಾದ್ರೆ ನೀನು ನನ್ನನ್ನು ಪ್ರೀತಿಸ್ತಿದ್ದೀಯೋ ಇಲ್ಲವೋ ಹೇಳು."

"ನಿನಗೊಂದು ರೀತಿಯ ಹುಚ್ಚು."

"ನಿಜ ಹೇಳು ಪಮ್ಮಿ, ಸುಳ್ಳು ಹೇಳಿ ಆತ್ಮವಂಚನೆ ಮಾಡ್ಕೋಬೇಡ. ನಿನಗೆ ನಾನು ಬೇಡವಾದ್ರೆ ಹೇಳು, ಉಪವಾಸ ಸತ್ಯಾಗ್ರಹ ಮಾಡಿ ಪ್ರಾಣ ಬಿಟ್ಟುಬಿಡ್ತೇನೆ."

ಅವಳು ತನ್ನ ಬಲಗೈಯಿಂದ ಅವನ ಬಾಯಿ ಮುಚ್ಚಿದಳು. ಅವಳ ಕಣ್ಣುಗಳಿಂದ ಹನಿಗಳು ಉದುರಿದವು. ಅವನು ಅವಳ ಕೈಗಳಿಗೆ ಮುತ್ತಿಟ್ಟ.

"ಹೇಳು ಪಮ್ಮಿ...."

"ನಾನದನ್ನು ಬಾಯಿ ಬಿಟ್ಟು ಹೇಳಬೇಕಾ ? ನಾನು ನಿನ್ನನ್ನು ತುಂಬಾ ಪ್ರೀತಿಸ್ತಿದ್ದೇನೆ. ಒಮ್ಮೊಮ್ಮೆ ನಾನೆಲ್ಲಿ ನಿನ್ನನ್ನು ಕಳೆದುಕೊಂಡು ಬಿಡ್ತೀನೋಂತ ಭಯವಾಗುತ್ತೆ."

"ಪಮ್ಮಿ, ನೀನಿಲ್ಲದೆ ನಾನು ಬದುಕಲಾರೆ. ನಿನ್ನನ್ನು ಒಂದು ದಿನ ನೋಡ ದಿದ್ರೆ ನನಗೆ ಏನೋ ಕಳೆದುಕೊಂಡಂತೆ ಭಾಸವಾಗುತ್ತೆ. ನನ್ನನ್ನು ಯಾವತ್ತೂ ಬಿಟ್ಟು ಹೋಗಬೇಡ."

ಅವಳು ಆಶ್ವಾಸನೆ ಕೊಡುವಂತೆ ಬಾಗಿ ಅವನ ಹಣೆಗೆ ತುಟಿಯೊತ್ತಿದಳು. ಅವನು ಅವಳ ರೇಷಿಮೆ ಕೆನ್ನೆಗಳಿಗೆ ಹೂಮುತ್ತುಗಳನ್ನಿತ್ತ. ಒಳಗೆ ಬಂದ ಗಾಯಿತ್ರಿದೇವಿ ಆ ದೃಶ್ಯ ನೋಡಿ ಸ್ತಂಭೀಭೂತರಾಗಿ ನಿಂತರು....ಆದರೆ ಆ ಪ್ರೇಮಿಗಳು ಅವರನ್ನು ನೋಡಲಿಲ್ಲ.

ಅವಳು ಎದ್ದು ನಿಂತು ಹೇಳಿದಳು "ನಾನಿನ್ನು ಬರ್ತೇನೆ ; ಬೇಗ ಹುಷಾ ರಾಗು."

"ನೀನು ಔಷಧಿ ಕೊಟ್ಟಿದ್ದೀಯಲ್ಲಾ ಹುಷಾರಾಗದೆ ಏನು ?" ಅವನು ತುಂಟನಗೆ ಬೀರಿ ಹೇಳಿದ. ಅವಳು ಕೆಂಪೇರಿದಳು. ಅವನು ತಾಯಿಯ ಬಿರು ನೋಟವನ್ನು ಗಮನಿಸಿದರೂ ಗಮನಿಸದವನಂತೆ ಹೇಳಿದ "ಅಮ್ಮ, ನಾನು ಪದ್ಮಿನೀನ್ನ ಬಯ್ತಿದ್ದೆ. ನಾನು ಬಿದ್ದ ವಿಚಾರ ತಿಳಿದರೂ ಕೂಡ ಬೆಳಗ್ಗೆ ಬರದೆ ಈಗ ಬಂದಿದ್ದಾಳೆ ನೋಡು."

ಗಾಯಿತ್ರಿದೇವಿ ಮಾತಾಡಲಿಲ್ಲ. ನುಂಗುವಂತೆ ಅವಳನ್ನು ನೋಡಿದರು.

"ಬರ್ತೀನತ್ತೆ" ಗೆಲುವಿನ ನಗೆ ಬೀರಿ ಹೇಳಿದಳವಳು. ಮತ್ತೆ ಎರಡು ದಿನಗಳು ಅವನು ನರ್ಸಿಂಗ್ ಹೋಂನಲ್ಲಿದ್ದ. ಪದ್ಮಿನಿ ರಾಜಾರೋಷವಾಗಿ ಬಂದು ಹೋದಳು. ಫ್ಯಾಕ್ಟರಿಯಿಂದ ನೇರವಾಗಿ ನರ್ಸಿಂಗ್ ಹೋಂಗೆ ಹೋಗಿ ಮನೆಗೆ ಬರುತ್ತಿದ್ದಳು.

ಮೂರನೆಯ ದಿನ ಸಾಯಂಕಾಲ ಅವನು ಅವಳಿಗೆ ಹೇಳಿದ. "ನಾಳೆ ಬೆಳಗ್ಗೆ ನನ್ನ ಮನೆಗೆ ಕಳಿಸ್ತಿದ್ದಾರೆ. ನೀನು ಮನೆಗೇ ಬಾ."

"ಇಲ್ಲ ಪ್ರಮೋದ್, ನಾನು ಬರಲ್ಲ."

"ಯಾಕೆ ಬರಲ್ಲ....ನಮ್ಮಮ್ಮ ಏನಾದ್ರೂ ಅಂತಾರೇಂತ ಭಯಾನಾ ?"

"ನಿನಗೆ ನನ್ನನ್ನು ನೋಡಬೇಕು ಅನ್ನಿಸಿದ್ರೆ ನಮ್ಮ ಫ್ಯಾಕ್ಟರಿಗೆ ಫೋನ್ ಮಾಡು. ಎಲ್ಲಾದ್ರೂ ಮೀಟ್ ಮಾಡೋಣ ನಾನು ನಿಮ್ಮನೆಗೆ ಬಂದು ನಿಮ್ಮಮ್ಮನ ನೆಮ್ಮದಿ ಕೆಡಿಸಲ್ಲ."

"ನೀನು ಹೀಗೆ ನಮ್ಮಮ್ಮಂಗೆ ಹೆದರುತ್ತಾ ಕುಳಿತರೆ ನಮ್ಮ ಮದುವೆ ನಡೆಯೋದೇ ಇಲ್ಲ."

"ಸದ್ಯಕ್ಕೆ ಮದುವೆ ಪ್ರಶ್ನೆ ಏಳಲ್ಲ....ನಾನು ಹಠಮಾಡಿ ಮದುವೆ ಯಾಗದೆ ನಿನಗಾಗಿ ಕಾಯ್ತೀನೆ. ನಿನಗೆ ಧೈರ್ಯವಿದ್ರೆ ನಿಮ್ಮಮ್ಮನ್ನ ಒಪ್ಪಿಸು. ಅವರು ಒಪ್ಪಿದ್ರೆ ಮಾತ್ರ ಈ ಮದುವೆ ನಡೆಯುತ್ತೆ, ಇಲ್ಲದಿದ್ರೆ ಇಲ್ಲ."

"ನಮ್ಮಮ್ಮನ ಮಾತು ನಡೆ–ನುಡಿ ಒರಟಾದ್ರೂ ಹೃದಯ ಬೆಣ್ಣೆಯಂತೆ ಮೃದು" ಎಂದ ಪ್ರಮೋದ್........ಅವಳ ಮಾತನ್ನು ನಂಬದವಳಂತೆ. ಅವಳು ನಕ್ಕಳು.

೫

ಪ್ರಮೋದ್ ಡಿಸ್ಚಾರ್ಜ್ ಆಗಿ ಮನೆಗೆ ಬಂದ. ಗಾಯಿತ್ರಿದೇವಿ ಮಗನಿಗೆ ಕಟ್ಟುನಿಟ್ಟಾಗಿ ಹೇಳಿದರು. "ಹದಿನೈದು ದಿನ ಮನೆ ಬಿಟ್ಟು ಆಚೆ ಹೋಗ ಕೂಡದು. ಬೈಕ್ ಮುಟ್ಟಕೂಡದು."

"ಮನೇಲಿದ್ರೆ ನಂಗೆ ಬೋರಾಗುತ್ತೆ."

"ಚೆನ್ನಾಗಿ ರೆಸ್ಟ್ ತೊಗೋ....ಟಿ.ವಿ. ನೋಡು. ಕ್ಯಾಸೆಟ್ಸ್ ಕೇಳು ನಿನ್ನ ಫ್ರೆಂಡ್ಸ್‌ನ ಕರೆಸಿಕೊಂಡು 'ಕಾರ್ಡ್ಸ್' ಆಡು."

"ನಂಗೆ ಬೇಜಾರು."

"ಬೇಜಾರೂಂದ್ರೆ ಏನರ್ಥ ? ನೀನೇನು ಎಳೆಯ ಮಗೂನ ? ಹದಿನೈದು ದಿನ ರೆಸ್ಟ್ ತೊಗೊಂಡು ಬಾಂಬೆಗೆ ಹೋಗಿ 'ಪುರುಷೋತ್ತಮ'ನ ಹತ್ತಿರ ಕೆಲಸ ಕಲಿತು ಬಾ. ಭಗವಾನ್‌ಗೂ ವಯಸ್ಸಾಯ್ತು. ನೀನು ಜವಾಬ್ದಾರಿ ತೊಗೋಳೋದು ಬೇಡ್ವಾ ?"

ಪ್ರಮೋದ್ ಮಾತಾಡಲಿಲ್ಲ. ಗಾಯಿತ್ರಿದೇವಿ ಹಠದ ಹೆಂಗಸು. ಮಗ ಹೊರಗೆ ಹೋಗಲು ಬಿಡಲಿಲ್ಲ. ಅವನ ಸ್ನೇಹಿತರು ಮುರಳಿ, ಅಶೋಕ ಬೆಳಗ್ಗೆಯಿಂದ ರಾತ್ರಿಯವರೆಗೂ ಅವನ ಜೊತೆ ಇರುತ್ತಿದ್ದರು. ಆದರೂ ಪ್ರಮೋದ್‌ಗೆ ತೀರದ ಬೇಸರ.

"ಪ್ರಮೋದ, ನಿನ್ನ ಲೈಲಾ ಎಲ್ಲಿ ಕಾಣ್ತಾನೇ ಇಲ್ಲ ?"

"ನಿಮ್ಮಮ್ಮನಿಗೆ ಅವಳು ನನ್ನ ಕೈಹಿಡಿಯೋದು ಇಷ್ಟವಿಲ್ಲ. ಅವಳನ್ನು ಸಿಕ್ಕಾಪಟ್ಟೆ ಬೈದಿದ್ದಾರೇಂತ ಕಾಣತ್ತೆ, ಆ ಹುಡುಗಿ ನಮ್ಮನೆಗೆ ಬರುವುದನ್ನು ಬಿಟ್ಟುಬಿಟ್ಟಿದ್ದಾಳೆ."

"ನೀನೇ ಅವರ್ಮನೆಗೆ ಹೋಗು."

"ಅವರಮ್ಮ ಏನಂತಾರೋಂತ ಭಯ. ಅದಕ್ಕೆ ಹೋಗಿಲ್ಲ."

"ಅವರ್ಮನೆಯವರಿಗೂ ಈ ಮದುವೆ ಇಷ್ಟವಿಲ್ವಾ ?"

"ಇಷ್ಟವಿಲ್ಲದೆ ಏನು ಆದ್ರೆ ಅವರು ನಮ್ಮ ತಾಯಿಗೆ ಬೇಸರ ಮಾಡಕ್ಕೆ ಇಷ್ಟಪಡಲ್ಲ."

"ಹಾಗಾದ್ರೆ ನಿಮ್ಮ ಮದುವೆ ಗತಿಂಏನು ?"

"ಅಲ್ಲಿಯವರೆಗೂ ಬರಲಿ ನೋಡೋಣ. ಈಗಂತೂ ಅವಳನ್ನು ನೋಡಿ ಒಂದು ವಾರವಾಯ್ತು, ಅದಕ್ಕೆ ಬೇಜಾರು."

"ಒಂದು ಕಾಗದ ಕೊಡು, ನಾನೇ ತೊಗೊಂಡು ಹೋಗಿ ಕೊಡ್ತೇನೆ." ಮುರುಳಿ ಹೇಳಿದ.

"ಕಾಗದ ಬರೆಯುವುದರಿಂದ ಸಮಾಧಾನವಾಗಲ್ಲ ಕಣೋ...."

"ಹಾಗಾದ್ರೆ ಈ ಭಾನುವಾರ ನಮ್ಮನೇಗೆ ಬಾ, ಶನಿವಾರ ನಮ್ಮನೆಯವರೆಲ್ಲಾ ಮದುವೆಗೆ ಹೋಗ್ತಿದ್ದಾರೆ. ನಾನು-ಪದ್ಮಿನೀನ್ನ ಕರ್ಕೊಂಡು ಬರ್‍ತೇನೆ."

"ಅವಳು ಬರಕ್ಕೆ ಒಪ್ಪಬೇಕಲ್ಲಾ ?"

"ನೀನು ಅವರ ಫ್ಯಾಕ್ಟರಿಗೆ ಫೋನ್ ಮಾಡಿ ಕೇಳು."

ಅದೇ ರೀತಿ ಅವನು ಫೋನ್ ಮಾಡಿದ.

"ಪದ್ಮಿನಿ, ನಂಗೆ ನಿನ್ನನ್ನು ನೋಡಬೇಕು, ನಿನ್ನ ಜೊತೆ ಮಾತಾಡಬೇಕು ಅನ್ನಿಸ್ತಿದೆ. ಯಾವಾಗ ಸಿಗ್ತೀಯ ?"

"ಭಾನುವಾರ ಭೇಟಿಯಾಗೋಣ."

"ನೀನು 11 ಗಂಟೆ ಹೊತ್ತಿಗೆ ಬಸ್ಟಾಪ್ ಹತ್ತಿರ ಬರ್‍ತೀಯ ? ಅಶೋಕ. ಬಂದು ನಿನ್ನನ್ನು ಅವರ ಮನೆಗೆ ಕರ್ಕೊಂಡು ಹೋಗ್ತಾನೆ, ನಾನೂ ಅಲ್ಲಿಗೆ ಬರ್‍ತೇನೆ."

"ಅಶೋಕ ನನ್ನ ಫ್ರೆಂಡ್ ಕಣೆ. ಆ ದಿನ ಅವರ್ಮನೇಲಿ ಯಾರೂ ಇರಲ್ಲ."

"ಬೇಡ ಪ್ರಮೋದ್, ನಂಗಿಷ್ಟವಾಗಲ್ಲ, ನಿನಗೆ ಧೈರ್ಯವಿದ್ರೆ ನೀನೇ ಭಾನುವಾರ ನಮ್ಮನೆಗೆ ಬಾ" ಪದ್ಮಿನಿ ಫೋನ್ ಕೆಳಗಿಟ್ಟಳು.

"ಮೊಂಡು ಜಗಮೊಂಡು" ಎಂದ ಪ್ರಮೋದ್ ಫೋನ್ ಕೆಳಗಿಡುತ್ತಾ.

"ಯಾಕೋ ?"

ಅವನು ಅವಳು ಹೇಳಿದ ಮಾತುಗಳನ್ನು ಪುನರುಚ್ಚರಿಸಿದ.

"ಒಳ್ಳೆ ಚಂಡಿ ಸಹವಾಸ ಆಯ್ತಲ್ಲೋ, ಏನ್ಮಾಡ್ತೀಯಾ ?"

"ಅವರ್ಮನೆಗೇ ಹೋಗ್ತೀನಿ, ನೋಡೋಣ" ಎಂದ ಪ್ರಮೋದ್.

ಪ್ರಮೋದ್ ತನ್ನನ್ನು ನೋಡಲು ಬಂದೇ ಬರುತ್ತಾನೆಂಬ ನಂಬಿಕೆ ಪದ್ಮನಿಗಿತ್ತು. ಆ ಭಾನುವಾರ ಅವಳು ಬೇಗ ಎದ್ದು ತಲೆಗೆ ಸ್ನಾನ ಮಾಡಿದಳು. ದೋಸೆ, ಚಟ್ನಿಗೆ ಹವಣಿಸಿ, ಮನೆಯನ್ನೆಲ್ಲಾ ಕ್ಲೀನ್ ಮಾಡಿದಳು.

"ಯಾಕೆ ಇಷ್ಟೊಂದು ಕ್ಲೀನ್ ಮಾಡ್ತೀದ್ದೀಯ ? ಯಾರಾದ್ರೂ ಮನೆಗೆ ಬರ್ತಾರೇನು ?"

"ನನ್ನ ಫ್ರೆಂಡ್ ಉಷಾ ಈ ದಿನ ಈ ಕಡೆ ಬರ್ತಿದ್ದಾಳೆ. ಮನೆಗೆ ಬಂದರೂ ಬರಬಹುದು."

"ಇರಬಹುದು" ಎಂದುಕೊಂಡರು ಸೀತಮ್ಮ.

ಸುಮಾರು 9–30ರ ಹೊತ್ತಿಗೆ ತಿಂಡಿ ತಿಂದಾದ ಮೇಲೆ ಪ್ರಮೋದ್ ತಾಯಿಗೆ ಹೇಳಿದ. "ಅಮ್ಮ, ನಾನು ಶಾಸ್ತ್ರಿಗಳ ಮನೆಗೆ ಹೋಗಿ ಬರ್ತೀನೆ."

"ಯಾಕೆ ?"

"ಮನೇಲಿ ಕೂತು ಬೇಜಾರು. ಅವರ್ಮನೇಲಿ ಇವತ್ತು ಎಲ್ಲರೂ ಸಿಕ್ತಾರೆ."

"ಎಲ್ರೂ ಅಂತ ಯಾಕೆ ಹೇಳ್ತೀಯ ? ನೀನು ಪದ್ಮನೀನ್ನ ನೋಡಕ್ಕೇ ಹೋಗ್ತಿರೋದೂಂತ ನನಗೆ ಗೊತ್ತು."

"ಅದರಲ್ಲಿ ತಪ್ಪೇನಿದೆ ?"

ಉಕ್ಕಿ ಬಂದ ಕೋಪ ತಡೆದು ಹೇಳಿದರವರು 'ಆಯಿತು, ಹೋಗಿ ಬೇಗ ಬಂದುಬಿಡು."

ಅವನು ಪದ್ಮನಿಯ ಮನೆಗೆ ಬಂದಾಗ ಶಾಸ್ತ್ರಿಗಳು ಹೊರಗೆ ಹೊರಟಿದ್ದರು. ಅವನ ಯೋಗಕ್ಷೇಮ ವಿಚಾರಿಸಿ ಅವನು ಬಂದಿರುವ ವಿಚಾರ ಪದ್ಮನಿಗೆ ಹೇಳಿದರು....ಹುಡುಗರು ಹೊರಗಡೆ ಆಡುತ್ತಿದ್ದರು. ಪಿ.ಯು.ಸಿ.ಯಲ್ಲಿದ್ದ ಇಂದುಮತಿ ಟ್ಯೂಷನ್‌ಗೆ ಹೋಗಿದ್ದಳು....ಸೀತಮ್ಮ ಅಡಿಗೆಮನೆಯಲ್ಲಿದ್ದರು. ಪದ್ಮನಿ ಹೊರಗೆ ಬಂದು ಮುಗುಳ್ನಕ್ಕು 'ಸುಸ್ವಾಗತ' ಎಂದಳು.

ಅವನು ಅವಳ ಕೈ ಹಿಡಿದು ಪಕ್ಕದಲ್ಲಿ ಕೂಡಿಸಿಕೊಂಡ.

"ಶ್ ಬಿಡು, ಅಮ್ಮ ಬರ್ತಾರೆ."

ಅವಳು ಅವನ ಎದುರು ಕುಳಿತು ಕೇಳಿದಳು 'ಹೇಗಿದ್ದೀಯ ?"

"ಹುಷಾರಾಗಿದ್ದೀನಿ. ಆದ್ರೆ ಅಮ್ಮ ಎಲ್ಲಿಗೂ ಕಳುಹಿಸ್ತಿಲ್ಲ. ಅದಕ್ಕೇ ಬೇಜಾರು."

"ಅಮ್ಮಾ, ಪ್ರಮೋದ್ ಬಂದಿದ್ದಾನೆ" ಪದ್ಮಿನಿ ಕೂಗಿದಳು.

ಸೀತಮ್ಮ ಹೊರಗೆ ಬಂದು ಅವನ ಯೋಗಕ್ಷೇಮ ವಿಚಾರಿಸಿದರು.

"ಅತ್ತೆ ನಂಗೆ ತಿಂಡಿ ಕೊಡಲ್ವಾ ?"

"ಮೆಂಥ್ಯದ ದೋಸೆ ಮಾಡಿದ್ದೀನಿ, ತಿನ್ನುತ್ತೀಯಾ ?"

"ನಿಮ್ಮನೆ ದೋಸೆ ಬೇಡಾಂತೀನ ಅತ್ತೆ....ತೊಗೊಂಡು ಬನ್ನಿ."

ಸೀತಮ್ಮನಿಗೆ ಅವನ ಈ ಗುಣ ತುಂಬಾ ಮೆಚ್ಚು. ಶ್ರೀಮಂತನಾದರೂ ಬಿಂಕಮಾಡದೆ ತಾವು ಕೊಡುವ ತಿಂಡಿ ತಿನ್ನುತ್ತಾನೆ ತಾವೆಂದರೆ ಅದೆಷ್ಟು ಅಕ್ಕರೆ ಅಭಿಮಾನ ! ಅವರು ಸಂಭ್ರಮದಿಂದ ದೋಸೆ ಮಾಡಲು ಹೊರಟರು.

"ಬೆಳಗ್ಗೆ ನಿಮ್ಮನೇಲಿ ತಿಂಡಿ ತಿನ್ನಲಿಲ್ವಾ ?"

"ಅಮ್ಮ ತಿಂಡಿಗೆ ಕಾಯಿದೋಸೆ ಮಾಡಿಸಿದ್ರು. ನಂಗ್ಯಾಕೋ ಅದು ಸೇರಲ್ಲ. ಅದಿರ್ಲಿ ನೀನು ಯಾಕೆ ಅಶೋಕನ ಮನೆಗೆ ಬರಲ್ಲಾಂತ ಹೇಳಿದೆ ?"

"ನನಗೆ ಅಶೋಕ ಮುರಳಿ ಯಾರೂ ಇಷ್ಟವಿಲ್ಲ."

"ನಾನು ?"

''ನೀನೂ ಇಷ್ಟವಿಲ್ಲ...."

''ಹಾಗೆನ್ನಬೇಡವೆ ಹಾರ್ಟ್‌ಫೇಲ್ಯೂರ್ ಆಗಿ ಸತ್ತುಹೋಗ್ತೀನಿ."

''ನೀನು ಸತ್ತರೆ ನಾನು ಬದುಕಿರ್ತೀನಾ ?"

ಅವಳ ಮಾತು ಕೇಳಿ ಅವನಿಗೆ ಸಮಾಧಾನವಾಯ್ತು. ಅವನು ಮೆಲುಧ್ವನಿಯಲ್ಲಿ ಕೇಳಿದ. ''ಪಮ್ಮಿ ತಕ್ಷಣ ನಮ್ಮಮ್ಮ ನನಗೆ ಮದುವೆ ಮಾಡಲ್ಲ....ನೀನು ನನಗಾಗಿ ಎರಡು ವರ್ಷ ಕಾಯ್ತೀಯ ?"

''ನಿನಗಾಗಿ ಈ ಜನ್ಮ ಪೂರ್ತಿ ಕಾಯ್ತೀನಿ. ಆದ್ರೆ ನಿನ್ನನ್ನು ಮದುವೆ ಯಾಗ್ತೀನಿ. ಇಲ್ಲದಿದ್ರೆ ಹಾಗೇ ಇರ್ತೀನಿ."

ಅವನು ಅವಳ ಕೈ ಹಿಡಿದು 'ಥ್ಯಾಂಕ್‌ಯೂ' ಅಂದ. ಅಷ್ಟರಲ್ಲಿ ಸೀತಮ್ಮ ತಿಂಡಿ ತಂದರು. ಅವಳು ಅವನ ಮುಂದೆ ಪ್ಲೇಟ್ ಇಟ್ಟು ಹೇಳಿ ದಳು ''ತಿನ್ನು ದೋಸೆ ಬಿಸಿಯಾಗಿದೆ."

''ನೀನೇ ಒಂದು ಚೂರು ತಿನ್ನಿಸು."

"ನೀನೇನು ಎಳೇಮಗೂನಾ ? ನೀನೇ ತಿನ್ನು."

"ನೀನು ಮೊದಲು ತಿನ್ನಿಸು. ಆಮೇಲೆ ತಿನ್ನುತ್ತೀನೆ, ಇಲ್ಲದಿದ್ರೆ ಹಾಗೇ ಇಡ್ತೀನಿ."

'ತಿನ್ನದಿದ್ರೆ ಬಿಡು' ಎಂದು ತಟ್ಟೆ ಕೈಲಿ ತೆಗೆದುಕೊಂಡು ಎದ್ದವಳು 'ಶುದ್ಧ ಎಳೇಮಗು' ಎಂದು ಒಂದು ಚೂರು ದೋಸೆ ಮುರಿದು ಬಾಯಿಗಿಟ್ಟಳು ಅವನು ತಟ್ಟೆ ಖಾಲಿ ಮಾಡಿದ. ಐದು ದೋಸೆ, ಕಾಫಿ ಮುಗಿಸಿ ಹೇಳಿದ. "ಪಮ್ಮಿ, ಇದನ್ನೆಲ್ಲಾ ಮಾಡೋದು ಕಲಿತುಕೋ. ಅಡಿಗೆಯವರ ಕೈ ಅಡಿಗೆ ತಿಂದು ಬೇಜಾರಾಗಿದೆ."

"ನೀನು ಮಾತಾಡೋದು ಕೇಳಿದ್ರೆ ನಾಳೇನೆ ತಾಳಿ ಕಟ್ಟಿ ಕರ್ಕೊಂಡು ಹೋಗ್ತಿಯೇನೋ ಅನ್ನಿಸ್ತಿದೆ."

"ನಾಳೆಯೇನೆ ಈಗಲೇ ಕಟ್ಟಕ್ಕೆ ಸಿದ್ಧ ನಾನು....ಆದರೆ ನೀನು ಒಪ್ಪಲ್ಲ ವಲ್ಲಾ ?"

ಅವಳು ಅವನ ಕೈ ಸೆರಗಿನಿಂದ ಒರೆಸಿ ಹೇಳಿದಳು "ಇನ್ನು ನೀನು ಮನೆಗೆ ಹೋಗು. ಇಲ್ಲದಿದ್ರೆ ನಿಮ್ಮಮ್ಮ ಬೈತಾರೆ."

ಅವನು ಮನೆಗೆ ಬಂದು ಮಲಗಿದ. ಮಹಿಳಾ ಸಮಾಜದ ಮೀಟಿಂಗ್‌ಗೆ ಹೊರಟಿದ್ದ ಗಾಯಿತ್ರಿದೇವಿ ವ್ಯಂಗ್ಯವಾಗಿ ಕೇಳಿದರು. "ನಿನಗೆ ಬೇಕಾದವರು ಸಿಕ್ಕಿದ್ರಾ ?"

"ಓ ಸಿಗದೆ ಇದ್ದಿದ್ರೆ ಅಷ್ಟು ಹೊತ್ತು ಅಲ್ಲಿರ್ತಿದ್ನಾ ?"

ಗಾಯಿತ್ರಿದೇವಿ ಅಸಹನೆಯಿಂದ ಮುಖ ಸೊಟ್ಟ ಮಾಡಿದರು. ಮಗನ ಜೊತೆ ಪದ್ಮಿನಿಯ ವಿಚಾರ ತೆಗೆದು ಜಗಳವಾಡಬೇಕೆನ್ನಿಸಿತು. ಆದರೆ ಆ ರೀತಿ ಜಗಳವಾಡಿ ಮಗನ ವಿಶ್ವಾಸ ಕಳೆದುಕೊಳ್ಳಲು ಅವರಿಗೆ ಮನಸ್ಸಾಗಲಿಲ್ಲ.

"ಆದಷ್ಟು ಬೇಗ ಇವನನ್ನು ಬಾಂಬೆಗೆ ಕಳುಹಿಸಿ, ಅವನು ಅಲ್ಲಿಂದ ವಾಪಸ್ಸು ಬರುವುದರೊಳಗೆ ಶಾಸ್ತ್ರಿಗಳ ಮನೆ ಖಾಲಿ ಮಾಡಿಸಬೇಕು" ಎಂದು ಕೊಂಡರು.

ಅವರು ಮೀಟಿಂಗ್ ಮುಗಿಸಿಕೊಂಡು ಬಂದಾಗ ಪ್ರಮೋದ್ ಕ್ಯಾಸೆಟ್ ಹಾಕಿಕೊಂಡು ಕೇಳುತ್ತಾ ಮಲಗಿದ್ದ.

"ಊಟವಾಯ್ತಾ ಪ್ರಮೋದ್ ?"

''ಇಲ್ಲಮ್ಮ.''

''ಬಾ ಊಟಮಾಡೋಣ.''

''ಬೇಡಮ್ಮ ನನಗೆ ಹಸಿವಿಲ್ಲ.''

''ಯಾಕೆ ಅಮೃತ ಕುಡಿದಿದ್ದೀಯೇನು ?''

''ಅಮೃತ ಅಲ್ಲ ಐದು ಮೆಂಥ್ಯದೋಸೆ ತಿಂದಿದ್ದೇನೆ.''

''ಮನೇಲಿ ಪಂಚಭಕ್ಷ್ಯ ಪರಮಾನ್ನ ಮಾಡಿದರೂ, ಆ ದರಿದ್ರದವರ ಮನೆ ಹಳಸಲು ತಿಂಡೀನೇ ಇಷ್ಟ ಅಲ್ವಾ ?''

''ಇರಬಹುದು....ಪ್ರೀತಿಯಿಂದ ಹಳಸಲು ತಿಂಡಿ ಕೊಟ್ಟರೂ ಅದು ನನಗೆ ಪರಮಾನ್ನಾನೇ ! ಅದೂ ಅಲ್ಲದೆ ಅತ್ತೆ ಕೈ ತುತ್ತು ತಿಂದು ಬೆಳೆದ ದೇಹ ಅಲ್ವಾ ಇದು—ಈಗ ದೊಡ್ಡವನಾದೇಂತ ಅವರ್ಮನೆ ತಿಂಡಿ ಬಿಟ್ಟುಬಿಡಕ್ಕಾಗುತ್ತದೆಯಾ ?''

''ಮಾತು ಸಾಕು, ಊಟಕ್ಕೆ ಬಾ...''

ಅವನು ಮಾತು ಬೆಳೆಸದೆ ಊಟಕ್ಕೆ ಎದ್ದ.''

o o o o

ಆ ದಿನ ರಾತ್ರಿಯೇ ಗಾಯಿತ್ರಿದೇವಿ ತಮ್ಮ ಕಸಿನ್ ಪುರುಷೋತ್ತಮ್‌ಗೆ ಫೋನ್ ಮಾಡಿದರು. ಆತ ಒಳ್ಳೆಯ ಕಂಟ್ರ್ಯಾಕ್ಟರ್ ಎಂದು ಹೆಸರು ಮಾಡಿದ್ದರು.

''ಹಲೋ ಪುರುಷೋತ್ತಮ್ ಸ್ಪೀಕಿಂಗ್.''

''ನಾನು ಗಾಯಿತ್ರಿ.''

''ನೀನಾ ಪ್ರಮೋದ್ ಹೇಗಿದ್ದಾನೆ ?''

''ಈಗ ಹುಷಾರಾಗಿದ್ದಾನೆ. ಅವನನ್ನು ಯಾವಾಗ ಕಳುಹಿಸಲಿ ?''

''ಯಾವಾಗಲಾದರೂ ಕಳುಹಿಸಮ್ಮ.''

''ಅವನಿಗೊಂದು ಬಾಂಬೆ ಹುಡುಗಿಯನ್ನು ನೋಡಿ ಅಣ್ಣಯ್ಯ.''

''ಆಗಲಮ್ಮ ನೋಡ್ತೀನಿ. ನೀನವನನ್ನು ಮೊದಲು ಇಲ್ಲಿಗೆ ಕಳುಹಿಸು.''

ಗಾಯಿತ್ರಿದೇವಿಗೆ ಕೊಂಚ ಸಮಾಧಾನವಾಯ್ತು. ಮರುದಿನವೇ ಅವರು ಮಗನಿಗೆ ಹೇಳಿದರು. "ನೆನ್ನೆ ರಾತ್ರಿ ಪುರುಷೋತ್ತಮ್ ಫೋನ್ ಮಾಡಿದ್ದ. ನಿನ್ನನ್ನು ಆದಷ್ಟು ಬೇಗ ಬಾಂಬೆಗೆ ಕಳುಹಿಸಲು ಹೇಳಿದ."

"ಹಾಗಾದ್ರೆ ನಾನು ಯಾವಾಗ ಹೋಗಲಿ ?"

"ಬರುವ ಸೋಮವಾರ ಹೊರಡು."

''ಆಗಲಮ್ಮ, ನನಗೂ ಬೇಜಾರಾಗಿದೆ ಹೋಗಿ ಬರ್ತೀನಿ" ಎಂದ.

ಸೋಮವಾರಕ್ಕೆ ನಾಲ್ಕು ದಿನ ಉಳಿದಿತ್ತು. ಒಂದು ದಿನ ಮಧ್ಯಾಹ್ನ 12 ಗಂಟೆಗೆ ಅವನು ಪದ್ಮಿನಿಗೆ ಫೋನ್ ಮಾಡಿದ.

''ಮಧ್ಯಾಹ್ನ ರಜ ಹಾಕಿ ಕಪಾಲಿ ಥಿಯೇಟರ್ ಹತ್ತಿರ ಬಾ ನಾನು ಕಾಯ್ತಿರ್ತೀನಿ.''

''ಏನು ವಿಷಯ ?''

"ನಾನು ಈ ಸೋಮವಾರ ಬಾಂಬೆಗೆ ಹೊರಡಬೇಕು ಭಾನುವಾರ ಬಿಜಿಯಾಗಿರ್ತೀನಿ. ಆದ್ದರಿಂದ್ದ ಇನ್ನ ಭೇಟಿಯಾಗಕ್ಕಾಗಲ್ಲ. ಇವತ್ತೆ ಭೇಟಿಯಾದ್ರೆ ಒಳ್ಳೆಯದು.''

"ಬರ್ತೀನಿ ಪ್ರಮೋದ್'' ಎಂದಳು ಪದ್ಮಿನಿ. ಅವಳ ಧ್ವನಿ ಗದ್ಗದಿತವಾಗಿರುವುದನ್ನು ಗಮನಿಸಿ ಅವನ ಹೃದಯ ಭಾರವಾಯ್ತು. ಅವಳು 12 ಗಂಟೆಯ ಹೊತ್ತಿಗೆ 'ಕಪಾಲಿ' ಥಿಯೇಟರ್ ಬಳಿ ಬಂದಳು. ಇಬ್ಬರೂ 'ಕಾಮತ್ ಕೆಫೆ'ಯಲ್ಲಿ ಊಟ ಮಾಡಿ ಕಪಾಲಿ ಥಿಯೇಟರ್ ಹೊಕ್ಕರು. ಕನ್ನಡ ಸಿನಿಮಾ ಶುರುವಾಗಿ ಗಂಟೆಯಾಗಿತ್ತು. ಮೂಲೆಯೊಂದರಲ್ಲಿ ಕುಳಿತು ಮನ ಬಂದಷ್ಟು ಹರಟಿದರು. ಅವಳು ಅವನ ಭುಜಕ್ಕೆ ಒರಗಿ ಅವನ ಮಾತುಗಳನ್ನು ಕೇಳುತ್ತಾ ಮೈ ಮರೆತಳು ಅವನು ಅವಳ ಬೆರಳುಗಳ ಜೊತೆ ಆಡುತ್ತಾ ತನ್ನ ದುಃಖ ದುಮ್ಮಾನ ತೊಡಿಕೊಂಡ. ಅಗಲಿಕೆ ಇಬ್ಬರಿಗೂ ಬೇಸರ ತಂದಿತ್ತು.

"ಬಾಂಬೆಗೆ ಹೋದ ಮೇಲೆ ಇನ್ನಾರು ತಿಂಗಳು ಬರೋದೇ ಇಲ್ವಾ ?"

"ಹಾಗೇನಿಲ್ಲ, ಒಂದೆರಡು ಸಲ ಬರ್ತೀನಿ. ಫೋನ್ ನಂಬರ್ ಕೊಟ್ಟಿರ್ತೀನಿ. ಭಾನುವಾರ ಬೆಳಗ್ಗೆ 8ಗಂಟೆ ಒಳಗೆ ಫೋನ್ ಮಾಡು.''

"ನಂಗ್ಯಾಕೋ ಭಯವಾಗುತ್ತೆ."

"ಭಯ ಯಾಕೆ ಪದ್ಮಿನಿ ? ಇಲ್ಲಿಯ ವಿಚಾರಗಳನ್ನು ತಿಳಿಸಿ ಕಾಗದ ಬರಿ. ನಾನೂ ನಿನ್ನ ಫ್ಯಾಕ್ಟರಿ ವಿಳಾಸಕ್ಕೆ ಪತ್ರ ಬರೆಯುತ್ತೇನೆ."

"ನಂಗೇನೋ ನಾನು ನಿನ್ನನ್ನು ಕಳೆದುಕೊಂಡುಬಿಡ್ತೀನೇನೋಂತ ಹೆದರಿಕೆಯಾಗ್ತಿದೆ."

"ಹೆದರಿಕೆ ಯಾಕೆ ಚಿನ್ನ. ನಮ್ಮನ್ನು ಅಗಲಿಸಲಿಕ್ಕೆ ಯಾರಿಂದಲೂ ಸಾಧ್ಯವಿಲ್ಲ." ಅವನು ಅವಳ ಮುಂದಲೆಗೆ ತುಟಿಯೊತ್ತಿ ಹೇಳಿದ.

'ನಿಮ್ಮಮ್ಮ ಒಬ್ರೇ ಸಾಕು ನಮ್ಮನ್ನು ಅಗಲಿಸಲು' ಎಂದುಕೊಂಡಳು ಪದ್ಮಿನಿ. ಆದರೆ ಬಾಯಿಬಿಟ್ಟು ಹೇಳಲಿಲ್ಲ.

ಪ್ರಮೋದ್ ಸೋಮವಾರ ಹೊರಡಲು ಸಕಲ ಸಿದ್ಧತೆಯಾಯ್ತು. ಭಾನುವಾರ ರಾತ್ರಿ ಪ್ರಮೋದ್ ಶಾಸ್ತ್ರಿಗಳ ಮನೆಗೆ ಹೋಗಿ ಹೇಳಿ ಬಂದ. ಗೇಟಿನವರೆಗೂ ಬಂದ ಪದ್ಮಿನಿಯ ಕೈ ಹಿಡಿದು ಮೃದುವಾಗಿ ಅಮುಕಿ, ಅವಳಿಗೆ ಧೈರ್ಯ ಹೇಳಿದ.

ಮರುದಿನ ಬೆಳಗ್ಗೆ ಎಂಟೂವರೆ ಗಂಟೆಯ ಫ್ಲೈಟ್‌ಗೆ ಅವನು ಬಾಂಬೆಗೆ ಹೊರಟ.

o o o

ಬಾಂಬೆಯ ಏರ್‌ಪೋರ್ಟ್‌ಗೆ ಪುರುಷೋತ್ತಮ್ ಮಗ ಸರ್ವೋತ್ತಮ್ ಬಂದಿದ್ದ. ಜುಹೂವಿನಲ್ಲಿ ಅವರ ದೊಡ್ಡ ಬಂಗಲೆಯಿತ್ತು. ಪುರುಷೋತ್ತಮ್ ದೊಡ್ಡ ಕೈಗಾರಿಕೋದ್ಯಮಿ. ಅವರಿಗಿಬ್ಬರೇ ಮಕ್ಕಳು. ದೊಡ್ಡವಳು ಶಾಂತಲಾ, ಮದುವೆಯಾಗಿ ದೆಹಲಿಯಲ್ಲಿದ್ದಳು. ಎರಡನೇಯವನೇ ಸರ್ವೋತ್ತಮ್. ಅವನೂ ಬಿ.ಇ. ಮುಗಿಸಿ ಕಂಟ್ರ್ಯಾಕ್ಟ್ ಮಾಡುತ್ತಿದ್ದ. ದಾರಿಯಲ್ಲಿ ಅವನು ತನ್ನ ತಂದೆಯ ಬಗ್ಗೆ ತಿಳಿಸಿದ. "ನಮ್ಮ ತಂದೆ ಮೊದಲು ಕಂಟ್ರ್ಯಾಕ್ಟ್ ಮಾಡ್ತಿದ್ದರು. ಹೇರಳವಾಗಿ ಲಾಭ ಬಂತು. ಅಷ್ಟು ಹೊತ್ತಿಗೆ ಅವರ ಸ್ನೇಹಿತರೊಬ್ಬರು, 'ವಿಜಯ್ ಎಲೆಕ್ಟ್ರಾನಿಕ್ಸ್' ಅನ್ನುವ ಫ್ಯಾಕ್ಟರಿ ಆರಂಭಿಸಿದ್ರು. ಇವರೂ ಪಾರ್ಟನರ್ ಆದ್ರು. ಈಗ ಅವರಿಗೆ ಫ್ಯಾಕ್ಟರಿಯಲ್ಲಿರುವ ಆಸಕ್ತಿ ಕಂಟ್ರ್ಯಾಕ್ಟ್‌ನಲ್ಲಿಲ್ಲ."

"ಹಾಗಾದ್ರೆ ನಿಮ್ಮ ಹತ್ತಿರ ನಾನು ಕೆಲಸ ಕಲಿಯುತ್ತೇನೆ."

"ನಿಮಗೆ ಗೊತ್ತಿಲ್ಲವೆ ಇರುವ ಕೆಲಸ ಏನಿದೆ ? ಆರಾಮವಾಗಿ ಆರು ತಿಂಗಳು ಇರಿ, ಬಾಂಬೆ ಜೀವನ ನೋಡಿ" ಎಂದ ಸರ್ವೋತ್ತಮ್.

ಬಾಂಬೆಯಲ್ಲಿ ಒಂದು ವಾರ ಕಳೆಯುವಷ್ಟರಲ್ಲಿ ಪ್ರಮೋದ್ ಅಲ್ಲಿಯ ವಾತಾವರಣಕ್ಕೆ ಹೊಂದಿಕೊಂಡ. ಪುರುಷೋತ್ತಮ್–ಸರ್ವೋತ್ತಮ್ ಇಬ್ಬರೂ ತುಂಬಾ ಬುದ್ಧಿವಂತರು..ಪುರುಷೋತ್ತಮ್ ಕುಟುಂಬ ಕುಮುದಿನಿ ಭೂಮಿ ತೂಕದ ಹೆಂಗಸರು. ಅಷ್ಟೈಶ್ವರ್ಯವಿದ್ದರೂ ತಾವೇ ಅಡಿಗೆ ತಿಂಡಿ ಮಾಡಿ ಬಡಿಸುತ್ತಿದ್ದರು. ಸರ್ವೋತ್ತಮ್ ನಿಧಾನವಾಗಿ ಪ್ರಮೋದ್‌ಗೆ ಬಾಂಬೆಯ ವಿವಿಧ ಪ್ರದೇಶಗಳನ್ನು ತೋರಿಸಿದ. ಸಾಮಾನ್ಯವಾಗಿ ಪ್ರತಿ ಭಾನುವಾರ ಅವರಿಬ್ಬರೂ ಹೊರಗೆ ಹೋಗಿ ರಾತ್ರಿ ಹಿಂದಿರುಗಿ ಬರುತ್ತಿದ್ದರು. ಸರ್ವೋತ್ತಮ್ ಬಾಂಬೆಯ ಕೆಲವು ಟಾಕೀಸ್‌ಗಳನ್ನೂ ಪರಿಚಯಿಸಿದ. ಒಂದು ತಿಂಗಳು ಉರುಳಿತು. ಈ ಅವಧಿಯಲ್ಲಿ ಅವನಿಗೆ ಪದ್ಮಿನಿಯಿಂದ 2 ಫೋನ್‌ಕಾಲು, 2 ಕಾಗದಗಳು ಬಂದವು. ಪ್ರಮೋದನೂ ಕೆಲಸದಲ್ಲಿ ಮುಳುಗಿ ಹೋದ. ಒಂದೆರಡು ಬಾರಿ ಅವನು ಫ್ಯಾಕ್ಟರಿಗೆ ಫೋನ್ ಮಾಡಿದಾಗ ಆದರವಳು ಸಿಗಲಿಲ್ಲ. ತಾಯಿಗೆ ಫೋನ್ ಮಾಡಿದಾಗ ಪದ್ಮಿನಿಯನ್ನು ಕರೆಯಲು ಹೇಳಿದ. ಆದರೆ ತಾಯಿ ಆಸಕ್ತಿ ತೋರಿದಂತೆ ಕಾಣಲಿಲ್ಲ. ಅದು ಅವನು ನಿರೀಕ್ಷಿಸಿದ್ದ ಪ್ರತಿಕ್ರಿಯೆ ಆಗಿದ್ದರಿಂದ ಅವನಿಗೆ ಹೆಚ್ಚು ಬೇಸರ ವಾಗಲಿಲ್ಲ. ಒಮ್ಮೆ ಅವನು ಫೋನ್ ಮಾಡಿದಾಗ ಅಡಿಗೆ ಭಟ್ಟ ಸಿಕ್ಕಿದ. "ಅಮ್ಮಾವ್ರು ಅದ್ಯಾವುದೋ ಸಮಾರಂಭಕ್ಕೆ ಹೋಗಿದ್ದಾರೆ. ಏನಾದ್ರೂ ಹೇಳಬೇಕಾ ?"

"ನಾನು ಪುನಃ ಅವರಿಗೆ ಫೋನ್ ಮಾಡ್ತೀನಿ, ನನ್ನದೊಂದು ಪ್ರಶ್ನೆಗೆ ಉತ್ತರ ಹೇಳು."

"ಯಾವ ಪ್ರಶ್ನೆಗೆ ?"

"ಪದ್ಮಿನಿ, ಅವರ ಮನೆಯವರು ಹೇಗಿದ್ದಾರೆ ?"

"ಪದ್ಮಿನಿಯಮ್ಮನ ನಾನು ಇತ್ತೀಚೆಗೆ ನೋಡೇ ಇಲ್ಲ. ಅವರ ಮನೆ ಯವರೆಲ್ಲಾ ಚೆನ್ನಾಗಿದ್ದಾರೆ."

"ಪದ್ಮಿನಿ ಸಿಕ್ಕರೆ ಫೋನ್ ಮಾಡಕ್ಕೆ ಹೇಳಿ ಭಟ್ರೆ"

"ಆಗಲಿಪ್ಪ, ಹೇಳ್ತೀನಿ"

ಒಂದೂವರೆ ತಿಂಗಳು ಕಳೆಯಿತು. ಆ ದಿನ ಭಾನುವಾರ. ಸಾಮಾನ್ಯ ವಾಗಿ ಭಾನುವಾರಗಳಲ್ಲಿ ಪುರುಷೋತ್ತಮ್ ಮನೆಯಲ್ಲಿ ಎಲ್ಲರೂ ತಡವಾಗಿ ಏಳುತ್ತಿದ್ದರು. ನಂತರ ಸ್ನಾನ ಮುಗಿಸಿ ಯಾವುವಾದರೊಂದು ಒಳ್ಳೆಯ ಹೋಟೆಲ್‌ಗೆ ತಿಂಡಿಗೆ ಹೋಗುತ್ತಿದ್ದರು.

ಅಂದು ಹೋಟೆಲ್‌ನಲ್ಲಿ ತಿಂಡಿ ತಿನ್ನುತ್ತಿದ್ದಾಗ ಕುಮುದಿನಿ ಕೇಳಿದರು. "ಇವತ್ತು ನಿಮ್ಮ ಪ್ರೋಗ್ರಾಂ ಏನು ?"

"ನಾವಿಬ್ರು ಯಾವುದಾದ್ರೂ ಮೂವಿಗೆ ಹೋಗೋಣಾಂತ ಇದ್ದೇವೆ"

"ಮುಂದಿನ ವಾರ ಮೂವಿಗೆ ಹೋದರಾಯ್ತು. ಈಗ ನಮ್ಮಣ್ಣನ ಮನೆಗೆ ಹೋಗೋಣ"

"ಅವರ್ಮನೆಗೆ ಇವತ್ತು ಯಾಕಮ್ಮಾ?" ಸರ್ವೋತ್ತಮ್ ಕೊಂಚ ಬೇಸರದಿಂದಲೇ ಕೇಳಿದ.

"ಪ್ರಮೋದ್‌ನ ಕರ್ಕೊಂಡು ಬಾ ಅಂತ ಅಣ್ಣ ನಿನ್ನೇನೂ ಫೋನ್ ಮಾಡಿದ್ರು, ಹೋಗಿ ಬರೋಣ"

ಪ್ರಮೋದ್ ಸರ್ವೋತ್ತಮ್‌ನ ಮುಖ ನೋಡಿದ. ಅವನು "ಅಮ್ಮ ಹೇಳಿದ ಮೇಲೆ ಇಲ್ಲಾಂತ ಹೇಳುವ ಹಾಗೇ ಇಲ್ಲ, ಹುಂ ಅನ್ನು" ಅಂದ.

ಅವರು ದಾದರ್‌ನಲ್ಲಿದ್ದ ಡಾ|| ಕೃಷ್ಣರಾವ್ ಮನೆ ತಲುಪಿದಾಗ 10–30 ಗಂಟೆ. ಡಾಕ್ಟರ್ ಹೆಂಡತಿ ಯಶೋಧ ಖುಷಿಯಿಂದ ಸ್ವಾಗತಿಸಿದರು. ಅವರ ಮನೆಯ ಅಂದ ಚೆಂದ ನೋಡಿ ಪ್ರಮೋದ್ ಬೆರಗಾದ.

ಡಾ|| ಕೃಷ್ಣರಾವ್ ಪ್ರಮೋದನನ್ನು ನೂರೆಂಟು ಪ್ರಶ್ನೆ ಕೇಳಿದರು. ಅವರೆಲ್ಲಾ ಹರಡುತ್ತಿದ್ದಾಗ ಕುಮುದಿನಿ ಪ್ರಶ್ನಿಸಿದರು.

"ಬೇಬಿ ಎಲ್ಲಿ ?"

"ಬೆಳಗ್ಗೆ ಜಾಗಿಂಗ್ ಹೋಗಿ, ಹಾಗಿಂದ ಹಾಗೇ ಅವಳ ಫ್ರೆಂಡ್ ದೀಪಿಕ ಮನೆಗೆ ಹೋಗಿದ್ದಾಳೆ....ಫೋನ್ ಮಾಡ್ತೀನಿ, ಈಗ ಬರ್ತಾಳೆ."

ಅವರು ಮಗಳಿಗೆ ಫೋನ್ ಮಾಡಿದರು. ಅರ್ಧ ಗಂಟೆಯಲ್ಲಿ ಅವರ ಬೇಬಿ ಮನೆಗೆ ಬಂದಳು.

ಪ್ರಿಂಟ್ಸ್ ಇದ್ದ ತಿಳಿಗುಲಾಬಿ ಬಣ್ಣದ ಚೂಡಿದಾರ್ ಅವಳ ಹಾಲು ಬಿಳುಪಿನ ಬಣ್ಣಕ್ಕೆ ಚೆನ್ನಾಗಿ ಒಪ್ಪಿತ್ತು. ಅವಳ ಹಾರಾಡುವ ಅಲೆಗೂದಲು

ಜೇನುಕಣ್ಣುಗಳು, ಮಾಟವಾದ ಮೂಗು, ಬಾಯಿ ಮೋಡಿಹಾಕುವ ಮುಗುಳ್ನಗೆ ನೋಡಿ ಪ್ರಮೋದ್ ದೊಡ್ಡ ಉಸಿರೆಳೆದುಕೊಂಡ.

"ಇವನು ಪ್ರಮೋದ್ ನಮ್ಮ ರಿಲೇಟೀವ್" ಕುಮುದಿನಿ ಪರಿಚಯಿಸಿದರು. ಅವಳು ಅವನತ್ತ ನೋಡಿ ಮುಗುಳ್ನಕ್ಕು 'ಹಾಯ್' ಎಂದಳು.

"ಇವಳು ನಮ್ಮಣ್ಣನ ಮಗಳು ಅದಿತಿ, ಬಿ.ಇ. ಮಾಡಿ ಕೆಲಸಕ್ಕೆ ಹೋಗಲ್ಲಾಂತ ಮನೆಯಲ್ಲಿ ಕುಳಿತಿದ್ದಾಳೆ."

"ಅವರಪ್ಪನೇ ಹತ್ತು ಜನಕ್ಕೆ ಕೆಲಸ ಕೊಡುವ ಶಕ್ತಿ ಇರುವಾಗ ಅವಳ್ಯಾಕೆ ಕೆಲಸ ಮಾಡಬೇಕು ?" ಪುರುಷೋತ್ತಮ್ ಹೇಳಿದರು.

"ನನಗೇನೋ ಅವಳನ್ನು ಒಬ್ಬಳನ್ನು ಇಂಜಿನಿಯರ್‌ಗೆ ಕೊಟ್ಟು ಮದುವೆಮಾಡಿ, ಇಬ್ಬರಿಗೂ ಒಂದು ಫ್ಯಾಕ್ಟರಿ ಹಾಕಿಕೊಡಬೇಕೂಂತ ಆಸೆ" ಅವಳ ತಂದೆ ಹೇಳಿದರು.

"ನಿಮ್ಮ ಆಸೆ ನೀವು ಹೇಳಿದ್ರಿ ; ಅವಳಾಸೆ ಏನೂಂತ ಕೇಳಬಾರದಾ?"

"ನನಗೇನೋ ಅಪರಿಚಿತರನ್ನು ಮದುವೆಯಾಗಕ್ಕೆ ಇಷ್ಟವಿಲ್ಲ. ಬಾಂಬೆಯಲ್ಲೇ ಇರುವ ಪರಿಚಿತ ವ್ಯಕ್ತಿಯನ್ನು ಮದುವೆಯಾಗಿ ಡ್ಯಾಡಿ–ಮಮ್ಮಿ ಕಣ್ಣೆದುರಿಗೆ ಇರಬೇಕೆಂತ ಆಸೆ" ಎಂದಳು. ಅದಿತಿ ಅವಳ ನೋಟ ಸರ್ವೋತ್ತಮ್ ಮೇಲೆ ಇರುವುದನ್ನು ಪ್ರಮೋದ್‌ನಕಣ್ಣುಗಳು ಗಮನಿಸಿದವು. ಕುಮುದಿನಿಯ ಕಣ್ಣುಗಳು ಹನಿಗೂಡಿದ್ದವು.

"ಅಪರೂಪಕ್ಕೆ ಬಂದಿದ್ದೀರ, ಇವತ್ತು ಇಲ್ಲೇ ಊಟ ಮಾಡಿ" ಎಂದರು ಡಾಕ್ಟರ್.

ಅಡಿಗೆಯಾಗುವವರೆಗೂ ಎಲ್ಲರೂ ಕಾರ್ಡ್ಸ್ ಆಡಿದರು. ಎರಡು ಸಲ ಕಾಫಿ ಕುಡಿದರು. ಅದಿತಿ, ಪ್ರಮೋದ್, ಸರ್ವೋತ್ತಮ್ ಮಹಡಿಗೆ ಹೋಗಿ ಕ್ಯಾಸೆಟ್ ಹಾಕಿಕೊಂಡು ಕೇಳಿದರು. ಒಟ್ಟಿನಲ್ಲಿ ಆ ದಿನ ಕಳೆದಿದ್ದು ತಿಳಿಯಲಿಲ್ಲ.

ಕೆಲವು ದಿನ ಮನೆಗೆ ಹೊರಡುವ ಮೊದಲು ಅವರನ್ನೆಲ್ಲಾ ತಮ್ಮ ಮನೆಗೆ ಆಹ್ವಾನಿಸಿದರು.

"ಮುಂದಿನ ಭಾನುವಾರ ನೀವುಗಳು ನಮ್ಮನೆಗೆ ಬನ್ನಿ."

"ನಾನು ಬರಲ್ಲ ಹೋಗಿ ಆಂಟಿ. ನಾನು ಮುಂದಿನ ವಾರ ಮೆಟ್ರೋದಲ್ಲಿ ಫಿಲಂ ನೋಡಬೇಕು."

"ಅಲ್ಲಿಗೇ ಬಾರೆ, ನಾನೇ ಕರೆದುಕೊಂಡು ಹೋಗ್ತೀನಿ" ಎಂದ ಸರ್ವೋತ್ತಮ್.

ಭಾನುವಾರ ಊಟಮಾಡಿಕೊಂಡು ಮೂವರೂ ಫಿಲಂ ನೋಡಿ ಬಂದರು. ಅದೇ ದಿನ ಮುಂದಿನ ಭಾನುವಾರ ಪ್ರೋಗ್ರಾಂ ಫಿಕ್ಸ್ ಮಾಡಿದರು. ಅಂದು 'ಎಲಿಫೆಂಟಾ ಕೇವ್ಸ್' ನೋಡಿ ಬಂದರು. ಆ ತಿಂಗಳಲ್ಲಿ ನಾಲ್ಕು ಭಾನುವಾರಗಳು ಅದಿತಿಯ ಜೊತೆ ಕಳೆದವು.

ಅದಿತಿ ತುಂಬಾ ಸರಳ ಸ್ವಭಾವದ ಹುಡುಗಿಯೆಂದು ಪ್ರಮೋದ್‌ಗೆ ಅರ್ಥವಾಗಿತ್ತು. ಶ್ರೀಮಂತ ತಂದೆ ಒಬ್ಬಳೇ ಮಗಳೆಂಬ ಅಹಂಕಾರ ಅವಳಲ್ಲಿರಲಿಲ್ಲ ಮನಬಿಚ್ಚಿ ಮಾತಾಡುತ್ತಿದ್ದಳು. ತುಂಬಾ ಮೃದು. ಏನು ಹೇಳಿದರೂ ಒಪ್ಪುತ್ತಿದ್ದಳು ಅವಳಿಗೆ ವಾದಮಾಡೇ ಗೊತ್ತಿರಲಿಲ್ಲ. ಪ್ರಮೋದ್ ಮತ್ತೊಂದು ವಿಚಾರ ಗಮನಿಸಿದ್ದ ಸರ್ವೋತ್ತಮ್, ಅದಿತಿ ಆಗಾಗ್ಗೆ ಅವನಿಗೆ ಕೇಳಿಸದಂತೆ ಪಿಸುಗುಡುತ್ತಿದ್ದರು. ಅವರು ಒಬ್ಬರನ್ನೊಬ್ಬರು ಪ್ರೀತಿಸ್ತಿದ್ದಾರೇನೋ ? ಎಂಬ ಅನುಮಾನ ಅವನನ್ನು ಕಾಡತೊಡಗಿತ್ತು. ಅವರ ನಡುವೆ ತಾನೊಂದು 'ನ್ಯೂಸೆನ್ಸ್' ಎನ್ನಿಸುತ್ತಿತ್ತು.

ಒಂದು ಭಾನುವಾರ ಅವರು ಪಿಕ್‌ನಿಕ್ ಪ್ರೋಗ್ರಾಂ ಹಾಕುತ್ತಿದ್ದಾಗ ಪ್ರಮೋದ್ ಮಧ್ಯೆ ಬಾಯಿ ತೂರಿಸಿ ಹೇಳಿದ. "ನಾನು ಬರಲ್ಲ. ನಾನು ನನ್ನ ಫ್ರೆಂಡ್ ಮನೆಗೆ ಹೋಗಬೇಕು."

"ಹಾಗಾದ್ರೆ ಮುಂದಿನ ವಾರ ಹೋಗೋಣ. ಇವತ್ತು ಬೇಡ" ಎಂದಳು ಅದಿತಿ. ಅವಳು ಹೊರಟುಹೋದ ಮೇಲೆ ಸರ್ವೋತ್ತಮ್ ಪ್ರಮೋದನ ಜೊತೆ ಜಗಳವಾಡಿದ.

"ಯಾವ ಫ್ರೆಂಡ್ ಮನೆಗೆ ನೀನು ಹೋಗಬೇಕೋ ? ಯಾವ ರಾಜ ಕಾರ್ಯವಿದೆ ನಿನಗಲ್ಲಿ ?"

"ನಾನು ಬರಲ್ಲಾಂತ ಹೇಳಿದ್ರಿಂದ ನಿನಗಾದ ನಷ್ಟವೇನು ?"

"ನೀನು ಬರದಿದ್ರೆ ನಾನು–ಅದಿತಿ ಹೊರಗೆ ಹೋಗಕ್ಕೇ ಆಗಲ್ಲ."

"ಒಗಟಾಗಿ ಮಾತಾಡಬೇಡ ; ವಿಷಯ ಏನು ಹೇಳು."

"ನಾನು ಅದಿತಿ ಒಬ್ಬರನ್ನೊಬ್ಬರು ತುಂಬಾ ಪ್ರೀತಿಸ್ತಿದ್ದೇವೆ. ಆದ್ರೆ ಡಾಕ್ಟರ್‌ಗೆ ನಾನವರ ಅಳಿಯನಾಗೋದು ಇಷ್ಟವಿಲ್ಲ."

"ಯಾಕೆ ?"

"ನಮ್ಮ ಫ್ಯಾಮಿಲಿಯದೊಂದು ದೊಡ್ಡ ಕಥೆ. ಅದನ್ನು ನಿನ್ನ ಹತ್ತಿರ ಹೇಳಲೇನು ? ನಮ್ತಂದೆ ಹುಟ್ಟು ಶ್ರೀಮಂತರಲ್ಲ. ನಮ್ತಾಯೀನ್ನ ಅವರು ಪ್ರೀತಿಸಿ ಮದುವೆಯಾದರಂತೆ. ಅಮ್ಮ ಉಟ್ಟಬಟ್ಟೆಯಲ್ಲಿ ಅಪ್ಪನ ಜೊತೆ ಬಂದರಂತೆ. ಅಪ್ಪ ಆಗ ಸಣ್ಣ ಫ್ಯಾಕ್ಟರಿಯಲ್ಲಿದ್ರು. ಅವರಿಗಾಗದವರು ಅವರ ಮೇಲೆ ಕಳ್ಳತನದ ಅಪವಾದ ಹೊರೆಸಿದರಂತೆ. ಅಪ್ಪ ಹೆದರಿ ಬಾಂಬೆಗೆ ಓಡಿ ಬಂದ್ರಂತೆ. ಅಲ್ಲಿ ಕೈಗಾರಿಕೋದ್ಯಮಿಯೊಬ್ಬರ ಪರಿಚಯವಾಯ್ತು. ಅವರ ಮಗಳನ್ನು ಮದುವೆಯಾಗಿ ಶ್ರೀಮಂತರಾದರಂತೆ. ಅಮ್ಮ ಬೆಂಗಳೂರಲ್ಲಿ ತವರುಮನೆ ಸೇರಿ ಕಾಲ ಕಸವಾಗಿ ತುಂಬಾ ಪಾಡುಪಡ್ತಿದ್ದರಂತೆ. ನನಗಾಗ 2 ವರ್ಷ. ನನಗೆ 8 ವರ್ಷ ತುಂಬಿದಾಗ ಅಪ್ಪ ಬಾಂಬೆಯಿಂದ ಬೆಂಗಳೂರಿಗೆ ಬಂದು ನಮ್ಮನ್ನು ಇಲ್ಲಿಗೆ ಕರೆತಂದ್ರು."

"ಆಮೇಲೆ ?"

"ನಮ್ತಂದೆ ಎರಡನೇ ಹೆಂಡತಿಗೆ ಮಕ್ಕಳಿರಲಿಲ್ಲ. ಜೊತೆಗೆ ಆಕೆ ತುಂಬಾ....ಜೋರು. ಗಂಡ ತಾವು ಹೇಳಿದಂತೆ ಕೇಳಬೇಕಂತ ಬಯಸ್ತಿದ್ರು. ನಮ್ತಂದೆನ್ನ ಹಚ್ಚುಚ್ಚಾಗಿ ಪ್ರೀತಿಸ್ತಿದ್ರು. ಅವರಿಗೆ ಹೇಗೋ ನಮ್ಮ ವಿಚಾರ ತಿಳಿಯಿತು.

"ಅವರು ಕೋಪಮಾಡ್ಕೊಂಡು ತಂದೇನ್ನೂ ಕರೆದುಕೊಂಡು ಕಾರ್‌ನಲ್ಲಿ ನಮ್ಮನೆಗೆ ಬರ್ತಿದ್ದಾಗ ಆಕ್ಸಿಡೆಂಟಾಗಿ, ಅಪ್ಪ ಮಗ್ಳು ಸ್ಪಾಟ್‌ನಲ್ಲೇ ಹೋಗಿಬಿಟ್ರು....ಅವರ ಆಸ್ತಿಯೆಲ್ಲಾ ನಮ್ಮದಾಯಿತು."

"ಅದಕ್ಕೂ ನಿನ್ನ–ಅದಿತಿ ಮದುವೆಗೂ ಏನು ಸಂಬಂಧ ?"

"ಅವರಿಬ್ರೂ ಆಕ್ಸಿಡೆಂಟ್‌ನಲ್ಲಿ ಕಣ್ಮುಚ್ಚಿದರೂ ಅದು ಕೊಲೆ ಅನ್ನುವ ಸುದ್ದಿ ಹರಡಿ, ನಮ್ಮ ತಂದೆನೇ ಆಸ್ತಿ ಆಸೆಗೋಸ್ಕರ ಅವರನ್ನು ಕೊಲೆ ಮಾಡಿದ್ರೂಂತ ಜನ ಭಾವಿಸುವಂತಾಯ್ತು. ಆಗ ಅದಿತಿ ತಂದೆ ಕೂಡ ಬಾಂಬೆಯಲ್ಲಿದ್ರು. ಆದ್ದರಿಂದ ಅವರಿಗೆ ನಮ್ಮ ಕುಟುಂಬದ ಬಗ್ಗೆ ಸದಾಭಿಪ್ರಾಯವಿಲ್ಲ."

"ಅವರು ನಿಮ್ಮ ತಾಯಿ ಅಣ್ಣ ಅಲ್ವಾ ?"

"ನಮ್ಮ ತಾಯಿಗೆ ಅಣ್ಣಂದಿರಿಲ್ಲ. ಇವರು ಪರಿಚಯವಾಗಿದ್ದೇ ಇಲ್ಲಿಗೆ ಬಂದಮೇಲೆ. ಅಮ್ಮ ಇವರಿಗೆ ರಾಖಿ ಕಟ್ಟಿದ್ದರಿಂದ ಅಣ್ಣ ಆದ್ರು ಅಷ್ಟೆ."

"ಅಮ್ಮಂಗೆ ಅದಿತಿನ್ನ ಕಂಡ್ರೆ ಪ್ರೀತಿ ಇದೆಯಾ ?"

"ಅಮ್ಮಂಗೆ ಅದಿತಿನ್ನ ಸೊಸೆ ಮಾಡಿಕೊಳ್ಳಕ್ಕೆ ತುಂಬಾ ಇಷ್ಟ. ಆದರೆ ಅಪ್ಪ ಒಪ್ತಿಲ್ಲ. ಅವರ್ಮನೆಯಲ್ಲೂ ಅದಿತಿ ಅಮ್ಮನಿಗೆ ಈ ಸಂಬಂಧ ಇಷ್ಟ....ಆದ್ರೆ ಅಪ್ಪನಿಗೆ ಇಷ್ಟ ಇಲ್ಲ."

"ಅದಿತಿಗೆ ಈ ಸಂಬಂಧ ಇಷ್ಟ ಇದೆ....ಅಲ್ವಾ ?"

"ಅವಳಿಗೆ ನಾನೂಂದ್ರೆ ಪಂಚಪ್ರಾಣ."

"ಹೇಗೂ ಅಮ್ಮಂದಿರ ಸಪೋರ್ಟ್ ಇದೆಯಲ್ಲಾ ? ಆರಾಮವಾಗಿ ಮದುವೆಯಾಗಿ."

"ಆಮೇಲೆ ನಮ್ಮ ತಂದೆ ನಮ್ಮನ್ನು ಮನೆಗೆ ಸೇರಿಸಲ್ಲ."

"ಸೇರಿಸದಿದ್ದರೆ ಬಿಡಲಿ. ಎಷ್ಟು ದಿನ ಅವರು ನಿಮ್ಮನ್ನು ದೂರ ಇಡ್ತಾರೆ ? ನೀನು ಒಬ್ಬನೇ ಮಗ ಆಗಿರೋದ್ರಿಂದ 4–5 ತಿಂಗಳಾದ ಮೇಲೆ ಅವರೇ ಸೋಲ್ತಾರೆ."

"ನಾಲ್ಕೈದು ತಿಂಗಳಾದ್ರೂ ನಾನು ಅದಿತಿಗೆ ಅನ್ನ ಹಾಕಬೇಕಲ್ವಾ ? ನನಗೆ ಯಾರು ಕೆಲಸ ಕೊಡ್ತಾರೆ ? ಈ ಊರಿನಲ್ಲಿ ಹೇಗಿರೋದು ? ರಾಜ ಕುಮಾರಿಯಂತೆ ಬೆಳೆದಿರುವ ಹುಡುಗಿಗೆ ಹೇಗೆ ತೊಂದರೆ ಕೊಡಲಿ ?"

"ನನ್ನ ಜೊತೆ ಬೆಂಗಳೂರಿಗೆ ಬಾ. ನಿನ್ನನ್ನು ನನ್ನ ಪಾರ್ಟ್‌ನರ್ ಆಗಿ ತೊಗೋತೀನಿ."

"ಥ್ಯಾಂಕ್‌ಯೂ ಪ್ರಮೋದ್ ಬೇರೇನೂ ದಾರಿ ಕಾಣದಿದ್ರೆ ನಾನು ನಿನ್ನ ಹತ್ತಿರಾನೆ ಬರುತ್ತೀನಿ. ತುಂಬಾ ತಮಾಷೆ ವಿಷಯ ಅಂದ್ರೆ ಅಂಕಲ್ ಅದಿತಿನ್ನ ನಿನಗೆ ಕೊಡಬೇಕಂತ ಅಂದ್ಕೊಂಡಿದ್ದಾರೆ. ಅದಕ್ಕೆ ನಿನ್ನ ಜೊತೆ ತಿರುಗಾಡಲು ಕಳಿಸ್ತಿದ್ದಾರೆ"

"ಐ. ಸೀ"

"ಅಷ್ಟೇ ಅಲ್ಲ. ನಮ್ಮಪ್ಪಾನೂ ಈ ಮದುವೆಗೆ ಒತ್ತಾಸೆ ನೀಡ್ತಿದ್ದಾರೆ. ನಿಮ್ತಾಯಿ ಫೋನ್ ಮಾಡಿ ಬಾಂಬೆ ಹುಡುಗಿಯೊಬ್ಬನ್ನು ಹುಡುಕು ಅಂತ ಹೇಳಿದ್ದಾರಂತೆ."

"ಬಾಂಬೆಯೇನು ಸ್ವರ್ಗಲೋಕದಿಂದ ಅಪ್ಸರೆಯರು ಬಂದು ಇಳಿದ್ರೂ ನಾನು ಅವರ್‍ಯಾರನ್ನು ಮದುವೆಯಾಗಲ್ಲ...."

"ಯಾಕೆ ನೀನು ಯಾರನ್ನಾದ್ರೂ ಪ್ರೀತಿಸ್ತಿದ್ದಿಯೇನು ?"

"ಹೌದು, ಪದ್ಮಿನಿ ಅನ್ನುವ ಹುಡುಗಿಯನ್ನ ಪ್ರೀತಿಸ್ತಿದ್ದೇನೆ. ಅವಳು ನನ್ನ ಬಾಲ್ಯದ ಗೆಳತಿ. ಆದ್ರೆ ಅವರು · ಬಡವರು, ನಮ್ಮ ಕುಟುಂಬಕ್ಕೆ ತುಂಬಾ ಸಹಾಯ ಮಾಡಿದ್ದಾರೆ. ಪದ್ಮಿನಿ ತುಂಬಾ ಮುದ್ದಾದ ಹುಡುಗಿ ಅಷ್ಟೇ ಸ್ವಾಭಿಮಾನಿ. ಮೊಂಡು, ಐ ಲವ್ ಹರ್, ಐ ಅಡೋರ್ ಹರ್, ಐ ವಾಂಟ್ ಟು ಮ್ಯಾರಿ ಹರ್."

"ಅವಳು ?"

"ಅವಳಿಗೂ ನಾನು ತುಂಬಾ ಇಷ್ಟ. 'ಮದುವೆಯಾದ್ರೆ ನಿನ್ನನ್ನೇ ಇಲ್ಲದಿದ್ರೆ ಈ ಜನ್ಮದಲ್ಲಿ ನನಗೆ ಮದುವೆಯಿಲ್ಲಾ'ಂತ ಹೇಳಿದ್ದಾಳೆ. ಆದ್ರೆ ನಮ್ಮಮ್ಮಂಗೆ ಇಷ್ಟವಿಲ್ಲ."

"ಛೆ....ಛೆ...."

"ನಾನು ಅವಳನ್ನು ಮದುವೆಯಾಗೋದು. ಅದಿತಿನ್ನ ನಾನು ಮೆಚ್ಚೊ ಇಲ್ಲ, ಮದುವೆಯಾಗೋದೂ ಇಲ್ಲ. ನಿಮ್ಮ ಜೊತೆ ದಯವಿಟ್ಟು ನನ್ನನ್ನು ಕರೆಯಬೇಡ."

"ನೀನು ಬರ್‍ತಿರೋದ್ರಿಂದ್ರ ನಾವಿಬ್ರೂ ಭೇಟಿಯಾಗಕ್ಕೆ ಆಗ್ತಿದೆ. ಅದಿತಿ ನಿನ್ನನ್ನು ಮೆಚ್ಚಿದ್ದಾಳೇಂತ ಅವಳ ತಂದೆ ಭಾವಿಸಿ ತಿರುಗಾಡಕ್ಕೆ ಪರ್ಮಿಷನ್ ಕೊಟ್ಟಿದ್ದಾರೆ. ನೀನೇನಾದ್ರೂ ಅವಳು ಇಷ್ಟವಿಲ್ಲಾಂತ ತೋರಿಸಿಕೊಂಡ್ರೆ ನಿನಗೂ ಕಷ್ಟ, ನಮಗೂ ನಷ್ಟ."

"ನನಗ್ಯಾಕೆ ಕಷ್ಟ ?"

"ನಮ್ಮಪ್ಪ ನಿನಗೆ ಬೇರೆ ಹುಡುಗಿಯರನ್ನು ನೋಡಕ್ಕೆ ಪ್ರಯತ್ನಿಸ್ತಾರೆ. ನಿನಗೆ ಅದಿತೀಲ್ಲಿ ಆಸಕ್ತಿ ಇಲ್ಲಾಂತ ತಿಳಿದರೆ ಅವರಪ್ಪ ಅವಳನ್ನು ನಮ್ಮನೆಗೆ ಕಳುಹಿಸಲ್ಲ. ನನಗೋಸ್ಕರ ನೀನು ಕೊಂಚ ಕಾಲ ತೆಪ್ಪಗಿರು."

"ಒಕೆ....ಫ್ರೆಂಡ್. ಆದ್ರೆ ಇದು ಚೆನ್ನಾಗಿರಲ್ಲ. ಆದಷ್ಟು ಬೇಗ ನೀವು ಮದುವೆಯಾಗಬೇಕು. ನಾನು ಬೆಂಗಳೂರಿಗೆ ಬಂದಮೇಲೆ ಖಂಡಿತಾ ಬಾ; ನಾನು ನಿಮ್ಮ ಮದುವೆ ಮಾಡಿ ನಿನಗೆ ಕೆಲಸಾನೂ ಕೊಡ್ತೀನಿ."

"ನೀನು ಸಹಾಯ ಮಾಡ್ತೀಯ ಅನ್ನುವ ಭರವಸೆ ನನಗಿದೆ. ನಿವ್ವಾಯಿ ನಿನ್ನನ್ನು ಮನೆ ಬಿಟ್ಟು ಓಡಿಸಿದ್ರೆ ಏನ್ಮಾಡ್ತೀಯ? "

"ಖಂಡಿತಾ ಅವರು ಹಾಗೆ ಮಾಡಲ್ಲ. ನನಗೆ ಆ ಬಗ್ಗೆ ಚಿಂತೆಯಿಲ್ಲ."

ಅಂದಿನಿಂದ ಪ್ರಮೋದ್ ಬೇಕೆಂದೇ ಅದಿತಿಯನ್ನು ತನ್ನ ಜೊತೆ ಕರೆದೊಯ್ಯಲಾರಂಭಿಸಿದ. ಅಲ್ಲಿಗೆ ಸರ್ವೋತ್ತಮ್ ಬಂದಿರುತ್ತಿದ್ದ. ಅವರಿಬ್ಬರನ್ನು ಬಿಟ್ಟು ಮತ್ತೆಲ್ಲೋ ಸುತ್ತಾಡಿ ಮನೆ ಸೇರುತ್ತಿದ್ದ ಅವನ ಮನಸ್ಸು ಪದ್ಮಿನಿಯನ್ನು ತುಂಬಾ ನೆನಪು ಮಾಡಿಕೊಳ್ಳುತ್ತಿತ್ತು. ಇತ್ತೀಚೆಗೆ ಅವಳಿಂದ ಕಾಗದ, ಫೋನ್ ಏನೂ ಇರಲಿಲ್ಲ. ಅವಳು ಕೆಲಸ ಮಾಡುತ್ತಿದ್ದ ಫ್ಯಾಕ್ಟರಿಗೆ ಫೋನ್ ಮಾಡಿದಾಗ 'ಅವರು ಈಗ ಇಲ್ಲಿಲ್ಲ. ಕೆಲಸ ಬಿಟ್ಟುಬಿಟ್ರು' ಎಂದಿದ್ದರು. ಭಟ್ಟನಿಗೆ ಫೋನ್ ಮಾಡಿ 'ಪದ್ಮಿನಿ ಯನ್ನು ಕರ್ಕೊಂಡು ಬನ್ನಿ, ಮಾತಾಡಬೇಕು' ಎಂದಾಗ "ಅವರ್‍ಯಾರೂ ಊರಿನಲ್ಲಿಲ್ಲ" ಎಂಬ ಉತ್ತರ ಬಂದಿತ್ತು. ಅವನಿಗಂತೂ ಈ ಉತ್ತರ ಗಳನ್ನು ಕೇಳಿ ತಲೆ ಕೆಟ್ಟಂತಾಗಿತ್ತು.

ಒಮ್ಮೊಮ್ಮೆ ಅವನಿಗೆ ತಾನಿಲ್ಲದ ಸಮಯ ನೋಡಿ ತಾಯಿ ಆಸಕ್ತಿ ವಹಿಸಿ ಪದ್ಮಿನಿಗೊಂದು ಗಂಡು ಹುಡುಕಿ ಮದುವೆ ಮಾಡೇ ಬಿಟ್ಟರೇನೋ ? ಅನ್ನಿಸುತ್ತಿತ್ತು. ಪದ್ಮಿನಿಯ ಫ್ರೆಂಡ್ ಲತಾಗೆ ಫೋನ್ ಮಾಡಿ ವಿಚಾರಿ ಸಲು ಅವನಿಗೆ ಧೈರ್ಯವಿರಲಿಲ್ಲ.

ಸಂಪ್ರದಾಯಸ್ಥರಾದ ಲತಾಳ ಮನೆಯವರು ತೊಂದರೆ ಕೊಡಬಹು ದೇನೋ ಅನ್ನಿಸಿತ್ತು. ಕೊನೆಗೆ ದಾರಿ ಕಾಣದೆ ಅಶೋಕನಿಗೆ ಫೋನ್ ಮಾಡಿ ಅವನು ಎರಡು ದಿನಗಳ ನಂತರ ಫೋನ್ ಮಾಡಿ ವಿಷಯ ತಿಳಿಸಿದ. ಅವನಿಂದ ಬಂದ ಉತ್ತರ ಪ್ರಮೋದನನ್ನು ತಲ್ಲಣಗೊಳಿಸಿತು.

"ಗುರು, ಪದ್ಮಿನಿ ಮನೆಯವರು ಆ ಮನೆಯಲ್ಲಿಲ್ಲ. ಎಲ್ಲಿಗೆ ಹೋಗಿ ದ್ದಾರಂತ ಯಾರಿಗೂ ಗೊತ್ತಿಲ್ಲ."

"ನೀನು ಯಾರನ್ನು ವಿಚಾರಿದ್ದೆ ?"

"ನಿಮ್ಮ ಭಟ್ಟನ್ನ ವಿಚಾರಿಸ್ದೆ. ಪದ್ಮಿನಿ ಪಕ್ಕದ್ಮನೇಲಿ ವಿಚಾರಿಸ್ದೆ. ಅವರು 'ನಮಗೇನೂ ತಿಳಿಯದು, ಒಂದು ರಾತ್ರೋ ರಾತ್ರಿ ಸಾಮಾನು

ಸಾಗಿಸಿಕೊಂಡು ಹೋಗಿದ್ದಾರೆ. ಹೋಗುವಾಗ ನಮಗೊಂದು ಮಾತೂ ಹೇಳಲಿಲ್ಲ' ಅಂದ್ರು."

"ಪದ್ಮಿನಿ ಫ್ರೆಂಡ್ ಲತಾಗೆ ಗೊತ್ತಿರಬಹುದಾ ?"

"ಇಲ್ಲ ಕಣೋ, ಅವರಿಗೂ ಗೊತ್ತಿಲ್ಲ. ಅವರು ಮೊನ್ನೆ ಬಸ್ಸ್ಟಾಪ್‌ನಲ್ಲಿ ಸಿಕ್ಕಿದ್ರು....ಪದ್ಮಿನಿ ಅಡ್ರೆಸ್ ಕೇಳಿದ್ದಕ್ಕೆ 'ನನಗೇನೂ ಗೊತ್ತಿಲ್ಲಾರಿ. ಮನೆ ಬಿಡುವಾಗ ನನಗೆ ಹೇಳಿ ಹೋಗುವ ಶ್ರಮಕೂಡ ತೆಗೆದುಕೊಳ್ಳಲಿಲ್ಲ ಅವಳು. ನಿಮ್ಮ ಫ್ರೆಂಡ್‌ನ ಕೇಳಿ ಗೊತ್ತಿರಬಹುದು' ಅಂದ್ರು."

ಪದ್ಮಿನಿಯ ಬಗ್ಗೆ ತಾಯಿಯನ್ನು ಕೇಳಿದರೂ ಸರಿಯಾದ ಉತ್ತರ ದೊರೆಯುವುದಿಲ್ಲವೆಂದು ಅವನಿಗೆ ಗೊತ್ತಿತ್ತು. ಆದ್ದರಿಂದ ಅವನು ತಾಯಿಗೆ ಈ ಬಗ್ಗೆ ಫೋನ್ ಮಾಡಲಿಲ್ಲ. ಮನಸ್ಸಿನ ತುಂಬಾ ಪದ್ಮಿನಿಯೇ ತುಂಬಿದ್ದುದರಿಂದ ಅವನಿಗೆ ಕೆಲಸ ಮಾಡಲಾಗುತ್ತಿರಲಿಲ್ಲ. ಒಮ್ಮೆ ಊರಿಗೆ ಹೋಗಿ ಬಂದರೆ ಒಳ್ಳೆಯದೆನಿಸಿತು.

## ೬

ಅನಿರೀಕ್ಷಿತವಾಗಿ ಬಂದ ಮಗನನ್ನು ಗಾಯಿತ್ರಿದೇವಿ ಆಶ್ಚರ್ಯದಿಂದ ಸ್ವಾಗತಿಸಿದರು.

"ಇದೇನೋ ಹೀಗೆ ಧಿಡೀರ್ ಪ್ರತ್ಯಕ್ಷನಾಗ್ತಿದ್ದೀಯ ?"

"ಬರಬೇಕು ಅನ್ನಿಸ್ತು ಬಂದೆ."

"ಒಳ್ಳೆಯದಾಯ್ತು, ನನಗೂ ನಿನ್ನನ್ನು ಯಾವಾಗ ನೋಡ್ತೀನೋ ಅನ್ನಿಸ್ತಿತ್ತು."

ಮರುದಿನ ಬೆಳಗ್ಗೆ ಅವನು ಕಿಟಕಿಯ ತೆರೆ ಸರಿಸಿ ಪದ್ಮಿನಿಯ ಮನೆ ಕಡೆ ಇಣುಕಿದ. ಲಂಗ–ದಾವಣಿ ಧರಿಸಿದ್ದ 17–18 ವರ್ಷದ ಕಪ್ಪು ಹುಡುಗಿ

ಯೊಬ್ಬಳು ಬಾಗಿಲಿಗೆ ನೀರು ಹಾಡುತ್ತಿದ್ದಳು. ಅವನು ಕೆಳಗೆ ಇಳಿದು ಬಂದು ತಾಯಿಯನ್ನು ಕೇಳಿದ "ಅಮ್ಮ, ಪದ್ಮಿನಿ ಮನೆಯವರು ಎಲ್ಲಿ ?"

"ಅದೊಂದು ದೊಡ್ಡ ಕಥೆ. ಆಮೇಲೆ ಹೇಳ್ತೀನಿ. ಮೊದಲು ಸ್ನಾನ ಮಾಡಿ ಬಾ."

"ಮೊದಲು ಹೇಳಮ್ಮ"

"ನೀನು ಮೊದಲು ಸ್ನಾನಮಾಡಿ ತಿಂಡಿ ತಿನ್ನು ಆಮೇಲೆ, ಹೇಳ್ತೀನಿ."

ಅವನು ವಾದಮಾಡದೆ ಸ್ನಾನ ಮುಗಿಸಿದ ತಿಂಡಿ ತಿಂದ ನಂತರ ಪುನಃ ಪ್ರಶ್ನಿಸಿದ. "ಅಮ್ಮಾ, ಪದ್ಮಿನಿ ಮನೆಯವರ ಸಮಾಚಾರವೇನು?"

"ನಿನಗೆ ಆ ವಿಷಯ ತಿಳಿದರೆ ಬೇಸರವಾಗತ್ತೇಂತ ನಾನು ಏನೂ ತಿಳಿಸಲಿಲ್ಲ. ಪದ್ಮಿನಿ ಮನೆಯವರು ಈ ಮನೆ ಬಿಟ್ಟು ಒಂದು ತಿಂಗಳಾಯ್ತು."

"ಅವರು ಯಾಕೆ ಮನೆ ಬಿಟ್ರು ?"

"ಅದೊಂದು ದೊಡ್ಡ ಕಥೆಯಂತ ಆಗಲೇ ಹೇಳಿದೆನಲ್ಲಾ ? ಪದ್ಮಿನಿಯ ಜೊತೆ ಹೆಚ್ಚು ಸಲಿಗೆ ಬೇಡಾಂತ ಹೇಳಿದ್ರೆ ನೀನು ನನ್ನ ಮಾತು ಕೇಳ್ತಿರಲಿಲ್ಲ. ಒಂದು ದಿನ ಏನಾಯ್ತು ಗೊತ್ತಾ ? ಶಾಸ್ತ್ರಿಗಳು ಬಂದು ನೇರವಾಗಿ ನನ್ನನ್ನು ಕೇಳಿದರು.

'ಯಾವಾಗ ಮದುವೆ ಇಟ್ಟುಕೊಳ್ಳೋಣಾಂತ ?'

"ಶಾಸ್ತ್ರಿಗಳು ಕೇಳಿದ್ರಾ ?"

"ಹೌದಪ್ಪ, ನಾನಾಗ 'ಪ್ರಮೋದ ಬರಲಿ' ಅಂತ ಹೇಳಿಬಿಟ್ಟೆ. ಅವತ್ತು ಸುಮ್ಮನಿದ್ದವರು ನಾಲ್ಕು ದಿನ ಬಿಟ್ಟು ಬಿಟ್ಟು ಬಂದು,

'ತಡಮಾಡುವಂತಿಲ್ಲಮ್ಮ, ಹುಡುಗರು ತುಂಬಾ ಮುಂದುವರೆದಿದ್ದಾರೆ' ಪದ್ಮಿನಿಗೀಗ ಮೂರು ತಿಂಗಳೂಂತ ಹೇಳಿದ್ರು."

"ಅಮ್ಮಾ...."

"ನೀನು ಆ ರೀತಿ ಕೆಲಸ ಮಾಡುವವನಲ್ಲಾಂತ ನನಗೆ ಗೊತ್ತಪ್ಪ. ಆದ್ದರಿಂದ ನಾನು ಸಿಕ್ಕಾಪಟ್ಟೆ ಬೈದೆ."

"ಪದ್ಮಿನಿ ಏನಂದಳಮ್ಮಾ ?"

"ನಾನು ಅವಳನ್ನು ಮಾತಾಡಿಸುವುದಕ್ಕೇ ಹೋಗಲಿಲ್ಲ ನಂಬಿಕೆ ದ್ರೋಹ ಮಾಡಿದ ಚಂಡಾಲಿ ಅವಳು. ಮನೆ ಮಗಳಿಗಿಂತ ಹೆಚ್ಚಾಗಿ ನೋಡಿ ಕೊಂಡಿದ್ದಕ್ಕೆ ಒಳ್ಳೆಯ ಉಡುಗೊರೆ ಕೊಟ್ಟಳು."

"ಅಮ್ಮ ನನಗ್ಯಾಕೋ ನಂಬಕ್ಕೇ ಆಗ್ತಿಲ್ಲ."

"ನಾನು ಏನು ಹೇಳಿದ್ರೂ ಸುಳ್ಳೂಂತ ಆಗುತ್ತೆ. ಭಟ್ಟರಿಗೂ ಈ ವಿಚಾರ ಗೊತ್ತು. ಬೇಕಾದ್ರೆ ಅವರನ್ನೇ ಕೇಳು. ಭಟ್ರೆ ಬನ್ನಿ ಇಲ್ಲಿ."

ಭಟ್ರು ಸೌಟು ಹಿಡಿದು ಪ್ರತ್ಯಕ್ಷರಾದರು.

"ಭಟ್ರೆ, ಪದ್ಮಿನಿ ಮನೆ ವಿಚಾರ ಹೇಳಿದ್ರೆ ಇವನು ಸುಳ್ಳು ಅಂತಿದ್ದಾನೆ. ನೀವಾದ್ರೂ ಹೇಳೀಪ್ಪ...."

"ರಾಯರೇ, ಅಮ್ಮಾವ್ರು ಹೇಳಿದ್ದೆಲ್ಲಾ ನಿಜ. ಶಾಸ್ತ್ರಿಗಳು ಹೆಣ್ಣು ಮಕ್ಕಳಿಗೆ ಅತಿ ಸಲಿಗೆ ಕೊಟ್ಟಿದ್ರು. ಅದರ ಪರಿಣಾಮವೇ ಇದು."

"ಆಯ್ತು, ನೀವು ಒಳಗೆ ಹೋಗಿ" ಎಂದ ಪ್ರಮೋದ್. ಅವರು ಒಳಗೆ ಹೋದಮೇಲೆ ತಾಯಿಯತ್ತ ತಿರುಗಿ ಹೇಳಿದ.

"ಏನಾದ್ರಾಗಲಿ ನೀನು ನನಗೆ ತಕ್ಷಣ ವಿಷಯ ತಿಳಿಸಬೇಕಿತ್ತಮ್ಮ."

"ಯಾಕೆ?"

"ನಾನು ತಕ್ಷಣ ಬರ್ತಿದ್ದೆ."

"ನೀನು ಬಂದು ಏನ್ಮಾಡ್ತಿದ್ದೆ?"

"ಅಮ್ಮ ಪದ್ಮಿನಿ ಬಗ್ಗೆ ನಿನಗೆ ನಂಬಿಕೆ ಇಲ್ಲದಿದ್ರೂ ನನಗಿದೆ ಅವಳಿಂದ ಖಂಡಿತಾ ಯಾವ ತಪ್ಪೂ ನಡೆದಿರಲಾರದು."

"ನಿನಗೆ ಇನ್ಯಾವ ರೀತಿ ಹೇಳಬೇಕೊ ನನಗರ್ಥವಾಗ್ತಿಲ್ಲ."

"ಹೋಗಲಿ, ಅವರು ಎಲ್ಲಿಗೆ ಹೋದ್ರು, ಅದನ್ನಾದರೂ ಹೇಳು."

"ಯಾರಿಗೆ ಗೊತ್ತು. ಇಲ್ಲಿರಕ್ಕೆ ಅವರಿಗೆ ಮುಖವೆಲ್ಲಿತ್ತು? ಮನೆ ಬೀಗದ ಕೈ ಭಟ್ಟರ ಕೈಗಿತ್ತು 'ಹೊರಟುಹೋದರಂತೆ' ಭಟ್ಟರು ಎಲ್ಲಿಗೆ ಹೋಗ್ತೀರಾಂತ ಕೇಳಿದ್ದಕ್ಕೆ ಉತ್ತರವನ್ನೇ ಕೊಡಲಿಲ್ಲವಂತೆ."

"ಅಮ್ಮ ಅವರು ಖಂಡಿತಾ ನಿಮಗೆ ಹೇಳಿ ಹೋಗಲಿಲ್ವಾ?"

"ಇಲ್ಲಪ್ಪ, ಹೇಳಿದ್ದಿದ್ದರೆ ನಾನು ಯಾವುದಾದ್ರೂ ರೀತಿಯಲ್ಲಿ ಸಹಾಯ ಮಾಡ್ತಿದ್ದೆ."

ಅವನು ನಿಟ್ಟುಸಿರು ಬಿಟ್ಟ. ಯಾವುದೇ ರೀತಿಯಲ್ಲಿ ಯೋಚಿಸಿದರೂ, ಅವನಿಗೆ ತಾಯಿಯ ಮಾತಿನಲ್ಲಿ ನಂಬಿಕೆಯೇ ಬರಲಿಲ್ಲ. ಅವನ ಮನಸ್ಸು ಮಾತ್ರ ಯಾವಾಗಲೂ ಅವಳ ಬಗ್ಗೆಯೇ ಯೋಚಿಸುತ್ತಿತ್ತು.

'ಪದ್ಮಿನಿಯನ್ನು ನಾನು ಸರಿಯಾಗಿ ಅರ್ಥಮಾಡಿಕೊಂಡಿರಲಿಲ್ಲವೆ? ಚಿಕ್ಕಂದಿನಿಂದ ಒಟ್ಟಿಗೆ ಬೆಳೆದ ನನ್ನ ಜೊತೆಯೇ ಅವಳು ಸರಿಯಾದ ಎಲ್ಲೆ ದಾಟಿ ನಡೆಯುತ್ತಿರಲಿಲ್ಲ. ಅಂತಹವಳು ಬೇರೆಯವರ ಜೊತೆ ಅದೂ ಮದುವೆ ಯಾಗದಿರುವಾಗ ಅನುಚಿತವಾಗಿ ನಡೆದುಕೊಳ್ಳುತ್ತಾಳೆಯೇ? ಅಥವಾ ಅವಳೇನಾದರೂ ಯಾರಿಂದಾದರೂ ಅತ್ಯಾಚಾರಕ್ಕೆ ಗುರಿಯಾಗಿರಬಹುದೆ? ಹಾಗೆ ಗುರಿಯಾಗಿದ್ದರೂ ಸುಳ್ಳು ಅಪವಾದ ಖಂಡಿತಾ ನನ್ನ ಮೇಲೆ ಹೊರಿಸು ತ್ತಿರಲಿಲ್ಲ. ಇದರಲ್ಲಿ ಸತ್ಯಾಂಶ ಎಷ್ಟು?' ಅವನು ಚಿಂತಿಸಿ ಉತ್ತರ ಕಾಣದೆ ತೊಳಲಾಡಿದ.

ಅವನು ಪುನಃ ಬಾಂಬೆಗೆ ಹೋಗುವ ವಿಚಾರವನ್ನೇ ಎತ್ತಲಿಲ್ಲ. ಗಾಯಿತ್ರಿ ದೇವಿಯೂ ಒತ್ತಾಯ ಮಾಡಲಿಲ್ಲ, ಪದ್ಮಿನಿ ಇಲ್ಲದ ಬೆಂಗಳೂರು ಅವನಿಗೆ ಬೇಸರ ತಂದಿತು. ಅಶೋಕ ಈಗ ಹಾಸನದಲ್ಲಿದ್ದ. ಮುರುಳಿ ಚಿತ್ರದುರ್ಗ ದಲ್ಲಿದ್ದ. ಸರಿಯಾದ ಸ್ನೇಹಿತರೂ ಇಲ್ಲದಿದ್ದುದರಿಂದ ಅವನ ಬೇಸರ ನೂರ್ಮಡಿ ಯಾಯಿತು. ಅವನು 'ಬೇಜಾರು' ಎಂದು ಗೊಣಗಾಡುವುದನ್ನು ಕೇಳಲಾರದೆ ಗಾಯಿತ್ರಿದೇವಿ ಹೇಳಿದರು. "ಇಷ್ಟು ದಿನ ಓದು ಕಾಲೇಜೂಂತ ಇದ್ದಿದ್ದಾಯ್ತು. ಇನ್ಮೇಲಾದ್ರೂ ಆಫೀಸ್‌ಗೆ ಹೋಗಿ ಭಗವಾನ್‌ಗೆ ಸಹಾಯಮಾಡು. ಅವನ ಕೆಲಸದ ಹೊರೆ ಕಡಿಮೆಯಾಗುತ್ತೆ."

ಒಲ್ಲದ ಮನಸ್ಸಿನಿಂದಲೇ ಅವನು ಮರುದಿನದಿಂದ ಆಫೀಸ್‌ಗೆ ಹೊರಟ. ಹದಿನೈದು ದಿನ ಕಳೆಯುವಷ್ಟರಲ್ಲಿ ಅವನಿಗೆ ಕೆಲಸದಲ್ಲಿ ಆಸಕ್ತಿ ಮೂಡಿತು. ಚಿಕ್ಕಯಜಮಾನ್ರು ಆಡಳಿತ ವಹಿಸಿಕೊಂಡ ಮೇಲೆ ಕೆಲಸಗಾರರೂ ಚುರು ಕಾದರು. ಬೆಳಗ್ಗೆ 9 ಗಂಟೆಗೆ ತಿಂಡಿ ತಿಂದುಕೊಂಡು ಹೊರಟರೆ ಸಾಯಂಕಾಲ 6½–7 ಗಂಟೆಗೆ ವಾಪಸ್ಸಾಗುತ್ತಿದ್ದ. ಮಗ ಕೆಲಸದಲ್ಲಿ ತನ್ನನ್ನು ಸಂಪೂರ್ಣ ವಾಗಿ ತೊಡಗಿಸಿಕೊಂಡಾಗ ಗಾಯಿತ್ರಿದೇವಿಗೆ ಸಮಾಧಾನವಾಯ್ತು.

ಎರಡು ತಿಂಗಳು ಕಳೆದವು. ಪದ್ಮಿನಿಯ ಬಗ್ಗೆ ಯಾವ ವಿಷಯವೂ ತಿಳಿಯದೆ ಪ್ರಮೋದ್ ತುಂಬಾ ವ್ಯಾಕುಲಗೊಂಡಿದ್ದ. ಈ ಮಧ್ಯೆ ಗಾಯಿತ್ರಿದೇವಿ

ಮಗನ ಮದುವೆ ಬಗ್ಗೆ ಆಸಕ್ತಿ ವಹಿಸಿದರು. ಒಂದು ರಾತ್ರಿ ಊಟ ಮಾಡು ತ್ತಿದ್ದಾಗ ಮಗನಿಗೆ ಹೇಳಿದರು.

"ಪ್ರಮೋದ್, ನಿನ್ನ ಓದು ಮುಗಿಯಿತು. ಕೆಲಸದ ಜವಾಬ್ದಾರಿಯನ್ನೂ ತೆಗೆದುಕೊಂಡಾಯ್ತು. ಇನ್ನು ಮೇಲಾದರೂ ಮದುವೆ ಬಗ್ಗೆ ಯೋಚಿಸು."

'ನನಗೀಗಾಗಲೆ ಪದ್ಮಿನಿಯ ಜೊತೆ ಮಾನಸಿಕವಾಗಿ ಮದುವೆ ಯಾಗಿದೆಯಮ್ಮ' ಎನ್ನಲು ಅವನು ಬಯಸಿದ. ಆದರೆ ಅದರಿಂದ ಪ್ರಯೋಜನ ವಿಲ್ಲವೆನ್ನಿಸಿತು. ಆದ್ದರಿಂದ ಹೇಳಿದ.

"ಅಮ್ಮ ನನಗೀಗಲೆ ಮದುವೆಯಾಗಕ್ಕೆ ಇಷ್ಟವಿಲ್ಲ."

"ಇನ್ಯಾವಾಗ ಮದುವೆಯಾಗ್ತೀಯಾ ?"

"ಅಮ್ಮ ಪದ್ಮಿನಿ ಆಗುವವರೆಗೂ ನಾನು ಮದುವೆಯಾಗಲ್ಲ."

"ಏನೋ ಹಾಗಂದ್ರೆ ?"

"ಅವಳೇನಾದ್ರೂ ಈಗಾಗಲೇ ಮದುವೆಯಾಗಿದ್ರೆ ನಾನು ಬೇರೆ ಹುಡುಗಿ ಬಗ್ಗೆ ಯೋಚಿಸ್ತೇನೆ. ಮೊದಲು ನಾನವಳನ್ನು ನೋಡಬೇಕು."

"ನಿನ್ನದೆಂತಹ ಹುಚ್ಚು ಪ್ರಮೋದ್ ? ನೀತಿಗೆಟ್ಟವಳ ಬಗ್ಗೆ ನಿನಗ್ಯಾಕೆ ಇಷ್ಟೊಂದು ಅಭಿಮಾನ ? ನೀನವಳನ್ನು ಮರೆತು ನಾನು ನೋಡಿದ ಹುಡುಗಿ ಯನ್ನು ಮದುವೆಯಾಗು."

"ಅದು ಈ ಜನ್ಮದಲ್ಲಿ ಸಾಧ್ಯವಿಲ್ಲ."

"ಯಾಕೆ ಸಾಧ್ಯವಿಲ್ಲ ? ರಾವ್‌ಬಹಾದ್ದೂರ್ ವಂಶಕ್ಕೆ ಸೇರಿರುವ ರಾಜಾರಾವ್ ಮಗಳು ರಂಜನಿ ತುಂಬಾ ಮುದ್ದಾಗಿದ್ದಾಳೆ. ಬಿ.ಎಸ್‌ಸಿ. ಮಾಡಿದ್ದಾಳೆ. ನಿಮ್ಮಿಬ್ಬರ ಜಾತಕ ತುಂಬಾ ಚೆನ್ನಾಗಿ ಹೊಂದುತ್ತದೆ. ಅವಳನ್ನು ಒಂದು ಸಲ ನೋಡು."

ಆದರೆ ಪ್ರಮೋದ್ ಒಪ್ಪಲಿಲ್ಲ. ಇದೇ ಸಂದರ್ಭದಲ್ಲಿ ಒಂದು ರಾತ್ರಿ ಸರ್ವೋತ್ತಮ್ ಫೋನ್ ಮಾಡಿದ.

"ಪ್ರಮೋದ್ ಅದಿತಿ ಮದುವೆ ನಿಶ್ಚಯವಾಗಿದೆ. ಅವಳು ತುಂಬಾ ಹೆದರಿದ್ದಾಳೆ. ಅವಳಿಗೆ ಈ ಮದುವೆ ಕೊಂಚಾನೂ ಇಷ್ಟವಿಲ್ಲ. ನೀನು ನನಗೆ ಕೆಲಸ ಕೊಡ್ತೀನೀಂತ ಭರವಸೆ ಕೊಟ್ರೆ ಅದಿತಿ ಜೊತೆ ಬಂದುಬಿಡ್ತೇನೆ."

"ಅದನ್ನೂ ಕೇಳಬೇಕೇನೋ ? ನಿಶ್ಚಿಂತೆಯಿಂದ ಹೊರಟು ಬಾ."

"ನಿಮ್ಮಮ್ಮ ಚೆನ್ನಾಗಿದ್ದಾರಾ?"
"ಆ ಚಿಂತೆ ನಿನಗೆ ಬೇಡ. ನಿಮ್ಮಮ್ಮ ಏನು ಹೇಳಿದ್ರು?"
"ಅದಿತಿ ಕೈ ಬಿಡಬೇಡ. ಅವಳನ್ನು ಎಲ್ಲಿಗಾದರೂ ಕರ್ಕೊಂಡು ಹೋಗು" ಅಂತಿದ್ದಾರೆ.
"ಅಮ್ಮನ ಆಶೀರ್ವಾದ ಇರುವಾಗ ಎಲ್ಲಾ ಒಳ್ಳೆಯದಾಗತ್ತೆ. ಬೇಗ ಬಂದುಬಿಡು. ನಾನೆಲ್ಲಾ ಏರ್ಪಾಡು ಮಾಡ್ತೇನೆ."
ಅವನು ಫೋನ್ ಕೆಳಗಿಟ್ಟಾಗ ಗಾಯಿತ್ರಿದೇವಿ ಅನುಮಾನದಿಂದ ಕೇಳಿದರು. "ಯಾರದೋ ಫೋನ್?"
"ಸರ್ವೋತ್ತಮಂದು."
"ಏನಂತೆ ವಿಷಯ?"
"ಈಗಲೇ ನಿನಗೆ ಹೇಳಲ್ಲ. ನಾಲ್ಕೈದು ದಿನಗಳಲ್ಲಿ ನಿನಗೇ ಗೊತ್ತಾಗುತ್ತದೆ."
"ಇದೇನು ನಿನ್ನ ಮಾತು ಪ್ರಮೋದ್? ನಿನ್ನ ಮಾತು ಕಥೆ ಕೇಳ್ತಿದ್ರೆ ನೀವಿಬ್ರೂ ಸೇರಿಕೊಂಡು ಏನೋ ಮಾಡ್ತಿದ್ದೀರ ಅನ್ನಿಸ್ತಿದೆ."
"ನಿನ್ನ ಸಹಾಯವಿಲ್ಲದೆ ನಾವೇನೂ ಮಾಡಕ್ಕಾಗಲ್ಲಮ್ಮ. ಕೊಂಚ ತಾಳ್ಮೆಯಿಂದಿರು."
"ನೀನು ಸರ್ವೋತ್ತಮನಿಗೆ ಹಣಕಾಸಿನ ಸಹಾಯ ಮಾಡ್ತಿದ್ದೀಯೇನೋ?"
"ನಿನ್ನ ಯಾವ ಪ್ರಶ್ನೆಗಳಿಗೂ ನನ್ನಿಂದ ಉತ್ತರ ಸಿಗಲ್ಲ."
"ನಾನು ಬಾಂಬೆಗೆ ಫೋನ್ ಮಾಡ್ತೀನಿ."
"ಧಾರಾಳವಾಗಿ ಮಾಡು" ಎಂದ ಪ್ರಮೋದ್ ನಿರ್ವಿಕಾರವಾಗಿ ಏನು ಫೋನ್ ಮಾಡಬೇಕೆಂದು ತಿಳಿಯದೆ ಗಾಯಿತ್ರಿದೇವಿ ಸುಮ್ಮನಾದರು.
ಸರ್ವೋತ್ತಮ್ ಫೋನ್ ಮಾಡಿ ಎರಡು ದಿನಗಳಾಗಿದ್ದವು. ಒಂದು ಬೆಳಗ್ಗೆ ಪ್ರಮೋದ್ ಏಳುವ ವೇಳೆಗೆ ಸರ್ವೋತ್ತಮ್ ಅದಿತಿಯ ಜೊತೆ ಹಾಜರಾದ, ಗಾಯಿತ್ರಿದೇವಿ ಅವರನ್ನು ನೋಡಿ ಹುಬ್ಬು ಗಂಟಿಕ್ಕಿದರು. ಅವರಿಬ್ಬರೂ ಸ್ನಾನ ಮುಗಿಸಿ ತಿಂಡಿ ತಿಂದು ರೆಸ್ಟ್ ತೆಗೆದುಕೊಳ್ಳಲು ಹೋದಾಗ ಪ್ರಮೋದ್ ತಾಯಿಗೆ ಅವರ ವಿಚಾರ ಹೇಳಿದ.

"ಅಮ್ಮ ಆದಿತಿ ಕೋಟ್ಯಾಧೀಶ್ವರನ ಮಗಳು. ಅವಳು, ಸರ್ವೋತ್ತಮ್ ಒಬ್ಬರನ್ನೊಬ್ಬರು ಪ್ರೀತಿಸಿದ್ದಾರೆ. ಅವರಿಬ್ಬರು ಅಮ್ಮಂದಿರಿಗೆ ಈ ಮದುವೆ ಒಪ್ಪಿಗೆಯಿದೆ ಆದರೆ ಅಪ್ಪಂದಿರಿಗೆ ಈ ಮದುವೆ ಒಪ್ಪಿಗೆಯಿಲ್ಲ."

"ಅದಕ್ಕೇನು ಮಾಡಬೇಕು ?"

"ನಾವು ಅವರಿಬ್ಬರ ಮದುವೆ ಇಲ್ಲಿ ಮಾಡಿಸಬೇಕು."

"ಅದು ಸಾಧ್ಯವಿಲ್ಲ"

"ಯಾಕೆ ಸಾಧ್ಯವಿಲ್ಲ ?"

"ಹಿರಿಯರ ಒಪ್ಪಿಗೆ ಇಲ್ಲದೆ ನಡೆಯುವ ಮದುವೆಗಳು ಎಂದೂ ಊರ್ಜಿತವಾಗಲ್ಲ."

"ಅದನ್ನು ನಾನು ಒಪ್ಪಲ್ಲ.... ಮದುವೆಯಾಗುವವರು ಅವರು ಒಬ್ಬರನ್ನೊಬ್ಬರು ಮೆಚ್ಚಿದ್ದಾರೆ. ಅವರನ್ನು ಒಂದುಗೂಡಿಸುವುದು ನಮ್ಮ ಕರ್ತವ್ಯ."

"ಅವಳನ್ನು ಕಟ್ಕೊಂಡು ಇಲ್ಲಿಗೆ ಬಂದು ಏನ್ಮಾಡ್ತಾನಂತೆ ? ಕೆಲಸವಿಲ್ಲದೆ ಈ ಊರಲ್ಲಿ ಹೇಗೆ ಜೀವ ಸಾಗಿಸ್ತಾರಂತೆ ?"

"ಅವನ್ಯಾಕೆ ಕೆಲಸವಿಲ್ಲದೆ ಇರ್‍ತಾನೆ ? ನಮ್ಮ ಆಫೀಸ್‌ನಲ್ಲೇ ಅವನಿಗೆ ಸೊಗಸಾದ ಕೆಲಸ ಕೊಡ್ತೇನೆ."

ಪ್ರಮೋದ್ ನಾನಿನ್ನೂ ಬದುಕಿದ್ದೀನಿ ಅನ್ನುವುದನ್ನು ಮರೆತು ಬಿಟ್ಟೆಯಾ ? ನಾನು ನಿನ್ನ ಕೆಲಸಕ್ಕೆ ಸಪೋರ್ಟ್ ಮಾಡಲ್ಲ. ಈ ದಿನವೇ ಸರ್ವೋತ್ತಮನ ತಂದೆಗೆ ಫೋನ್ ಮಾಡ್ತೀನಿ."

"ಅಮ್ಮ ನೀನೇನಾದ್ರೂ ಹಾಗೆ ಮಾಡಿದರೆ ನಾನು ಸುಮ್ಮನಿರಲ್ಲ. ಈ ಮನೇಲ್ಲಿ ನನಗಷ್ಟು ಸ್ವಾತಂತ್ರ್ಯವಿಲ್ಲದಿದ್ದ ಮೇಲೆ ನಾನ್ಯಾಕೆ ಇಲ್ಲಿರಬೇಕು ? ನನಾ ಮನೆಬಿಟ್ಟು ಹೋಗ್ತೀನಿ."

"ಪ್ರಮೋದ್...."

"ಅಮ್ಮ ಇದು ನಿಮ್ಮ ಕಾಲವಲ್ಲ ಮದುವೆ ವಿಚಾರದಲ್ಲಿ ಯುವಕ ಯುವತಿಯರು ಸ್ವಾತಂತ್ರ್ಯ ಬಯಸ್ತಾರೆ. ನಿಮ್ಮಂತಹವರು ಅದಕ್ಕೆ ಒತ್ತಾಸೆ ಕೊಡಬೇಕು. ಹಿರಿಯರ ನಡುವಿನ ಶೀತಲಯುದ್ಧಕ್ಕೆ ಇವರಿಬ್ಬರ ಜೀವನ ಬಲಿಯಾಗಬೇಕಾ ? ನಾನು ಸರ್ವೋತ್ತಮ್‌ಗೆ ಕೆಲಸ ಕೊಡುವುದರಿಂದ

ನಮಗೆ ಲಾಭ. ಅವನಂತಹ ಒಳ್ಳೆಯ ಕೆಲಸಗಾರ ಸಿಗುವುದಕ್ಕೆ ನಾವು ಪುಣ್ಯಮಾಡಿರಬೇಕು. ನಿನಗಿಷ್ಟವಿಲ್ಲದಿದ್ರೆ ಹೇಳು, ನಾನೂ ನನ್ನ ಸ್ನೇಹಿತರು ಸೇರಿ ಯಾವುದಾದ್ರೂ ದೇವಸ್ಥಾನದಲ್ಲಿ ಮದುವೆ ನೆರವೇರಿಸ್ತೀವೆ. ಅವನಿಗೆ ಬೇರೆ ಕಡೆ ಕೆಲಸ ಕೊಡಿಸಿ, ನಾನೂ ಒಂದು ಕೆಲಸ ನೋಡಿಕೊಳ್ತೀನೆ."

ಅವನ ಮಾತು ಕೇಳಿ ಗಾಯಿತ್ರಿದೇವಿ ಕೊಂಚ ತಣ್ಣಗಾದಂತೆ ತೋರಿತು. ಪ್ರಮೋದ್ ಅವರು ಮೆದುವಾಗಿರುವುದನ್ನು ನೋಡಿ ಹೇಳಿದ "ಅಮ್ಮಾ, ನಾನು ಅವರಿಬ್ಬರ ಮದುವೇನ್ನ ಧರ್ಮಸ್ಥಳದಲ್ಲಿ ಏರ್ಪಾಡು ಮಾಡೋಣ ಅಂದ್ಕೊಂಡಿದ್ದೀನೆ."

"ಬೇಡಪ್ಪ.... ನಮ್ಮ ಮನೆಯಲ್ಲೇ ಮಾಡೋಣ. ನಮ್ಮ ಗುರುತಿ ನವರನ್ನೇ ಕರೆಯೋಣ. ಹಿರಿಯಳು ನಾನಿರುವಾಗ ನೀವು ನೀವೇ ಮದುವೆ ಮಾಡಿಸೋದು ಚೆನ್ನಾಗಿರಲ್ಲ. ನಾನೇ ನಿಂತು ಎಲ್ಲಾ ಮಾಡ್ತೀನಿ."

ಪ್ರಮೋದ್ ತಾಯಿಯ ನಿರ್ಧಾರ ಕೇಳಿ ತುಂಬಾ ಸಂತೋಷವಾಯ್ತು. ಸರ್ವೋತ್ತಮ್ ಹೃದಯ ತುಂಬಿ ಬಂದು ಹೇಳಿದ. "ಅಮ್ಮಾ ನಾನು ಯಾವ ಜನ್ಮದಲ್ಲಿ ನಿಮ್ಮ ಮಗನಾಗಿದ್ದೆನೋ ಏನೋ ? ಈ ಜನ್ಮದಲ್ಲಿ ಕೂಡ ಮಗನಂತೆ ನನ್ನನ್ನು ನೋಡಿಕೊಂಡು ಉಪಕಾರ ಮಾಡ್ತಿದ್ದೀರಿ."

"ಛೆ ಛೆ ಇದೆಲ್ಲಾ ಉಪಕಾರವಾ ? ನೀನು ಏನೇನೋ ಮಾತಾಡಬೇಡ." ಎಂದರು ಗಾಯಿತ್ರಿದೇವಿ.

ಗಾಯಿತ್ರಿದೇವಿ ತಮ್ಮ ಹೆಸರಿನಲ್ಲೇ ಲಗ್ನಪತ್ರಿಕೆ ಮುದ್ರಿಸಿದರು.

ಮದುವೆಗೆ ಎರಡು ದಿನಗಳಿದ್ದವು. ಒಂದು ರಾತ್ರಿ ಪ್ರಮೋದ್‌ಗೆ ಎಚ್ಚರವಾದಾಗ ಗಾಯಿತ್ರಿದೇವಿ ಯಾರ ಜೊತೆಯಲ್ಲೋ ಫೋನ್‌ನಲ್ಲಿ ಮಾತಾಡುತ್ತಿರುವುದು ಕೇಳಿಸಿತು.

"ನೀವು ನಾಳೆ ಬೆಳಗ್ಗೆ ಹೊರಟರೂ ನಾಳೆ ಸಾಯಂಕಾಲದ ಹೊತ್ತಿಗೆ ಇಲ್ಲಿಗೆ ಬರ್ತೀರ. ಮದುವೆ ಏರ್ಪಾಡಾಗಿರೋದು ನಾಡಿದ್ದಿಗೆ. ನಾನು ನಾಲ್ಕು ದಿನಗಳಿಂದ ಫೋನ್ ಮಾಡಿ ಸಾಕದೆ.... "

ಪ್ರಮೋದ್ ತನ್ನ ಕೋಣೆಯಲ್ಲೇ ಫೋನ್ ತೆಗೆದುಕೊಂಡು ಆಲಿಸಿದ.

"ಯಾರೋ ಸರ್ವೋತ್ತಮ್ ಅದಿತಿ ಮದ್ರಾಸ್‌ಗೆ ಹೋದ್ರು ಅಂತ ಹೇಳಿದ್ರು. ನಾವಿಬ್ರೂ ಅಲ್ಲಿಗೆ ಹೋಗಿದ್ದೆವು. ನಿನ್ನಿಂದ ತುಂಬಾ

ಉಪಕಾರವಾಯ್ತು. ನಾವು ಈಗಲೇ ಕಾರಿನಲ್ಲಿ ಹೊರಡುತ್ತೇವೆ' ಎಂದರು ಪುರುಷೋತ್ತಮ್.

"ನೀವು ಬಂದ್ರೆ ಈ ಮದುವೆ ಖಂಡಿತಾ ನಡೆಯಲ್ಲ. ನಾನು ಒಪ್ಪಿರುವ ಹಾಗೆ ನಾಟಕ ಆಡ್ತಿದ್ದೇನೆ. ಯಾರಿಗೂ ನನ್ನ ಮೇಲೆ ಅನುಮಾನ ಬಂದಿಲ್ಲ. ನೀವು ಬೇಗ ಹೊರಡಿ."

ಅವರ ಸಂಭಾಷಣೆ ಕೇಳಿ ಪ್ರಮೋದ್ ಮೈ ಉರಿಯಿತು. ತನ್ನ ತಾಯಿ ಈ ರೀತಿ ನಂಬಿಕೆ ದ್ರೋಹ ಮಾಡುತ್ತಾಳೆಂದು ಅವನು ಭಾವಿಸಿರಲಿಲ್ಲ. ಈ ವಿಚಾರ ಸರ್ವೋತ್ತಮ್‌ಗೆ ಹೇಳುವುದೋ ಬೇಡವೋ ಎಂಬ ಯೋಚನೆ ಯಾಯಿತು. ಹೇಳದೆ ಇದ್ದರೆ ವಿಧಿಯೇ ಇರಲಿಲ್ಲ. ಅವನು ಸರ್ವೋತ್ತಮನನ್ನು ಎಬ್ಬಿಸಿದ.

"ಏನು ವಿಷಯ ಪ್ರಮೋದ್ ?"

"ನಮ್ಮಮ್ಮ ನಿಮ್ತಂದೆ ಫೋನ್‌ಮಾಡಿ ಕರೆಸಿದ್ದಾರೆ. ಏನೇ ಆಗಲಿ ಈ ಮದುವೆ ನಡೆಯಬಾರದೂಂತ ನಿಮ್ತಂದೆ ಫೋನ್‌ನಲ್ಲಿ ಹೇಳಿದ್ರು."

"ಆಂಟಿ, ಅಪ್ಪಂಗೆ ಫೋನ್ ಮಾಡಿದ್ರಾ ? ಯಾಕೆ ಹಾಗ್ಮಾಡಿದ್ರು ಪ್ರಮೋದ್ ? ನಂಗ್ಯಾಕೋ ನಂಬಕ್ಕೇ ಆಗ್ತಿಲ್ಲ. ಅವರೇ ನಿಂತು ಈ ಮದುವೆ.... "

"ನಮ್ಮಮ್ಮ ಯಾರಿಗೂ ಅರ್ಥವಾಗದ ವ್ಯಕ್ತಿ. ಅವರನ್ನು ಇಷ್ಟು ದಿನಗಳಿಂದ ನೋಡಿದ ನನಗೇ ಅರ್ಥಮಾಡಿಕೊಳ್ಳಕ್ಕಾಗ್ತಿಲ್ಲ, ಪಾಪ, ನಿನಗೆ ಹೇಗೆ ಅರ್ಥವಾಗಬೇಕು ?"

"ಈಗೇನು ಮಾಡೋದು ?"

"ನಾನು ನಾಳೆ ಬೆಳಗ್ಗೆ ಹೋಗಿ ನನ್ನ ಫ್ರೆಂಡ್ ಸೋಮೂನ್ನ ಭೇಟಿಯಾಗಿ ಬರ್ತೀನೆ. ನೀವು ಎಲ್ಲಿಗೂ ಹೋಗದೆ ಮನೆಯಲ್ಲೇ ಇರಿ."

"ಸೋಮು ಯಾರು ?"

"ಅವನು ನನ್ ಪಿ.ಯು.ಸಿ. ಕ್ಲಾಸ್ ಮೇಟ್. ಅವನ ತಂದೆ ಶ್ರೀಕಂಠ ಶಾಸ್ತ್ರಿಗಳು ಪೌರೋಹಿತ್ಯ ಮಾಡ್ತಾರೆ. ಅವರಿಗೆ ಹೇಳಿ ನಾಳೇನೇ ನಿಮ್ಮ ಮದುವೆ ನಡೆಸಿಬಿಡ್ತೀನೆ."

"ನಾಡಿದ್ದಲ್ವಾ ಮದುವೆ. . ?"

"ಆ ದಿನ ಎಲ್ಲರೆದುರಿಗೆ ತಾಳಿ ಕಟ್ಟು. ನಮ್ಮಮ್ಮ ಸೇರಾದರೆ ನಾನು ಸವಾಸೇರು... "

ಸರ್ವೋತ್ತಮ್ ಕೃತಜ್ಞತೆಯಿಂದ ಅವನ ಕೈಹಿಡಿದು ಕಣ್ಣಿಗೆ ಒತ್ತಿ ಕೊಂಡ.

ಮರುದಿನ ಬೆಳಗಾಗುತ್ತಿದ್ದಂತೆ ಪ್ರಮೋದ್ ಹೋಗಿ ಶೀಕಂಠಶಾಸ್ತ್ರಿ ಗಳನ್ನು ಭೇಟಿಮಾಡಿದ. ಅವರು ಮೊದಲು ಒಪ್ಪಲಿಲ್ಲ. ಜಾತಕ ನೋಡ ಬೇಕು. ಆ ಜಾತಕಗಳಿಗೆ ಮುಹೂರ್ತ ಸರಿಹೋಗುತ್ತದೆಯೋ ಇಲ್ವೋ ನೋಡಬೇಕು" ಎಂದು ರಾಗ ಎಳೆದರು.

"ಶಾಸ್ತ್ರಿಗಳೇ ನನಗದೆಲ್ಲಾ ಗೊತ್ತಿಲ್ಲ. ನಾಳೆನೇ ಅವನು ಅವಳ ಕುತ್ತಿಗೆಗೆ ತಾಳಿ ಕಟ್ಟಬೇಕು.,. ಒಳ್ಳೆಯ ಘಳಿಗೆಯಲ್ಲಿ ಅವರು ಸತಿ–ಪತಿಗಳಾಗಬೇಕು. ನಿಮ್ಮ ಕೈಲಿ 5,000 ರೂ. ಕೊಡ್ತೀನಿ. ಹಾರ, ಮಾಂಗಲ್ಯ ನಾನೇ ತರ್ತೀನಿ. ನೀವು ಮದುವೆ ಮಾಡಿಸಿ 20 ಜನಕ್ಕೆ ನಿಮ್ಮ ನೆಯಲ್ಲೇ ಊಟದ ವ್ಯವಸ್ಥೆ ಮಾಡಿಬಿಡಿ."

ಐದು ಸಾವಿರ ರೂಪಾಯಿ ಸಿಗುತ್ತದೆಯೆಂದು ತಿಳಿದೊಡನೆ ಶಾಸ್ತ್ರಿಗಳು ಒಪ್ಪಿದರು... ಅವರಿಗೆ ಹಣ ಕೊಟ್ಟು ಮನೆಗೆ ಬಂದು ಸರ್ವೋತ್ತಮ್‌ಗೆ ವಿಷಯ ಹೇಳಿದ.

"ನೀವಿಬ್ರೂ ಹತ್ತು ಗಂಟೆಯ ಹೊತ್ತಿಗೆ ದೇವಸ್ಥಾನಕ್ಕೆ ಹೋಗಿ ಬರ್ತೀ ವೇಂತ ಹೊರಡಿ. ನಾನು ಮಾಂಗಲ್ಯ ಹಾರ ತರ್ತೀನಿ."

"ಪ್ರಮೋದ್, ನನ್ನಿಂದ ನಿಮಗೆಷ್ಟು ತೊಂದರೆ"

"ತೊಂದರೆಂಯೆನಿಲ್ಲ, ನೀವು ಮುಂದಿನ ಬೀದಿಯಲ್ಲಿರುವ ಶ್ರೀಕೃಷ್ಣನ ದೇವಸ್ಥಾನದಲ್ಲಿರಿ. ನನ್ನ ಸ್ನೇಹಿತ ಆನಂದ್ ಬರ್‍ತಾನೆ. ಅವನ ಜೊತೆ ಶಾಸ್ತ್ರಿಗಳ ಮನೆಗೆ ಬನ್ನಿ."

"ಪ್ರಮೋದ್, ಇವತ್ತಿನ ಸಾಯಂಕಾಲದ ಪತ್ರಿಕೆಯಲ್ಲಿ 'ಮದುವೆ ಮುಂದು ಹೋಗಿದೇಂತ ಹಾಕಿಸಿದ್ರೆ ಹೇಗೆ ? "

"ಅದೂ ಮಾಡಬಹುದು" ಎಂದ ಪ್ರಮೋದ್ ಸರ್ವೋತ್ತಮ್, ಅದಿತಿಗೆ ಎಲ್ಲಾ ವಿಷಯ ಹೇಳಿದ. ಪ್ರಮೋದ್ ತಿಂಡಿ ತಿಂದ. ಸರ್ವೋತ್ತಮ್ ಅದಿತಿ ತಿನ್ನಲಿಲ್ಲ.

"ಇವತ್ತು ಗುರುವಾರ ಮಠಕ್ಕೆ ಹೋಗಿ ಬಂದು ತಿನ್ನುತ್ತೇವೆ" ಎಂದರು.

ಗಾಯಿತ್ರಿದೇವಿ ಕೆಂಪಯ್ಯನಿಗೆ ಹೇಳುತ್ತಿದ್ದುದು ಕಿವಿಗೆ ಬಿತ್ತು. "ಇವತ್ತೇ ಚಪ್ಪರ ಹಾಕಬೇಕು. ನೀನು ಹೋಗಿ ನಿನ್ನಗನ್ನ ಕರ್ಕೊಂಡು ಬಂದು ಚಪ್ಪರ ಹಾಕು."

ಪ್ರಮೋದ್ ಅವನ ಕೈಗೆ 50 ರೂ ಹಾಕಿ ಹೇಳಿದ. "ಹೋಗಿ ಮಜ. ಮಾಡು. ನೀನು ಯಾರನ್ನೂ ಕರೆತರಬೇಡ" ಆ ದಿನ ಭಟ್ಟರಿಗೆ ಹೇಳಿ ಗಾಯಿತ್ರಿದೇವಿ ಸಿಹಿ ಅಡುಗೆ ಮಾಡಿಸುತ್ತಿದ್ದರು. 'ಒಳ್ಳೆಯದೇ ಆಯ್ತು' ಎಂದುಕೊಂಡ ಪ್ರಮೋದ್ ನೂರು ಜನರ ಊಟಕ್ಕೆ ಕಾಂಟ್ರ್ಯಾಕ್ಟ್ ಕೊಡ ಲಾಗಿತ್ತು. ಪ್ರಮೋದ್ ಅವರಿಗೆ ಫೋನ್‌ಮಾಡಿ ಕಾಂಟ್ರ್ಯಾಕ್ಟ್ ರದ್ದು ಮಾಡಿಸಿದ. ಹತ್ತೂವರೆಯ ಹೊತ್ತಿಗೆ ಒಡವೆ ಅಂಗಡಿಗೆ ಹೋಗಿ 40 ಗ್ರಾಂಗಳ ಮಾಂಗಲ್ಯಸರ, ಅದಿತಿಗೊಂದು ಉಂಗುರ, ಸರ್ವೋತ್ತಮ್ ಗೊಂದು ಉಂಗುರ, ಅದಿತಿಗೆ ಕಾಲುಂಗುರ, ರೇಷ್ಮೆ ಸೀರೆ, ರೆಡಿಮೇಡ್ ಬ್ಲೌಸ್, ಸರ್ವೋತ್ತಮ್‌ಗೆ ಒಂದು ಜೊತೆ ಪಂಚೆ ಕೊಂಡುಬಂದ. ಮದುವೆಗೆ ಭಗವಾನ್ ದಂಪತಿಗಳನ್ನು ಕರೆತಂದ. ಆನಂದನ ಅಕ್ಕ ಭಾವ ಹೆಣ್ಣು ಧಾರೆಯೆರೆಯಲು ಒಪ್ಪಿದ್ದರು.

11–45 ಗಂಟೆಗಿದ್ದ ಶುಭ ಲಗ್ನದಲ್ಲಿ ಅದಿತಿ–ಸರ್ವೋತ್ತಮ್ ಸತಿ ಪತಿಗಳಾದರು ಅವರು ಊಟ ಮುಗಿಸಿಕೊಂಡು ಹೊರಟಾಗ ಮೂರೂವರೆ. ಪ್ರಮೋದ್ ಕಾರ್‌ನಲ್ಲಿ ನವದಂಪತಿಗಳನ್ನು ಹಾರ ಹಾಕಿ ಕರೆತಂದ.... ಅವರೆಲ್ಲರಿಗೂ ಕಾಯುತ್ತಾ ಕುಳಿತಿದ್ದ ಗಾಯಿತ್ರಿದೇವಿ ಆ ಜೋಡಿಯನ್ನು ನೋಡಿ ಸ್ಥಂಭೀಭೂತರಾದರು."

"ಇದೇನೋ ಇದು ? ಇವರಿಬ್ಬರೂ ಮಾಲೆ ಹಾರ ಹಾಕಿಕೊಂಡಿ ದ್ದಾರೆ ? "

"ಬೀದಿಯಲ್ಲಿ ಪಂಚಾಯಿತಿ ಬೇಡ, ಒಳಗೆ ಹೋಗೋಣ" ಎಂದ ಪ್ರಮೋದ್.

"ಅಮ್ಮ ,ನೀನು ನೆನ್ನೆ ರಾತ್ರಿ ಬಾಂಬೆಗೆ ಫೋನ್ ಮಾಡಿದ್ದನ್ನು ಕೇಳಿಸಿ ಕೊಂಡೆ. ಅವರೆಲ್ಲಾ ಇವತ್ತೇ ಬರ್ತಾರೇಂತ ತಿಳಿಯಿತು. ಅವರು ಬಂದ್ರೆ ಈ ಮದುವೆ ನಡೆಯಲ್ಲಾಂತ ಖಚಿತವಾಯ್ತು. ಅದಕ್ಕೆ ಈ ಉಪಾಯ

ಮಾಡಿದೆ. ಶ್ರೀಕಂಠಶಾಸ್ತ್ರಿಗಳೇ ನಿಂತು ಈ ಮದುವೆ ಮಾಡಿಸಿದರು. ಮದುವೆ ಊಟಾನೂ ಆಯ್ತು, ಇನ್ನು ಇವರಿಬ್ಬರನ್ನೂ ಬೇರೆ ಮಾಡಕ್ಕೆ ಯಾರಿಂದಲೂ ಸಾಧ್ಯವಿಲ್ಲ."

ಗಾಯಿತ್ರಿದೇವಿ ಮಾತಾಡಲಿಲ್ಲ. ತಮ್ಮ ಮಗ ತಮ್ಮ ವಿರುದ್ಧ ನಿಂತು ಸ್ನೇಹಿತನಿಗೆ ಸಹಾಯ ಮಾಡಿದ್ದು ನೋಡಿ ಅವರ ರೋಷ ಉಕ್ಕಿತು. ಅವರು ದುರ್ದಾನ ತೆಗೆದುಕೊಂಡವರಂತೆ ಅಲ್ಲಿಂದ ಎದ್ದು ಹೋದರು.

"ನಾವೀಗ ಏನ್ಮಾಡ್ಬೋದು ?" ಎಂದ ಸರ್ವೋತ್ತಮ್.

"ನಿಮ್ಮ ರೂಂಗೆ ಹೋಗಿ ವಿಶ್ರಾಂತಿ ತೆಗೆದುಕೊಳ್ಳಿ. ನಿಮ್ಮ ತಾಯಿ-ತಂದೆಯರು ಬಂದ ಮೇಲೆ ಮುಂದಿನ ಹೆಜ್ಜೆ.... "

ಅವರು ಹೋದ ಮೇಲೆ ಪ್ರಮೋದ್ ಭಟ್ಟರನ್ನು ಕರೆದ.

"ಏನು ರಾಯರೆ ?"

"ಮದುವೆ ಮುಂದೆ ಹೋಗಿದೇಂತ ಪೇಪರ್‌ನಲ್ಲಿ ಹಾಕಿಸಲಾಗಿದೆ. ನಾಳೆ ಅಡಿಗೆಯವರೂ ಬರಲ್ಲ. ಅವರು ಈಗಾಗಲೇ 500 ಲಾಡು ಮಾಡಿದ್ದಾರಂತೆ. ನೀವು ಹೋಗಿ 200 ತೆಂಗಿನಕಾಯಿ ತಂದುಬಿಡಿ. ನಾಳೆಯಾದ್ರೂ ಬಂದ್ರೆ ಎರಡೆರಡು ಲಾಡು, ತಾಂಬೂಲ ಕೊಟ್ಟುಬಿಡಿ."

"ಆಗಲೀಪ್ಪ.... "

"ನಿಮ್ಮ ಮಗಳ ಮದುವೆ ಯಾವಾಗ ?"

"ಮುಂದಿನ ತಿಂಗಳು 14 ನೇ ತಾರೀ...."

"ಏನು ಸಹಾಯ ಬೇಕಿದ್ರೂ ಕೇಳಿ. ಸಂಕೋಚಪಟ್ಟುಕೊಳ್ಳಬೇಡಿ"

"ನೀವು ಮನುಷ್ಯರಲ್ಲ, ದೇವರು" ಎಂದರು ಭಟ್ಟರು. ಗಾಯಿತ್ರಿದೇವಿ ಅವರಿಬ್ಬರ ಸಂಭಾಷಣೆ ಕೇಳಿ ನಿಟ್ಟುಸಿರು ಬಿಟ್ಟರು.

"ಎಲ್ಲರ ಮೇಲೆ ವಿಶ್ವಾಸ ತೋರಿಸುವ ಪ್ರಮೋದ್ ತಾಯಿಯ ಬಗ್ಗೆ ವಿಶ್ವಾಸ ಇಟ್ಟುಕೊಂಡಿರುವುದಿಲ್ಲವೆ ? ಅವನ ವಿಶ್ವಾಸ ಕಳೆದುಕೊಂಡೆನಲ್ಲಾ?" ಎಂದುಕೊಂಡರು.

ಸಾಯಂಕಾಲ 7-30ರ ಹೊತ್ತಿಗೆ ಕಾರು ಬಂದು ಮನೆಯ ಮುಂದೆ ಮುಂದೆ ನಿಂತಿತು.... ಪ್ರಮೋದ ಹೊರಗೆ ಹೋಗಿ ಸ್ವಾಗತಿಸಿದ.

"ಏನಯ್ಯಾ, ಏನೂ ತಿಳಿಯವನು ಅಂದ್ಕೊಂಡಿದ್ರೆ ನೀನು ಹೀಗೆ

ಮಾಡೋದಾ ? ನಮ್ಮ ವಿರುದ್ಧ ನಿಂತು ಮದುವೆ ಮಾಡ್ತೀಯ ? ನೋಡೋಣ ಈ ಮದುವೆ ಹೇಗೆ ನಡೆಯುತ್ತದೆಯೋಂತ...."

"ಮದುವೆ ಆಗೋಯ್ತು ಅಂಕಲ್. ನೀವು ಆಶೀರ್ವಾದ ಮಾಡಿಬಿಡಿ" ಎಂದ.

ಸರ್ವೋತ್ತಮ್-ಅದಿತಿ ಎಲ್ಲರಿಗೂ ನಮಸ್ಕರಿಸಿದರು.

"ಮದುವೆ ಇದ್ದಿದ್ದು ನಾಳೆ, ಇದೇನಿದು ಇವತ್ತೇ...." ಪುರುಷೋತ್ತಮ್ ಕೊದಲಿದರು.

"ಈ ಮದುವೇನ್ನ ನಾನು ಒಪ್ಪಲ್ಲ....ನಾವೆಲ್ಲಾ ಬದುಕಿರುವಾಗ ಈ ರೀತಿ ಮದುವೆ ಮಾಡಿಕೊಳ್ಳುವುದಾ ? ಅದಿತಿ ಮನೆಗೆ ಬಾ" ಕೃಷ್ಣರಾವ್ ಗುಡುಗಿದರು.

"ನನ್ನ ಮನೆಯಲ್ಲಿ ನಾನಿರ್ತೀನೆ ಡ್ಯಾಡಿ, ನಾನು ಬಾಂಬೆಗೆ ಬರಲ್ಲ."

"ನಿನಗೆ ನನ್ನ ಆಸ್ತೀಲಿ ಒಂದು ಪೈ ಕೊಡಲ್ಲ."

"ಜೀವನದಲ್ಲಿ ಹಣಾನೇ ದೊಡ್ಡದೂಂತ ನಾನು ಭಾವಿಸಿಲ್ಲ. ಸರ್ವೋತ್ತಮ್ ಎಲ್ಲಿರಾರೋ ನಾನು ಅಲ್ಲೇ ಇರ್ತೀನಿ."

"ನಮ್ಮ ಭಾಗಕ್ಕೆ ನೀನು ಸತ್ತುಹೋದೆ ಅಂದ್ಕೊಳ್ತೀನಿ." ನಡಿ ಯಶೋಧ ಹೋಗೋಣ."

ಯಶೋಧರ ಮಗಳನ್ನಪ್ಪಿ ಹೇಳಿದರು. "ನಾನು ಬರಲ್ಲ. ಆದಿತಿ ಜೊತೆ ನಾನಿಲ್ಲೇ ಇರ್ತೀನಿ."

"ಯಶೋಧಾ !"

"ಮದುವೆಯಾದ ದಿನದಿಂದ ಇಂದಿನವರೆಗೂ ನಾನು ನೀವು ಹೇಳಿದ ಯಾವ ಮಾತೂ ಮೀರಿಲ್ಲ. ಇರುವ ಒಬ್ಬ ಮಗಳನ್ನು ದೂರ ಮಾಡಿ ಕೊಂಡು ನಾನು ಹೇಗಿರಲಿ ?"

"ಏನ್ರಿ ನಮಗಾದ್ರೂ ಯಾರಿದ್ದಾರೆ ? ಸರ್ವೋತ್ತಮ್‌ನನ್ನು ಬಿಟ್ಟು ನಾನಾದ್ರೂ ಹೇಗಿರಲಿ ?"

"ಡ್ಯಾಡಿ, ನೀವು ಒಪ್ಪದಿದ್ದುದರಿಂದ ನಾವು ಮದುವೆಯಾಗಲು ಈ ದಾರಿ ಹಿಡಿಯಬೇಕಾಯ್ತು. ಮದುವೆಯಾಗಿದ್ದಾಗಿದ್ದೆ. ಆಶೀರ್ವಾದ ಮಾಡಿ.

ನಿಮ್ಮ ಆಶೀರ್ವಾದವಿಲ್ಲದೆ ನಾವು ಸುಖವಾಗಿರಲು ಸಾಧ್ಯವಿಲ್ಲ." ಅದಿತಿಯ ಜೊತೆ ನಮಸ್ಕಾರ ಮಾಡುತ್ತಾ ಹೇಳಿದ ಸರ್ವೋತ್ತಮ್.

"ಅಂಕಲ್, ಆಶೀರ್ವಾದ ಮಾಡಿ. ಬಾಂಬೆಯಲ್ಲಿ ಗ್ರಾಂಡಾಗಿ ರಿಸೆಪ್ಷನ್ ಮಾಡಿ ನಮಗೆಲ್ಲಾ ಊಟ ಕೊಡಿ. ಎಷ್ಟು ದಿನ ಹಠ ಸಾಧಿಸ್ತೀರ ? ಅವನಿಗೂ ನೀವಲ್ಲದೆ ಯಾರಿಧ್ದಾರೆ ?" ಸಾಂತ್ವನಗೊಳಿಸುವ ಧ್ವನಿಯಲ್ಲಿ ಹೇಳಿದ ಪ್ರಮೋದ್.

ಈಗ ಗಾಯಿತ್ರಿದೇವಿಯೂ ಬಾಯಿ ತೂರಿಸಿದರು. "ಒಪ್ಪಿಕೊಂಡು ಬಿಡಪ್ಪ. ಅವರೇನು ಮಾಡಬಾರದ ಕೆಲಸ ಮಾಡಿಲ್ಲ. ಇಬ್ಬರೂ ಶ್ರೀಮಂತರು. ಮನೆತನವೂ ಒಳ್ಳೆಯದಾಗಿರುವಾಗ ಯೋಚನೆ ಯಾಕೆ ? ಈ ನೆಪದಲ್ಲಿ ಇಲ್ಲಿಗೆ ಬಂದಿದ್ದೀದು. ನಾಲ್ಕು ದಿನ ಎಲ್ಲರೂ ಇರಿ. ಬೆಂಗಳೂರು ಸುತ್ತಾಡಿ."

ಒಟ್ಟನಲ್ಲಿ ರಾವ್ ಮಾತ್ತು ಡಾಕ್ಟರ್ ಸೋಲಬೇಕಾಯ್ತು. ಎರಡು ದಿನಗಳಿದ್ದು ಅವರೆಲ್ಲಾ ಬಾಂಬೆಗೆ ಪ್ರಯಾಣಿಸಿದರು. ಸರ್ವೋತ್ತಮ್ ಬಾಂಬೆಗೆ ಹೋಗುವ ಮೊದಲು ಗೆಳೆಯನನ್ನು ಕೇಳಿದ. ಪದ್ಮಿನಿಯನ್ನು ಹೇಗೆ ಹುಡುಕ್ತೀಯಾ ?"

"ಅದೇ ನನಗೆ ಅರ್ಥವಾಗ್ತಿಲ್ಲ."

"ಒಂದು ಮಾತು ಹೇಳ್ತೀನಿ, ಬೇಜಾರುಮಾಡ್ಕೋಬೇಡ."

"ಹೇಳು."

"ನಿಮ್ಮ ತಾಯಿಯೇ ಪದ್ಮಿದಿ ಮನೆಯವರನ್ನು ದೂರಕ್ಕೆ ಕಳುಹಿಸಬಾರದೇಕೆ ?"

"ಹಾಗಂದ್ರೆ ?"

"ನೀನು ಅವಳು ಒಬ್ಬರನ್ನೊಬ್ಬರು ಇಷ್ಟಪಟ್ಟಿರೋದು ಅವರಿಗೆ ಗೊತ್ತಿಲ್ವಾ? ನೀನು ಅವರ ಮಾತಿಗೆ ಬೆಲೆ ಕೊಡೊಲ್ಲಾಂತ ಅವರಿಗೆ ಚೆನ್ನಾಗಿ ಅರ್ಥವಾಗಿರಬೇಕು. ನೀನಿಲ್ಲದಿದ್ದಾಗ ಪದ್ಮಿನಿಯ ತಂದೆಗೆ ಹಣದಾಸೆ ತೋರಿಸಿ ಅವರ್ಯಾಕೆ ಈ ಕೆಲಸ ಮಾಡಿರಬಾರದು ?"

"ನೀನು ಹೇಳ್ತಿರೋದು ನಿಜ ಅನ್ನಿಸತ್ತೆ. ನಾನು ಆ ರೀತಿ ಯೋಚಿಸೇ ಇರಲಿಲ್ಲ, ಥ್ಯಾಂಕ್ಸ್ ಎ ಲಾಟ್."

"ನಿನಗೆ ನಾವಿಬ್ಬರೂ ಎಷ್ಟು ಆಭಾರಿಗಳಾಗಿದ್ರೂ ಸಾಲದು ಪ್ರಮೋದ್. ನಿನಗೆ ಯಾವಾಗ, ಯಾವ ರೀತಿಯ ಸಹಾಯ ಬೇಕಾದ್ರೂ ನನ್ನ ಹತ್ತಿರ ಬಾ, ನಿನ್ನ ಋಣ ತೀರಿಸುವುದಕ್ಕೆ ಒಂದು ಅವಕಾಶ ಕೊಡು. ಐ ವಿಷ್ ಯು ಆಲ್ ದ ಬೆಸ್ಟ್."

ಸರ್ವೋತ್ತಮ್ ಮದುವೆಯಾಗಿ ಹದಿನೈದು ದಿನಗಳು ಕಳೆದವು. ರಾವ್ ರಿಸೆಪ್ಷನ್ ಇನ್‌ವಿಟೇಶನ್ ಕಳುಹಿಸಿದ್ದರು. ಆದರೆ ಪ್ರಮೋದ್ ಹೋಗಲಿಲ್ಲ. ಗಾಯಿತ್ರಿದೇವಿ ಒಂದು ದಿನ ಮಗನನ್ನು ಕೇಳಿದರು. "ಸರ್ವೋತ್ತಮ್ ನಿನ್ನ ವಯಸ್ಸಿನವನೇ. ಅವನ ಮದುವೆಯಾಯ್ತು, ನಿನ್ನ ಮದುವೆ ಯಾವಾಗ ?"

"ಸದ್ಯಕ್ಕೆ ಇಲ್ಲ."

"ಏನೋ ಹಾಗಂದ್ರೆ ?"

"ಪದ್ಮಿನಿಯ ಪತ್ತೆ ಆಗುವವರೆಗೂ ನಾನು ಮದುವೆ ಬಗ್ಗೆ ಯೋಚಿಸೋದೇ ಇಲ್ಲ."

"ನಿನ್ನ ಮದುವೆಗೂ ಆ ನಡತೆಗೆಟ್ಟವಳ ಪತ್ತೆಗೂ ಏನೋ ಸಂಬಂಧ?"

"ಅವಳು ನಡತೆಗೆಟ್ಟವಳೋ ಅಲ್ವೋ ಅನ್ನುವುದು ನನಗೇನು ಗೊತ್ತು ? ನೀನು ಹೇಳಿದ ವಿಚಾರದಲ್ಲಿ ಸತ್ಯಾಂಶವೆಷ್ಟು, ಸುಳ್ಳಿನಂಶವೆಷ್ಟು ಅನ್ನುವುದು ತಿಳಿಯಬೇಕು."

"ನಾನು ಸುಳ್ಳು ಹೇಳ್ತೀನೇನೋ ?"

"ಅಮ್ಮ , ನನಗೆ ಈಗ ನಿನ್ನ ಮಾತಿನಲ್ಲಿ ನಂಬಿಕೇನೆ ಇಲ್ಲ. ನಂಬಿಸಿ ಕತ್ತು ಕುಯ್ಯುವುದರಲ್ಲಿ ನೀನು ಎಕ್ಸ್‌ಪರ್ಟ್. ನನ್ನನ್ನು ನಂಬಿ ಬಂದಿದ್ದ ಅದಿತಿ–ಸರ್ವೋತ್ತಮ್ ಮದುವೆ ನಿಲ್ಲಿಸಲು ಪ್ರಯತ್ನಿಸಿದ ವ್ಯಕ್ತಿ ನೀನು. ಇತ್ತೀಚೆಗೆ ನಿನಗೆ ಪದ್ಮಿನಿಯನ್ನು ಕಂಡರಾಗ್ತಿರಲಿಲ್ಲ. ನೀನೇ ಯಾಕೆ ಅವಳನ್ನು ಎಲ್ಲಿಗಾದರೂ ಕಳುಹಿಸಿರಬಾರದು ?"

"ನಾನು ಹೇಳಿದ ತಕ್ಷಣ ಹೊರಟುಹೋಗುವಂತಹ ಮುಗ್ಧೆಯೇನು ಅವಳು. ತನ್ನ ತಪ್ಪಿರುವುದರಿಂದಲೇ ತಲೆ ಮರೆಸಿಕೊಂಡಿದ್ದಾಳೆ. ಅವಳಿಗೋಸ್ಕರ ನಿನ್ನ ಬಾಳು ಹಾಳ್ಮಾಡಿಕೊಳ್ಳಬೇಡ."

ಅವನು ಮಾತಾಡಲಿಲ್ಲ.

೭

ಸರ್ವೋತ್ತಮ್ ಬಂದಾಗ ಲವಲವಿಕೆಯಿಂದ . ಓಡಾಡಿಕೊಂಡಿದ್ದ ಪ್ರಮೋದ್ ಹೋದ ನಂತರ ತುಂಬಾ ಪೆಚ್ಚಾದ ಭಗವಾನ್ ಕೂಡ ಅನ್ಯ ಮನಸ್ಕತೆ ಗಮನಿಸುವಂತಾಯ್ತು. ಒಮ್ಮೆ ಟೈಪ್ ಆಗಿದ್ದ ಪತ್ರವೊಂದನ್ನು ನೋಡುತ್ತಾ ಅವನು ಹೇಳಿದ "ಇದರಲ್ಲಿ ಎಷ್ಟು ತಪ್ಪುಗಳಿವೆ ನೋಡಿದ್ರಾ ಅಂಕಲ್ ? ಯಾಕೆ ಆ ಹುಡುಗೀನ್ನ ಅಪಾಯಿಂಟ್ ಮಾಡ್ಕೊಂಡಿದ್ದೀರ ?"

"ನಿಮ್ಮಮ್ಮನ ಫ್ರೆಂಡ್ ಮಗಳು ಅವಳು. ಅದೊಂದೇ ಅವಳ ಪ್ಲಸ್ ಪಾಯಿಂಟ್."

"ಪದ್ಮಿನಿ ಈ ಜಾಗದಲ್ಲಿದ್ದಿದ್ರೆ ಚೆನ್ನಾಗಿರ್ತಿತ್ತು."

"ಯಾವ ಪದ್ಮಿನಿ ?"

"ನಮ್ಮನೆ ಎದುರಿಗೆ ಶಾಸ್ತ್ರಿಗಳಿದ್ರಲ್ಲಾ ಅವರ ಮಗಳು."

"ಓ.... "

"ಅವಳು ಕನ್ನಡ–ಇಂಗ್ಲೀಷ್ ಟೈಪಿಂಗ್, ಶಾರ್ಟ್‌ಹ್ಯಾಂಡ್ ಎಲ್ಲಾ ಕಲಿತಿದ್ದಳು."

"ಈಗವಳು ಇಲ್ವಾ ?"

"ಉಹುಂ.... ಅವರೆಲ್ಲಾ ಎಲ್ಲಿದ್ದಾರೆ ಅನ್ನುವುದೇ ಗೊತ್ತಿಲ್ಲ."

ಭಗವಾನ್ ಮತ್ತೇನೂ ಪ್ರಶ್ನಿಸಲಿಲ್ಲ.

ಒಂದು ವಾರ ಕಳೆದಿರಬಹುದು. ಒಂದು ಮಧ್ಯಾಹ್ನ ಗಾಯಿತ್ರಿದೇವಿ .ಯಿಂದ ಮಗನಿಗೆ ಫೋನ್ ಬಂತು.

"ಈ ದಿನ 4–30 ಹೊತ್ತಿಗೆ ಮನೆಗೆ ಬಾ"

"ಯಾಕೆ ? "

"ಜಗನ್ನಾಥರಾವ್ ಹೆಣ್ಣು ತೋರಿಸಕ್ಕೆ ಬರ್ತಿದ್ದಾರೆ"

"ನಾನೀಗಲೇ ಮದುವೆಯಾಗಲ್ಲ. ನನ್ನ ಬಲವಂತ ಮಾಡಬೇಡ"

ಮುಂದೆ ಮಾತನಾಡಲು ಇಷ್ಟವಿಲ್ಲದೆ ಅವನು ಫೋನ್ ಕೆಳಗಿಟ್ಟ. ಗಾಯಿತ್ರಿದೇವಿ ಭಗವಾನ್‌ಗೆ ಫೋನ್ ಮಾಡಿ ಮಗನನ್ನು ಕಳುಹಿಸಲು ಹೇಳಿದರು. ಭಗವಾನ್ ಪ್ರಮೋದ್‌ಗೆ ಒಂದು ಗಂಟೆ ಉಪದೇಶ ಮಾಡಿದರು. "ಎಷ್ಟು ದಿನ ಹೀಗೆ ಇರ್ತೀಯ ? ಇವತ್ತಲ್ಲ ನಾಳೆ ಮದುವೆಯಾಗಲೇ ಬೇಕಲ್ಲವಾ ?"

"ನನಗೆ ಅಮ್ಮ ತೋರಿಸುವ ಹುಡುಗಿಯನ್ನು ಮದುವೆಯಾಗಲೇ ಇಷ್ಟವಿಲ್ಲ."

"ಮಾತ್ತೆ ಯಾರನ್ನು ಮದುವೆಯಾಗಕ್ಕೆ ಇಷ್ಟ ?"

"ನಾನೊಂದು ಬಡ ಹುಡುಗಿಯನ್ನು ಮೆಚ್ಚಿದ್ದೇನೆ."

"ಆ ಹುಡುಗಿ ಯಾರು, ಏನೊಂತ ನಾನೀಗ ಕೇಳಲ್ಲ. ಮೊದಲು ಈ ಹುಡುಗಿಯನ್ನು ನೋಡು."

"ಹಾಗಲ್ಲ ಅಂಕಲ್"

"ಹುಡುಗಿಯನ್ನು ನೋಡಿದಾಕ್ಷಣ ಮದುವೆಯಾಗಲೇಬೇಕು ಎನ್ನುವ ನಿಯಮವೇನಿಲ್ಲ. ಹುಡುಗೀನ್ನ ನೋಡಿ ಮೇಲೆ ಶಾಸ್ತ್ರ ಮಾಡು.... ಆಮೇಲೆ ಹುಡುಗಿ ಒಪ್ಪಿಗೆಯಾಗಲಿಲ್ಲಾಂದ್ರಾಯ್ತು."

"ಅಮ್ಮ ನನ್ನ ಒಪ್ಪಿಗೆಯಿಲ್ಲದೆ ಮದುವೆ ಗೊತ್ತುಮಾಡಿದರೆ ಏನ್ಮಾಡೋದು ?"

"ಹಾಗಾಗಲ್ಲಾಂತ ನಾನು ಭರವಸೆ ಕೊಡಬಲ್ಲೆ. ನಿಮ್ಮ ತಾಯಿ ಮಾತಿಗೆ ಬೆಲೆ ಕೊಟ್ಟು ಹುಡುಗಿಯನ್ನು ನೋಡು."

ಒಲ್ಲದ ಮನಸ್ಸಿನಿಂದ ಅವನು ಹುಡುಗಿಯನ್ನು ನೋಡಲು ನಾಲ್ಕು ಗಂಟೆಗೆ ಮನೆಗೆ ಹೊರಟ. ಅವನ ಕಾರು ಮನೆ ತಲುಪುವ ವೇಳೆಗೆ ಹುಡುಗಿಯ ಮನೆಯವರು ಬಂದಿದ್ದರು. ಗಾಯಿತ್ರಿದೇವಿ ಮಗನಿಗೆ ಎಲ್ಲರನ್ನೂ ಪರಿಚಯಿಸಿದರು. ಹುಡುಗಿ ತೀರಾ ಸಾಧಾರಣವಾಗಿದ್ದಳು. ಶ್ರೀಮಂತರ ಒಬ್ಬಳೇ ಮಗಳು ಎನ್ನುವುದೊಂದೇ ಪ್ಲಸ್ ಪಾಯಿಂಟ್. ತಾಯಿಯ ಬಲವಂತಕ್ಕೆ ಹತ್ತು ನಿಮಿಷ ಕುಳಿತಿದ್ದು, ಒಳಗೆದ್ದು ಹೋದ.... ಗಾಯಿತ್ರಿ ದೇವಿಗೆ ಹುಡುಗಿಯನ್ನು ನೋಡಿದ ಮೇಲೆ ಈ ಸಂಬಂಧ ಬೇಡ ಎನ್ನಿಸಿತು. ಆದ್ದರಿಂದ ಮಗನನ್ನು ಒತ್ತಾಯಿಸಲಿಲ್ಲ.

ಈ ಪ್ರಸಂಗದ ನಂತರ ನಾಲ್ಕಾರು ಹೆಣ್ಣುಗಳನ್ನು ಅವನು ನೋಡ ಬೇಕಾಯ್ತು. ಪ್ರತಿಯೊಂದನ್ನೂ ಒಂದಲ್ಲಾ ಒಂದು ನೆಪ ತೆಗೆದು ಬೇಡವೆಂದ. ಕೊನೆಗೆ ಗಾಯಿತ್ರಿದೇವಿ ರೋಸಿ ಹೇಳಿದರು. "ನೀನು ಯಾವ ಹುಡುಗಿಯನ್ನೂ ಒಪ್ಪಲ್ಲಾಂತ ಕಾಣತ್ತೆ. ಅದಕ್ಕೆ ನಾನೇ ಒಂದು ಹುಡುಗೀನ್ನ ಆರಿಸಿದ್ದೇನೆ. ಶ್ರೀಪತಿರಾವ್ ಒಬ್ಬಳೇ ಮಗಳು 'ನಂದಿನಿ' ತುಂಬಾ ಮುದ್ದಾಗಿದ್ದಾಳೆ. ನಮ್ಮ ಅಂತಸ್ಥಿಗೆ ತಕ್ಕ ಸಂಬಂಧ, ನೀನು ನೋಡಿ ಹುಂ ಅಂದುಬಿಡು."

"ನನಗಿಷ್ಟವಿಲ್ಲ ಬೇಡ."

"ಏನೋ ಹಾಗಂದ್ರೆ ? ಇನ್ನೂ ಎಷ್ಟು ಹುಡುಗಿಯರನ್ನು ಮನೆಗೆ ಕರೆಸಿ ನೋಡಿ ಬೇಡಾಂತ ಹೇಳೋದು ಚೆನ್ನಾಗಿರಲ್ಲಪ್ಪ."

"ಹುಡುಗಿಯರನ್ನು ಮನೆಗೆ ಕರೆಸ್ತಿರೋದು ಯಾರು, ನಾನೋ ನೀನೋ. ನನ್ನ ಮನಸ್ಸಿನಲ್ಲಿ ಏನಿದೇಂತ ನಿನಗೆ ಗೊತ್ತು. ಪದ್ಮಿನಿಯ ಸುಳಿವು ಸಿಗುವ ವರೆಗೂ ನಾನು ಮದುವೆಯಾಗಲ್ಲ."

"ನೋಡು ಪ್ರಮೋದ್, ನೀನು ನಂದಿನೀನ್ನ ಮದುವೆಯಾಗದಿದ್ರೆ ನಾನು ಪ್ರಾಣ ಕಳೆದುಕೊಳ್ತೀನೆ." ಗಾಯಿತ್ರಿದೇವಿ ತಮ್ಮ ಕೊನೆಯ ಅಸ್ತ್ರ ಪ್ರಯೋಗಿಸಿದರು.

"ನೀನೇನಾದ್ರೂ ನನ್ನ ಒಪ್ಪಿಗೆಯಿಲ್ಲದೆ ನನ್ನ ಮದುವೆ ಗೊತ್ತು ಮಾಡಿದ್ರೆ ನಾನು ಪ್ರಾಣ ಕಳೆದುಕೊಳ್ತೀನೆ."

ಒಟ್ಟಿನಲ್ಲಿ ಗಾಯಿತ್ರಿದೇವಿಯ ಹಠ ನಡೆಯಲಿಲ್ಲ. ಅಷ್ಟರಲ್ಲಿ ಆಷಾಢ ಮಾಸ ಪ್ರಾರಂಭವಾಯಿತು. ಗಾಯಿತ್ರಿದೇವಿ ತಾತ್ಕಾಲಿಕವಾಗಿ ಹೆಣ್ಣು ಹುಡುಕುವುದನ್ನು ನಿಲ್ಲಿಸಿದರು. ಪ್ರಮೋದ್ ನೆಮ್ಮದಿಯಿಂದ ಉಸಿರಾಡು ವಂತಾಯ್ತು.

ಒಂದು ಮಧ್ಯಾಹ್ನ ಅವನಿಗೆ ಊಟಕ್ಕೆ ಹೋಗಲು ಬಿಡುವಾಗಲಿಲ್ಲ. ಭಗವಾನ್ ತಮ್ಮ ಮನೆಯಿಂದ ಬಂದಿದ್ದ ಟಿಫನ್ ಕ್ಯಾರಿಯರ್ ಬಿಚ್ಚಿ ಹೇಳಿದರು : "ಬಾ ನನ್ನ ಜೊತೆ ಊಟಮಾಡು."

"ಬೇಡಿ ಅಂಕಲ್."

"ಯಾಕೆ ಬೇಡ ? ನಿಮ್ಮ ಆಂಟಿ ಬಿಸಿಬೇಳೆಭಾತ್ ಕಳುಹಿಸಿದ್ದಾಳೆ. ರುಚಿ ನೋಡು."

ಅವನು ಹೆಚ್ಚು ಉಪಚಾರ ಹೇಳಿಸಿಕೊಳ್ಳದೆ ತಟ್ಟೆಗೆ ಕೈ ಹಾಕಿದ.

"ಪದ್ಮಿನಿ ಕೂಡ ತುಂಬಾ ಚೆನ್ನಾಗಿ ಬಿಸಿಬೇಳೆಭಾತ್ ಮಾಡ್ತಿದ್ದಳು. ಅವಳು ಮಾಡುವ ಸ್ವೀಟ್ಸ್ ತುಂಬಾ ಚೆನ್ನಾಗಿರ್ತಿತ್ತು."

"ಪದ್ಮಿನಿ ನೆನಪು ತುಂಬಾ ಬರ್ತ್ತಿದೆಯಾ ?"

"ಹೌದು ಅಂಕಲ್....ಅವಳಂತಹ ಹುಡುಗೀನ್ನ ನಾನು ಇದುವರೆಗೂ ನೋಡಿಲ್ಲ. ತುಂಬಾ ಧೈರ್ಯಸ್ಥೆ. ಅವಳ ಜಾಗದಲ್ಲಿ ಇನ್ಯಾರೇ ಇದ್ದಿದ್ರೂ ಹೇಗಾಡ್ತಿದ್ರೋ ಏನೋ ? ಅವಳಿಗಂತೂ ಶ್ರೀಮಂತರ ಬಗ್ಗೆ ದಿವ್ಯ ನಿರ್ಲಕ್ಷ್ಯ. ಅತಿ ಸ್ವಾಭಿಮಾನ, ಅದಕ್ಕೆ ನನಗೆ ಅವಳೆಂದರೆ ತುಂಬಾ ಮೆಚ್ಚುಗೆ."

"ಮೆಚ್ಚುಗೇನೋ ಪ್ರೀತಿನೋ ?"

ಪ್ರಮೋದ್ ಹುಡುಗಿಯಂತೆ ನಾಚಿದ.

"ಆ ಹುಡುಗಿ ಎಲ್ಲಿದ್ದಾಳೇಂತಾನೇ ನಿನಗೆ ಗೊತ್ತಿಲ್ಲ. ಅವಳನ್ನು ಹೇಗೆ ಮದುವೆಯಾಗುತ್ತೀಯ ?"

ಅವಳು ಎಲ್ಲಿದ್ದಾಳೇಂತ ಅಮ್ಮನಿಗೆ ಗೊತ್ತಿದೇಂತ ನನಗನ್ನಿಸತ್ತೆ. ಆದರೆ ಅಮ್ಮ ಒಪ್ಪಿಕೊಳ್ತಿಲ್ಲ. ಪದ್ಮಿನಿ ಬಗ್ಗೆ ಏನೇನೋ ಹೇಳ್ತಾಳೆ. ನನಗೆ ನಂಬ ಕ್ಕಾಗ್ತಾನೇ ಇಲ್ಲ."

"ಪದ್ಮಿನಿ ನಿನ್ನನ್ನು ಪ್ರೀತಿಸ್ತಿದ್ದಾಳಾ ?"

"ಹೌದು, ತುಂಬಾ ಪ್ರೀತಿಸ್ತಿದ್ದಾಳೆ."

"ನಿನಗೆ ಅವಳಲ್ಲಿ ನಂಬಿಕೆಯಿದೆಯಾ ?"

"ತುಂಬಾ ನಂಬಿಕೆಯಿದೆ...."

"ಅವಳು ಬೇರೆ ಯಾರನ್ನಾದ್ರೂ ಈಗಾಗಲೇ ಮದುವೆಯಾಗಿದ್ರೆ ?"

"ಹಾಗೇನಾದ್ರೂ ಆಗಿದ್ರೆ 'ಎಲ್ಲಾದರೂ ಸುಖವಾಗಿರು' ಅಂತ ಹಾರೈಸಿ ಬರ್ತ್ತೇನೆ."

"ಅವಳು ಯಾವುದಾದ್ರೂ ಖಾಯಿಲೆಯಿಂದ ನರಳ್ತಿದ್ರೆ ?"

"ಹಾಗೇನಾದ್ರೂ ಖಾಯಿಲೆಯಿಂದ ನರಳ್ತಿದ್ರೆ ಅವಳನ್ನು ಕರೆದು ಕೊಂಡು ಬಂದು ಚಿಕಿತ್ಸೆ ಮಾಡಿಸ್ತೇನೆ."

"ಅವಳು ನಿನಗೆ ಮೋಸ ಮಾಡಿದ್ರೆ ?"

"ಏನಂಕಲ್ ಸಿನಿಮಾ ಡೈಲಾಗ್ಸ್ ಇದ್ದಂತಿದೆ ನಿಮ್ಮ ಮಾತು. ಪದ್ಮಿನಿ ನನಗೆ ಮೋಸಮಾಡಲು ಈ ಜನ್ಮದಲ್ಲಿ ಸಾಧ್ಯವಿಲ್ಲ."

"ಪ್ರಮೋದ್, ನಿನಗೊಂದು ವಿಷಯ ಹೇಳಲಾ ?"

"ಹೇಳಿ."

"ನಿನ್ನ ಪದ್ಮಿನಿ ಈ ಊರು ಬಿಡಕ್ಕೆ ನಿಮ್ಮ ತಾಯೀನೇ ಕಾರಣ...."

"ಏನು ನಮ್ಮಮ್ಮ ಕಾರಣಾನಾ ?"

"ಹೌದು, ಅವರು ಹೇಳಿದ ಮೇಲೇ ಶಾಸ್ತ್ರಿಗಳು ಊರು ಬಿಟ್ಟಿದ್ದು."

"ನನಗೆ ಈ ಅನುಮಾನ ಇತ್ತು ಅಂಕಲ್. ಇತ್ತೀಚೆಗೆ ಅಮ್ಮನಿಗೆ ಪದ್ಮಿನಿ ತಲೆ ಕಂಡರಾಗ್ತಿರಲಿಲ್ಲ. ನಾನೆಲ್ಲಿ ಹಠ ಹಿಡಿದು ಅವಳನ್ನೇ ಮದುವೆ ಯಾಗಿಬಿಡ್ತೀನೋ ಅನ್ನುವ ಭಯ ಅವರನ್ನು ಕಾಡಿರಬೇಕು. ಅದಕ್ಕೆ ಈ ತರಹ ಆಟ ಹೂಡಿದ್ದಾರೆ, ಈಗವರು ಎಲ್ಲಿದ್ದಾರೆ ಅಂಕಲ್ ?"

"ಟಿ. ನರಸೀಪುರದಲ್ಲಿದ್ದಾರೆ. ಶಾಸ್ತ್ರಿಗಳಿಗೆ ಅಲ್ಲಿಯ ಖಾಸಗಿ ಶಾಲೆಯಲ್ಲಿ ಕೆಲಸ ಸಿಕ್ಕಿದೆ ಅಲ್ಲೇ ಮನೆ ಮಾಡಿದ್ದಾರೆ."

"ನಿಮಗಿದೆಲ್ಲಾ ಹೇಗೆ ಗೊತ್ತು !"

"ಹೋದ ತಿಂಗಳು ಮೈಸೂರಿಗೆ ಹೋದಾಗ ನಾನು ಟಿ. ನರಸೀಪುರಕ್ಕೆ ಹೋಗಬೇಕಾಯ್ತು ಆಗ ಹೋಗಿದ್ದೆ."

"ಪದ್ಮಿನಿ ಹೇಗಿದ್ದಾಳೆ ?"

"ಅವಳು ಮೈಸೂರಿನ ಒಂದು ಪ್ರೈವೇಟ್ ಕಂಪನಿಯಲ್ಲಿ ಟೈಪಿಸ್ಟ್ ಆಗಿದ್ದಾಳೆ. ದಿನಾ ಓಡಾಟ. ಶಾಸ್ತ್ರಿಗಳು ಮಗಳ ಮದುವೆ ಮಾಡಬೇಕು ಅಂತ ಒದ್ದಾಡ್ತಿದ್ದಾರೆ. ಆದ್ರೆ ಅವಳು ಒಪ್ಪಿಲ್ಲ."

"ಇಷ್ಟು ದಿನ ನೀನ್ಯಾಕೆ ನನ್ನ ಹತ್ತಿರ ಏನೂ ಹೇಳಲಿಲ್ಲ ?"

"ನೀನು ಪದ್ಮಿನಿಯನ್ನು ಮರೆತು ನಿಮ್ಮಮ್ಮ ತೋರಿಸುವ ಬೇರೆ ಯಾವುದಾದರೂ ಹುಡುಗೀನ್ನ ಮದುವೆಯಾಗ್ತಿಯೇನೋ ಅಂದ್ಕೊಳ್ತಿದ್ದೆ. ನಿಮ್ಮಮ್ಮ ಬೇರೆ ನನ್ನ ಹತ್ತಿರ 'ಹೇಳಕೂಡದು' ಅಂತ ಮಾತು ತೊಗೊಂಡಿದ್ರು."

"ಮತ್ತೆ ಈಗ...."

"ನಾನು ಹೇಳಬಾರದೂಂತ ಇದ್ದೆ. ಮೊನ್ನೆ ಪದ್ಮಿನೀನ್ನ ನೋಡಿದ ಮೇಲೆ ನಿಮ್ಮಿಬ್ಬರನ್ನು ಒಂದುಗೂಡಿಸದಿದ್ರೆ ಆ ಪಾಪ ನನ್ನನ್ನು ಸುತ್ತಿಕೊಳ್ಳುತ್ತದೆ ಅನ್ನಿಸ್ತು. ನಮ್ಮಕ್ಕ ಅಂತಸ್ತಿನ ನೆಪದಿಂದ ಪದ್ಮಿನಿಯನ್ನು ಒಪ್ಪದೆ ಇರೋದು

ತಪ್ಪು. ಅವಳದು ವಿಚಿತ್ರ ಸ್ವಭಾವ. ನಾನು ಸ್ವಂತ ತಮ್ಮನಾದ್ರೂ ಅವಳು ನನಗೆ ಮೊದಲು ಮರ್ಯಾದೆ ಕೊಡ್ತಿರಲಿಲ್ಲ. ಆದ್ರೆ ನಿನ್ನ ತಂದೆ ಚಿನ್ನದಂತಹ ವ್ಯಕ್ತಿ. ನನ್ನ ಬಿ.ಇ. ಓದಿಸಿ ಕೆಲಸ ಕೊಡಿಸಿ, ನನ್ನ ಉದ್ಧಾರ ಮಾಡಿದ್ರು. ಆ ಕೃತಜ್ಞತೆಯಿಂದ ನಾನು ನಿಮ್ಮ ವ್ಯವಹಾರ ನೋಡಿಕೊಳ್ಳೋಕ್ಕೆ ಒಪ್ಪಿಕೊಂಡೆ ಇಲ್ಲದಿದ್ರೆ ಖಂಡಿತಾ ಒಪ್ತಿರಲಿಲ್ಲ. ನಿನಗೂ ನಿನ್ನ ತಂದೆಯ ಗುಣಾನೆ ಬಂದಿದೆ. ಅದಕ್ಕಾಗಿ ನಾನು ಪದ್ಮಿನಿ ವಿಚಾರ ಹೇಳಿದೆ. ತೊಗೋ ಇದೇ ಅವಳ ವಿಳಾಸ."

ಅವನು ವಿಳಾಸ ಕೈಯಲ್ಲಿ ಹಿಡಿದು ಕೇಳಿದ "ಅಂಕಲ್, ಪದ್ಮಿನಿ ವಿಚಾರ ಅಮ್ಮ ನಿಮ್ಮ ಹತ್ರ ಹೇಳಿದ್ರಾ ?"

"ಯಾವ ವಿಚಾರ ?"

ಅವನು ಹೇಳಲು ಹಿಂಜರಿದ.

"ಹೇಳಪ್ಪ, ನನ್ನ ಹತ್ತಿರ ಹೇಳಕ್ಕೆ ಯಾಕೆ ಹಿಂಜರಿಯುತ್ತೀಯ ?"

"ಪದ್ಮಿನಿಗೆ ಮೂರು ತಿಂಗಳಾಗಿತ್ತೂಂತ ಹೇಳಿದ್ರು."

"ವ್ಹಾಟ್ !"

"ಅವಳಿಗೆ ಬೇರೆ ಯಾರದೋ ಸ್ನೇಹವಿತ್ತು. ಅವಳು ಅವಳ ತಂದೆ ಈ ಅಪವಾದಾನ್ನ ನಿನ್ನ ಮೇಲೆ ಹೊರಿಸುವುದಕ್ಕೆ ನೋಡಿದ್ರು. ನಾನು ಬೈದು ಕಳುಹಿಸಿದೆ, ನಮಗೆಲ್ಲಾ ಮುಖ ತೋರಿಸಲಾರದೆ ಅವರು ಈ ಮನೆ ಖಾಲಿ ಮಾಡಿದ್ರೂಂತ ಹೇಳಿದ್ರು."

"ಒಂದ್ನಿಮಿಷ ಇರು" ಭಗವಾನ್ ಒಂದು ಫೈಲ್ ತೆಗೆದು ಯಾವುದೋ ಪತ್ರಗಳಿಗೆ ಹುಡುಕಾಡಿದರು.

"ಏನು ಹುಡುಕುತ್ತಿದ್ದೀರ ?"

"ನಿಮ್ತಾಯಿಯ ಮನಸ್ಸು ಯಾರಿಗೂ ಅರ್ಥವಾಗಲ್ಲ. ಅವಳು ಶಾಸ್ತ್ರೀಗಳಿಂದ ಎರಡು ರಸೀದಿ ತೊಗೊಂಡಿದ್ದಾಳೆ 'ನರ್ಸಿಂಗ್ ಹೋಂ ಖರ್ಚಿಗೆ 10,000 ರೂ. ಸಂದಾಯವಾಗಿದೆ' ಮದುವೆ ಖರ್ಚಿಗೆ 40,000 ರೂ. ಸಂದಾಯವಾಗಿದೇಂತ' ಇದರ ಹಿನ್ನೆಲೆ ನನಗೆ ಗೊತ್ತಿಲ್ಲ. ಪದ್ಮಿನೀನ್ನ ನೋಡಿದ್ರೆ ನಿಮ್ಮಮ್ಮ ಹೇಳಿದ್ದು ನಿಜ ಅನ್ನಿಸಲ್ಲ. ವಿಷಯ ಏನೂಂತ ತಿಳಿಯುವುದಕ್ಕೆ ನೀನು ಒಂದು ಸಲ ಟೀ ನರಸೀಪುರಕ್ಕೆ ಹೋಗಿಬರುವುದು ಒಳ್ಳೆಯದು."

"ಖಂಡಿತಾ ಹೋಗಿ ಬರ್‍ತೀನೆ ಅಂಕಲ್. ಸಾಧ್ಯವಾದರೆ ಈ ವಾರಾನೇ ಹೋಗಿಬರ್‍ತೀನೆ."

"ನಾನು ವಿಳಾಸ ಕೊಟ್ಟಿದ್ದು ಹೇಳಬೇಡ."

"ಇಲ್ಲ ಖಂಡಿತಾ ಹೇಳಲ್ಲ....ಅಕಸ್ಮಾತ್ ಮೈಸೂರಿನಲ್ಲಿ ಶಾಸ್ತ್ರಿಗಳು ಭೇಟಿಯಾದ್ರೂಂತ ಹೇಳ್ತೀನಿ" ಎಂದ ಪ್ರಮೋದ್.

ಅವನು ಮನೆಗೆ ಬಂದಾಗ ಗಾಯಿತ್ರಿದೇವಿ ಬಾಗಿಲಲ್ಲೇ ನಿಂತಿದ್ದವರು ಹೇಳಿದರು. "ಈಗ್ತಾನೆ ಶೇಷು ಹೋದ. ಇದುವರೆಗೂ ನಿನಗೇಂತ ಕಾಯ್ತಿದ್ದ"

"ಯಾವ ಶೇಷೂವಮ್ಮ ?"

"ಗುಂಡಮ್ಮನ ಮಗ ಶೇಷಗಿರಿನೋ. ಪಿ.ಯು.ಸಿ.ವರೆಗೂ ನಿನ್ನ ಜೊತೆ ಓದುತ್ತಿದ್ದನಲ್ಲಾ ?.... ಅವನೀಗ ಲೆಕ್ಚರರ್ ಆಗಿದ್ದಾನೆ. ಈ ಶುಕ್ರವಾರ ಮೈಸೂರಿನಲ್ಲಿ ಅವನ ಮದುವೆಯಂತೆ."

"ಹೌದಾ ? ಮೈಸೂರಿನಲ್ಲಿ ಮದುವೇನಾ ?" ತಾಯಿಯ ಕೈಲಿದ್ದ ಲಗ್ನ ಪತ್ರಿಕೆ ತೆಗೆದುಕೊಂಡು ಅವನು ಒಳಗೆ ಪ್ರವೇಶಿಸಿದ.

"ಹೋಗ್ತಿಯೇನೋ ?"

"ನನ್ನ ಜೊತೆಯವರು ಕಿಟ್ಟಿ, ರಾಮು, ಮೂರ್ತಿ ಎಲ್ರೂ ಹೊರಟರೆ ನಾನೂ ಹೋಗ್ತೀನಿ."

"ಇನ್ನೂ ನಾಲ್ಕು ದಿನಗಳಿವೆಯಲ್ಲಾ....ಯೋಚನೆ ಮಾಡು" ಎಂದರಾಕೆ-

ಮರುದಿನ ಪ್ರಮೋದನೇ ಲಾಯರ್ ಆಗಿದ್ದ ಕಿಟ್ಟಿಗೆ ಫೋನ್ ಮಾಡಿದ. ಫೋನ್ ರಿಸೀವ್ ಮಾಡಿದೊಡನೆ ಅವನು ಪ್ರಮೋದ್‌ನನ್ನ ಚೆನ್ನಾಗಿ ತರಾಟೆಗೆ ತೆಗೆದುಕೊಂಡ.

"ಒಂದೇ ಊರಿನಲ್ಲಿದ್ರೂ ಒಂದು ಸಲಾನಾದ್ರೂ ಫೋನ್ ಮಾಡಕ್ಕಾಗಲ್ವೇನೋ ?"

"ನೀನೇ ಮಾಡಬೇಕಿತ್ತು."

"ನೀನಾದ್ರೆ ಕುಬೇರ. ನಾನು ಬಡ ಲಾಯರ್...."

"ಮುಚ್ಕೋ ಬಾಯಿ....ರಾಮು, ಮೂರ್ತಿ, ಇಬ್ಬರ ಫೋನ್ ನಂಬರ್ ಕೊಡು."

"ಯಾಕೆ ಶೀಸು ಮದುವೆಗೆ ಬರ್ತೀರಾಂತ ಕೇಳುವುದಿಕ್ಕಾ ? ನಾವೆಲ್ಲಾ ನಿರ್ಧಾರ ಮಾಡಿಯಾಗಿದೆ. ಶುಕ್ರವಾರ ಬೆಳಗ್ಗೆ ಹೊರಡ್ತಿದ್ದೇನೆ."

"ಹುಂ, ನಾನು ಬರ್ತೀನಿ. ಎಷ್ಟು ಹೊತ್ತಿಗೆ ಹೊರಡೋದು ?"

"ನೀನು ಬರೋದಾದ್ರೆ ಕಾರು ತೊಗೊಂಡು ಬಾರೋ, ಮೈಸೂರು ಸುತ್ತಮುತ್ತ ನೋಡಿಕೊಂಡು, ನಾಲ್ಕು ದಿನ ಜಾಲಿಯಾಗಿದ್ದು ಬರೋಣ."

"ಆಯ್ತಪ್ಪ, ಪುನಃ ಫೋನ್ ಮಾಡು" ಎನ್ನುತ್ತಾ ಪ್ರಮೋದ್ ಫೋನ್ ಕೆಳಗಿಟ್ಟ.

ಟಿ. ನರಸೀಪುರಕ್ಕೆ ಹೋಗಬೇಕೆಂದುಕೊಳ್ಳುತ್ತಿದ್ದಾಗಲೇ ಮೈಸೂರು ಕಡೆಗೆ ಹೋಗಲು ಅವಕಾಶ ಸಿಕ್ಕಿದ್ದಕ್ಕೆ ಪ್ರಮೋದ್‌ಗೆ ತುಂಬಾ ಸಂತೋಷ ವಾಗಿತ್ತು.

ಭಾನುವಾರವಾದ್ರೆ ಪದ್ಮಿನಿ ಮನೆಯಲ್ಲಿರುತ್ತಾಳೆ ಆ ದಿನವೇ ಟಿ ನರಸೀ ಪುರಕ್ಕೆ ಹೊರಡುವುದೆಂದುಕೊಂಡ ಶುಕ್ರವಾರ ಬೆಳಗ್ಗೆ ಆರುವರೆಗೆ ಮೈಸೂರಿಗೆ ಹೊರಡುವುದೆಂದು ಗೆಳೆಯರು ನಿರ್ಧರಿಸಿದರು.

ಶುಕ್ರವಾರ ಬೆಳಗ್ಗೆ ಆರು ಗಂಟೆಯ ಹೊತ್ತಿಗೆ ತಯಾರಾಗಿ ಪ್ರಮೋದ್ ಕಾರು ತೆಗೆದುಕೊಂಡು ಮೆಜೆಸ್ಟಿಕ್ ಸರ್ಕಲ್‌ಬಳಿ ಬಂದ ಗೆಳೆಯರು ಮೂವರೂ ಅಲ್ಲಿ ಕಾದಿದ್ದರು. ಮೂರ್ತಿ ಬ್ಯಾಂಕ್‌ನಲ್ಲಿ ಮ್ಯಾನೇಜರ್ ಆಗಿದ್ದ. ಅವನಿಗೆ ಮದುವೆ ಗೊತ್ತಾಗಿತ್ತು ರಾಮು ಬಟ್ಟೆ ಅಂಗಡಿ ಇಟ್ಟಿದ್ದ ಬಹಳ ದಿನಗಳನಂತರ ಒಟ್ಟಿಗೆ ಸೇರಿದ ಗೆಳೆಯರು ಮನಬಂದಷ್ಟು ಹೊತ್ತು ಹರಟೆದರು ಮದ್ದೂರಿ ನಲ್ಲಿ ಕಾಫಿ ಕುಡಿದರು. ಮೈಸೂರು ತಲುಪುತ್ತಿದ್ದಂತೆ ಮೂರ್ತಿ ಹೇಳಿದ. "ಈಗ 9–45 ಗಂಟೆ. ನನಗೆ ಹಸಿವಿನಿಂದ ಪ್ರಾಣ ಹೋಗ್ತಿದೆ, ಯಾವುದಾದರೊಂದು ಹೋಟೆಲ್ ಹತ್ತಿರ ಕಾರು ನಿಲ್ಲಿಸು. ತಿಂಡಿ ತಿಂದುಕೊಂಡು ಮದುವೆ ಮನೆಗೆ ಹೋಗೋಣ."

"ಮದುವೆ ಮನೆಯಲ್ಲೂ ತಿಂಡಿ ಮಾಡಿರ್ತಾರೋ."

"ಮಾಮೂಲು ಇಡ್ಲಿ, ಕೇಸರಿಬಾತ್ ತಿನ್ನಕ್ಕೆ ಬೇಜಾರು ಕಣೋ. ಬೇರೆ ಏನಾದ್ರೂ ತಿನ್ನಬೇಕು."

ಪ್ರಮೋದ್ ನಗುತ್ತಾ ಒಳ್ಳೆಯ ಹೋಟೆಲ್ ಮುಂದೆ ಕಾರ್ ನಿಲ್ಲಿಸಿದ. ಅವರು ಮದುವೆ ಮನೆಗೆ ಹೋದಾಗ 10–30ಗಂಟೆ.11–15ಕ್ಕೆ ಮುಹೂರ್ತ

ವಿತ್ತು. ಮಧ್ಯಾಹ್ನ ಊಟ ಮುಗಿಸಿ ಕಾರ್ಡ್ಸ್ ಆಡುವವರ ಜೊತೆ ಸೇರಿದರು. 6–30 ಗೆ ಕಾರ್‌ನಲ್ಲಿ ಚಾಮುಂಡಿ ಬೆಟ್ಟಕ್ಕೆ ಹೋಗಿ ಬಂದರು. ಮರುದಿನ ಬೆಳಗ್ಗೆ ತಿಂಡಿ ತಿಂದು ಶೇಷೂಗೆ ಹೇಳಿ ಶ್ರೀರಂಗಪಟ್ಟಣ, ರಂಗನತಿಟ್ಟು, ನಿಮಿಷಾಂಬ, ಕರಿಗಟ್ಟ ನೋಡಿಕೊಂಡು 2–30 ಗೆ ಮದುವೆ ಮನೆಗೆ ಬಂದು ಊಟಮಾಡಿ ನಾಲ್ಕುಗಂಟೆಯ ಹೊತ್ತಿಗೆ ಛತ್ರ ಬಿಟ್ಟು ಒಳ್ಳೆಯ ಹೋಟೆಲ್‌ನಲ್ಲಿ ಎರಡು ರೂಮು ಮಾಡಿದರು. ಸಾಯಂಕಾರ ಕೆ. ಆರ್.ಎಸ್. ನೋಡಿ ಬಂದರು.

ರಾತ್ರಿ ಊಟ ಮಾಡುವಾಗ ರಾಮು ಹೇಳಿದ : "ನಾಳೆ ಬೆಳಗ್ಗೆ ಮೇಲು ಕೋಟೆಗೆ ಹೋಗಿಬರೋಣ."

"ಬೇಡ, ನಾಳೆ ನನ್ನನ್ನು ಟಿ. ನರಸೀಪುರದಲ್ಲಿ ಬಿಟ್ಟು ನೀವು ತಲಕಾಡು, ಸೋಮನಾಥಪುರ, ಬ್ಲಫ್ ನೋಡಿಕೊಂಡು ಬನ್ನಿ. ನಾನು ನನ್ನ ಕೆಲಸ ಮುಗಿಸಿಕೊಂಡು ನೇರವಾಗಿ ಮೈಸೂರಿಗೆ ಬರ್ತೀನಿ. ಕಿಟ್ಟಿ ನೀನೇ ಕಾರು ಡ್ರೈವ್ ಮಾಡು" ಎಂದ.

"ನಂಗೆ ಅಷ್ಟೊಂದು ದೂರ ಡ್ರೈವ್ ಮಾಡಿ ಅಭ್ಯಾಸವಿಲ್ಲ. ಯಾರಾದ್ರು ಡ್ರೈವರ್ ಸಿಕ್ಕಿದ್ರೆ ಒಳ್ಳೆಯದು."

"ಅವರು ಇಳಿದುಕೊಂಡಿದ್ದ ಹೋಟೆಲ್‌ನವರು ಒಳ್ಳೆಯ ಡ್ರೈವರ್‌ನ ಕಳುಹಿಸುವುದಾಗಿ ಹೇಳಿದರು. ಮರುದಿನ ಬೆಳಗ್ಗೆ ತಿಂಡಿ ತಿಂದುಕೊಂಡು ಅವರು ಮೈಸೂರು ಬಿಟ್ಟರು.

"ಲೋ, ನೀನೂ ನಮ್ಮ ಜೊತೆ ಬಾರೋ. ಟಿ. ನರಸೀಪುರದಲ್ಲಿ ನಿನಗೆಂತಹ ಕೆಲಸಾನೋ ?" ಮೂರ್ತಿ ಒತ್ತಾಯಿಸಿದ.

"ದಯವಿಟ್ಟು ನನ್ನ ಒತಾಯಿಸಬೇಡಿ. ಈ ಮುಖ್ಯ ಕೆಲಸ ಪೂರೈಸುವುದಕ್ಕೋಸ್ಕರಾನೇ ನಾನು ನಿಮ್ಮ ಜೊತೆ ಬಂದಿದ್ದು."

"ಆಯ್ತಪ್ಪ, ಬೆಸ್ಟ್ ಆಫ್‌ಲಕ್" ಎಂದ ಕಿಟ್ಟಿ. ಟಿ. ನರಸೀಪುರದ ಬಸ್ಸು ನಿಲ್ದಾಣದ ಬಳಿ ಅವರು ಅವನನ್ನು ಇಳಿಸಿದರು. ಅವನು ಪರ್ಸ್‌ನಿಂದ ಪದ್ಮಿನಿಯ ಮನೆ ವಿಳಾಸ ತೆಗೆದ, ಆಟೋದವರಲ್ಲಿ ಒಬ್ಬನನ್ನು ವಿಚಾರಿಸಿದ. ಆತ ಅಡ್ರೆಸ್ ನೋಡಿ. "ಸಂಸ್ಕೃತ ಪಂಡಿತರಲ್ವಾ ಸರ್. ನನಗೆ ಅವರ ಮನೆ ಗೊತ್ತು, ನನ್ನ ಮಗ ಅವರ ಹತ್ರ ಪಾಠಕ್ಕೆ ಹೋಗ್ತಾನೆ" ಎಂದ.

ಪೇಪರ್ ಓದುತ್ತಾ ವೆರಾಂಡದಲ್ಲಿ ಕುಳಿತಿದ್ದ ಪದ್ಮಿನಿ, ಮನೆಯ ಮುಂದೆ ಆಟೋ ನಿಂತ ಸದ್ದು ಕೇಳಿ ಹೊರಗೆ ಬಂದಳು. ಆಟೋದಿಂದ ಇಳಿಯುತ್ತಿದ್ದ ವ್ಯಕ್ತಿಯನ್ನು ನೋಡಿ ಅವಳ ಹುಬ್ಬುಗಳು ಆಶ್ಚರ್ಯದಿಂದ ಮೇಲೇರಿದವು.

"ನೀನು !"

"ಹೌದು ನಾನೇ, ಒಳಗೆ ಬಾಂತ ಕರೆಯಲ್ವಾ ?"

"ಬಾ ಒಳಗೆ."

ಅವನು ವೆರಾಂಡದಲ್ಲಿ ನಿಂತು ಸುತ್ತಲೂ ಕಣ್ಣುಹಾಯಿಸಿದ. ಪುಟ್ಟ ವೆರಾಂಡ, ಅದಕ್ಕೆ ಸೇರಿದಂತ ಒಂದು ರೂಮು, ಒಳಗಡೆ ಹಾಲ್ ಕಾಣಿಸಿತು.

"ಕೂತ್ಕೊಂತ ಹೇಳಲ್ವಾ ?"

"ಕೂತ್ಕೋ."

ಅವನು ಕುಳಿತು ಶೂ ಬಿಚ್ಚಿದ.

"ನಿಮ್ತಂದೆ ತಾಯಿ ಎಲ್ಲಿ ?"

"ಮೈಸೂರ್‌ಗೆ ಮದುವೆಗೆ ಹೋಗಿದ್ದಾರೆ."

"ನಿನ್ನ ತಮ್ಮಂದಿರು ?"

"ಟ್ಯೂಷನ್ಸ್‌ಗೆ ಹೋಗಿದ್ದಾರೆ."

"ಇಂದು ಎಲ್ಲಿ ?"

"ಇಂದು ಈಗ ಮಂಡ್ಯದಲ್ಲಿದ್ದಾಳೆ."

"ವತ್ಸಲಾ ಈಗ ಅಲ್ಲಿದ್ದಾರಾ ?"

ಅವಳು ಅವನನ್ನು ಒಂದು ಕ್ಷಣ ದಿಟ್ಟಿಸಿದಳು. ಅವನ ಮುಖ ನೋಡಿದಾಗ ಅವನಿಗೇನೂ ತಿಳಿಯದು ಅನ್ನಿಸಿತು.

"ಕಾಫಿ ಕೊಡಲಾ ?"

"ಕಾಫಿ ಕೊಂಚ ಕೊಡು, ಅಡುಗೆ ಮಾಡು. ನಾನು ಊಟಮಾಡಿ ಕೊಂಡೇ ಹೋಗೋದು."

"ಅಡಿಗೆ ಆಗಿದೆ, ಊಟಮಾಡೋದಾದ್ರೆ ಮಾಡು."

"ನಂಗೆ ಹಸಿವಿಲ್ಲ, ಕಾಫಿ ಕೊಡು."

ಅವಳು ಕಾಫಿ ತಂದು ಅವನಿಗೆ ಕೊಟ್ಟಳು.

"ಬಾ ಕೂತ್ಕೋ ಪದ್ಮಿನಿ ನಿನ್ನ ಹತ್ತಿರ ಮಾತಾಡಬೇಕು."

ಅವಳು ಕುಳಿತಳು.

"ಪದ್ಮಿನಿ, ಯಾರಿಗೂ ತಿಳಿಸದೆ. ನೀವು ಬೆಂಗಳೂರು ಯಾಕೆ ಬಿಟ್ರಿ ?"

"ಯಾರಿಗೆ ಹೇಳಬೇಕಾಗಿತ್ತು ?"

"ನನಗೆ...."

"ನಿಮ್ಮಮ್ಮ ತಿಳಿಸಿರಬೇಕು ಅಂದ್ಕೊಂಡಿದ್ದೆ."

"ನೀವು ಊರು ಬಿಡಕ್ಕೆ ಕಾರಣವೇನು ?"

"ಅದನ್ನು ನಿನಗ್ಯಾಕೆ ಹೇಳಬೇಕು ?"

"ಪಮ್ಮಿ....!"

"ಬಡವರಾದವರು ಶ್ರೀಮಂತರ ಮನೆ ಎದುರಿಗಿರುವುದೇ ಒಂದು ಮುಖ್ಯವಾದ ತಪ್ಪು...."

"ನೀನು ಒಗಟಿನಲ್ಲಿ ಮಾತಾಡಬೇಡ, ಏನಾಯ್ತು ಹೇಳು."

"ಅದನ್ನು ತಿಳಿದು ನೀನೇನು ಮಾಡ್ತೀಯ ? ಬರೋದು ಬಂದೆ, ಜೊತೆಯಲ್ಲಿ ಮಾಧುರೀನ್ನ ಕರೆದುಕೊಂಡು ಬರಬಾರದಿತ್ತಾ ?"

"ಯಾವ ಮಾಧುರಿ ?"

"ಓ ಮದುವೆಯಾದ ಮೇಲೆ ಹೆಸರು ಬದಲಾಯಿಸಿದ್ದೀಯ ?"

"ಯಾರ ಮದುವೆ ಯಾವ ಮಾಧುರಿ ?"

ಅವಳಿಗ್ಯಾಕೋ ಅನುಮಾನವಾಯ್ತು "ಅತ್ತೆ ನಿನಗೆ 'ಮಾಧುರಿ' ಅನ್ನುವ ಹುಡುಗಿಯ ಜೊತೆ ಮದುವೆ ಗೊತ್ತಾಗಿದೇಂತ ಹೇಳಿದ್ರು."

"ಅವರ ಮಾತನ್ನು ನೀನು ನಂಬಿಬಿಟ್ಟೆಯಾ ?"

"ನಂಬದೆ ಹೇಗಿರೋದು ? ನಿಮ್ಮ ತಾಯಿ ನಮ್ಮ ಮನೆಗೆ ಬಂದು ಹೊರಿಸಿಹಿ ಕೊಟ್ಟು ವಿಷಯ ಹೇಳಿದ್ರು."

"ನಮ್ತಾಯಿ ತುಂಬಾ ಸುಳ್ಳು ಹೇಳ್ತಾರೇಂತ ನಿಮಗೆಲ್ಲಾ ಗೊತ್ತಿಲ್ವಾ?"

"ನೀನು ಮದುವೆಯಾಗಿ ನನ್ನೆದುರಿಗೇ ಬೇರೆ ಹುಡುಗಿಯ ಜೊತೆ ಸಂಸಾರ ಮಾಡಿಕೊಂಡಿರುವುದನ್ನು ನೋಡಬೇಕಲ್ಲಾಂತ ದುಃಖವಾಗಿತ್ತು. ಅಷ್ಟರಲ್ಲಿ ನಮ್ಮ ಇಂದು ಹೊಸ ಸಮಸ್ಯೆ ತಂದಿಟ್ಟಳು....ನಾವು ಊರು ಬಿಡೋದು ಅನಿವಾರ್ಯವಾಯ್ತು."

"ಇಂದು ಸಮಸ್ಯೆ ತಂದಳಾ ?"

"ಇಂದುಗೆ ಕ್ಯಾಸೆಟ್ಸ್ ಹುಚ್ಚಿದ್ದುದು ನಿನಗೆ ಗೊತ್ತಿತ್ತಲ್ಲಾ ? ನಾನು ಕೆಲಸಕ್ಕೆ ಸೇರಿದ ಮೇಲೆ ಒಂದು ಟೇಪ್‌ರೆಕಾರ್ಡರ್ ತೆಗೆದುಕೊಂಡಿದ್ದೆ. ಇಂದು ನಮ್ಮ ಮುಂದಿನ ಬೀದಿಯಲ್ಲಿದ್ದ ಕ್ಯಾಸೆಟ್ಸ್ ಲೈಬ್ರರಿಗೆ ಹೋಗಿ ಕ್ಯಾಸೆಟ್ಸ್ ತರೋಳು. ಅಲ್ಲಿ ಅವಳಿಗೆ ಕ್ಯಾಸೆಟ್ಸ್ ಅಂಗಡಿ ಓನರ್ ಮಗ ಮಹೇಶ್‌ನ ಪರಿಚಯವಾಯ್ತಂತೆ. ಖಾಲಿ ಕ್ಯಾಸೆಟ್ಸ್‌ನಲ್ಲಿ ತನ್ನ ಪ್ರೀತಿಯ ಮಾತುಗಳನ್ನು ರೆಕಾರ್ಡ್ ಮಾಡಿ ಕಳುಹಿಸ್ತಿದ್ದ. ಇವಳು ಉತ್ತರ ಕಳುಹಿಸ್ತಿದ್ಳು, 'ನಿನ್ನೇ ಮದುವೆಯಾಗ್ತೀನೆ' ಅಂತ ನಂಬಿಸಿದ. ನಮಗಿದೆಲ್ಲಾ ತಿಳಿಯುವ ಹೊತ್ತಿಗೆ ಅವರು ತುಂಬಾ ಮುಂದುವರೆದಿದ್ರು....ಇಂದುಗೆ ಮೂರುತಿಂಗಳಾಗಿಬಿಟ್ಟಿತ್ತು. ನಮ್ತಂದೆ ಅವನನ್ನು ಭೇಟಿ ಮಾಡಿದ್ರು. "ನಮ್ತಂದೆ ಈ ಮದುವೆಗೆ ಒಪ್ಪಲ್ಲ....ನನಗೆ ಇಂದೂನ್ನ ಬಿಡಕ್ಕೆ ಮನಸ್ಸಿಲ್ಲ. ನೀವೇ ನನಗೆ ಕೆಲಸ ಕೊಡಿಸಿ ಸರಳವಾಗಿ ಮದುವೆಯಾಗಿ, ಸಂಸಾರ ಮಾಡ್ತೀನಿ" ಅಂದ.

"ಪರವಾಗಿಲ್ಲ ಹುಡುಗ."

"ಅವನಿಗೆ ಕೆಲಸಕೊಡಿಸುವ ಚೈತನ್ಯ ಅಪ್ಪಂಗಿರಲಿಲ್ಲ. ಈ ವಿಷಯ ನಿಮ್ಮ ತಾಯಿ ಕಿವಿಗೆ ಬಿತ್ತು. ಅವರು ನಮ್ತಂದೇನ್ನ ಕರೆಸಿ "ನಿಮಗೆ 50,000ರೂ. ಕೊಡ್ತೀನೆ. ನೀವು ಅದನ್ನು ಯಾವುದಕ್ಕಾದ್ರೂ ಉಪಯೋಗಿಸಿಕೊಳ್ಳಿ. ಆದ್ರೆ ಊರು ಬಿಟ್ಟು ಹೋಗಬೇಕು. ನೀವೆಲ್ಲಿದ್ದೀರಾಂತ ಯಾರಿಗೂ ತಿಳಿಯಬಾರದು ಅಂತ ಹೇಳಿದರಂತೆ."

"ಛಿ. ಛಿ."

"ನಮಗೆ ಹಣದ ಅವಶ್ಯಕತೆಯಿತ್ತು. ನಮ್ಮಕ್ಕ ಭಾವನ್ನ ಕರೆಸಿ ವಿಷಯ ತಿಳಿಸಿದೆವು. ನಮ್ಮ ಭಾವ ಅಪ್ಪಂಗೆ ಈ ಊರಲ್ಲಿ ಕೆಲಸ ಕೊಡಿಸಿದರು. ಇಂದು–ಮಹೇಶ ಇಬ್ಬರಿಗೂ ಒಂದು ವ್ಯವಸ್ಥೆ ಆಗಬೇಕಿತ್ತು ನಂಜನಗೂಡಿನಲ್ಲಿ ಮದುವೆಮಾಡಿ ಮಂಡ್ಯಾದಲ್ಲಿ ಒಂದು ಸಣ್ಣ ಅಂಗಡಿ ಹಾಕಿಕೊಟ್ರು. ನನಗೆ ಬೆಂಗಳೂರು ಬಿಡಕ್ಕೆ ಇಷ್ಟವಿರಲಿಲ್ಲ. ಯಾರದಾದ್ರೂ ಮನೇಲಿ 'ಪೇಯಿಂಗ್ ಗೆಸ್ಟ್' ಆಗಿ ಇರೋದು ಅಂದ್ಕೊಂಡಿದ್ದೆ. ಆದ್ರೆ ನಿಮ್ಮಮ್ಮ ನಿನ್ನ ಮದುವೆ ಸೆಟ್ಲ್ ಆದ ವಿಚಾರ ಹೇಳಿದ್ರಿಂದ ನನ್ನಲ್ಲಿ ಉಳಿದಿದ್ದ ಚೂರು–ಪಾರು ಆಸೆಯೂ ಕಮರಿಹೋಯ್ತು."

"ನೀನ್ಯಾಕೆ ನನಗೆ ಕಾಗದ ಬರೆಯಲಿಲ್ಲ ?"

"ನಿನ್ನ ಬಾಂಬೆ ವಿಳಾಸಕ್ಕೆ 5 ಕಾಗದ ಬರೆದಿದ್ದೆ. ಅವುಗಳು ತಲುಪ ಲಿಲ್ವಾ ?"

"ಇಲ್ಲ, ಅಲ್ಲಿ ಪುರುಷೋತ್ತಮರಾವ್ ಏನೋ ಕಿತಾಪತಿ ಮಾಡಿದ್ರೂಂತ ಕಾಣುತ್ತೆ....ಪಮ್ಮಿ....ನನಗೆ ಬೇರೆ ಹುಡುಗಿಯರನ್ನು ತೋರಿಸಿದ್ದು ನಿಜ. ಆದ್ರೆ ನನ್ನ ಮೈಮನಗಳಲ್ಲಿ ನೀನು ತುಂಬಿರುವಾಗ ನಾನು ಬೇರೆಯವರನ್ನು ಹೇಗೆ ಮದುವೆಯಾಗಲಿ ? ಬಂದ ಹೆಣ್ಣುಗಳನ್ನು ಒಂದಲ್ಲಾ ಒಂದು ಕಾರಣ ಹೇಳಿ ತಿರಸ್ಕರಿಸುತ್ತಾ ಬಂದೆ. ಎರಡು ದಿನಗಳ ಹಿಂದೆ ಭಗವಾನ್ ಅಂಕಲ್ ನಿಂದ ನಿನ್ನ ವಿಳಾಸ ಸಿಕ್ಕಿತು."

"ಪದ್ಮಿನಿ ಮನೆಯವರೆಲ್ಲಿ ?" ಅಂತ ನೀನು ನಿಮ್ಮಮ್ಮನ್ನ ಕೇಳಲಿಲ್ವಾ ?"

"ಕೇಳ್ದೆ."

"ಅವರೇನು ಹೇಳಿದರು ?" 69712

"ಏನೋ ಹೇಳಿದ್ರು ಬಿಡು."

"ನೀನು ಹೇಳಲೇಬೇಕು....'ಏನೋ ಹೇಳಿದ್ರು' ಅಂತ ಮಾತು ಮರೆಸ ಬೇಡ."

"ನಾನದನ್ನು ಹೇಳೋದ್ರಿಂದ ಏನು ಪ್ರಯೋಜನ ಪಮ್ಮಿ ? ಅಮ್ಮನಿಗೆ ನಿನ್ನ ಬಗ್ಗೆ ಅಭಿಮಾನವಿದ್ರೂ, ನೀನು ಸೊಸೆಯಾಗಿ ಬರೋದು ಕೊಂಚಾನೂ ಇಷ್ಟವಿಲ್ಲ. ಆದ್ರಿಂದ ನನ್ನ ಮನಸ್ಸು ಕೆಡಿಸುವುದಕ್ಕೆ ಏನೋ ಹೇಳಿದ್ರು. ನಾನದನ್ನು ನಂಬಲಿಲ್ಲ."

"ನೀನು ಏನೂಂತ ಹೇಳದಿದ್ರೂ ಅವರಂದಿರುವ ಮಾತುಗಳನ್ನು ನಾನು ಊಹಿಸಬಲ್ಲೆ. ಒಂದು ಹುಡುಗಿಯ ಮೇಲೆ ಮತ್ತೇನು ಅಪವಾದ ಹೊರಿಸಲು ಸಾಧ್ಯ ? ನಾನು ನಡತೆಗೆಟ್ಟವಳೂಂತ ಹೇಳಿರಬೇಕು ಅಥವಾ...."

"ಸಾಕು ಪಮ್ಮಿ, ಆ ವಿಚಾರ ಬೇಡ. ನನ್ನ ಪ್ರಶ್ನೆಗೆ ನೇರ ಉತ್ತರ ಹೇಳು. ನೀನು ನನ್ನನ್ನು ಪ್ರೀತಿಸ್ತಿದ್ದೀಯೋ ಇಲ್ವೋ ?"

ಪದ್ಮಿನಿ ಮುಖ ಮುಚ್ಚಿಕೊಂಡು ಬಿಕ್ಕಿದಳು. ಅವನಿಗೆ ಬೇರೆ ಯಾವ ಉತ್ತರವೂ ಬೇಕಿರಲಿಲ್ಲ. ಎದ್ದು ಬಂದು ಅವಳನ್ನಪ್ಪಿ ಹೇಳಿದ : "ನಾನು ನಿನ್ನನ್ನು ತುಂಬಾ ಪ್ರೀತಿಸ್ತೇನೆ ಪಮ್ಮಿ. ನೀನು ಎದುರಿಗಿರುವಾಗ ನನಗೆ 'ನಾನು

ನಿನ್ನನ್ನು ಪ್ರೀತಿಸ್ತೀನೆ' ಅನ್ನುವ ಅರಿವಿದ್ದರೂ, ನೀನಿಲ್ಲದೆ ಬಾಳೋದು ಕಷ್ಟಾಂತ ಅರಿವಾಗಿದ್ದು ನಾನು ಬಾಂಬೆಗೆ ಹೋದ ಮೇಲೇನೆ."

"ನಿನ್ನಿಂದ ದೂರವಾಗಿ ನಾನು ಸುಖವಾಗಿದ್ದೀನಾ ಪ್ರಮೋದ್ ? ಅಪ್ಪನ ಕಾಲಿಗೆ ಬಿದ್ದು ಕೇಳಿದೆ. 'ಬೆಂಗಳೂರು ಬಿಡೋದು ಬೇಡಾಂತ' ಆದ್ರೆ ಅಪ್ಪ ಒಪ್ಪಲಿಲ್ಲ. ಇಂದುವಿನ ಸಮಸ್ಯೆ ಅವರ ತಲೆ ತಿನ್ನುತ್ತಿದ್ದುದರಿಂದ ನನ್ನ ಸಂಕಟ ಅವರಿಗೆ ಅರ್ಥವಾಗಲಿಲ್ಲ."

"ಹಳೆಯದೆಲ್ಲಾ ಮರೆತುಬಿಡು ಪಮ್ಮಿ. ಇನ್ನು ನಿನ್ನ ಕಷ್ಟಗಳೆಲ್ಲಾ ಪರಿಹಾರವಾಯ್ತು...."

ಅವಳು ನಕ್ಕಳು.

ಅವನು ಅವಳ ದುಂಡುಕೆನ್ನೆಗೆ ತುಟಿಯೊತ್ತಿ ಕೇಳಿದ "ನನಗೆ ಹೊಟ್ಟೆಗೇನಾದ್ರೂ ಹಾಕ್ತೀಯೋ ಇಲ್ವೋ ?"

"ನೀನು ನನ್ನನ್ನು ಹೀಗೆ ಹಿಡಿದಿದ್ರೆ ನಾನೇನು ಮಾಡಲಿ ? ಈಗ ಹುಡುಗರು ಬರ್ತಾರೆ ಒಟ್ಟಿಗೆ ಊಟಮಾಡಿ."

ಅವಳು ಹಪ್ಪಳ ಸಂಡಿಗೆ ಕರಿಯುವ ವೇಳೆಗೆ ಅವಳ ತಮ್ಮಂದಿರು ಬಂದರು. ಅವರ ಊಟವಾದ ಮೇಲೆ ಅವನು ಅವಳನ್ನು ಕೂಡಿಸಿ ಬಡಿಸಿದ. ನಂತರ ಹರಟುತ್ತಾ ಕುಳಿತಾಗ ಅವನು ಕೇಳಿದ. "ಪಮ್ಮಿ, ನಾವು ಯಾವಾಗ ಮದುವೆಯಾಗೋಣ ?"

"ಬೇಡದ ಪ್ರಶ್ನೆ ಕೇಳಬೇಡ ಪ್ರಮೋದ್. ನನಗಿವತ್ತು ತುಂಬಾ ಸಂತೋಷವಾಗಿದೆ. ನಾನು ಅಡಿಗೆ ಮಾಡಿ ಬಡಿಸಿದ್ದನ್ನು ನೀನು ಸಂತೋಷವಾಗಿ ಊಟಮಾಡಿದ್ದೀಯ ಇಂತಹ ಅವಕಾಶ ಪುನಃ ನಮ್ಮ ಜೀವನದಲ್ಲಿ ಬರದೇ ಇರಬಹುದು."

"ಯಾಕೆ ಹಾಗಂತೀಯ ? ಜೀವನ ಪೂರ್ತಿ ನೀನು ಬಡಿಸಬೇಕು. ನಾನು ಊಟಮಾಡಬೇಕು."

ಅವಳು ಉತ್ತರಿಸಲಿಲ್ಲ.

"ಪಮ್ಮಿ, ನೀನು ನನ್ನ ಪ್ರಶ್ನೆಗೆ ಉತ್ತರಕೊಡ್ತಿಲ್ಲ."

"ಪ್ರಮೋದ್ ನನ್ನ ಮದುವೆಯಿಂದ ನಿಮ್ಮ ಮನೆಯ ನೆಮ್ಮದಿ ಹಾಳಾಗಬಾರದು....ನೀನು ನಿಮ್ಮಮ್ಮನಿಗೆ ಒಬ್ಬನೇ ಮಗ....ನಿನ್ನಿಂದ ದೂರ

ವಾಗಿ ಅವರು ಇರಲಾರರು....ನಿನ್ನ ಕೈ ಹಿಡಿದ ಮೇಲೆ ನಾನೂ ನಿನ್ನಿಂದ ದೂರ ವಾಗಿರಲಾರೆ. ಆದ್ದರಿಂದ ನೀನು ಈ ಮದುವೆಗೆ ನಿಮ್ಮ ತಾಯಿಯ ಒಪ್ಪಿಗೆ ಪಡೆಯಲೇಬೇಕು."

"ಅಮ್ಮ ಈ ಮದುವೆಗೆ ಒಪ್ಪಲ್ಲ, ನಾವಿಬ್ರೂ ಯಾವುದಾದ್ರೂ ಪುಣ್ಯ ಕ್ಷೇತ್ರದಲ್ಲಿ ಮದುವೆಯಾಗೋಣ....ಅಮ್ಮ ಆಮೇಲೆ ಏನೂ ಮಾಡಕ್ಕಾಗಲ್ಲ."

"ನೋ ಪ್ರಮೋದ್....ಅದು ಸಾಧ್ಯವಿಲ್ಲ....ಮದುವೆಯಾದ ಮೇಲೆ ನಮ್ಮ ದಾಂಪತ್ಯ ಜೀವನ ಸುಗಮವಾಗಿ ಸಾಗಬೇಕಾದರೆ ಅವರ ಒಪ್ಪಿಗೆ ಅತ್ಯಗತ್ಯ."

"ಅವರು ಒಪ್ಪದಿದ್ರೆ ನೀನು ನನ್ನ ಮದುವೆಯಾಗಲ್ವಾ ?"

"ನಿಮ್ಮಮ್ಮನ್ನ ಮದುವೆಗೆ ಒಪ್ಪಿಸುವ ಶಕ್ತಿ ನಿನಗಿಲ್ವಾ ?"

"ಖಂಡಿತಾ ಇದೆ. ನಮ್ಮಮ್ಮನಿಗೂ ನಾನು ಹಠವಾದೀಂತ ಅರ್ಥವಾಗಿದೆ. ಅವರು ಈ ಮದುವೆಗೆ ಒಪ್ಪುವಂತೆ ಮಾಡ್ತೀನಿ...."

ಅವನು ಅವಳಿಗೆ ಸರ್ವೋತ್ತಮ್–ಅದಿತಿ ಪ್ರಕರಣ ಹೇಳಿದ. ಅವರು ಮಾತನಾಡುತ್ತಿರುವಾಗಲೇ ಶಾಸ್ತ್ರಿಗಳು ಬಂದರು. ಪ್ರಮೋದ್‌ನನ್ನು ನೋಡಿ ಅವರ ಮುಖ ಕಪ್ಪಿಟ್ಟರೆ, ಸೀತಮ್ಮನ ಮುಖ ಅರಳಿತು.

"ಏನಪ್ಪಾ ಇಷ್ಟು ದೂರ ?" ಸೀತಮ್ಮ ಕೇಳಿದರು.

"ನಿಮ್ಮ ಮಗಳನ್ನು ನನಗೆ ಮದುವೆಮಾಡಿಕೊಡಿ ಅಂತ ಕೇಳಕ್ಕೆ ಬಂದಿದ್ದೇನೆ ಅತ್ತೆ."

ಶಾಸ್ತ್ರಿಗಳು ಕುರ್ಚಿಯಲ್ಲಿ ಕುಳಿತು, ಉತ್ತರೀಯದಿಂದ ಗಾಳಿ ಹಾಕಿ ಕೊಳ್ಳುತ್ತಾ ಹೇಳಿದರು. "ಈ ಮದುವೆ ನಡೆಯುವಂತಹದ್ದಲ್ಲ. ನನ್ನ ಮಗ ಳನ್ನು ಮರೆತು ಬೇರೆಯವರನ್ನು ಮದುವೆಯಾಗಿ ಸುಖವಾಗಿರು."

"ಪದ್ಮನ್ನ ಮರೆತುಬಿಡೂಂತ ಹೇಳ್ತಿದ್ದೀರ....ಅವಳನ್ನು ಮರೆತು ನಾನು ಹೇಗೆ ಸುಖವಾಗಿರೋದು ?"

"ನೋಡಪ್ಪಾ....ನಾವು ಮಾನ ಹೋಯ್ತುಂತ ಅಳ್ತಿರುವಾಗ ನಿಮ್ಮಮ್ಮ 50,000 ರೂ. ಕೊಟ್ಟು ಮಾನ ಉಳಿಸಿದ್ದಾರೆ. ನಮ್ಮ ಇಂದೂಗೆ ಬಾಳು ಕೊಟ್ಟಿದ್ದಾರೆ. ಅದರ ಬದಲು ಅವರು ಕೇಳಿದ್ದು ಒಂದೇ ಒಂದು ನೀವು ಮನೆ ಖಾಲಿ ಮಾಡೀಂತ. ನಾನವರಿಗೆ ಮಾತು ಕೊಟ್ಟಿದ್ದೇನೆ."

"ಬೆಂಗಳೂರು, ಬೊಂಬಾಯಿ, ಕಲ್ಕತ್ತಾ ಮುಂತಾದ ಕಡೆ ಮನೆ ಬಿಡಿಸಕ್ಕೆ ಸಾವಿರಾರು ರೂಪಾಯಿ 'ಪಗಡಿ' ಅಂತ ಕೊಡ್ತಾರೆ ನೀವು ಯಾಕೆ ಮನೆ ಬಿಟ್ರಿ. ಅದು ನಿಮ್ಮನೆ ಅಂತ ನಿಮಗೆ ಗೊತ್ತಿರಲಿಲ್ವಾ ?"

"ನಮ್ಮನೆ ?"

"ಹೌದು, ನಮ್ತಂದೆ ವಿಲ್‌ನಲ್ಲಿ ಸಮಸ್ತ ಆಸ್ತಿಯನ್ನು ಅಮ್ಮನ ಹೆಸರಿಗೆ ಮಾಡಿ, ಅಮ್ಮನ ನಂತರ ಶಾಸ್ತ್ರಿಗಳಿರುವ ಮನೆ ಸೀತಮ್ಮನಿಗೆ ಸೇರ ಬೇಕು. ಯಾವ ಕಾರಣಕ್ಕೂ ಆ ಮನೆ ಮಾರಾಟ ಮಾಡಕೂಡದು ಅಂತ ಬರೆದಿದ್ದಾರೆ. 50,000 ರೂ. ನಮ್ತಾಯಿ ಧರ್ಮಕ್ಕೆ ಕೊಟ್ಟಿಲ್ಲ."

"ನಮಗೆ ಈ ವಿಚಾರ ತಿಳಿಯದು. ಅದು ಅಲ್ಲದೆ ಅವರೇ ಹೇಳಿದ್ರು. ಇಂದು ನಿಮ್ಮ ಮನೆತನದ ಗೌರವಕ್ಕೆ ಮಸಿ ಬಳಿದಿದ್ದಾಳೆ....ನಿಮ್ಮ ಮನೆ ತನಕ್ಕೆ ಸೇರಿದ ಹುಡುಗಿಯನ್ನ ನಾನು ಸೊಸೆ ಮಾಡಿಕೊಳ್ಳಲ್ಲ. ಅವನು ಬಾಂಬೆಯಲ್ಲೊಂದು ಹುಡುಗಿನ್ನ ಮೆಚ್ಚಿ ಮದುವೆಯಾಗಕ್ಕೆ 'ಹುಂ' ಅಂದಿ ದ್ದಾನೆ. ಇಲ್ಲಿಗೆ ಬಂದ್ಮೇಲೆ ಪದ್ಮಿನೀನ್ನ ನೋಡಿ ಅವನ ಮನಸ್ಸು ಬದಲಾಯಿಸ ಬಹುದು. 50,000 ಕೊಡ್ತೀನಿ. ನೀವು ಮನೆ ಬಿಡಿ ಅಂತ ಹೇಳಿದ್ರು."

"ಮಾವ, ಪದ್ಮಿನಿ ಎಂದೆಂದಿಗೂ ನನ್ನವಳು. ಇನ್ನೊಂದು ವಾರದಲ್ಲಿ ನಮ್ಮಮ್ಮನ್ನ ಹೆಣ್ಣು ಕೇಳಕ್ಕೆ ಕಳಿಸ್ತೀನಿ. ನೀವು ಧೈರ್ಯವಾಗಿರಿ. ಪದ್ಮಿನಿ ನಾನಿಲ್ಲದೆ ಬದುಕಲಾರಳು. ನಾನಿರುವಾಗ ನೀವು ಹೆದರುವ ಕಾರಣವಿಲ್ಲ. ನಮ್ಮಮ್ಮ ಈ ಮದುವೆಗೆ ಒಪ್ಪದಿದ್ರೆ ಪದ್ಮಿನಿಗೋಸ್ಕರ ಆಸ್ತಿಪಾಸ್ತಿ, ಹೆತ್ತಮ್ಮ ನನ್ನೂ ತೊರೆಯಲು ಸಿದ್ಧ ನಾನು."

"ಛೆ ಛೆ, ನೀನು ಹಾಗನ್ನಬಾರದಪ್ಪಾ !"

"ಒಳ್ಳೆಯ ತಾಯಿಯರನ್ನು ಪಡೆಯಲು ಪುಣ್ಯ ಮಾಡಿರಬೇಕು. ನಮ್ಮಮ್ಮನ ಕುಹಕತನ ನಿಮಗರ್ಥವಾಗಿಲ್ಲ, ನಾನಿನ್ನು ಬರ್ತೀನಿ."

ಅವನು ಖಾಸಗಿ ಬಸ್ಸೊಂದನ್ನು ಹತ್ತಿ ಮೈಸೂರು ತಲುಪಿದ, ತಾಯಿ ತಾನು ಮದುವೆಗೆ ಹೊರಟಾಗ 'ನರಸೀಪುರಕ್ಕೆ ಹೋಗಬೇಡ' ಅಂದಿದ್ದು ನೆನಪಾಯ್ತು. "ನರಸೀಪುರದಲ್ಲಿ ಅಕಸ್ಮಾತ್ ಪದ್ಮಿನಿ ಮಗನ ಕಣ್ಣಿಗೆ ಬಿದ್ದರೆ ಅನ್ನುವ ಭಯವೇನೋ ?" ಅಂದುಕೊಂಡ. ಇಂದುವಿನ ಪ್ರಸಂಗವನ್ನು ತಮ್ಮ ಅನುಕೂಲಕ್ಕೆ ಬಳಸಿಕೊಂಡು ಪದ್ಮಿನಿಯ ಮೇಲೆ ಅಪವಾದ ಹೊರಿಸಿದ

ತಾಯಿಯ ದುರ್ಬುದ್ಧಿ ನೆನೆದು ಅವನಿಗೆ ಬೇಸರವಾಯ್ತು. ಅವನು ಆ ದಿನವೇ ಮೈಸೂರಿಗೆ ಹೊರಡಲು ತೀರ್ಮಾನಿಸಿದ.

ಅವನು ಹೋಟೆಲ್ ರೂಂ ತಲುಪಿ ಫ್ಯಾನ್‌ಗೆ ಮುಖವೊಡ್ಡಿ ಮಲಗಿದ. 7–30 ಹೊತ್ತಿಗೆ ಅವನ ಸ್ನೇಹಿತರು ಬಂದರು.

"ನಾನಿವತ್ತೇ ಊರಿಗೆ ಹೋಗಬೇಕು, ನೀವು ನಿಧಾನವಾಗಿ ಬನ್ನಿ" ಎಂದ ಪ್ರಮೋದ್.

"ಯಾಕಿವತ್ತೇ ಹೋಗಬೇಕು ?"

"ನಮ್ಮ ಅಂಕಲ್ ಫೋನ್ ಮಾಡಿದ್ರು. ನಮ್ಮಮ್ಮಂಗೆ ಹುಷಾರಿಲ್ಲಂತೆ"

"ಏನಾಗಿದೆಯಂತೆ ?"

"ಬಿ. ಪಿ. ಕೊಂಚ ಹೆಚ್ಚಾಗಿದೆಯಂತೆ. ಆಂಟಿ ಅಂಕಲ್ ಅಲ್ಲೇ ಇದ್ದಾರಂತೆ. ಗಾಬರಿಗೆ ಅವಕಾಶವಿಲ್ಲಾಂತ ಹೇಳಿದರು. ಆದರೂ ನನಗೆ ಆತಂಕ."

"ನಿಮ್ಮ ಅಂಕಲ್ ಇದ್ದಾರಲ್ಲಾ ಮತ್ತೆ ಯಾಕೆ ಚಿಂತೆ ?" ರಾಮು ಹೇಳಿದ.

"ನೋಡು ಪ್ರಮೋದ್, ನಮಗೆ ಸುತ್ತಾಡಿ ಸಾಕಾಗಿದೆ. ಈಗ ಊಟ ಮಾಡಿ ಮಲಗೋಣ. ಬೆಳಗ್ಗೆ 4 ಗಂಟೆಗೇ ಎದ್ದು ಐದು ಗಂಟೆ ಹೊತ್ತಿಗೆ ನೀನು ನಿಮ್ಮ ಮನೇಲಿರ್ತೀಯ."

"ನಾನು ನಮ್ಮಮ್ಮಂಗೆ ಫೋನ್ ಮಾಡಿ ಬರ್ತೀನಿ" ಎನ್ನುತ್ತಾ ಪ್ರಮೋದ್ ಎದುರಿಗಿದ್ದ ಬೂತ್‌ಗೆ ಹೋಗಿ ಭಗವಾನ್ ಅಂಕಲ್‌ಗೆ ಫೋನ್ ಮಾಡಿದ. ಅವನು ಪದ್ಮಿನಿಯನ್ನು ಭೇಟಿಮಾಡಿದ್ದ ವಿಚಾರ ಕೇಳಿ ಅವರು ತುಂಬಾ ಸಂತಸಪಟ್ಟರು.

ಮರುದಿನ ಎಂಟೂವರೆಯ ಹೊತ್ತಿಗೆ ಪ್ರಮೋದ್ ಮನೆಯಲ್ಲಿದ್ದ.... ಎರಡನೇ ಡೋಸ್ ಕಾಫಿ ಕುಡಿಯುತ್ತಾ ಪೇಪರ್ ಓದುತ್ತಿದ್ದ ಗಾಯಿತ್ರಿದೇವಿ ಮಗನನ್ನು ನೋಡಿ ಆಶ್ಚರ್ಯದಿಂದ ಕೇಳಿದರು. "ಇದೇನೋ ಇಷ್ಟು ಬೇಗ ಬಂದುಬಿಟ್ಟೆ ?"

"ನಿನಗೊಂದು ಒಳ್ಳೆಯ ಸುದ್ದಿ ಹೇಳೋಣಾಂತ ಬೇಗ ವಾಪಸ್ಸು ಬಂದೆ"

"ಏನಪ್ಪಾ ಆ ಗುಡ್‌ನ್ಯೂಸ್ ?"

"ಟಿ. ನರಸೀಪುರದಲ್ಲಿ ಪದ್ಮಿನೀನ್ನ ಭೇಟಿಮಾಡಿದ್ದೆ."

"ಪದ್ಮಿನೀನ್ನಾ ?"

"ಶೇಷು ಅವರ್ಮನೆಯವರನ್ನೂ ಮದುವೆಗೆ ಕರೆದಿದ್ದ. ಶಾಸ್ತ್ರಿಗಳ ಜೊತೆ ನರಸೀಪುರಕ್ಕೆ ಹೋಗಿ ಪದ್ಮಿನೀನ್ನ ಭೇಟಿಮಾಡಿ ಬಂದೆ'"

"ನೀನು ಅವಳ ಮನೆಗೆ ಹೋಗಬಾರದಿತ್ತು."

"ಯಾಕೆ ?"

"ಅವಳಂತಹವಳ ಮನೆಗೆ ನೀನು ಹೋಗಬಾರದಿತ್ತು."

"ಅಂತಹವಳೊಂಪ್ರೆ ಎಂತಹವಳೊಂತ ಅರ್ಥ ?"

"ಪುನಃ ಪುನಃ ಯಾಕಪ್ಪಾ ಆ ವಿಚಾರ ಜ್ಞಾಪಿಸ್ತೀಯ ?"

"ಅಮ್ಮ ನೀನು ಹೇಳಿದ್ದೆಲ್ಲಾ ಸುಳ್ಳೂಂತ ನನಗೆ ಅರ್ಥವಾಗಿದೆ. ಪದ್ಮಿನಿ ಪವಿತ್ರಳಾಗಿದ್ದಾಳೆ. ನಿನ್ನ ಹಠ ನೆರವೇರಿಸಿಕೊಳ್ಳುವ ಸಲುವಾಗಿ ಅವಳನ್ನೂ ಅವಳ ಮನೆಯವರನ್ನೂ ಊರು ಬಿಟ್ಟು ಓಡಿಸಿದೆ ಅಲ್ವಾ ?"

"ಆ ಪದ್ಮಿನಿ ನಿಜವಾಗಿ ನಡತೆಗೆಟ್ಟವಳು ಕಣೋ. ಅವಳು ನಿನ್ನ ಹತ್ತಿರ ಸುಳ್ಳು ಹೇಳಿದ್ದಾಳೆ. ಅವಳ ಮಾತನ್ನು ನಂಬಿ ನೀನು ನನ್ನನ್ನು ದೂರಬೇಡ. ಟಿ. ನರಸೀಪುರಕ್ಕೆ ಹೋದ ಮೇಲೆ ಅಬಾರ್ಷ ಮಾಡಿಸಿಕೊಂಡಿರಬೇಕು."

"ಅಮ್ಮಾ" ಪ್ರಮೋದ್ ಗುಡುಗಿದ. "ನಾನಿವತ್ತೇ ಹೋಗಿ ಪದ್ಮಿನೀನ್ನ ಕರೆದುಕೊಂಡು ಬರ್‍ತೀನೆ. ನೀನು ಹೇಳಿದ ಡಾಕ್ಟರ್ ಹತ್ತಿರ ಅವಳನ್ನು ಚೆಕಪ್ ಮಾಡಿಸೋಣ. ನೀನು ಹೇಳಿದ್ದೇ ನಿಜವಾದ್ರೆ ನಾನು ಇನ್ನೊಂದು ಸಲ ಅವಳ ಕಡೆ ತಿರುಗಿಯೂ ನೋಡಲ್ಲ. ಆದ್ರೆ ನೀನು ಹೇಳಿದ್ದು ಸುಳ್ಳಾದ್ರೆ ನಾನವಳನ್ನು ಬಿಟ್ಟು ಬೇರೆ ಯಾರನ್ನೂ ಮದುವೆಯಾಗಲ್ಲ."

"ನೋಡು ಪ್ರಮೋದ್, ನಿನಗೆ ಅವಳ ತಂಗಿ ವಿಚಾರ ಗೊತ್ತಿಲ್ಲ. ಅವರೆಲ್ಲಾ ತುಂಬಾ ಕೆಟ್ಟವ್ರು, ಶ್ರೀಮಂತರ ಮಕ್ಕಳಿಗೆ ಬಲೆ ಬೀಸಿ ಲಾಭ ಪಡೆಯುವ ಜನ."

"ಅಮ್ಮ, ನೀನು ಏನೇ ಹೇಳಿದ್ರೂ ನಾನು ಪದ್ಮಿನೀನ್ನ ಬಿಟ್ಟು ಬೇರೆ ಯಾರನ್ನೂ ಮದುವೆಯಾಗಲ್ಲ."

ಗಾಯಿತ್ರಿದೇವಿ ಮೊಂಡುತನದಿಂದ ಹೇಳಿದರು : "ನಾನು ಏನೇ ಆಗಲಿ ಪದ್ಮಿನೀನ್ನ ನನ್ನ ಸೊಸೆ ಮಾಡಿಕೊಳ್ಳುವುದಕ್ಕೆ ಸಿದ್ಧ ಇಲ್ಲ....ನೀನೇನಾದ್ರೂ ಹಠಮಾಡಿದ್ರೆ ನಾನು ಪ್ರಾಣ ಬಿಡ್ತೀನೆ."

"ಪದ್ಮಿನಿಯಲ್ಲಿ ಏನು ಕೊರತೆಯಿದೆ ? ಅವಳು ಶ್ರೀಮಂತಳಲ್ಲ ಅನ್ನುವು ದೊಂದೇ ತಾನೇ ಕೊರತೆ ?"

"ಆ ಹುಡುಗಿ ನಿನ್ನ ಜೊತೆ ಬೆಳೆದವಳು."

"ಇರಬಹುದು, ಆದರೆ ನನಗೆ ಅವಳು ನನ್ನ ತಂಗಿ ಅನ್ನುವ ಭಾವನೆ ಇಲ್ಲ. ನಾನು ಅವಳನ್ನೇ ಮದುವೆಯಾಗೋದು."

"ನೀನವಳನ್ನು ಮದುವೆಯಾಗುವ ಮನಸ್ಸು ಮಾಡಿದರೆ ನಾನು ಉಳಿ ಯಲ್ಲ."

"ಅವಳಿಲ್ಲದೆ ನಾನು ಬದುಕಲ್ಲ" ಪ್ರಮೋದ್ ಹೇಳಿದ.

ಗಾಯಿತ್ರಿದೇವಿ ಮಾತಾಡಲಿಲ್ಲ. ಒಂದು ವಾರ ಕಳೆಯಿತು. ತಾಯಿ–ಮಗ ಯಾರೊಬ್ಬರೂ ಮದುವೆಯ ಬಗ್ಗೆ ಪುನಃ ಮಾತಾಡಲಿಲ್ಲ. ಒಂದು ದಿನ ಬೆಳಗ್ಗೆ ಗಾಯಿತ್ರಿದೇವಿಯೇ ಸೋತು ಹೇಳಿದರು.

"ಪ್ರಮೋದ್, ನೀನು ಆದಷ್ಟು ಬೇಗ ಮದುವೆಯಾಗು ನಿನ್ನ ಮದುವೆ ಮತ್ತು ಮಕ್ಕಳನ್ನು ನೋಡುವುದಕ್ಕೋಸ್ಕರ ನಾನು ಬದುಕಿದ್ದೇನೆ,"

ಅವನು ಮಾತನಾಡದೆ ಅವರತ್ತ ನೋಡಿದ. ಗಾಯಿತ್ರಿದೇವಿ ಸೋತವರಂತೆ ಕಂಡರು. ಮುಖದಲ್ಲಿ ಮೊದಲಿನ ಖಳೆ ಇರಲಿಲ್ಲ. ತಲೆಕೂದಲು ಬೆಳ್ಳಗಾಗ ತೊಡಗಿದ್ದವು. ಕಣ್ಣುಗಳಲ್ಲಿ ಮೊದಲಿನ ತೀಕ್ಷ್ಣತೆ ಇರಲಿಲ್ಲ." ಅವನು ಮೃದುವಾಗಿ ನುಡಿದ. "ಅಮ್ಮ ನಾನು ಮದುವೆಯಾಗಲ್ಲಾಂತ ಹೇಳ್ತಿಲ್ಲ....ಮದುವೆ ನನ್ನ ವೈಯಕ್ತಿಕ ವಿಚಾರ; ದಯವಿಟ್ಟು ನನಗೆ ಪದ್ಮಿನಿಯನ್ನು ಮದುವೆಯಾಗುವುದಕ್ಕೆ ಅನುಮತಿ ಕೊಡು."

"ಅವಳಿಗಿಂತ ಚೆಲುವೆಯರು ಸಿಗಲ್ಲವೇನೋ ?"

"ಅವಳ ಚೆಲುವು ಮಾತ್ರ ನನ್ನನ್ನು ಆಕರ್ಷಿಸಿದ್ದಿದ್ದರೆ ಇಷ್ಟು ಹೊತ್ತಿಗೆ ಅದು ತನ್ನ ಆಕರ್ಷಣೆ ಕಳೆದುಕೊಂಡುಬಿಟ್ಟಿರುತ್ತಿತ್ತು. ಬಡತನವಿದ್ದರೂ ಅವಳಲ್ಲಿ ರಾಣಿಯ ಠೀವಿಯಿದೆ. ಅವಳ ಉದ್ದಕ್ಕೂ ಸ್ವಾಭಿಮಾನ ತುಂಬಿದೆ ಅಂತಹ ಹುಡುಗೀನ್ನ ನಾನು ಮತ್ತೆಲ್ಲೂ ನೋಡಿಲ್ಲ; ಅದಕ್ಕಾಗಿ ನಾನವಳನ್ನು ಬಯಸೋದು."

"ಒಂದು ಪಕ್ಷ ನಾನು ಈ ಮದುವೆಗೆ ಒಪ್ಪದಿದ್ರೆ....?"

"ನಾನು ಅವಳನ್ನಲ್ಲ ಯಾರನ್ನೂ ಈ ಜನ್ಮದಲ್ಲಿ ಮದುವೆಯಾಗಲ್ಲ.... ಅಮ್ಮ, ನೀನವಳನ್ನು ದಯವಿಟ್ಟು ದ್ವೇಷ ಮಾಡಬೇಡ. ಒಂದು ವೇಳೆ ನಿನ್ನ ಒಪ್ಪಿಗೆಯಿಲ್ಲದೆ ನಾನು ಮದುವೆಯಾಗಕ್ಕೆ ಸಿದ್ಧವಿದ್ರೂ ಅವಳು ಸಿದ್ಧಳಿಲ್ಲ...."

"ಓಹೋ....!"

"ಹೌದಮ್ಮ, ನಾನು ಮದುವೆಯ ನಂತರ ಅವರ ಜೊತೆಯೇ ಇರಬೇಕು ಅವರ ಒಪ್ಪಿಗೆಯಿಲ್ಲದೆ ನಾನು ಮದುವೆಯಾಗಲ್ಲಾಂತ ಹೇಳಿದ್ದಾಳೆ."

ಗಾಯಿತ್ರಿ ದೀರ್ಘವಾಗಿ ಉಸಿರೆಳೆದುಕೊಂಡರು. ಅಂದೇ ಭಗವಾನ್‌ಗೆ ಹೇಳಿ ಕಳುಹಿಸಿದರು.

"ಏನ್ಮಾಡಲೋ ಭಗವಾನ್ ಪ್ರಮೋದ್ ಪದ್ಮಿನಿಯನ್ನಲ್ಲದೆ ಬೇರೆಯವ ರನ್ನು ಮದುವೆಯಾಗಲು ಒಪ್ತಾನೇ ಇಲ್ಲ."

"ಅಕ್ಕ, ನಾನೊಂದು ಮಾತು ಹೇಳಲಾ ?"

"ಹೇಳಪ್ಪ."

"ನನಗ್ಯಾಕೋ ನೀನು ತುಂಬಾ ಹಠಮಾಡ್ತಿದ್ದೀಯ ಅನ್ನಿಸ್ತಿದೆ."

"ನೀನೂ ಹಾಗಂತೀಯಾ ?"

"ಹೌದಕ್ಕ, ಪ್ರಮೋದ್ ಆ ಹುಡುಗೀನ್ನ ತುಂಬಾ ಮೆಚ್ಚಿದ್ದಾನೆ. ಅವಳೂ ತೆಗೆದುಹಾಕುವಂತಿಲ್ಲ....ನೀನು ಹಠಮಾಡಿದಷ್ಟೂ ಅವನ ಹಠ ಜಾಸ್ತಿ ಯಾಗುತ್ತೆ....ಆ ಹುಡುಗಿ ಬಡವಳು ಅನ್ನುವುದೊಂದೆ ಆಕ್ಷೇಪಣೇ ತಾನೆ ?"

"ಹೌದಪ್ಪ, ಮದುವೆಯಾಗುವಾಗ ಅಂತಸ್ತು ನೋಡುವುದು ಬೇಡವಾ ?"

"ಆಸ್ತಿ–ಅಂತಸ್ತುಗಳಲ್ಲಿ ಸುಖ ಅಡಗಿದೆಯೇನಮ್ಮ ? ದೇವರು ನಿನಗೇನು ಕಡಿಮೆ ಮಾಡಿರುವುದು ? ನಿನಗೋಸ್ಕರ ಆ ಹುಡುಗೀನ್ನ ಬಿಟ್ಟು ಅವನು ಬೇರೆ ಹುಡುಗಿಯನ್ನು ಮದುವೆಯಾಗಬಹುದು. ಆದ್ರೆ ಅವರ ನಡುವೆ ಹೊಂದಾಣಿಕೆ ಇಲ್ಲದಿದ್ರೆ ಅವರು ಸುಖವಾಗಿಲ್ಲದಿದ್ರೆ ನೀನು ಸಂತೋಷವಾಗಿ ರ್ತೀಯ ?"

"ಆ ಹುಡುಗಿ ತುಂಬಾ ಜೋರು."

"ಪ್ರಮೋದ್ ಮೆದು ಸ್ವಭಾವದ ಹುಡುಗನೇನಲ್ಲ, ಪ್ರೀತಿಸಿ ಮದುವೆ ಯಾಗ್ತಿದ್ದಾರೆ; ಸುಖವಾಗಿರ್ತಾರೆ ಬಿಡು."

ಕೊನೆಗೆ ಗಾಯಿತ್ರಿದೇವಿ ಮಗನಿಗಾಗಿ ಸೋತು ತಾವೇ ಮಗನ ಜೊತೆ ನರಸೀಪುರಕ್ಕೆ ಹೋಗಿ ಮದುವೆ ಗೊತ್ತುಮಾಡಿಕೊಂಡು ಬಂದರು. ಶಾಸ್ತ್ರಿಗಳು ಸರಳವಾಗಿ ಮೈಸೂರಿನಲ್ಲಿ ಮದುವೆ ನೆರವೇರಿಸಿಕೊಟ್ಟರು.... ನಂತರ ಗಾಯಿತ್ರಿ ದೇವಿ 'ಬೆಂಗಳೂರಿನಲ್ಲಿ ಪ್ರತಿಷ್ಠಿತ ಹೋಟೆಲ್ಲೊಂದರಲ್ಲಿ ರಿಸೆಪ್ಷನ್ ಏರ್ಪಡಿಸಿ, ತನ್ನ ಬಂಧು ಬಳಗಗಳನ್ನು ಕರೆದರು. ಅದಿತಿ–ಸರ್ವೋತ್ತಮ್ ಬಂದು ಇಬ್ಬರಿಗೂ 'ವಜ್ರದುಂಗುರ'ಗಳ ಉಡುಗೊರೆ ನೀಡಿದರು. ಮದುವೆಯಾಗುತ್ತಿದ್ದಂತೆ ಪ್ರಮೋದ್ ಹೆಂಡತಿಯ ಜೊತೆ ನಿಮಿಷಾಂಬಕ್ಕೆ ಹೋಗಿ ಹರಕೆ ಸಲ್ಲಿಸಿದ. ನಂತರ ದಂಪತಿಗಳು ಹನಿಮೂನ್‌ಗೆ 'ಸಿಂಗಪೂರ್'ಗೆ ಹೋಗಿ ಬಂದರು.

೮

ಕಿಟಕಿಯಿಂದ ತಣ್ಣನೆಯ ಗಾಳಿ ಬೀಸಿದಾಗ ಪದ್ಮಿನಿ ಶಾಲನ್ನು ಬಿಗಿಯಾಗಿ ಹೊದ್ದುಕೊಂಡು, ಕಿಟಕಿ ಹಾಕಿ ಕೆಳಗಿಳಿದು ಬಂದಳು....ಪ್ರಮೋದ್ ಇನ್ನೂ ಆಫೀಸ್‌ನಿಂದ ಬಂದಿರಲಿಲ್ಲ. ಗಾಯಿತ್ರಿದೇವಿ ಮನೆಯಲ್ಲಿರಲಿಲ್ಲ. ಇತ್ತೀಚೆಗಂತೂ ಅವರು ಸಮಾಜ–ಸಂಘ ಎಂದು ಸುತ್ತಾಡುವುದು ಹೆಚ್ಚಾಗಿತ್ತು. ಭಟ್ಟರು ಅವಳು ಶಾಲು ಹೊದ್ದು ಬಂದಿರುವುದನ್ನು ನೋಡಿ ಕೇಳಿದರು.

"ಛಳೀನಾ ? ಕೊಂಚ ಕಾಫಿ ಕೊಡಲಾ ಮಗು ?"

"ಹುಂ."

ಅವಳು ಟಿ. ವಿ ಆನ್ ಮಾಡಿ ಕಾಫಿ ಹೀರುತ್ತಾ ಕುಳಿತಳು. ಲತಾಳ ಹಾಡಿಗೆ 'ಮೀನಾಕುಮಾರಿ' ಅಭಿನಯಿಸುತ್ತಿದ್ದಳು. ಅವಳಿಗೆ ಹಳೆಯ ಚಿತ್ರಗಳೆಂದರೆ ತುಂಬಾ ಇಷ್ಟ. ಆಪ್ರೋಗ್ರಾಂ ನೋಡುತ್ತಾ ಅರ್ಧ ಗಂಟೆ ಕಳೆದಳು. ಪ್ರಮೋದ್ ಬರಲಿಲ್ಲ. ಫೋನ್ ಹಾಡಿತು.

"ಹಲೋ....ಪದ್ಮಿನಿ ಸ್ಪೀಕಿಂಗ್."

"ಪಮ್ಮಿ ನಾನು ಪ್ರಮೋದ್....ಯಾರೋ ಡೆಲಿಗೇಟ್ಸ್ ಬಂದಿದ್ದಾರೆ ಮನೆಗೆ ಬರುವುದು ತಡವಾಗುತ್ತೆ ಊಟಕ್ಕೆ ಕಾಯಬೇಡ."

"ನನಗೆ ತುಂಬಾ....ಬೇಜಾರಾಗ್ತಿದೆ."

"ಏನಾದ್ರೂ ಓದು ಟಿ. ವಿ. ನೋಡು."

ಅವಳು ಮಾತನಾಡದೆ ಫೋನ್ ಕೆಳಗಿಟ್ಟಳು....ಭಟ್ಟರು ಬಳಿಗೆ ಬಂದು ಕೇಳಿದರು. "ರಾತ್ರಿಗೆ ಏನಡಿಗೆ ಮಾಡಲಿ ?"

"ಅತ್ತೆ ಮಿಟಿಂಗ್‌ಗೆ ಹೋಗಿದ್ದಾರೆ. ಇಷ್ಟು ಹೊತ್ತಾದರೂ ಬರದೇ ಇರುವುದನ್ನು ನೋಡಿದರೆ ಅವರು ಊಟ ಮಾಡಿಕೊಂಡೇ ಬರ್‍ತಾರೇಂತ ಕಾಣುತ್ತೆ ಪ್ರಮೋದ್ ಕೂಡ ಊಟಮಾಡಲ್ಲ. ಬೆಳಗಿನ ಅಡುಗೆ ನನಗೆ ಸಾಕು ಹೊಸದಾಗಿ ನೀವೇನೂ ಮಾಡೋದು ಬೇಡ, ಅನ್ನ ಮಾಡಿದ್ರೆ ಸಾಕು."

"ಅನ್ನ ಯಾಕಮ್ಮ ?"

"ನಿಮಗೂ ಸಾಕಾಗುವಷ್ಟು ಅನ್ನವಿದೆಯಾ ?"

"ನಾನಿವತ್ತು ಬೇಗ ಮನೆಗೆ ಹೋಗೋಣ ಅಂದ್ಕೊಂಡಿದ್ದೇನೆ."

ಅವಳು ಕತ್ತೆತ್ತಿ ಅವರತ್ತ ನೋಡಿದಳು. ಪ್ರತಿದಿನ ಈ ಬಡಪಾಯಿ ಮನೆ ಸೇರುವುದು ಒಂಭತ್ತು ಗಂಟೆ....ಈ ದಿನವಾದರೂ ಬೇಗ ಹೋಗಲಿ– ಎನ್ನಿಸಿತು.

"ಆಗಲಿ ಭಟ್ಟರೆ, ಹೋಗಿ ಬನ್ನಿ."

ಆ ದೊಡ್ಡ ಬಂಗಲೆಯಲ್ಲಿ ಒಬ್ಬಳೇ ಕುಳಿತಾಗ ಒಂದು ಕ್ಷಣ ಭಯ ವಾಯ್ತು....ಗಂಡ, ಅತ್ತೆ, ಆಳುಕಾಳುಗಳು ಇದ್ದರೂ ತಾನು ಒಂಟಿ ಅನ್ನಿ ಸಿತು. 'ನಾನು ದುಡುಕಿ ಪ್ರಮೋದ್‌ನನ್ನು ಮದುವೆಯಾದನೇನೋ ? ಅದಕ್ಕೆ ಅತ್ತೆ ಹೀಗೆ ಹಠ ಸಾಧಿಸುತ್ತಿದ್ದಾರೆ' ಎನ್ನಿಸಿತು.

ಗಾಯಿತ್ರಿದೇವಿ ತುಂಬಾ ಬದಲಾಗಿದ್ದರು....ಬಾಯಿಯಲ್ಲಿ ಏನೂ ಅಂದು ಆಡಿ ಮಾಡದಿದ್ದರೂ ತಮಗೆ ಆವಳಿಷ್ಟವಿಲ್ಲವೆನ್ನುವುದನ್ನು ನಡವಳಿಕೆಯಲ್ಲಿ ತೋರಿಸುತ್ತಿದ್ದರು.

ಸಾಮಾನ್ಯವಾಗಿ ಪ್ರಮೋದ್ ಬೆಳಗ್ಗೆ 8–30ತಿಂಡಿ ತಿನ್ನುತ್ತಿದ್ದ. ಪದ್ಮಿನಿ ಎದ್ದವಳೇ ಭಟ್ಟರಿಗೆ ತರಕಾರಿ ಹೆಚ್ಚಿ, ಕಾಯಿತುರಿದುಕೊಟ್ಟು, ಮತ್ತೇನಾದರೂ

ಕೆಲಸಮಾಡಿ, ಎಂಟು ಗಂಟೆಗೆ ಸ್ನಾನಕ್ಕೆ ಹೋಗುತ್ತಿದ್ದಳು. ಸ್ನಾನ ಮುಗಿಸಿ, ದೇವರಿಗೆ ದೀಪ ಹಚ್ಚಿ, 8–30ಗೆ ತಾನೂ ಗಂಡನ ಜೊತೆ ತಿಂಡಿ ತೆಗೆದು ಕೊಳ್ಳುತ್ತಿದ್ದಳು. ಒಟ್ಟಿನಲ್ಲಿ ಮೂವರು ಒಟ್ಟಿಗೆ ತಿಂಡಿ ತಿನ್ನುತ್ತಿದ್ದರು.

ಆದರೆ ಒಂದು ತಿಂಗಳಿಂದ ಗಾಯಿತ್ರಿದೇವಿ ಹೊಸ ವರಸೆ ತೆಗೆದಿದ್ದರು. ಅವರು ಏಳು ಗಂಟೆಗೆಲ್ಲಾ ಸ್ನಾನಮಾಡಿ ಪೇಪರ್ ಓದಿ, ತೋಟದಲ್ಲಿ ಕಾಲು ಗಂಟೆ ಸುತ್ತಾಡಿ, ಮಗ ಸ್ನಾನ ಮುಗಿಸಿಕೊಂಡು ಬಂದೊಡನೆ, ಅವನಿಗೂ ತಿಂಡಿ ಕೊಟ್ಟು, ತಾವೂ ತೆಗೆದುಕೊಳ್ಳಲಾರಂಭಿಸಿದ್ದರು. ಹೀಗಾಗಿ ಗಂಡ–ಹೆಂಡತಿ ಒಟ್ಟಿಗೆ ತಿಂಡಿ ತಿನ್ನುವುದು ತಪ್ಪಿತ್ತು. ಪ್ರಮೋದ್ ಹೆಂಡತಿಯನ್ನು ಬೈಯುತ್ತಿದ್ದ.

"ಹೋಗಲಿ ಬಿಡು, ನಾಳೆಯಿಂದ 8–30ಗೆ ತಿಂಡಿ ತಿನ್ನುತ್ತೀನಿ" ಎಂದಿದ್ದ. ಆದರೆ ಹಾಗೆ ಮಾಡಲು ಗಾಯಿತ್ರಿದೇವಿ ಅವಕಾಶ ಕೊಟ್ಟಿರಲಿಲ್ಲ.

ನಂತರ ಪದ್ಮಿನಿ ತಾನೇ ಕೊಂಚ ಬೇಗ ಏಳುವ ಅಭ್ಯಾಸಮಾಡಿ ಕೊಂಡಿದ್ದಳು. ಎದ್ದೊಡನೆ ಸ್ನಾನಮಾಡಿ, ದೇವರಿಗೆ ದೀಪ ಹಚ್ಚಿ, ಅಡಿಗೆ ಮನೆಗೆ ಬಂದು ಭಟ್ಟರಿಗೆ ಸಹಾಯಮಾಡಿ, ಅತ್ತೆ, ಗಂಡ ತಿಂಡಿ ತಿನ್ನಲು ಕುಳಿತಾಗ ತಾನೂ ತೆಗೆದುಕೊಳ್ಳಲಾರಂಭಿಸಿದಳು. ಎರಡು ದಿನ ಸುಮ್ಮನಿದ್ದ ಗಾಯಿತ್ರಿದೇವಿ ಮತ್ತೊಂದು ವರಸೆ ತೆಗೆದಿದ್ದರು. ಎಷ್ಟು ಹೊತ್ತಾಗಲಿ ಅವರು ಸ್ನಾನಮಾಡುತ್ತಿರಲಿಲ್ಲ. ಹೀಗಾಗಿ ಮಗನ ಜೊತೆ ತಿಂಡಿ ತಿನ್ನಲಾಗುತ್ತಿರಲಿಲ್ಲ. ಆಗ ಪ್ರಮೋದ್ "ಪಮ್ಮಿ, ನೀನು ಅಮ್ಮನ ಜೊತೆ ತಿಂಡಿ ತಿನ್ನು" ಎನ್ನುತ್ತಿದ್ದ.

ಪ್ರಮೋದ್ ಹೋದ ಮೇಲೆ ಅತ್ತೆ–ಸೊಸೆ ಒಟ್ಟಿಗೆ ತಿಂಡಿ ತಿನ್ನುತ್ತಿದ್ದರು. ಮಾತಿಲ್ಲ–ಕಥೆಯಿಲ್ಲ ; ವಾರ ಕಳೆಯುವಷ್ಟರಲ್ಲಿ ಅವಳಿಗೆ ಬೇಸರ ಉಂಟಾಗಿತ್ತು. ಇವಳೇ ಮಾತಿಗೆ ಎಳೆದರೂ ಅವರು ಮಾತಾಡು ತ್ತಿರಲಿಲ್ಲ. ಕೊನೆಗೆ ಅವಳು ಬೇಕೆಂತಲೇ ಅವರ ಜೊತೆ ತಿಂಡಿ ತಿನ್ನುವು ದನ್ನು ತಪ್ಪಿಸಲಾರಂಭಿಸಿದ್ದಳು.

ಅತ್ತೆಗೆ ತನ್ನನ್ನು ಕಂಡರಾಗುವುದಿಲ್ಲ ಎಂದವಳಿಗೆ ಅರ್ಥವಾಗಿತ್ತು. ಮೊದಲೆಲ್ಲಾ ಅವಳು ಅವರ ಮನೆಗೆ ಬಂದರೆ ಬಾಯ್ತುಂಬಾ ಹರಟುತ್ತಿದ್ದರು.

"ಹೋಗಬೇಡ ಕಣೆ ಪದ್ಮಿನಿ. ಇನ್ನೊಂದು ಸ್ವಲ್ಪ ಹೊತ್ತು ಇರು" ಎನ್ನುತ್ತಿದ್ದರು. ಆದರೆ ಈಗ ದಿನವಿಡೀ ಒಟ್ಟಿಗೆ ಇದ್ದರೂ ಮಾತಾಡುತ್ತಿರಲಿಲ್ಲ.

ಪದ್ಮಿನಿ ಕತ್ತಲಾಗಿದ್ದನ್ನು ಗಮನಿಸಿ ಹಾಲಿನಲ್ಲಿದ್ದ ಸ್ವಿಚ್ ಅದುಮಿದಳು. ಗಂಟೆ ಏಳುವರೆಯಾದರೂ ಗಂಡ, ಅತ್ತೆ ಯಾರೂ ಬರಲಿಲ್ಲ. ಅವಳಿಗೆ ತಲೆ ಚಚ್ಚಿಕೊಳ್ಳುವಂತಾಯ್ತು. ಗಾಯಿತ್ರಿ ಒಂಭತ್ತು ಗಂಟೆಗೆ ಬಂದರು. ಬರುವಾಗಲೇ 'ಭಟ್ಟರೇ' ಎಂದು ಕೂಗುತ್ತಾ ಬಂದರು.

"ಭಟ್ಟರಿಲ್ಲ ಅತ್ತೆ"

"ಎಲ್ಲಿಗೆ ಹೋದರು ?"

"ನಾನೇ ಅವರನ್ನು ಬೇಗ ಮನೆಗೆ ಕಳುಹಿಸಿದೆ."

"ಯಾಕೆ ?"

"ಮನೇಲಿ ಯಾರೂ ಇರಲಿಲ್ಲ. ಅವರಿಗೆ ಏನು ಕೆಲಸವೂ ಇರಲಿಲ್ಲ."

"ಕೆಲಸ ಯಾಕೆ ಇರಲಿಲ್ಲ ? ರಾತ್ರಿ ಮಲಗುವುದಕ್ಕೆ ಮೊದಲು ನಾನು ಹಾರ್ಲಿಕ್ಸ್ ಕುಡಿಯೋದು ಬೇಡವಾ ? ಅದನ್ನು ಯಾರು ಮಾಡಿಕೊಡ್ತಾರೆ?"

ಪದ್ಮಿನಿ ತಾನೇ ಒಂದು ಲೋಟ ಹಾರ್ಲಿಕ್ಸ್ ಮಾಡಿಕೊಂಡು ಬಂದು ಕೊಟ್ಟಳು.

"ಥ್ಯಾಂಕ್ಸ್, ಇನ್ಮೇಲೆ ನನಗೆ ಹೇಳದೆ ಅಡಿಗೆಯವರನ್ನಾಗಲಿ ಕೆಲಸದವರನ್ನಾಗಲಿ ಮನೆಗೆ ಕಳುಹಿಸಬೇಡ. ಅವರಿಗೆ ಅದೇ ಅಭ್ಯಾಸವಾದರೆ ಕಷ್ಟ."

'ಯಾಕೆ ಕಳಿಸಬಾರದು ? ನಿಮಗೆಷ್ಟು ಅಧಿಕಾರವಿದೆಯೋ ಅಷ್ಟೇ ಅಧಿಕಾರ ನನಗೆ ಈ ಮನೆಯಲ್ಲಿಲ್ಲವೇ' ಎಂದು ಕೇಳಬೇಕೆನ್ನಿಸಿತು. ಆದರೆ ಕೇಳಲಾಗಲಿಲ್ಲ. ಗಾಯಿತ್ರಿದೇವಿ ಹಾಲು ಕುಡಿದು ಮಲಗಿದರು. ಪದ್ಮಿನಿ ಊಟದ ಶಾಸ್ತ್ರ ಮಾಡಿ, ಬೀದಿ ಬಾಗಿಲು ಲಾಕ್ ಮಾಡಿದಳು. ಅಂದು ಪ್ರಮೋದ್ ಮನೆಗೆ ಬಂದಾಗ 11 ಗಂಟೆಯಾಗಿತ್ತು.

ಮರುದಿನ ಪದ್ಮಿನಿ ಏಳುವಾಗಲೇ ಮುಖ ಊದಿಸಿಕೊಂಡಿದ್ದಳು. ಪ್ರಮೋದ್ ನಲ್ಮೆಯಿಂದ ಅವಳನ್ನು ಅಪ್ಪಿ ಕೇಳಿದ, "ಯಾಕೆ ಒಂದು ತರಹ ಇದ್ದೀಯ ಚಿನ್ನ ?"

"ನನಗೆ ತುಂಬಾ ಬೇಜಾರು."

"ಮುಂದೆ ಓದು."

"ನಂಗೆ ಓದುವುದಕ್ಕೂ ಬೇಜಾರು."

"ಹಾಗಾದ್ರೆ ಒಂದು ಕೆಲಸಮಾಡು...."

"ಏನು ?"

"ಇನ್ನುಮೇಲೆ ನೀನು ನನ್ನ ಜೊತೆ ಆಫೀಸ್‌ಗೆ ಬಂದುಬಿಡು."

"ಬಂದೇನು ಮಾಡಲಿ ?"

"ನನಗೆ ಸಹಾಯ ಮಾಡು. ನನಗೊಬ್ಬಳು ಕೆಟ್ಟದಾಗಿ ಟೈಪ್ ಮಾಡುವ ಟೈಪಿಸ್ಟ್ ಇದ್ದಾಳೆ. ಅವಳ ಕೆಲಸ ನೀನು ಮಾಡು."

"ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಇರಬೇಕಾ ?"

"ನಿನಗಿಷ್ಟ ಬಂದ್ರೆ ಇರು, ಇಲ್ಲದಿದ್ರೆ ಮಧ್ಯಾಹ್ನದ ಮೇಲೆ ವಾಪಸ್ಸಾಗು."

"ಅತ್ತೆ ಏನು ಹೇಳ್ತಾರೋ ?"

"ಅಮ್ಮಂಗೆ ನಾನು ಹೇಳ್ತೀನಿ."

"ಅವರು ಖಂಡಿತಾ ಒಪ್ಪಲ್ಲ."

"ನೀನು ಅಪಶಕುನ ನುಡಿಯಬೇಡ" ಎಂದವನು ಗೊಣಗಿದ.

"ಹಾಗಾದ್ರೆ ನಾನು ರೆಡಿಯಾಗಲಾ ?"

"ಹುಂ ಗೆಟ್ ರೆಡಿ."

ಪದ್ಮಿನಿ ಖುಷಿಯಿಂದ ಸಿದ್ಧವಾದಳು. ಸ್ನಾನ ಮುಗಿಸಿ ಬಂದ ಪ್ರಮೋದ್ ಬಂಗಾರ ಬಣ್ಣದ ಸೀರೆಯಲ್ಲಿ ಸ್ವರ್ಣಪುತ್ಥಳಿಯಂತೆ ಕಾಣುತ್ತಿದ್ದ ಪದ್ಮಿನಿಯ ಸೊಂಟ ಬಳಸಿ ಕೇಳಿದ : "ನೀನು ನನ್ನ ಪಕ್ಕದಲ್ಲಿದ್ರೆ ನಾನು ಹೇಗೆ ಕೆಲಸ ಮಾಡಲಿ ಪಮ್ಮಿ ?"

ಆ ಪ್ರಶ್ನೆಯ ಹಿಂದಿದ್ದ ಮೆಚ್ಚುಗೆ ಗುರುತಿಸಿ ಅವಳು ಉಲ್ಲಾಸದಿಂದ ಅವನ ಕೊರಳು ಬಳಸಿ ಪಿಸುಗುಟ್ಟಿದಳು : "ಕೆಲಸ ಮಾಡಲೇಬೇಡಿ, ಹೀಗೇ ಇದ್ದುಬಿಡೋಣ."

ಅವನು ಅವಳ ಮುಖವನ್ನು ಹಿಡಿದು ಚುಂಬಿಸಿ ಹೇಳಿದ.

"ಯೂ ಆರ್ ಲವ್ಲಿ ಪಮ್ಮಿ."

ಅವರಿಬ್ಬರೂ ಕೆಳಗೆ ಬಂದಾಗ ಕೆಳಗಡೆ ಪೇಪರ್ ಓದುತ್ತಾ ಕುಳಿತಿದ್ದ ಗಾಯಿತ್ರಿದೇವಿ ಆಶ್ಚರ್ಯದಿಂದ ಸೊಸೆಯತ್ತ ನೋಡಿದರು. ಉತ್ಸಾಹದ ಚಿಲುಮೆಯಿಂದ ಪದ್ಮಿನಿ ಎರಡು ತಟ್ಟೆಗಳಲ್ಲಿ ತಿಂಡಿ ತಂದಳು. ತಿಂಡಿ ತಿಂದು ಕಾಫಿ ಕುಡಿದು ಪ್ರಮೋದ್ ನುಡಿದ.

"ಅಮ್ಮಾ, ಪದ್ಮಿನಿ ಇವತ್ತಿಂದ ಆಫೀಸ್‌ಗೆ ಬರ್‍ತಾಳೆ."

"ಓ....ಅಲ್ಲೇನು ಕೆಲಸ ಅವಳಿಗೆ ?"

"ಅವಳಿಗಿಲ್ಲಿ ಹೊತ್ತು ಹೋಗಲ್ಲಂತೆ, ಬೇಜಾರೂಂತ ಗೊಣಗ್ತಿದ್ದಳು. ಬಾ ಅಂತ ನಾನೇ ಹೇಳಿದೆ."

ಅವರು ಮಾತಾಡಲಿಲ್ಲ. ಠೀವಿಯಿಂದ ಗಂಡನ ಪಕ್ಕ ಕಾರ್‌ನಲ್ಲಿ ಕುಳಿತ ಪದ್ಮಿನಿಯನ್ನು ನೋಡಿ ಅವರ ಹೃದಯ ಅಸಹನೆಯಿಂದ ಒದ್ದಾಡಿತು.

"ಈ ಹುಡುಗಿ ಬೆರಳು ತೋರಿಸಿದರೆ ಹಸ್ತ ನುಂಗುವಷ್ಟು ಜಾಣೆ.... ಆಫೀಸ್‌ನ ವ್ಯವಹಾರ ಅರಿತರೆ ನನ್ನ ಕಸಕ್ಕಿಂತ ಕಡೆಯಾಗಿ ಕಾಣ್ತಾಳೆ. ನಾನಿದಕ್ಕೆ ಅವಕಾಶ ಕೊಡಕೂಡದು."

ಅವರಿಗೆ ತಕ್ಷಣ ಗಂಡನ ನೆನಪಾಯ್ತು.

'ಗಾಯಿತ್ರಿ, ನೀನೂ ಎಜುಕೇಟಡ್. ಮನೇಲಿ ಕುಳಿತು ವ್ಯರ್ಥವಾಗಿ ಕಾಲ ಕಳೆಯುವುದರ ಬದಲು ಆಫೀಸ್‌ಗೆ ಬಂದು ನನಗೆ ಸಹಾಯ ಮಾಡ ಬಾರದಾ ?' ಎನ್ನುತ್ತಿದ್ದರಾತ. ಆದರೆ ಗಾಯಿತ್ರಿಗೆ ಆಫೀಸ್ ಕೆಲಸದಲ್ಲಿ ಕೊಂಚವೂ ಆಸಕ್ತಿಯಿರಲಿಲ್ಲ. ಅವಳಿಗೆ ಮೊದಲಿಂದಲೂ ಶ್ರೀಮಂತನ ಕೈ ಹಿಡಿಯುವ ಆಸೆಯಿತ್ತು. ಆದರೆ ಗೋವರ್ಧನ್ ಮದುವೆಯಾದ ಮೇಲೆ ಅವಳ ಆಸೆಗಳಿಗೆ ಕೆಲವು ಕಾಲ ತೆರೆ ಬಿದ್ದಿತ್ತು. ಇದ್ದಕ್ಕಿದ್ದಂತೆ ಅವಳ ಅದೃಷ್ಟ ಖುಲಾಯಿಸಿತ್ತು. ಸಣ್ಣದಾಗಿ ಆರಂಭವಾಗಿದ್ದ ಉದ್ಯಮ ಬೆಳೆದು ಹೆಮ್ಮರವಾಗಿತ್ತು. ಗಾಯಿತ್ರಿ ಗಾಯಿತ್ರಿದೇವಿಯಾಗಿದ್ದರು. ಅವರ ಆಸೆಗಳು ದಿನ ದಿನಕ್ಕೆ ಹೆಚ್ಚಾಗತೊಡಗಿದ್ದವು. ಹಣದ ಮದ ಅವರನ್ನು ಕುಣಿಸುತ್ತಿತ್ತು. ತವರಿನವರ ಬಗ್ಗೆಯಾಗಲಿ, ಅತ್ತೆ ಮನೆಯವರ ಬಗ್ಗೆಯಾಗಲಿ ಅವಳಿಗೆ ಗೌರವ ವಿರಲಿಲ್ಲ. ಅವರ್‍ಯಾರನ್ನೂ ಹತ್ತಿರ ಸೇರಿಸುತ್ತಿರಲಿಲ್ಲ. ಅನೇಕ ಸಂಘ ಸಂಸ್ಥೆಗಳ ಸದಸ್ಯಳಾಗಿ ಸಮಾಜ, ಪಿಕ್‌ನಿಕ್, ಪ್ರವಾಸ ಎಂದು ಕಾಲ ಕಳೆಯುತ್ತಿದ್ದಳು.

ಹೆಚ್ಚಿನ ಸಂಘಗಳಲ್ಲಿ ನಡೆಯುತ್ತಿದ್ದುದು ಒಡವೆ, ವಸ್ತ್ರಗಳ ಪ್ರದರ್ಶನ.... ಗಾಯಿತ್ರಿಯೂ ಆ ಹೆಂಗಳೆಯರಿಗಿಂತ ಭಿನ್ನವಾಗಿರಲಿಲ್ಲ. ತಿಂಗಳಿಗೊಂದು ಒಡವೆ ಮಾಡಿಸುತ್ತಿದ್ದರು. ವಾರಕ್ಕೊಂದು ಸೀರೆ ಕೊಳ್ಳುತ್ತಿದ್ದರು. ದೊಡ್ಡ ಮನೆ ಕಟ್ಟಿಸಿದ್ದರು. ಓಡಾಡಲು ಕಾರು ಬಂದಿತ್ತು. ಪ್ರಮೋದ್ ಹುಟ್ಟಿದ ಮೇಲೆ ಅವರ ಅಹಂಕಾರದ ಕಿರೀಟಕ್ಕೆ ಗರಿಮೂಡಿದಂತಾಗಿತ್ತು. ಹಠಾತ್ತಾಗಿ ಉಂಟಾದ ಖಾಯಿಲೆಯಿಂದ ಸೀತಮ್ಮ ಅವರಿಗೆ ಬೇಕಾಗಿದ್ದರೇ ಹೊರತು, ಇಂದು ಅವರ ಬಗ್ಗೆ ಆ ಆತ್ಮೀಯತೆ ಉಳಿದಿರಲಿಲ್ಲ. ಮಗ ಹಠಹಿಡಿದು ಪದ್ಮಿನಿಯನ್ನು ಮದುವೆಯಾದ ಮೇಲೆ ಅವರ ಅಸಹನೆ ಮತ್ತೂ ಹೆಚ್ಚಾಗಿತ್ತು.

ಅವರು ಪದ್ಮಿನಿಯನ್ನು ಪ್ರತಿ ಹಂತದಲ್ಲೂ ತಮಗೆ ಹೋಲಿಸಿಕೊಂಡು ನೋಡುತ್ತಿದ್ದರು. ಗಾಯಿತ್ರಿ ಮೊದಲಿಂದ ಸೋಮಾರಿ. ಅಡಿಗೆ ತಿಂಡಿ ಮಾಡುವುದರಲ್ಲಿ ಅವರಿಗೆ ಕೊಂಚವೂ ಆಸಕ್ತಿಯಿರಲಿಲ್ಲ. ಆದರೆ ಪದ್ಮಿನಿಗೆ ಹೊಸ ಹೊಸ ಅಡಿಗೆ ಮಾಡುವುದರಲ್ಲಿ ತುಂಬಾ ಆಸಕ್ತಿ. ಬೆಳಗ್ಗೆ ಅವಳು ಪ್ರತಿದಿನವೂ ಭಟ್ಟರಿಗೆ ಸಹಾಯ ಮಾಡುತ್ತಿದ್ದುದರಿಂದ ಭಟ್ಟರಿಗೆ ಅವಳ ಮೇಲೆ ವಿಶೇಷ ಮಮತೆ ಇತ್ತು. ಮನೆಯಲ್ಲಿ ಬೀರುಗಳ ಭರ್ತಿ ಪುಸ್ತಕ ಗಳಿದ್ದರೂ ಗಾಯಿತ್ರಿದೇವಿ ಅವುಗಳನ್ನು ಓದುತ್ತಿರಲಿಲ್ಲ. ಅವರು ಆಸಕ್ತಿ ಯಿಂದ ಓದುತ್ತಿದ್ದುದು ಪೇಪರ್ ಮಾತ್ರ. ಆದರೆ ಪದ್ಮಿನಿಗೆ ಪೇಪರ್, ವಾರಪತ್ರಿಕೆ, ಕಾದಂಬರಿ, ಕವನ, ಹರಟೆ–ಎಲ್ಲಾ ಬಗೆಯ ಬರಹಗಳಲ್ಲೂ ಆಸಕ್ತಿ ಇತ್ತು. ಗಾಯಿತ್ರಿದೇವಿ ಶ್ರೀಮಂತರ ಮುಂದೆ ಇವರು ತೋಟ, ಅಲಂಕಾರಕ್ಕೆ, ತಮ್ಮ ಪ್ರತಿಷ್ಠೆ ಹೆಚ್ಚಿಸುವುದಕ್ಕೆ ಎಂದು ನಂಬಿದ್ದರು. ಆದ್ದರಿಂದ ತೋಟಗಳನ್ನು ನೋಡಿಕೊಳ್ಳಲು ಇಬ್ಬರು ಮಾಲಿಗಳನ್ನು ನೇಮಿಸಿದರು. ಮನೆಯ ಮುಂದೆ ದೊಡ್ಡ ಹೂತೋಟ ಇತ್ತು. ಅಲ್ಲಿ ನಾನಾತರಹದ ಹೂಗಿಡಗಳಿದ್ದವು. ಮನೆಯ ಹಿಂಭಾಗದಲ್ಲಿ ಹತ್ತು ತೆಂಗಿನ ಮರಗಳಿದ್ದವು. ಗಾಯಿತ್ರಿ ಯಾವ ಗಿಡಗಳನ್ನೂ ಮಮತೆಯಿಂದ ಪಾಲಿಸಿ ದವರಲ್ಲ. ಆದರೆ ಪದ್ಮಿನಿಗೆ ತೋಟವೆಂದರೆ ಅತಿ ಪ್ರೀತಿ. ಬೆಳಗ್ಗೆ ಗಂಡ ಆಫೀಸ್‌ಗೆ ಹೋದ ಮೇಲೆ 2–3 ಗಂಟೆಗಳ ಕಾಲ ಅವಳು ತೋಟದಲ್ಲಿರು ತ್ತಿದ್ದಳು. ಅವಳು ಬಂದ ಮೇಲೆ ಹೊಸ ಬಗೆಯ ಹೂಗಿಡಗಳನ್ನು ತಂದು

ಹಾಕಿದಳು. ಎಲ್ಲಾ ರೀತಿಯ ಗುಲಾಬಿಗಳ ಪಾಟ್ಸ್ ತಂದು ಟೆರೇಸ್‌ನಲ್ಲಿಟ್ಟಿದ್ದಳು. ಅವುಗಳಿಗೆ ತಾನೇ ನೀರು ಹಾಕುತ್ತಿದ್ದಳು.

ಮದುವೆಯಾದ ಎರಡು ತಿಂಗಳಲ್ಲಿ ಕಾರು ಡ್ರೈವಿಂಗ್ ಕಲಿತಿದ್ದಳು. ಗಾಯಿತ್ರಿದೇವಿಗೆ ಸಮಾಜ–ಸಮಾರಂಭವೆಂದರೆ ತುಂಬಾ ಆಸಕ್ತಿಯಿತ್ತು. ಆದರೆ ಪದ್ಮಿನಿಗೆ ಅಂತಹ ಓಡಾಟವೇ ಇಷ್ಟವಿರಲಿಲ್ಲ. ಈಗ ಪದ್ಮಿನಿ ಆಫೀಸ್‌ಗೆ ಹೊರಟಿದ್ದು ಅವರ ಎದೆಯ ಉರಿಯನ್ನು ಮತ್ತೂ ಹೆಚ್ಚಿಸಿತ್ತು.

ಪದ್ಮಿನಿಯನ್ನು ಮಗನಿಗೆ ಮದುವೆ ಮಾಡಿಕೊಂಡಿದ್ದರಿಂದ ಅವರ ಪ್ರತಿಷ್ಠೆಗೆ ಖಂಡಿತಾ ಕುಂದು ಬಂದಿರಲಿಲ್ಲ. ಅವರ ಮಹಿಳಾ ಸಮಾಜದವರು ಅವರನ್ನು ಬಾಯ್ತುಂಬಾ ಹೊಗಳಿದ್ದರು. ಯಾರನ್ನೂ ಹೊಗಳದ ಡಾಕ್ಟರ್ ವಸುಂಧರಾ ಕೂಡ, "ನಿಮ್ಮ ಬಗ್ಗೆ ನನಗೆ ತುಂಬಾ ಹೆಮ್ಮೆ ಅನ್ನಿಸುತ್ತಿದೆ. ಮಿಸೆಸ್ ರಾವ್, ನಾವೆಲ್ಲಾ ಸ್ಟೇಜ್ ಮೇಲೆ ನಿಂತು ಆದರ್ಶದ ಮಾತುಗಳಾಡ್ತೀವೆ. "ಆದರೆ ನೀವು ಅದನ್ನು ಕಾರ್ಯರೂಪಕ್ಕೆ ತಂದಿದ್ದೀರ" ಎಂದಿದ್ದರು. ವಕೀಲರಾಗಿದ್ದ ಜ್ಯೋತ್ಸಾಶೆಣೈ." ಬಡವರ ಮನೆ ಹೆಣ್ಣು ಮಕ್ಕಳನ್ನು ಮಗನಿಗೆ ತಂದುಕೊಳ್ಳುವುದು ದೊಡ್ಡದಲ್ಲ ; ಅವರನ್ನು ಚೆನ್ನಾಗಿ ನೋಡಿಕೊಳ್ಳಬೇಕು. ನೀವು ಚೆನ್ನಾಗಿ ನೋಡಿಕೊಳ್ತೀರ ಅನ್ನುವ ನಂಬಿಕೆ ನನಗಿದೆ" ಎಂದಿದ್ದರು.

"ಅದೇನು ನಿಮಗೆ ನನ್ನ ಮೇಲೆ ಅಂತಹ ನಂಬಿಕೆ ?" ಗಾಯಿತ್ರಿದೇವಿ ನಗುತ್ತಾ ಕೇಳಿದ್ದರು.

"ಪದ್ಮಿನಿ ನಿಮ್ಮ ಕಣ್ಣ ಮುಂದೆ ಬೆಳೆದ ಹುಡುಗಿಯಂತೆ. ಅವಳನ್ನು 'ಸೊಸೆ' ಮಾಡಿಕೊಳ್ಳುವುದಾಗಿ ಚಿಕ್ಕಂದಿನಲ್ಲೇ ಅವರ ತಾಯಿಗೆ ಮಾತು ಕೊಟ್ಟಿದ್ದರಂತೆ, ಈಗಿನ ಕಾಲದಲ್ಲಿ ನಿಮ್ಮಂತೆ ಕೊಟ್ಟಮಾತು ಉಳಿಸಿಕೊಳ್ಳುವವರು ಅಪರೂಪ ಬಿಡಿ" ಎಂದರು.

ಒಟ್ಟಿನಲ್ಲಿ ಅವರ ಮನಸ್ಸಿನ ಭಾವನೆಗಳನ್ನು ಅರಿಯದ ಮಹಿಳಾ ಮಣಿಗಳೆಲ್ಲಾ ಅವರನ್ನು ಹಾಡಿ ಹೊಗಳಿದ್ದರು.

"ಇನ್ನೆರಡು ಇಂಗಳಲ್ಲಿ ನಮ್ಮ ಸಮಾಜದ ವಾರ್ಷಿಕೋತ್ಸವ ನಡೆಯುತ್ತದಲ್ಲಾ, ಆಗ ನಿಮ್ಮನ್ನು ಸನ್ಮಾನ ಮಾಡಬೇಕೂಂತ ತೀರ್ಮಾನಿಸಿದ್ದೇವೆ.

ದಯವಿಟ್ಟು ಆಗ ನಿಮ್ಮ ಸೊಸೆಯನ್ನು ಕರೆತರಬೇಕು" ಎಂದಿದ್ದರು ಪ್ರೆಸಿಡೆಂಟ್ ಸುಧಾ ಭಾರದ್ವಾಜ್.

ಗಾಯಿತ್ರಿದೇವಿಗೆ ಅವರ ಮಾತು ಕೇಳಿ ತುಂಬಾ ಖುಷಿಯಾಗಿತ್ತು. ಹಿಂದಿನ ದಿನ ಮೀಟಿಂಗ್ ಮುಗಿದ ಮೇಲೆ ರೀಡರ್ ದಾಕ್ಷಾಯಿಣಿ ಅವರನ್ನು ತಮ್ಮ ಮನೆಗೆ ಆಹ್ವಾನಿಸಿದ್ದರು. ಅಲ್ಲೇ ಊಟವಾಗಿತ್ತು. ಅವರ ಮಗನಿಗೆ ಮದುವೆ ಗೊತ್ತಾಗಿತ್ತು. ಎಕ್ಸ್ ಎಂ. ಪಿ. ಮಗಳು ಅವರ ಶ್ರೀಮಂತಿಕೆ ಬಣ್ಣಿಸಿ ಇವರ ಹೊಟ್ಟೆ ಉರಿಸಿದ್ದರು. ಮಾತುಮಾತಿಗೂ 'ನಾನು ನಿಮ್ಮಷ್ಟು ಆದರ್ಶವಾದಿಯಲ್ಲಪ್ಪ' ಎಂದು ವಗ್ಗರಣೆ ಬೇರೆ ಹಾಕಿದ್ದರು. ಅವರ ಹೊಗಳಿಕೆ ಕೇಳಿ ಬೆಲೂನಿನಂತಾಗಿದ್ದ ಮನಸ್ಸು ಮನೆಗೆ ಬಂದು ಪದ್ಮಿನಿಯನ್ನು ನೋಡಿದೊಡನೆ ಮುದುಡಿತ್ತು.

'ನಾನು ನನ್ನ ಜೀವನದಲ್ಲಿ ಮಾಡದೇ ಇದ್ದ ಕೆಲಸಗಳನ್ನೆಲ್ಲಾ ಈ ಹುಡುಗಿ ಮಾಡುತ್ತಿದ್ದಾಳಲ್ಲಾ ?' ಎನ್ನಿಸಿದಾಗ ಅವರ ರಕ್ತ ಕುದಿಯಿತು. 12 ಗಂಟೆಯ ಹೊತ್ತಿಗೆ ಅವರು ಮಗನಿಗೆ ರಿಂಗ್ ಮಾಡಿದರು.

"ಏನಮ್ಮಾ ?"

"ಯಾಕೋ ಎದೆಯಲ್ಲೆಲ್ಲಾ ಛಳಕು. ಕೈಕಾಲು ಸೋತ್ಹೋಂಡು ಬರ್‍ತಿದೆ, ತುಂಬಾ ಹೆದರಿಕೆಯಾಗ್ತಿದೆ. ಮನೆಗೆ ಬರ್‍ತೀಯಾಪ್ಪ ?"

ಗಂಡ–ಹೆಂಡತಿ ಇಬ್ಬರೂ ತಕ್ಷಣ ಧಾವಿಸಿದರು. ಹೊದ್ದು ಮಲಗಿದ ಅಮ್ಮನನ್ನು ನೋಡಿ ಪ್ರಮೋದ್ ತುಂಬಾ ಗಾಬರಿಯಾಗಿದ್ದ. ತಕ್ಷಣ ಡಾಕ್ಟರಿಗೆ ಫೋನ್‌ಮಾಡಿದ. ಅವರು ಬಂದು ಬಿ. ಪಿ. ನೋಡಿದರು.

"ಬಿ. ಪಿ. ನಾರ್ಮಲ್ ಇದೆ. ಎದೆ ಛಳಕು ಅಂತಿದ್ದಾರೆ. ಒಂದು ಸಲ ಇ.ಸಿ.ಜಿ. ಮಾಡಿಸಿಬಿಡಿ. ಬ್ಲಡ್ ಟೆಸ್ಟ್, ಯೂರಿನ್ ಟೆಸ್ಟ್‌ಗೆ ಬರೆದು ಕೊಡ್ತೇನೆ. ಒಂದು ಸಲ ಕಂಪ್ಲೀಟ್ ಚೆಕಪ್ ಆದ್ರೆ ಒಳ್ಳೆಯದು" ಎಂದರು.

ಮರುದಿನ ಪದ್ಮಿನಿ ಗಂಡನ ಜೊತೆ ಆಫೀಸ್‌ಗೆ ಹೊರಟಳು. ಅವಳು ಅಂದು ಮಧ್ಯಾಹ್ನ ಎರಡು ಗಂಟೆಗೆ ಮನೆಗೆ ಬಂದಾಗ ಭಟ್ಟರು ಹೇಳಿದರು : "ದೊಡ್ಡಮ್ಮಾವ್ರು ತಿಂಡಿ ತಿಂದಿಲ್ಲ. ಊಟಕ್ಕೆ ಕರೆದರೂ ಬರ್‍ತಿಲ್ಲ ರೂಮು ಬಾಗಿಲು ಹಾಕಿಕೊಂಡು ಮಲಗಿಬಿಟ್ಟಿದ್ದಾರೆ."

ಪದ್ಮಿನಿ ಹೋಗಿ ಅವರನ್ನು ಹತ್ತಾರು ಸಲ ಕರೆದ ಮೇಲೆ ಬಾಗಿಲು ತೆರೆದರು.

"ಯಾಕತ್ತೆ ಮಲಗಿಬಿಟ್ಟಿದ್ರಿ ? ಹುಷಾರಿಲ್ವಾ ?"

"ಯಾಕೋ ಒಬ್ಬಳೇ ಇರಕ್ಕೆ ಭಯವಾಗ್ತಿತ್ತು ಕಣೆ"

"ಒಬ್ಬರೇ ಎಲ್ಲಿದ್ರಿ ? ಭಟ್ಟರು, ಮುನಿಯಮ್ಮ, ಮಾಲಿ ಎಲ್ರೂ ಇದ್ರಲ್ಲಾ ?"

"ಅವರಿದ್ದಾಗ ಭಯವಾಗಲಿಲ್ಲ. ಮುನಿಯಮ್ಮ ಮನೆಗೆ ಹೋದ ಮೇಲೆ, ಭಟ್ಟರು ತರಕಾರಿ ತರಕ್ಕೆ ಹೊರಗೆ ಹೊರಟುಹೋಗಿದ್ರು. ಮಾಲಿಗಳಿಬ್ಬರೂ ಹೊರಗೇ ಇದ್ರು. ನಾನೊಬ್ಬಳೇ ಮನೆಯಲ್ಲಿದ್ದೆ. ಯಾರೋ ಬರ್ತಿರುವ ಸದ್ದು ಕೇಳಿಸ್ತು. ಒಳಗೆ ಬಂದ ಹಾಗೆ, ನನ್ನ ಪಕ್ಕ ಕುಳಿತುಕೊಂಡ ಹಾಗೆ ಭಾಸವಾಗಿ ತುಂಬಾ ಭಯವಾಗಿಬಿಡ್ತು. ಅದಕ್ಕೆ ರೂಂ ಸೇರಿ ಬಾಗಿಲು ಹಾಕಿಕೊಂಡು ಮಲಗಿದ್ದೆ."

"ನಿಮಗೆ ಭ್ರಮೆ ಅಷ್ಟೆ. ಬನ್ನಿ ಊಟ ಮಾಡಿ" ಪದ್ಮಿನಿ ತಾನೇ ಬಡಿಸಿದಳು. ಅವರು ಊಟಮಾಡುವುದನ್ನು ನೋಡಿ ಅವಳಿಗೆ 'ಪಾಪ' ಅನ್ನಿಸಿತು.

ಊಟ ಮುಗಿಸಿ ಗಾಯಿತ್ರಿದೇವಿ ಸೋಫಾ ಮೇಲೆ ಕುಳಿತು ಹೇಳಿದರು. "ನನ್ನ ಬಿ.ಪಿ. ಮಾತ್ರೆಗಳನ್ನು ತಂದುಕೊಡ್ತೀಯ ಪದ್ಮಿನಿ ?"

"ಆಗಲಿ ಅದಕ್ಕೇನಂತೆ ?" ಎಂದು ಪದ್ಮಿನಿ ಅವರ ರೂಮು ಪ್ರವೇಶಿಸಿದಳು. ಬಿ.ಪಿ. ಮಾತ್ರೆಗಳನ್ನು ತೆಗೆಯುತ್ತಿವಾಗ ಅವಳ ಗಮನ ಮಂಚದ ಕೆಳಗಿದ್ದ 'ಡಸ್ಟ್‌ಬಿನ್' ಕಡೆ ಹರಿಯಿತು. ಅದರಲ್ಲಿ ಮೋಸಂಬಿ ಹಾಗೂ ಬಾಳೆಹಣ್ಣಿನ ಸಿಪ್ಪೆಗಳಿದ್ದವು. ಮೇಜಿನ ಮೇಲಿದ್ದ ಚಾಕುವಿಗೆ ಸೇಬಿನ ಸಿಪ್ಪೆ ಅಂಟಿತ್ತು. ಅವಳು ಅನುಮಾನದಿಂದ ಅವರ ರೂಂನಲ್ಲಿದ್ದ ಪುಟ್ಟ ಗೋಡೆ ಬೀರು ತೆಗೆದಳು. ಬಿಸ್ಕತ್, ಕಲ್ಲುಸಕ್ಕರೆ, ದ್ರಾಕ್ಷಿ, ಹುರಿದ ಗೋಡಂಬಿ, ಬಾದಾಮಿ ಪ್ಲಾಸ್ಟಿಕ್ ಡಬ್ಬಿಗಳಲ್ಲಿದ್ದವು. ಅವಳಿಗೆ ಅತ್ತೆ ನಾಟಕವಾಡುತ್ತಿದ್ದಾರೆನ್ನುವುದರಲ್ಲಿ ಸಂದೇಹವೇ ಉಳಿಯಲಿಲ್ಲ. ಅದುವರೆಗೂ ಅವರ ಮೇಲಿದ್ದ ಕನಿಕರ ಮಾಯವಾಗಿ ಅಸಹನೆ ಮೂಡಿತು. ತಾನು ಆಫೀಸ್‌ಗೆ ಹೋಗುವುದನ್ನು ತಪ್ಪಿಸಲು ಈ ಆಟ ಹೂಡಿರಬೇಕೆಂದುಕೊಂಡಳು.

ಅತ್ತೆಗೆ ಮಾತ್ರೆ ಕೊಟ್ಟು, ಊಟಮಾಡಿ, ತನ್ನ ರೂಂ ಸೇರಿ ಬಟ್ಟೆ ಬದಲಾಯಿಸಿ ಮಲಗಿದಳು. ಆಯಾಸವಾಗಿದ್ದರೂ ನಿದ್ರೆ ಬರಲಿಲ್ಲ. 'ಈ ವಿಚಾರ ಪ್ರಮೋದ್‌ಗೆ ಹೇಳಬೇಕು' ಎಂದುಕೊಂಡಳು. ಆದರೆ ತಕ್ಷಣ ತಾನು ಮದುವೆಯಾಗುತ್ತಿದ್ದಂತೆ ಗಂಡನಿಗೆ ಕೊಟ್ಟ ಮಾತು ನೆನಪಾಯ್ತು.

ಅವರು ಹನಿಮೂನ್‌ಗೆ ಸಿಂಗಪೂರ್‌ಗೆ ಹೋಗಿ ಇಪ್ಪತ್ತು ದಿನಗಳು ಅಲ್ಲಿ ಕಳೆದು ವಾಪಸ್ಸಾಗುವಾಗ ಪ್ರಮೋದ್ ಪದ್ಮಿನಿಯನ್ನು ಕೇಳಿದ್ದ. "ನಾನೊಂದು ಮಾತು ಕೇಳ್ತೀನಿ, ನಡೆಸಿಕೊಡ್ತೀಯಾ?"

ಪ್ರಮೋದನ ಸಹವಾಸದಲ್ಲಿ ಇಹವನ್ನೇ ಮರೆತಿದ್ದ ಪದ್ಮಿನಿ ಸ್ವರ್ಗಕ್ಕೆ ಎರಡೇ ಮೆಟ್ಟಲು ಕಡಿಮೆ ಎಂದೇ ಭಾವಿಸಿದ್ದಳು. ಅವನ ಬಿಸಿಯಪ್ಪುಗೆ, ಲಲ್ಲೆಮಾತು, ಚುಂಬನಗಳು, ಕೈ ಬೀಸಿ ಕರೆಯುತ್ತಿದ್ದ ಹೊಸ ಅನುಭವ ಗಳು, ಅವನ ಅತಿಮುದ್ದು, ಅವರು ಮೈ ಮರೆಯುವಂತೆ ಮಾಡಿದ್ದವು.

"ಕೇಳಿ"

"ನಾವು ಯಾವಾಗಲೂ ಹೀಗೇ ಇರಬೇಕೂಂತ ನಿನಗೆ ಇಷ್ಟವಿಲ್ವಾ?"

"ನಾವು ಹೀಗೆ ಸುತ್ತಾಡ್ತಾ ಮಜ ಮಾಡ್ತಿದ್ರೆ ನಮಗೆ ಯಾರು ಅನ್ನ ಹಾಕ್ತಾರೆ?"

"ಅಯ್ಯೋ ಪೆದ್ದೆ. ಹೀಗೇ ಅಂದ್ರೆ ಈ ರೀತಿ ಅಲ್ಲ. ಸುಖದಿಂದ, ನೆಮ್ಮದಿಯಿಂದ ಜೀವನ ಸಾಗಿಸಬೇಕಂತ ನಿನಗೆ ಇಷ್ಟವಿಲ್ವಾ?"

"ನೀವು ಇಂತಹ ಪ್ರಶ್ನೆ ಕೇಳಬಹುದಾ? ಯಾರಿಗೆ ತಾನೆ ನೆಮ್ಮದಿಯ ಬಾಳು ಬೇಕಿಲ್ಲ?"

"ಅಮ್ಮನಿಗೆ ಇದು ಬೇಡವಾಗಿದ್ದ ಮದುವೆ ಆದ್ದರಿಂದ ನೀನು ಬೇಡದ ಸೊಸೆ. ಅವಳು ನಿನ್ನನ್ನು ಏನಾದ್ರೂ ಅಂದು–ಆಡಿ ಮಾಡಬಹುದು. ನಿನ್ನ ಮನಸ್ಸು ನೋಯಿಸಲು ಪ್ರಯತ್ನಿಸಬಹುದು. ನೀನು ಎದುರುತ್ತರ ಕೊಡಬಾರದು. ನೀನು ಸೋತರೂ ಚಿಂತೆಯಿಲ್ಲ; ಹೊಂದಿಕೊಂಡು ಹೋಗುವುದಕ್ಕೆ ಪ್ರಯತ್ನಿಸಬೇಕು."

"ಓ.ಕೆ. ಬಾಬಾ, ಖಂಡಿತಾ ನಾನು ಜೋರು ಮಾಡಲ್ಲ. ಎದುರುತ್ತರ ಕೊಡಲ್ಲ."

"ಅಮ್ಮ ನಿನ್ನನ್ನು ಏನೇ ಅಂದ್ರೂ, ನಿನಗೆ ಏನೇ ತೊಂದರೆ ಕೊಟ್ಟರೂ, ನೀನು ಅಮ್ಮನ ಮೇಲೆ ನನಗೆ ಚಾಡಿ ಹೇಳಬಾರದು."

"ಅತ್ತೆ ನನ್ನ ಮೇಲೆ ನಿಮಗೆ ಚಾಡಿ ಹೇಳಿದರೆ ಕೇಳ್ತೀರಾ ?"

"ಅಮ್ಮನಿಗೂ ನಾನು ಇದೇ ಮಾತನ್ನು ಹೇಳಿದ್ದೇನೆ. ನಿಮ್ಮ ಸಮಸ್ಯೆಗಳನ್ನು ನೀವೇ ಪರಿಹರಿಸಿಕೊಳ್ಳಬೇಕೇ ಹೊರತು, ಯಾವ ಕಾರಣಕ್ಕೂ ನೀವು ನನ್ನನ್ನು ನಿಮ್ಮ ಜಗಳದ ಮಧ್ಯೆ ಎಳೆಯಬಾರದು."

ತನಗಾಗಿ ತಾಯಿಯೊಡನೆ ಜಗಳವಾಡಿ ಹಠಹಿಡಿದು ತನ್ನ ಕೈಹಿಡಿದ ಪ್ರಮೋದನ ಮನಸ್ಸಿನ ನೆಮ್ಮದಿಗಾಗಿ ಅವಳು ಏನು ಬೇಕಾದರೂ ಮಾಡಲು ಸಿದ್ಧಳಿದ್ದಳು. ಅವಳು ಅನನ ಅಲೆಗೂದಲಲ್ಲಿ ಕೈಆಡಿಸುತ್ತಾ ಹೇಳಿದ್ದಳು.

"ನೋಡಿ, ಸಂಸಾರ ಅಂದ್ಮೇಲೆ ಯಾರಾದರೊಬ್ಬರು ಸೋಲಲೇಬೇಕು. ನಿಮಗಾಗಿ ನಾನು ಸೋಲ್ತೀನೆ. ನೀವು ಅವರ ಬಗ್ಗೆ ಚಿಂತೆಮಾಡಬೇಡಿ."

"ಥ್ಯಾಂಕ್ ಯು ಚಿನ್ನ" ಎಂದವನು ಅವಳನ್ನಪ್ಪಿ ಮುದ್ದುಗರೆದಿದ್ದ.

ತಾನು ಗಂಡನಿಗೆ ಮಾತು ಕೊಟ್ಟಿರುವುದು ಅವಳ ಮನದಲ್ಲಿ ಯಾವಾಗಲೂ ಹಸಿರಾಗಿದ್ದುದರಿಂದ ಇಂದಿನವರೆಗೂ ಅವಳು ಅತ್ತೆಯ ಬಗ್ಗೆ ಗಂಡನಿಗೆ ದೂರು ಹೇಳಿರಲಿಲ್ಲ. ಪದ್ಮಿನಿ ಸ್ವಭಾವತಃ ಹಠಮಾರಿ ಸ್ವಭಾವದ ಹುಡುಗಿಯಾಗಿದ್ದರೂ, ಮನೆಯ ನೆಮ್ಮದಿಗೋಸ್ಕರ ಅವಳು ಸೋಲಬೇಕಿತ್ತು. ಪ್ರಮೋದ್ ಮನೆಗೆ ಬಂದೊಡನೆ ಅತ್ತೆ ತಮ್ಮ ಭಯ, ಹೆದರಿಕೆಯ ಕಥೆ ಹೇಳಿ ಅವನ ಮನಸ್ಸಿನ ನೆಮ್ಮದಿ ಕೆಡಿಸುತ್ತಾರೆಂದು ಅವಳಿಗೆ ಗೊತ್ತಿತ್ತು. ಪ್ರಮೋದ್ ಏನು ಮಾಡಬಹುದು ? 'ಅಮ್ಮ ಮುನಿಯಮ್ಮನ್ನ ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಮನೆಯಲ್ಲೇ ಇಟ್ಕೋ" ಅಂತ ಹೇಳಬಹುದು. ಅಥವಾ ನನಗೇ 'ಪಮ್ಮಿ, ನಾಳೆಯಿಂದ ನೀನು ಆಫೀಸ್‌ಗೆ ಬರಬೇಡ' ಅಂತ ಹೇಳಬಹುದು. ಪ್ರಮೋದ್ ಆ ರೀತಿ ಹೇಳುವ ಮೊದಲೇ ನಾನೇ ಆಫೀಸ್‌ಗೆ ಹೋಗುವ ವಿಚಾರ ಕೈಬಿಟ್ಟರೆ ಒಳ್ಳೆಯದೆನ್ನಿಸಿತು.

ಆ ದಿನ ಪ್ರಮೋದ್ ಬಂದಾಗ ಸಾಯಂಕಾಲ ಏಳು ಗಂಟೆಯಾಗಿತ್ತು. ಗಾಯಿತ್ರಿದೇವಿ ಮಗನ ಬಳಿ ಏಕಾಂತವಾಗಿ ಮಾತನಾಡಲು ಅವಕಾಶವೇ

ಸಿಗಲಿಲ್ಲ. ಪದ್ಮಿನಿ ಬೇಕೆಂದೇ ಗಂಡನ ಬಳ ಅತ್ತೆಯ ಹೆದರಿಕೆಯ ವಿಚಾರ ಹೇಳಲಿಲ್ಲ."

ಮರುದಿನ ಬೆಳಗ್ಗೆ ಏಳುತ್ತಿದ್ದಂತೆ ಗಂಡನಿಗೆ ಹೇಳಿದಳು. "ರೀ.... ನಾನಿನ್ಮೇಲೆ ಆಫೀಸ್‌ಗೆ ಬರಲ್ಲ."

"ಯಾಕೆ ಪಮ್ಮಿ?"

"ನಾನು ಹೊರಗೆ ಹೋದ್ರೆ ಅತ್ತೆ ಒಂಟಿಯಾಗಿಬಿಡ್ತಾರೆ. ನಾನು ಈ ಮನೆಯ ಸೊಸೆಯಾಗಿ ಬಂದಮೇಲೂ ಅವರ್‍ಯಾಕೆ ಒಂಟಿಯಾಗಿರಬೇಕು ಹೇಳಿ."

"ನಿನಗೆ ಬೇಜಾರಾಗಲ್ವಾ?"

"ಬೇಜಾರೂಂತ ನಾನು ದಿನಾ ಹೊರಗೆ ಹೊರಟುಹೋದ್ರೆ ಅತ್ತೆಗೆ ಬೇಜಾರಾಗಲ್ವಾ?"

ಅವಳ ಮಾತು ಕೇಳಿ ಪ್ರಮೋದ್‌ಗೆ ಖುಷಿಯಾಯ್ತು. ಪದ್ಮಿನಿ ಎದ್ದು ಸ್ನಾನಮಾಡಿದಳು. ಅವಳು ದೇವರ ದೀಪ ಹಚ್ಚಿ ಹೊರಗೆ ಬರುವ ವೇಳೆಗೆ ಗಾಯಿತ್ರಿದೇವಿ ಸ್ನಾನ ಮುಗಿಸಿದ್ದರು.

ಪದ್ಮಿನಿ ಬಿಸಿ ಬಿಸಿ ಇಡ್ಲಿ ಚಟ್ನಿ, ಬೆಣ್ಣೆ ಎರಡು ತಟ್ಟೆಗಳಲ್ಲಿ ಹಾಕಿ, ಒಂದನ್ನು ಗಂಡನಿಗೆ ಕೊಟ್ಟು ಅತ್ತೆಯನ್ನು ಕರೆದಳು "ಬನ್ನಿ ಅತ್ತೆ, ತಿಂಡಿ ತಿನ್ನಿ."

"ನನಗೆ ಹಸಿವಿಲ್ಲ. ಆಮೇಲೆ ತಿನ್ನುತ್ತೇನೆ."

"ಮಗನ ಜೊತೆ ತಿಂಡಿ ತಿನ್ನುವುದನ್ನು ಬಿಟ್ಟು ಆಮೇಲೆ ಒಂಟಿಯಾಗಿ ತಿಂಡಿ ತಿಂದ್ರೆ ಏನು ಚೆನ್ನಾಗಿರತ್ತೆ? ನಿಮ್ಮ ಮಗ ನಿಮಗಾಗಿ ಕಾಯ್ತಿದ್ದಾರೆ ಬನ್ನಿ."

ಸೊಸೆ ಮನೆಯಲ್ಲಿ ಉಡುವ ಸೀರೆಯುಟ್ಟು ತಿಂಡಿ ತಂದು ಕಾಯುತ್ತಿರುವುದನ್ನು ನೋಡಿ ಅವರಿಗೆ ಅನುಮಾನ ಮೂಡಿತು.

"ಬಾಮ್ಮ, ತಿಂಡಿ ತಿನ್ನು" ಮಗ ಆಪ್ಯಾಯತೆಯಿಂದ ಕರೆದಾಗ ಅವರಿಗೆ 'ಬೇಡ' ಅನ್ನಲಾಗಲಿಲ್ಲ. ಅವರು ತಿಂಡಿ ತೆಗೆದುಕೊಂಡರು.

"ಯಾಕಮ್ಮಾ ಪದ್ಮಿನಿ, ನೀನಿನ್ನೂ ಸಿದ್ಧವಾಗಿಲ್ಲ?"

"ಅವಳು ಇನ್ಮೇಲೆ ಆಫೀಸ್‌ಗೆ ಬರಲ್ಲಮ್ಮ."

"ಯಾಕೆ ?"

"ನಿನ್ನೊಬ್ಬಳನ್ನೇ ಮನೇಲಿ ಬಿಟ್ಟು ಆಫೀಸ್‌ಗೆ ಬರಕ್ಕೆ ಅವಳು ಇಷ್ಟ ಪಡ್ತಿಲ್ಲ....'ನಾನು ಅತ್ತೆ ಜೊತೆ ಮನೇಲ್ಲೇ ಇರ್ತೀನಿ' ಅಂತಿದ್ದಾಳೆ. ಇರಲಿ ಬಿಡು."

ಮಗನ ಮಾತು ಕೇಳಿ ಗಾಯಿತ್ರಿದೇವಿಯ ಗಂಟಲಲ್ಲಿ ಇಡ್ಲಿ ಇಳಿಯ ದಾಯ್ತು. "ಸೊಸೆ ಮಗನ ದೃಷ್ಟಿಯಲ್ಲಿ ಒಳ್ಳೆಯವಳಾಗಿಬಿಟ್ಟಳಲ್ಲಾ ? ಇವಳು ಮನೇಲಿರ್ತಾಳೇಂತ ಮಗ ಭಾವಿಸುವಂತಾಯಿತಲ್ಲಾ ? ಇವಳಿಗೆ ನನ್ನದು 'ನಾಟಕ'ವೆಂದು ತಿಳಿಯಲಿಲ್ಲವೆ ? ನಾನು ನಿಜವಾಗಿ ಹೆದರಿದ್ದೇ ನೆಂದು ನಂಬಿದ್ದಾಳೆಯೆ ?" ಅವಳ ತಲೆ ಯೋಚನೆಗಳಿಂದ ಬಿಸಿಯಾಯ್ತು.

ಪ್ರಮೋದ್ ತಿಂಡಿ ತಿಂದು, ಹಾರ್ಲಿಕ್ಸ್ ಕುಡಿದು ಹೊರಟುಹೋದ. ಪದ್ಮಿನಿಯ ಗಮನ ಮನೆ ಒರೆಸುತ್ತಿದ್ದ ಮುನಿಯಮ್ಮನ ಕಡೆ ಹರಿಯಿತು.

"ಮುನಿಯಮ್ಮ, ನೆನ್ನೆ ಬೆಳಗ್ಗೆ ಅತ್ತೆ ರೂಮು ಗೂಡಿಸಲಿಲ್ವಾ ?"

"ಗುಡಿಸಿದ್ನಲ್ಲವ್ವಾ ?"

"ಅತ್ತೆ ರೂಂ ಕಸದ ಬುಟ್ಟಿ ತುಂಬಾ ಹಣ್ಣಿನ ಸಿಪ್ಪೆಗಳಿವೆ. ಅವುಗಳ ನ್ನೆಲ್ಲಾ ಎಸೆದು ಕ್ಲೀನ್ ಮಾಡು."

"ನೆನ್ನೆ ಬೆಳಗ್ಗೆ ಕಸ ಎಸ್ದಿದ್ದೆ ಕಣವ್ವಾ" ಮುನಿಯಮ್ಮ ಗೊಣಗುತ್ತಾ ಹೋದಳು. ಪದ್ಮಿನಿ ಅತ್ತೆಯ ಕಡೆ ಕಳ್ಳ ನೋಟ ಬೀರಿದಳು. ಅವರ ಮುಖ ಪೆಚ್ಚಾಗಿತ್ತು.

ಅನ್ನುವಂತಿಲ್ಲ, ಆಡುವಂತಿಲ್ಲ. 'ನನ್ನ ಗುಟ್ಟು ಗೊತ್ತಿದ್ದರೂ ಸುಮ್ಮನಿದ್ದಾಳಲ್ಲಾ ?' ಎಂದುಕೊಂಡರು.

## ೬

ಅಂದು ಮಧ್ಯಾಹ ಹನ್ನೆರಡು ಗಂಟೆಯ ವೇಳೆಗೆ ಫೋನ್ ರಿಂಗಾಯಿತು. ಪದ್ಮಿನಿ ತನ್ನ ರೂಂನಲ್ಲಿದ್ದಳು. ಗಾಯಿತ್ರಿದೇವಿ ಉತ್ತರಿಸುತ್ತಿರುವುದು ಕೇಳಿಸಿತು. "ಅವಳಿಲ್ಲ, ಪೇಟೆಗೆ ಹೋಗಿದ್ದಾಳೆ."

ಪದ್ಮಿನಿ ತನ್ನ ರೂಂನಲ್ಲಿ ಫೋನ್ ತೆಗೆದುಕೊಂಡಳು. ತಂದೆ ಮಾತನಾಡುವುದು ಕೇಳಿಸಿತು. "ಪದ್ಮಿನಿ , ಅಮ್ಮಂಗೆ ಕೊಂಚ ಹುಷಾರಿಲ್ಲ. ದಯವಿಟ್ಟು ಪದ್ಮಿನೀನ್ನ ಕಳುಹಿಸಿ. ಮಗಳನ್ನು ನೋಡಬೇಕಂತ ಅವಳು ಹಂಬಲಿಸ್ತಿದ್ದಾಳೆ."

"ಸೀತಮ್ಮನಿಗೆ ಹುಷಾರಿಲ್ವಾ ? ಪದ್ಮಿನಿ ಬರಲಿ, ಹೇಳ್ತೀನಿ" ಎಂದು ಗಾಯಿತ್ರಿದೇವಿ ಹೇಳಿ ಫೋನ್ ಕೆಳಗಿಟ್ಟರು.

ಪದ್ಮಿನಿಗೆ ಮೈಯೆಲ್ಲಾ ಉರಿಯಿತು. 'ತನ್ನ ತಂದೆಗೆ ಅತ್ತೆ ಯಾಕೆ ಸುಳ್ಳು ಹೇಳಿದರು ? ನಾನು ಮನೆಯಲ್ಲಿದ್ದರೂ ಯಾಕೆ ನನಗೆ ವಿಷಯ ಹೇಳಲಿಲ್ಲ ?' ಅವಳು ಪ್ರಶ್ನಿಸಿಕೊಂಡಳು. 'ಅತ್ತೆ ಈ ವಿಚಾರ ನನಗೂ ಹೇಳುವುದಿಲ್ಲ. ಪ್ರಮೋದ್‌ಗೂ ಹೇಳುವುದಿಲ್ಲ. ಅಪ್ಪ ಈ ವಿಷಯ ನಮಗೆ ತಿಳಿದಿದೇಂತ ಭಾವಿಸಿ ಕಾಯ್ತಿರ್ತಾರೆ. ಈಗೇನು ಮಾಡುವುದು ?' ಎನ್ನಿಸಿತು. 'ತಾಯಿಗೆ ಹುಷಾರಿಲ್ಲ' ಎಂಬ ವಿಚಾರ ನೆನಪಾಗಿ ಅವಳಿಗೆ ಅಳು ಬಂದಂತಾಯ್ತು.

ಒಂದೂವರೆಯ ಹೊತ್ತಿಗೆ ಭಟ್ಟರು ಬಂದು ಕೇಳಿದರು. "ಎಲೆ ಹಾಕಲೇನಮ್ಮ?"

ಅವಳು ಅತ್ತೆಯ ರೂಮ್ ಬಳಿ ಬಂದು ಕರೆದಳು "ಬನ್ನಿ ಅತ್ತೆ, ಊಟ ಮಾಡೋಣ."

"ಬೇಡಮ್ಮ , ನಂಗೆ ಹಸಿವಿಲ್ಲ, ನೀನು ಊಟಮಾಡು."

"ನಿಮ್ಮನ್ನು ಬಿಟ್ಟು ನಾನು ಊಟ ಮಾಡೋದಾ ? ನನಗಿಂತ ಮೊದಲೇ ತಿಂಡಿ ತಿಂದಿರುವ ನೀವೇ ಹಸಿವಿಲ್ಲಾಂತ ಹೇಳ್ತಿರುವಾಗ ನನ್ನ

ಗಂಟಲಲ್ಲಿ ಅನ್ನ ಇಳಿಯುತ್ತದೆಯಾ ? ನೀವು ಊಟ ಮಾಡುವವರೆಗೂ ನಾನೂ ಊಟ ಮಾಡಲ್ಲ ಅಷ್ಟೆ."

ಗಾಯಿತ್ರಿದೇವಿಯ ಮನಸ್ಸು ಚುರುಕಾಗಿ ಯೋಚಿಸಿತು.

'ನನ್ನ ತಾಯಿಗೋಸ್ಕರ ಹೆಂಡತಿ ಉಪವಾಸವಿದ್ದಾಳೆಂದು ತಿಳಿದರೆ ಪ್ರಮೋದ್ ಸಂಕಟಪಡದಿರುತ್ತಾನಾ ? ಅವನ ದೃಷ್ಟಿಯಲ್ಲಿ ಪದ್ಮಿನಿ ತುಂಬಾ ಒಳ್ಳೆಯವಳಾಗಿ ಬಿಡ್ತಾಳೆ ಛೆ....ಛೆ....ಹಾಗಾಗಕೂಡದು.'

ಅವರು ಮರುಮಾತಿಲ್ಲದೆ ಊಟಕ್ಕೆ ಕುಳಿತರು. ಪದ್ಮಿನಿ ಬೇಗ ಊಟ ಮುಗಿಸಿ, ಬೇಕೆಂದೇ ಅವರೆದುರಿಗೆ ನರಸಾಪುರಕ್ಕೆ ಫೋನ್ ಮಾಡಿದಳು.

"ಹಲೋ ಯಾರು ಅರುಣಾನಾ? ನಾನು ಪದ್ಮಿನಿ' ನಮ್ಮ ತಾಯಿನ್ನ ಕರೆಯುತ್ತೀಯ ?"

"ಆಗಲಿ ಆಂಟಿ" ಎಂದಳು ಅರುಣ.

"ಹತ್ತು ನಿಮಿಷ ಬಿಟ್ಟು ನಾನೇ ಫೋನ್ ಮಾಡ್ತೀನಿ" ಎನ್ನುತ್ತಾ ಪದ್ಮಿನಿ ಅಲ್ಲೇ ಕುಳಿತಳು. ಗಾಯಿತ್ರಿದೇವಿ ಊಟ ನಿಧಾನ ಮಾಡಿದರು.

"ಯಾರಿಗಮ್ಮ ಫೋನ್ ?"

"ನಮ್ಮಮ್ಮಯಿಗೆ ಮಾತಾಡ್ತಿದ್ದೀನಿ. ಇತ್ತೀಚೆಗೆ ಅವರಿಂದ ಕಾಗದನೂ ಇಲ್ಲ. ಯಾಕೋ ಮನಸ್ಸಿಗೆ ತುಂಬಾ ಕಿರಿಕಿರಿ ಆಗಿದೆ."

ಗಾಯಿತ್ರಿದೇವಿಗೆ ಅವಳ ಮಾತು ಕೇಳಿ ಕಸಿವಿಸಿಯಾಯ್ತು. ಇವಳು ಫೋನ್ ಮಾಡಿದರೆ ಶಾಸ್ತ್ರಿಗಳು ತಾವು ಫೋನ್ ಮಾಡಿದ್ದ ವಿಚಾರ ಹೇಳದಿರುವರೆ ? ಅವರು ಹೇಳುವ ಮೊದಲು ತಾನೇ ಹೇಳುವುದು ಒಳ್ಳೆಯದಲ್ಲವೆ ?"

"ಅಯ್ಯೋ, ನಾನು ಹೇಳೋದು ಮರೆತುಬಿಟ್ಟೆ. ಬೆಳಗ್ಗೆ ನೀನು ತೋಟದಲ್ಲಿದ್ದಾಗ ನಿಮ್ಮಪ್ಪಂದಿ ಫೋನ್ ಮಾಡಿದ್ರು. ನಿಮ್ಮಮ್ಮಯಿಗೆ ಕೊಂಚ ಹುಷಾರಿಲ್ಲವಂತೆ ನಿನ್ನನ್ನು ನೋಡಬೇಕೂಂತ ತುಂಬಾ ಹಂಬಲಿಸ್ತಿದ್ದಾರಂತೆ."

"ಅಮ್ಮಂಗೆ ಹುಷಾರಿಲ್ವಾ ?"

"ಹುಂ. ನೀನು ಹೇಗೋದಾದ್ರೆ ಹೋಗಿ ಬಾ. ಅವರಿಗೂ ಮಗಳು ಅನ್ನುವ ವಾಂಛಲ್ಯ ಇರುವುದಿಲ್ಲವೆ ?"

"ಆಗಲೀತ್ತೀ. ಅಪ್ಪನ ಜೊತೆ ಮಾತನಾಡಿ ಯಾವಾಗ ಹೋಗೋದೂಂತ ತೀರ್ಮಾನಿಸ್ತೀನೆ" ಎಂದಳು ಪದ್ಮಿನಿ. ಅವಳು ತಂದೆಗೆ ಫೋನ್ ಮಾಡಿ ತಾನು ಬರುವ ವಿಚಾರ ತಿಳಿಸಿದಳು. ಅವಳು ಬರುವ ವಿಚಾರ ಕೇಳಿ ಅವರಿಗೆ ತುಂಬಾ ಸಂತೋಷವಾಯ್ತು.

ಪದ್ಮಿನಿ ಹೊರಡುವ ಸಿದ್ಧತೆ ಮಾಡಿಕೊಂಡಳು. ಪ್ರಮೋದ್ ತಾನೇ ಹೋಗಿ ಬಿಟ್ಟು ಬರುದಾಗಿ ತಾಯಿಗೆ ಹೇಳಿದ.

"ಹಾಗಾದ್ರೆ ನಾನೂ ಬರ್ತೀನೆ. ಶಾಸ್ತ್ರಿಗಳನ್ನು-ಸೀತಮ್ಮನ್ನು ನೋಡಿ ತುಂಬಾ ದಿನವಾಯ್ತು. ರಾತ್ರಿ ವಾಪಸ್ಸು ಬಂದುಬಿಡೋಣ" ಎಂದರು ಗಾಯಿತ್ರಿದೇವಿ. ಮಕ್ಕಳಿರುವ ಮನೆ ಎಂದು ಕೋಡುಬಳೆ, ಚಕ್ಕುಲಿ, ರವೆ ಉಂಡೆ, ಕೊಬ್ಬರಿಮಿಠಾಯಿ ಮಾಡಿಸಿದರು.

ಮರುದಿನ ಭಾನುವಾರ ಬೆಳಗ್ಗೆ ತಿಂಡಿ ತಿಂದುಕೊಂಡು ಮೂವರೂ ಹೊರಟರು. ಸೀತಮ್ಮನಿಗಂತೂ ಜೊತೆಯಾಗಿ ಬಂದ ಅತ್ತೆ ಸೊಸೆಯರನ್ನು ಕಂಡು ತುಂಬಾ ಖುಷಿಯಾಯಿತು. ಅಳಿಯನಿಗೆ, ಬೀಗಿತ್ತಿಗೆ ಔತಣದ ಅಡಿಗೆ ಮಾಡಿಸಿದ್ದರು. ಸಾಯಂಕಾಲ 5 ಗಂಟೆಗೆ ತಾಯಿ-ಮಗ ಹೊರಟರು. ಮೊದಲು ಗಾಯಿತ್ರಿದೇವಿ ಸೊಸೆಗೆ "ನೀನು ಇಲ್ಲೇ ತುಂಬಾ ದಿನ ಇದ್ದು ನಿಮ್ಮಮ್ಮನ್ನೂ ಕರೆದುಕೊಂಡುಬಾ. ಅಲ್ಲಿಯ ಡಾಕ್ಟರ್‌ಗಳಿಗೆ ತೋರಿಸೋಣ" ಎಂದರು.

ಪದ್ಮಿನಿಗೆ ಅತ್ತೆಯ ಮಾತು ಕೇಳಿ ಪರಮಾಶ್ಚರ್ಯವಾಯ್ತು. 'ತನ್ನ ಅತ್ತೆಗೆ ಇಷ್ಟು ಒಳ್ಳೆಯ ಬುದ್ಧಿ ಬಂದಿದ್ದಾದರೂ ಎಲ್ಲಿಂದ?' ಎನ್ನಿಸಿತು.

ಗಾಯಿತ್ರಿದೇವಿ ಹೋದಮೇಲೆ ಸೀತಮ್ಮ ಹೇಳಿದರು.

"ನಾನೆಲ್ಲಿಗೂ ಬರಲ್ಲ. ನೀನೇ ಹದಿನೈದು ದಿನಗಳಿರು. ಇಂದೂನೂ ಬರ್ತಾಳೆ. ಎಲ್ಲರೂ ಒಟ್ಟಿಗೆ ಇದ್ದಂತಾಗತ್ತೆ."

"ವತ್ಸಲಾ ಬರಲ್ವಾ?"

"ಅವಳ ಮಾವಂಗೆ ಹುಷಾರಿಲ್ಲ. ಬಿಟ್ಟು ಬರುವಂತಿಲ್ಲ."

ಮರುದಿನದಿಂದ ಪದ್ಮಿನಿ ಅಡಿಗೆ ಮನೆಯ ಛಾರ್ಜ್ ತೆಗೆದು ಕೊಂಡಳು. ಎದುರುಮನೆಯಲ್ಲೇ ಫೋನ್ ಇತ್ತು. ಪ್ರಮೋದ್ ದಿನಾ

ಫೋನ್ ಮಾಡುತ್ತಿದ್ದ. ಆ ವಾರದಲ್ಲೇ ಇಂದು ಮಗ ಪ್ರಮೋದ್‌ನ ಜೊತೆ ಬಂದಿಳಿದಳು. ಹತ್ತು ದಿನ ಕಳೆದಿದ್ದೇ ತಿಳಿಯಲಿಲ್ಲ.

ಅಂದು ಗುರುವಾರ, ಅವಳು ಮಠಕ್ಕೆ ಹೋಗಿ ಬಂದು ತಿಂಡಿ ತಿನ್ನುತ್ತಿದ್ದಾಗ ಫೋನ್ ಬಂತು. ಗಾಯಿತ್ರಿದೇವಿ ಫೋನ್ ಮಾಡಿದ್ದರು. "ನೀನು ಈ ದಿನಾನೇ ಹೊರಟು ಬಾ. ತುಂಬಾ ಮುಖ್ಯವಾದ ವಿಚಾರ ಐದೆ."

"ನಿಮ್ಮಗ ಮುಂದಿನ ವಾರ ಬಂದು ಕರೆದುಕೊಂಡು ಹೋಗ್ತೀನೀಂತ ಹೇಳಿದ್ದಾರತ್ತೆ."

"ಅವನಿಗೆ ಇದೆಲ್ಲಾ ಗೊತ್ತಿಲ್ಲ. ನೀನು ಹೊರಟು ಬಾ. ಬೆಂಗಳೂರಿಗೆ ಬಂದ ತಕ್ಷಣ ಫೋನ್ ಮಾಡು. ನಾನು ಕಾರು ಕಳುಹಿಸುತ್ತೇನೆ."

ಪದ್ಮಿನಿ ಗೊಣಗಿಕೊಂಡೇ ಹೊರಟಳು. ಅತ್ತೆ ಹೇಳುತ್ತಿರುವ ಮುಖ್ಯವಾದ ವಿಷಯ ಯಾವುದೆಂದು ಅವಳಿಗೆ ಹೊಳೆಯಲಿಲ್ಲ. ಅವಳು ಆಟೋ ಮಾಡಿಕೊಂಡು ಮನೆ ಸೇರಿದಳು. ಗಾಯಿತ್ರಿದೇವಿ ಅವಳಿಗಾಗಿ ಚಾತಕ ಪಕ್ಷಿಯಂತೆ ಕಾಯುತ್ತಿದ್ದರು.

"ಸದ್ಯ ಬಂದ್ಯಲ್ಲಮ್ಮ, ನೀನು ಬರ್ತೀಯೋ ಇಲ್ವೋಂತ ನನಗೆ ತುಂಬಾ ಅನುಮಾನವಾಗಿತ್ತು."

"ಯಾಕತ್ತೆ ? ಏನು ವಿಷಯ ?"

"ನೀನು ಮೊದಲು ಕಾಫಿ ಕುಡಿ."

ಅವಳು ಕಾಫಿ ಹೀರುತ್ತಿದ್ದಾಗ ಅವರೊಂದು ಆಹ್ವಾನ ಪತ್ರಿಕೆ ತಂದರು.

"ಇದನ್ನು ನೋಡು."

"ಏನದು ?"

"ನಮ್ಮ ಸಮಾಜದ ವಾರ್ಷಿಕೋತ್ಸವದ ಆಹ್ವಾನ ಪತ್ರಿಕೆ."

"ಓ........"

"ನಾಳೆ ನನಗೆ ನಮ್ಮ ಸಮಾಜದಲ್ಲಿ ಸನ್ಮಾನ ಇಟ್ಟುಕೊಂಡಿದ್ದಾರೆ ಅದಕ್ಕೋಸ್ಕರ ನಿನ್ನನ್ನು ಕರೆಸಿದೆ."

"ಅದಕ್ಕೋಸ್ಕರ ಕರೆಸಿದ್ರಾ ?"

"ಸನ್ಮಾನ ಯಾಕೆ ಗೊತ್ತಾ ? ನಿನ್ನಿಂದಾಗಿ ಪದ್ಮಿನಿ...."

"ನನ್ನಿಂದಾಗಿ ಸನ್ಮಾನಾನಾ ?"

"ಹುಂ, ನಾನು ಶ್ರೀಮಂತಳಾದ್ರೂ ಜಾತಿ, ಅಂತಸ್ತು ಹಣಕ್ಕೆ ಪ್ರಾಧಾನ್ಯತೆ ಕೊಡದೆ, ಬಡವರ ಮನೆ ಹುಡುಗಿಯನ್ನು ತಂದು ನನ್ನ ಮಗನಿಗೆ ಮದುವೆ ಮಾಡಿಕೊಂಡಿದ್ದಕ್ಕೆ ಈ ಸನ್ಮಾನ. ನೀನೂ ನನ್ನ ಜೊತೆ ನಾಳೆ ಬರಬೇಕು."

ಪದ್ಮಿನಿಯ ಸಿಟ್ಟು ಮುಗಿಲಿಗೇರಿತು. ಅವಳು ರೇಗಿ ನುಡಿದಳು "ನಾನು ಬರಲ್ಲ."

"ಯಾಕೆ ಬರಲ್ಲ ?"

"ಯಾಕೆ ಬರಬೇಕು ? ನೀವೇನು ನನ್ನನ್ನು ಸಂತೋಷದಿಂದ ನಿಮ್ಮ ಮಗನಿಗೆ ತಂದುಕೊಂಡ್ರಾ ? ನಿಮ್ಮ ಮಗ ನನ್ನನ್ನು ಕೈ ಹಿಡಿಯುತ್ತಾರಲ್ಲಾ ಅನ್ನುವ ಒಂದೇ ಕಾರಣದಿಂದ ನನ್ನ ಚಾರಿತ್ರ್ಯಕ್ಕೇ ಮಸಿ ಬಳಿಯುವ ಪ್ರಯತ್ನ ಮಾಡಿದ್ರಿ. ನನ್ನನ್ನು ನಡತೆಗೆಟ್ಟವಳನ್ನಾಗಿ ಮಾಡಿದ್ರಿ. ನಮ್ಮ ಮದುವೆ ತಪ್ಪಿಸುವುದಕ್ಕೆ ಎಷ್ಟು ಸಾಧ್ಯವೋ ಅಷ್ಟು ಮಾಡಿದ್ರಿ....ಪ್ರಮೋದ್ ಹಠ ಹಿಡಿದಿದ್ರಿಂದ ಈ ಮದುವೆ ಆಯ್ತು. ನಿಮಗೆ ಸನ್ಮಾನ ಮಾಡ್ತಿರೋದೆ ತಪ್ಪು, ನಾನು ಏನೇ ಆದ್ರೂ ಬರಲ್ಲ."

"ಹೌದು, ನನಗೆ ಈ ಮದುವೆ ಇಷ್ಟವಿರಲಿಲ್ಲ. ನಿನ್ನನ್ನು ಮದುವೆಯಾಗಿದ್ರಿಂದ ಅವನಿಗೇನು ಲಾಭವಾಯ್ತು ? ಆದ್ರೆ ಒಂದ್ಮಾತು ನೆನಪಿನಲ್ಲಿ ಇಟ್ಕೋ. ನಾನು ಒಪ್ಪದೆ ಇದ್ದಿದ್ರೆ ಈ ಮದುವೆ ನಡೆಯುತ್ತಿರಲಿಲ್ಲ."

"ಆಗ ನಿಮ್ಮ ಮಗಾನೂ ಒಂಟಿಯಾಗೇ ನಿಂದಿರ್ತಿದ್ರು. ನನಗೆ ನಿಮ್ಮ ಸಮಾಜಕ್ಕೆ ಬರಕ್ಕೆ ಇಷ್ಟವಿಲ್ಲ ನಾನು ಬರಲ್ಲ."

"ಸುಮ್ಮನೆ ಹಠ ಮಾಡಬೇಡ ಪದ್ಮಿನಿ....ಈ ವಿಚಾರ ಪ್ರಮೋದ್‌ವರೆಗೂ ಹೋಗೋದು ಚೆನ್ನಾಗಿರಲ್ಲ."

"ನಾನವರಿಗೆ ಪ್ರತಿಯೊಂದನ್ನೂ ಹೇಳೋದಿದ್ದಿದ್ರೆ ನಮ್ಮನೆ ಇಷ್ಟು ಹೊತ್ತಿಗೆ ಕುರುಕ್ಷೇತ್ರ ಆಗಿರ್ತಿತ್ತು....ನಾನು ಮದುವೆಯಾಗಿ ಈ ಮನೆಗೆ ಬಂದಮೇಲೂ ನೀವು ನಿಮ್ಮ ಅಸಹನೆಯನ್ನು ನನ್ನ ಮೇಲೆ ತೋರಿಸ್ತಾನೇ ಇದ್ದೀರಿ. ಕೊನೆಗೆ ನಮ್ತಂದೆ ಫೋನ್ ಮಾಡಿದಾಗ ಕೂಡ ನಾನು ಮನೆಯಲ್ಲಿದ್ರೂ ನನ್ನನ್ನು ಕರೆಯುವ ಸೌಜನ್ಯ ನೀವು ತೋರಲಿಲ್ಲ. 'ಅವಳು ಪೇಟೆಗೆ

ಹೋಗಿದ್ದಾಳೆ' ಅಂತ ಸುಳ್ಳು ಹೇಳಿದ್ರಿ. ನಿಮಗೆ ಯಾಕೆ ಸನ್ಮಾನ ಮಾಡ್ತಿದ್ದಾರವ್ರು ? ಬಡ ಹುಡುಗಿಯನ್ನು ಸೊಸೆ ಮಾಡ್ಕೊಂಡು 'ಕಣ್ಣಿನ ಗೊಂಬೆ' ತರಹ ನೋಡಿಕೊಳ್ತಿರುವುದಕ್ಕಾ ? ಈ ವಿಚಾರ ನನಗೆ ಮೊದಲೇ ಗೊತ್ತಿದ್ದಿದ್ರೆ ನಾನು ಬರ್ತಾನೇ ಇರಲಿಲ್ಲ."

ಗಾಯಿತ್ರಿದೇವಿ ಮಾತನಾಡದೆ ಅಲ್ಲಿಂದ ಎದ್ದು ಹೋದರು. ಪದ್ಮಿನಿ ರೂಂ ಸೇರಿ ಫೋನ್ ಮಾಡಿದಳು....ಪ್ರಮೋದ್ ಆಫೀಸ್‌ನಲ್ಲೇ ಇದ್ದ.

"ಡಿಯರ್ ನೀನಾ ? ಯಾವಾಗ ಬಂದೆ ?"

"ಅರ್ಧ ಗಂಟೆ ಆಯ್ತು. ಎಷ್ಟು ಹೊತ್ತಿಗೆ ಮನೆಗೆ ಬರ್ತೀರಾ ?"

"ಇನ್ನೇನು ಹೊರಡ್ತೇನೆ. ನಿಮ್ಮಮ್ಮ ಆರೋಗ್ಯವಾಗಿದ್ದಾರಾ ? ನೀನು ಬರಕ್ಕೆ ಮೊದಲು ಯಾಕೆ ಫೋನ್ ಮಾಡಲಿಲ್ಲ ?"

"ನೀವು ಮನೆಗೆ ಬನ್ನಿ, ಆಮೇಲೆ ಹೇಳ್ತೀನಿ" ಎಂದಳು ಪದ್ಮಿನಿ.

ಪ್ರಮೋದ್ ಮನೆಗೆ ಬರುವುದನ್ನೇ ಕಾಯುತ್ತಾ ಗಾಯಿತ್ರಿದೇವಿ ಬಾಗಿಲಲ್ಲೇ ನಿಂತಿದ್ದರು.

"ಅಮ್ಮ ಪದ್ಮಿನಿ ಬಂದಳಂತಲ್ಲಾ....ಎಲ್ಲಿ ?"

"ರೂಂನಲ್ಲಿದ್ದಾಳೆ, ಊರಿಗೆ ಹೋಗಿ ಬಂದಮೇಲೆ ಅವಳ ನಾಲಿಗೆ ತುಂಬಾ ಉದ್ದವಾಗಿಬಿಟ್ಟಿದೆ."

"ಯಾಕಮ್ಮ ಹಾಗಂತೀಯಾ ?"

"ಇನ್ನೇನ್ಮತ್ತೆ ? ನಾಳೆ ನನಗೆ ಸಮಾಜದಲ್ಲಿ ಸನ್ಮಾನ ಇದೆ, ನೀನೂ ಬಾಮ್ಮ ಅಂದಿದ್ದಕ್ಕೆ ನೂರೆಂಟು ಮಾತಾಡ್ತಿದ್ದಾಳೆ."

"ನಿಮಗ್ಯಾಕೆ ಸನ್ಮಾನ ? ಅವರಿಗೆ ಬುದ್ಧಿ ಇಲ್ಲಾಂದ್ರೆ ನನಗೂ ಬುದ್ಧಿ ಇಲ್ವಾ ? ಈ ವಿಚಾರ ಮೊದಲೇ ಗೊತ್ತಿದ್ದಿದ್ರೆ ನಾನು ಬರ್ತಾನೇ ಇರಲಿಲ್ಲ— ಅಂತ ಹೇಳಿದಳಪ್ಪ.

"ಪದ್ಮಿನಿ ಹಾಗಂದ್ಲಾ ?"

"ಅವಳಿಗೆ ಈ ಮನೇಲಿ ಸುಖ ಇಲ್ವಂತೆ. ನಾವು ಅವಳನ್ನು ಸರಿಯಾಗಿ ನೋಡಿಕೊಳ್ತಿಲ್ಲವಂತೆ. ಅವಳು ಮದುವೆಯಾಗದೇ ಇದ್ದಿದ್ರೆ ನಿನಗೆ ಹೆಣ್ಣು ಕೊಡುವವರೇ ಗತಿಯಿಲ್ಲದೆ 'ಒಂಟಿಮರದ' ಹಾಗೆ ಇರ್ತಿದ್ದೆಯಂತೆ...."

ಅವನು ಮಾತನಾಡದೆ ಕೋಣೆಗೆ ಧಾವಿಸಿ ಮಲಗಿದ್ದ ಪದ್ಮಿನಿಯ ಜುಟ್ಟು ಹಿಡಿದು ಎಳೆದು ಕೆನ್ನೆಗೆ ಬಾರಿಸಿದ. ಗಂಡನ ಅನಿರೀಕ್ಷಿತ ವರ್ತನೆಯಿಂದ ಪದ್ಮಿನಿ ತಬ್ಬಿಬ್ಬಾದಳು.

"ಏನೇ ನೀನು ನನ್ನನ್ನು ಮದುವೆಯಾಗದೇ ಇದ್ದಿದ್ರೆ ನಾನು 'ಒಂಟಿ ಮರ'ದ ಹಾಗೆ ನಿಂತಿರ್ತಿದ್ನಾ ? ಎಲ್ಲೋ ಬಿದ್ದಿದ್ದವಳನ್ನು ಮದುವೆ ಮಾಡಿಕೊಂಡು ಸಿಂಹಾಸನದ ಮೇಲೆ ಕೂಡಿಸಿದ್ದಕ್ಕೆ ಇಷ್ಟೊಂದು ಕೊಬ್ಬಾ ನಿನಗೆ ? ನಮ್ಮಮ್ಮನಿಗೆ ದಬಾಯಿಸುವಷ್ಟು ಧೈರ್ಯ ಬಂತಾ ನಿನಗೆ ?"
ನಾಳೆ ನೀನು ಅಮ್ಮನ ಸನ್ಮಾನ ಸಮಾರಂಭಕ್ಕೆ ಹೋಗಬೇಕು. ನಮ್ಮ ಮಾತಿಗೆ ಬೆಲೆಕೊಡುವುದಾದ್ರೆ ಈ ಮನೆಯಲ್ಲಿರು, ಇಲ್ಲದಿದ್ರೆ ನಿಮ್ಮಪ್ಪನ ಮನೆಗೆ ಹೋಗು."

ಪದ್ಮಿನಿ ಕಣ್ಣೊರೆಸಿಕೊಂಡು ಹೇಳಿದಳು "ನಿಮ್ಮ ತಾಯಿಯ ಸನ್ಮಾನ ಸಮಾರಂಭಕ್ಕೆ ನಾನು ಹೋಗ್ತೀನಿ....ಆದರೆ ಅದಕ್ಕೆ ಮೊದಲು 'ಈ ಸನ್ಮಾನ ಯಾಕೇ'ಂತ ನಿಮ್ಮಮ್ಮನ್ನ ನನ್ನೆದುರಿಗೇ ಕೇಳಿ."

"ಅವರನ್ನೇನು ಕೇಳೋದು, ನೀನೇ ಹೇಳು."

"ಬಡವರ ಮನೆಯ ಹುಡುಗೀನ್ನ ಮಗನಿಗೆ ಮದುವೆ ಮಾಡಿಕೊಂಡಿದ್ದಕ್ಕೆ ಈ ಸನ್ಮಾನ ಸಮಾರಂಭ ! ನಿಮ್ಮಮ್ಮ ಈ ಮದುವೆಗೆ ಸಂತೋಷವಾಗಿ ಒಪ್ಪಿಗೆ ನೀಡಿದ್ದಾರಾ ? ಈ ಮದುವೆ ನಡೆಯದ ಹಾಗೆ ಅವರು ಪ್ರಯತ್ನ ಮಾಡಲಿಲ್ವಾ ? ಈ ಮದುವೆ ತಪ್ಪಿಸಕ್ಕೆ ನನಗೆ 'ನಡತೆಗೆಟ್ಟವಳು' ಅನ್ನುವ ಪಟ್ಟವನ್ನೂ ಕಟ್ಟಲಿಲ್ವಾ ? ನೀವು ವಿಷಯ ತಿಳಿಯದೆ ನನ್ನನ್ನು ದಂಡಿಸಬೇಡಿ."

"ನೋಡು ಪಮ್ಮಿ, 'ಸಂಸಾರ ಗುಟ್ಟು ವ್ಯಾಧಿರಟ್ಟು' ಅಂತ ಕೇಳಿಲ್ವಾ? ನಿನ್ನ ಅಮ್ಮನ ನಡುವೆ ಏನೇ ಭಿನ್ನಾಭಿಪ್ರಾಯವಿದ್ರೂ ಅದನ್ನು ಹೊರಗಡೆಗೆ ತೋರಿಸಬಾರದು. ಆಗ ನಮ್ಮ ಸಂಸಾರ ನಗೆಪಾಟಲಿಗೆ ಗುರಿಯಾಗುತ್ತೆ. ನೀನು ನಾಳೆ ಅಮ್ಮನ ಜೊತೆ ಸಮಾರಂಭಕ್ಕೆ ಹೋಗಿ ಬಾ. ಅದರಿಂದ ನಿನಗೇನೂ ನಷ್ಟವಾಗಲ್ಲ."

ಪದ್ಮಿನಿ ಮಾತಾಡಲಿಲ್ಲ....ಗಂಡನೊಡನೆ ವಾದಮಾಡಿ ಪ್ರಯೋಜನವಿಲ್ಲ

ವೆಂದು ಅವರ್ಳಿಗೆ ಅರ್ಥವಾಯ್ತು. ಗಾಯಿತ್ರಿದೇವಿ ಗೆಲುವಿನ ನಗೆ ಬೀರಿ ಓಡಾಡಿದರು.

ಮರುದಿನ ಸಾಂಯಕಾಲ ಐದು ಗಂಟೆಗೆ ಸನ್ಮಾನ ಸಮಾರಂಭವಿತ್ತು. ಬೆಳಗ್ಗೆ ತಿಂಡಿ ತಿನ್ನುವಾಗ ಪ್ರಮೋದ್ ಕೇಳಿದ.

"ಸಮಾರಂಭದಲ್ಲಿ ನಿನ್ನ ಭಾಷಣಾನೂ ಇದೆಯೇನಮ್ಮಾ?"

"ಇಲ್ಲದೆ ಇರುತ್ತದೆಯಾ? ಸನ್ಮಾನಿತರ ಭಾಷಣ ಇದ್ದೇ ಇದೆ."

"ನಿನ್ನ ಜೊತೆ ಇನ್ಯಾರನ್ನು ಸನ್ಮಾನ ಮಾಡ್ತಿದ್ದಾರೆ!"

"ಡಾಕ್ಟರ್ ಲೀಲಾವತಿ,ಲೇಖಕಿ ಅರುಂಧತಿದೇವಿ, ಸಮಾಜ ಸೇವಕಿ ಸುಶೀಲಮ್ಮ. ಸುಗಮಸಂಗೀತ ಹಾಡುವ ಶಾಂತಿಪ್ರಸಾದ್, ನಾಮಗಿರಿಯಮ್ಮ....ನೀನು ಬಾರೋ."

"ಸಾರಿ ಅಮ್ಮ....ನನಗೆ ಅದೆಲ್ಲಾ ಇಷ್ಟವಾಗಲ್ಲ....ಪಮ್ಮಿ ಬರ್‍ತಾಳಲ್ಲಾ ಕರೆದುಕೊಂಡು ಹೋಗು."

ಪದ್ಮಿನಿಯ ಸ್ನಾನವಾದ ಮೇಲೆ ಗಾಯತ್ರಿದೇವಿ ಅವಳನ್ನು ಕರೆದರು. "ಬಾಮ್ಮ, ಒಟ್ಟಿಗೆ ತಿಂಡಿ ತಿನ್ನೋಣ."

ಪದ್ಮಿನಿ ಮಾತನಾಡದೆ ತಿಂಡಿ ತಿಂದಳು.

"ತಿಂಡಿ ತಿಂದ ಮೇಲೆ ನನ್ನ ರೂಂಗೆ ಬಾ."

ಅವಳು ಅವರ ರೂಂಗೆ ಬಂದಾಗ ಅವರ ಮುಂದೆ ದೊಡ್ಡ ಜರಿಯಂಚಿದ್ದ ಮೆಜೆಂಟಾ ಬಣ್ಣದ ಮೈಸೂರು ಸಿಲ್ಕ್ ಸೀರೆಯಿತ್ತು.

"ನೋಡಮ್ಮ, ಏಳು ಸಾವಿರಕೊಟ್ಟು ನಿನಗೇಂತ ಈ ಸೀರೆ ತಂದಿದ್ದೇನೆ. ಬ್ಲೌಸ್ ಕೂಡ ಹೊಲೆಸಿಟ್ಟಿದ್ದೇನೆ, ಈ ಕಾಸಿನಸರ, ಅದಕ್ಕೊಪ್ಪುವ ಬಳೆ, ಹ್ಯಾಂಗಿಂಗ್ಸ್ ಹಾಕಿಕೊಂಡು ಬಾ."

ಪದ್ಮಿನಿ ಮಾತಾಡಲಿಲ್ಲ. ಆಧುನಿಕ ರೀತಿಯಲ್ಲಿ ತುರುಬು ಕಟ್ಟಿ, ಅದಕ್ಕೆ ಒಂದು ಗುಲಾಬಿ ಸಿಗಿಸಿ, ಅತ್ತೆ ತಂದಿದ್ದ ಸೀರೆಯುಟ್ಟು ಅವರು ಕೊಟ್ಟಿದ್ದ ಒಡವೆ ಧರಿಸಿದ್ದಳು....ಅಪ್ಸರೆಯಂತೆ ಕಾಣಿಸುತ್ತಿದ್ದ ಸೊಸೆಯನ್ನು ಅವರು ಮೆಚ್ಚುಗೆಯಿಂದ ನೋಡಿದರು. ಕಾರು ಹತ್ತಬೇಕೆನ್ನುವಾಗ ಪದ್ಮಿನಿ ಕೇಳಿದಳು "ಅತ್ತೆ, ನಾನು ನನ್ನ ಕಾಲೇಜು ದಿನಗಳಲ್ಲಿ ಒಳ್ಳೆಯ ಡಿಬೇಟರ್ ಆಗಿದ್ದೇಂತ ನಿಮಗೆ ಗೊತ್ತಾ?"

"ಆ ವಿಚಾರ ಯಾಕೀಗ ?"

"ಭಾಷಣ ಮಾಡುವಾಗ ನೀವು ನನ್ನ ಬಗ್ಗೆಯಾಗಲಿ, ನಮ್ಮ ತಾಯಿ–ತಂದೆಯರ ಬಡತನದ ಬಗ್ಗೆಯಾಗಲಿ ಮಾತಾಡಕೂಡದು."

'ನನ್ನ ಮಗ ಮೆಚ್ಚುವ ಹುಡುಗಿ ಬಡವಳಾಗಿರಲಿ, ಬಲ್ಲಿದಳಾಗಿರಲಿ, ಅವಳೇ ನನ್ನ ಸೊಸೆ ಅಂತ ತೀರ್ಮಾನಿಸಿದ್ದೆ. ನನಗೂ ಮೊದಲಿಂದ ಪದ್ಮಿನೀನ್ನ ಸೊಸೆ ಮಾಡಿಕೊಳ್ಳಬೇಕು ಅನ್ನುವ ಆಸೆ ಇತ್ತು....ನನ್ನ ಮಗಾನೂ ಅವಳನ್ನು ಮೆಚ್ಚಿದ್ದರಿಂದ ಅವಳನ್ನು ನಾನು ಮನೆ ತುಂಬಿಸಿಕೊಂಡೆ' ಅಂತ ಮಾತ್ರ ಹೇಳಿ ಹೇಗೂ ಸುಳ್ಳು ಹೇಳುವುದು ನಿಮಗೆ ಹೊಸತಲ್ಲವಲ್ಲ."

"ನಾನು ನೀನು ಹೇಳಿದಂತೇ ಭಾಷಣ ಮಾಡಬೇಕು ಅನ್ನುವ ನಿಯಮ ವಿದೆಯೇನು ?"

"ನೀವೇನಾದ್ರೂ ನನಗೆ ಅವಮಾನವಾಗುವಂತೆ ಮಾತಾಡಿದ್ರೆ ನಾನೂ ಸಹ ಭಾಷಣದಲ್ಲಿ ನಿಜಾಂಶ ಹೇಳಬೇಕಾಗುತ್ತದೆ. ನನ್ನ ಮಾತುಗಳಿಂದ ನಿಮಗೆ ಅವಮಾನವಾಗಬಹುದು ಅದಕ್ಕೆ ಅವಕಾಶಕೊಡಬೇಡಿ."

ಗಾಯಿತ್ರಿದೇವಿ ಅಸಹನೆಯಿಂದ ಕುದ್ದುಹೋದರು. ಅವರು ತಮ್ಮ ಭಾಷಣದಲ್ಲಿ ಪದ್ಮಿನಿ ಮನೆಯವರ ಬಡತನ ವರ್ಣಿಸಿ, ತಾವು ಅವರನ್ನು ಹೇಗೆ ಉದ್ಧಾರ ಮಾಡಿದರೆಂದು ಹೇಳಬೇಕೆಂದುಕೊಂಡಿದ್ದರು. ಆದರೆ ಈಗ ಪದ್ಮಿನಿ ಅದನ್ನು ತಡೆದಿದ್ದಳು.

ಸಮಾರಂಭ ತುಂಬಾ ಚೆನ್ನಾಗಿ ನಡೆಯಿತು. ತಮ್ಮ ಸರದಿ ಬಂದಾಗ ಗಾಯಿತ್ರಿದೇವಿ ನಾಲ್ಕೇ ಮಾತುಗಳನ್ನಾಡಿದರು. ಸಮಾಜದ ಪ್ರೆಸಿಡೆಂಟ್ "ನಿಮ್ಮ ಸೊಸೆ ತುಂಬಾ ಚೆನ್ನಾಗಿದ್ದಾಳೆ. ಇಂತಹ ಹುಡುಗಿ ಸಿಕ್ಕರೆ ನಾನೂ ನಿಮ್ಮ ಹಾಗೆ ಬಡವರ ಮನೆ ಹುಡುಗೀನ್ನ ಸೊಸೆ ಮಾಡಿಕೊಳ್ಳಕ್ಕೆ ಸಿದ್ಧ" ಎಂದರು.

ಆ ರಾತ್ರಿ ಅವರು ಹಿಂದಿರುಗಿದಾಗ ಗಂಟೆ ಒಂಭತ್ತಾಗಿತ್ತು.

o o o o

ಒಂದು ತಿಂಗಳು ಉರುಳಿತು. ಪದ್ಮಿನಿಯ ಜೀವನದಲ್ಲಿ ಏನೂ ಏರು ಪೇರಾಗಲಿಲ್ಲ....ಹೊರನೋಟಕ್ಕೆ ಆ ರೀತಿ ಭಾಸವಾದರೂ ಅವಳನ್ನು ತಾನು 'ಒಂಟಿ' ಅನ್ನುವ ಭಾವನೆ ಇತ್ತೀಚೆಗೆ ತುಂಬಾ ಕಾಡತೊಡಗಿತ್ತು. ಗಾಯಿತ್ರಿ

ದೇವಿ ಒಂದಲ್ಲಾ ಒಂದು ರೀತಿ ತಮ್ಮ ಬೇಸರ ತೋರಿಸುತ್ತಿದ್ದರು....ಅವಳ ಜೊತೆ ಹೆಚ್ಚು ಮಾತೇ ಆಡುತ್ತಿರಲಿಲ್ಲ.

ಒಂದು ಸೋಮವಾರ ಸಾಯಂಕಾಲ 'ನಿಟ್' ಮಾಡುತ್ತಾ ಕುಳಿತಿದ್ದಾಗ ಮನೆಯ ಮುಂದೆ ಕಾರ್ ನಿಂತಂತಾಯ್ತು. ಕಾರ್‌ನಿಂದ ಗಾಯಿತ್ರಿದೇವಿಯ ವಯಸ್ಸಿನ ಹೆಂಗಸರೊಬ್ಬರು, ಪದ್ಮಿನಿಯ ವಯಸ್ಸಿನ ಹುಡುಗಿಯೊಬ್ಬಳು ಕೆಳಗಿಳಿದರು. ಪದ್ಮಿನಿಯೇ ಅವರನ್ನು ಸ್ವಾಗತಿಸಿದಳು. ಆಕೆ ಸೋಫಾದ ಮೇಲೆ ಕೂರುತ್ತಾ ಕೇಳಿದರು.

"ನೀನು ಪದ್ಮಿನಿ ಅಲ್ವಾ ?"

"ಹೌದು, ನೀವು ಯಾರೂಂತ ತಿಳಿಯಲಿಲ್ಲ."

"ನಾನು ಗಾಯಿತ್ರಿ ಸ್ನೇಹಿತೆ ಅಂಬುಜಾ, ಈಗ ನಾವೆಲ್ಲಾ ಅಮೇರಿಕಾದಲ್ಲಿದ್ದೇವೆ. ಇವಳು ನನ್ನ ಮಗಳು ಅನೂಷ ಬೆಂಗಳೂರಲ್ಲೇ ಎಂ.ಬಿ.ಎ. ಮಾಡ್ತಿದ್ದಾಳೆ."

ಪದ್ಮಿನಿ ಅವಳತ್ತ ತಿರುಗಿ 'ಹಲೋ' ಎಂದಳು. ಅವಳು ಮುಗುಳ್ನಕ್ಕು 'ಹಲೋ' ಹೇಳಿದಳು. ಅನೂಷ ತುಂಬಾ ಮುದ್ದಾಗಿದ್ದಳು. ಬೆಲೆಬಾಳುವ ಕೆನೆ ಬಣ್ಣದ ಚೂಡಿದಾರ್ ಅವಳ ಬಣ್ಣಕ್ಕೆ ಒಪ್ಪಿತ್ತು. ಅಲೆಗೂಲಲಿನ ಬಾಬ್ ಅವಳ ಅಂದ ಹೆಚ್ಚಿಸಿತ್ತು. ಹಣೆಯಲ್ಲಿ ಚಿಕ್ಕದೊಂದು 'ಬಿಂದಿ' ಮಿನುಗುತ್ತಿತ್ತು.

"ನೀನೂ ಕೂತ್ಕೋಮ್ಮ, ಗಾಯಿತ್ರಿ ಎಲ್ಲಿ ?"

"ಸಮಾಜಕ್ಕೆ ಹೋಗಿದ್ದಾರೆ. ನೀವು ಬರೋದು ಅವರಿಗೆ ಗೊತ್ತಿರಲಿಲ್ಲಾಂತ ಕಾಣತ್ತೆ."

"ನೆನ್ನೆ ಫೋನ್ ಮಾಡಿದ್ದೆ, ಸಾಂಯಕಾಲ ಬರ್ತೀನೀಂತ ಹೇಳಿದ್ದೆ. ಆದರೆ ಸಾಯಂಕಾಲ ಬಾಂಬೆಗೆ ಹೋಗಬೇಕು. ಅದಕ್ಕೆ ಈಗ ಬಂದೆ."

"ನಾನು ಅವರಿಗೆ ಫೋನ್ ಮಾಡ್ತೀನಿ, ಬೇಗ ಬರ್ತಾರೆ."

ಅವಳು ಅತ್ತೆಗೆ ಫೋನ್ ಮಾಡಿ ಅಂಬುಜಾ ಬಂದಿರುವ ವಿಚಾರ ತಿಳಿಸಿದಳು. ಅವರು ತಕ್ಷಣ ಬರುವುದಾಗಿ ತಿಳಿಸಿದರು.

"ನೀನೀಗ ಎಲ್ಲಿದ್ದೀಯಮ್ಮ ?"

ಅಂಬುಜಾ ಪ್ರಶ್ನೆ ಕೇಳಿ ಅವಳಿಗೆ ಒಂದು ತರಹವಾಯ್ತು. ಅತ್ತೆ ಮಗನಿಗೆ ಮದುವೆಯಾಗಿರುವ ವಿಚಾರವನ್ನೇ ಗೆಳತಿಗೆ ಹೇಳಿಲ್ಲವೇನೋ ?—ಎನ್ನಿಸಿತು.

"ನಾನು ಬೆಂಗಳೂರಿನಲ್ಲೇ ಇದ್ದೀನಿ ಆಂಟಿ" ಅವಳು ಬೇಕೆಂದೇ ತಾನು ಗಾಯಿತ್ರಿದೇವಿಯ ಸೊಸೆ ಎಂದು ತಿಳಿಸಲಿಲ್ಲ.

"ಮದುವೆ ಆಯ್ತಾ ?"

"ಹುಂ ಆಯ್ತು, ಅವರು ಇಂಜಿನಿಯರ್."

"ಗಾಯಿತ್ರಿ ಮಗ ಎಲ್ಲಿದ್ದಾನೆ ?"

"ಇದೇ ಊರಲ್ಲಿ ಪ್ರೈವೇಟ್ ಬಿಸಿನೆಸ್ ಮಾಡ್ತಿದ್ದಾರೆ. ಅವರ ತಂದೆಯ ಬಿಸಿನೆಸ್ ಮುಂದುವರೆಸ್ತಿದ್ದಾರೆ."

"ನಮ್ಮ ಅನೂಷಾನ್ನ ಅವನಿಗೆ ಕೊಡಬೇಕೂಂತ ಅಂದ್ಕೊಂಡಿದ್ದೇನೆ. ನಮ್ಮ ಅನೂಷಾಗೆ ಇಂಡಿಯನ್ ಬಾಯ್ಸ್ ಇಷ್ಟ. ಗಾಯಿತ್ರಿ ಮಗನ್ನ ಫಾರಿನ್‌ಗೆ ಕಳಿಸುವುದಕ್ಕೆ ಇಷ್ಟಪಡಲ್ಲಾಂತ ನನಗೆ ಗೊತ್ತು. ಅನೂಷಾನೇ ಇಲ್ಲಿರ್ತಾಳೆ."

ಪದ್ಮಿನಿ ಏನೂ ಮಾತಾಡಲಿಲ್ಲ. ಒಳಗೆ ಹೋಗಿ ಚಿಪ್ಸ್, ಕೊಬ್ಬರಿ ಮಿಠಾಯಿ, ಬಾಳೆಹಣ್ಣು ತಂದುಕೊಟ್ಟಳು. ಕುಡಿಯಲು ಜ್ಯೂಸ್ ಕೊಟ್ಟಳು.

"ನಿಮ್ಮ ತಾಯಿ ತಂದೆ ಚೆನ್ನಾಗಿದ್ದಾರಾ ?"

"ಹುಂ, ಅವರೀಗ ಟಿ. ನರಸೀಪುರದಲ್ಲಿದ್ದಾರೆ."

"ನಿಮ್ಮನೆ ಎಲ್ಲಿ ?"

ಅವಳು ಉತ್ತರ ಕೊಡುವಷ್ಟರಲ್ಲಿ ಗಾಯಿತ್ರಿದೇವಿ ಬಂದರು. ಗೆಳತಿಯರು ಎಂಟು ವರ್ಷಗಳ ನಂತರ ಭೇಟಿಯಾಗಿದ್ದರು....ಇಬ್ಬರೂ ಮನಃಪೂರ್ತಿ ಹರಟಿದರು. ನಂತರ ಅಂಬುಜಾ ತಾವು ಬಂದ ವಿಷಯ ತಿಳಿಸಿದರು.

"ಇದೇನು ಹೀಗೆ ಕೇಳ್ತಿದ್ದೀಯ ಅಂಬುಜಾ ? ಪದ್ಮಿನಿ ಏನೂ ಹೇಳಲಿಲ್ವಾ ?"

"ಏನೇ ಹಾಗಂದ್ರೆ ?"

"ಪದ್ಮಿನೀನೇ ನನ್ನ ಸೊಸೆ...."

"ಹೌದಾ ? ಈ ಹುಡುಗಿ ಏನೂ ಹೇಳಲಿಲ್ಲ. ನಾನೂ ಪೆದ್ದು ಪೆದ್ದಾಗಿ

ಗಾಯಿತ್ರಿ ಮಗನಿಗೆ ನನ್ನ ಮಗಳನ್ನು ಕೊಡಬೇಕೂಂತ ಇದ್ದೇನೇಂತ ಹೇಳ್ದ."

ಅಷ್ಟರಲ್ಲಿ ಪದ್ಮಿನಿ ಅತ್ತೆಗೆ ಕಾಫಿ ತಂದಳು. ಅನೂಷ ಆತ್ಮೀಯತೆಯಿಂದ ಅವಳ ಕೈಹಿಡಿದು ಹೇಳಿದಳು "ಹಾರ್ಟಿ ಕಂಗ್ರ್ಯಾಜ್ಯುಲೇಷನ್ಸ್, ನೀವು ವಿಷಯ ಮೊದಲೇ ಹೇಳದೆ ನಮ್ಮನ್ನು ಫೂಲ್ ಮಾಡಿದ್ರಿ."

"ವೆರಿ ಸಾರಿ, ಅತ್ತೆ ಬಂದ ಮೇಲೆ ನಿಜಾಂಶ ತಿಳಿಯುತ್ತಲ್ಲಾಂತ ಸುಮ್ಮನಿದ್ದೆ."

ಅಂಬುಜಾ ನಕ್ಕು ನುಡಿದರು. "ಅದಕ್ಕೆ ಯಾಕಮ್ಮ ಸಾರಿ ಕೇಳ್ತೀಯಾ? ನೀನೂ ನನ್ನ ಮಗಳ ಹಾಗೆ....ಗಾಯಿತ್ರಿಗೆ ಒಳ್ಳೆಯ ಸೊಸೆ ಸಿಕ್ಕಿದ್ದಾಳಲ್ಲಾಂತ ನನಗೆ ಸಂತೋಷವಾಯ್ತು, ಅನೂಷಾಗೆ ಬೇರೆ ಕಡೆ ನೋಡಿದರಾಯ್ತು."

ಪದ್ಮಿನಿಗೆ ಅವರ ಬಿಚ್ಚುನುಡಿ, ಸ್ನೇಹಪರತೆ ತುಂಬಾ ಇಷ್ಟವಾಯ್ತು. ಅಂಬುಜಾ ಹೋಗುತ್ತಿದ್ದಂತೆ ಗಾಯಿತ್ರಿ ಸೋಫಾದ ಮೇಲೆ ಕುಳಿತು ಆಕಾಶ ತಲೆಯ ಮೇಲೆ ಬಿದ್ದಂತೆ ಅತ್ತರು. ಪದ್ಮಿನಿ ಅವರ ವರ್ತನೆಯಿಂದ ಗಾಬರಿಯಾಗಿ ಕೇಳಿದಳು. "ಯಾಕತ್ತೆ ಏನಾಯ್ತು ಯಾಕಳ್ತಿದ್ದೀರಾ !"

"ನನ್ನ ಕರ್ಮಕ್ಕೆ ಅಳ್ತಿದ್ದೇನೆ. ನಿಮ್ಮನೆಯವರನ್ನು ಹತ್ತಿರ ಸೇರಿಸಿದ್ದಕ್ಕೆ ನನ್ನ ಮಗನ ಜೀವನಾನೇ ಹಾಳಾಗಿಹೋಯ್ತಲ್ಲಾಂತ ದುಃಖಪಡ್ತಿದ್ದೇನೆ. ಆ ಹುಡುಗೀನ್ನ ನೋಡಿದೆಯಾ ? ಎಷ್ಟು ಮುದ್ದಾಗಿದ್ದಾಳೆ ! ಲಕ್ಷ್ಮಿ,ಸರಸ್ವತಿಯರಿಬ್ಬರೂ ಅವಳಿಗೆ ಒಲಿದಿದ್ದಾರೆ. ನಮ್ಮ ಪ್ರಮೋದ್‌ಗೆ ಅವಳನ್ನು ಕೈಹಿಡಿಯುವ ಅದೃಷ್ಟವಿಲ್ಲದೆ ಹೋಯ್ತಲ್ಲಾಂತ ದುಃಖವಾಗ್ತಿದೆ."

ಅವರ ಮಾತು ಕೇಳಿ ಪದ್ಮಿನಿಯ ತಾಳ್ಮೆ ಮಾಯವಾಯ್ತು.

"ಈಗೇನು ಕಾಲ ಮಿಂಚಿರೋದು ? ನಿಮ್ಮ ಮಗ ಒಪ್ಪಿದ್ರೆ ಅವಳನ್ನೇ ಕೊಟ್ಟು ಮದುವೆ ಮಾಡಿ. ನಾನೇನು ನಿಮ್ಮ ಕಾಲ ಮೇಲೆ ಬಿದ್ದು 'ನನ್ನ ಸೊಸೆ ಮಾಡಿಕೊಳ್ಳೀ'ಂತ ಬೇಡಿರಲಿಲ್ಲ."

ಅಂದಿನ ಘಟನೆಯಿಂದ ಅವಳ ಮನಸ್ಸು ಮುರಿದುಹೋಯ್ತು. ಗಾಯಿತ್ರಿದೇವಿ ತನ್ನನ್ನು ಪದ್ಮಿನಿಯಾಗಿ ನೋಡಬಲ್ಲರೇ ಹೊರತು ಸೊಸೆಯಾಗಿ ನೋಡಲಾರರು 'ಎಂದು ಮನದಟ್ಟಾಯ್ತು. 'ಈ ಮದುವೆಯಿಂದ ಯಾರಿಗೆ ಪ್ರಯೋಜನವಾಯ್ತು ?' ಎಂಬ ಪ್ರಶ್ನೆಯೂ ಕಾಡಿತು.

ಪದ್ಮಿನಿ ಮಧ್ಯಮ ವರ್ಗದ ಕುಟುಂಬದ ಹುಡುಗಿ. ಒಂದಾನೊಂದು ಕಾಲದಲ್ಲಿ ಅವಳಿಗೆ ಶ್ರೀಮಂತಿಕೆಯ ಬಗ್ಗೆ ಅತಿ ಮೋಹವಿತ್ತು. ಅದರಲ್ಲೂ ಗಾಯಿತ್ರಿದೇವಿಯ ಮನೆಯ ವೈಭವವನ್ನು ಕಣ್ಣಾರೆ ನೋಡಿದ ಮೇಲೆ ತಾನು ಹಣವಂತನ ಕೈ ಹಿಡಿಯಬೇಕೆಂಬ ಆಸೆ ಹುಟ್ಟಿತ್ತು. ಗಾಯಿತ್ರಿ ದೇವಿಯ ದರ್ಪ, ಅವರು ಖರ್ಚು ಮಾಡುತ್ತಿದ್ದ ರೀತಿ, ಅವರ ಮನೆಯಲ್ಲಿ ತಯಾರಿಸುತ್ತಿದ್ದ ಬೆಣ್ಣೆ–ತುಪ್ಪದ ತಿಂಡಿಗಳು, ಆಳು ಕಾಳುಗಳ ವೈಭವ ಇವುಗಳನ್ನು ನೋಡಿ ಅವಳ ಪುಟ್ಟ ತಲೆ ಪ್ರತಿ ಹಂತದಲ್ಲೂ ತಾಯಿಯನ್ನು ಗಾಯಿತ್ರಿದೇವಿಯ ಜೊತೆ ಹೋಲಿಸಿ ನೋಡುತ್ತಿತ್ತು. "ಶ್ರಮಜೀವಿಯಾದ ತನ್ನ ತಾಯಿ ಸುಖದಿಂದಿರುವುದು ಯಾವಾಗ ?" ಎನ್ನಿಸುತ್ತಿತ್ತು. ಆದರೆ ಆ ಶ್ರೀಮಂತಿಕೆ ತನ್ನದಾದ ಮೇಲೆ ಅವಳಿಗೆ ಜಿಗುಪ್ಸೆ ಹುಟ್ಟಿತ್ತು. 'ಇಷ್ಟೇನಾ ಬದುಕು ?' ಎನ್ನಿಸಿತ್ತು. ಅವಳು ಬೇಸರ ಕಳೆಯಲು ನಾನಾ ರೀತಿಯ ಕೆಲಸಗಳನ್ನು ರೂಢಿಸಿಕೊಂಡಿದ್ದರೂ, ಈ ಕೆಲಸ ಮಾಡುವಾಗ ಮೊದಲಿನ ಉತ್ಸಾಹವಿರಲಿಲ್ಲ.

ಪದ್ಮಿನಿಯ ಬಳಿ ಈಗ ತುಂಬಾ ಹಣವಿತ್ತು. ಅವಳು ಪೇಟೆಗೆ ಹೋಗಿ ಮನಸ್ಸಿಗೆ ಬಂದಿದ್ದನ್ನು ಕೊಳ್ಳಬಹುದಿತ್ತು. ಆದರೆ ಕೊಳ್ಳುವ ಆಸಕ್ತಿಯೇ ಅವಳಲ್ಲಿ ಬತ್ತಿಹೋಗಿತ್ತು. ಅತಿಯಾದ ಸಿಹಿ ವಾಕರಿಕೆ ಹುಟ್ಟಿಸುವಂತೆ ಅತಿಯಾದ ಶ್ರೀಮಂತಿಕೆ ಅವಳಲ್ಲಿ ಅಸಹ್ಯ ಹುಟ್ಟಿಸಿತ್ತು.

ಪದ್ಮಿನಿಗೆ ಮನೆ ಒಂದು ಜೈಲು ಎನ್ನಿಸತೊಡಗಿತ್ತು. ಗಾಯಿತ್ರಿ ದೇವಿ ಸೊಸೆಯ ಜೊತೆ ಮಾತೇ ಆಡುತ್ತಿರಲಿಲ್ಲ. ಅಪರೂಪಕ್ಕೆ ಆಡಿದ ಮಾತುಗಳಿಗೂ ವ್ಯಂಗ್ಯದ ಲೇಪನವಿರುತ್ತಿತ್ತು. ಮನೆಯಲ್ಲಿರಲು ಅವಳಿಗೆ ತುಂಬಾ ಬೇಸರವಾಗುತ್ತಿತ್ತು. ವಿವಾಹವಾದ ಹೊಸದರಲ್ಲಿ ಪ್ರಮೋದ್ ಪ್ರತಿ ಸಾಯಂಕಾಲ ಬೇಗ ಮನೆಗೆ ಬರುತ್ತಿದ್ದ. ಅವರೆಲ್ಲಿಗಾದರೂ ತಿರುಗಾಡಲು ಹೋಗುತ್ತಿದ್ದರು. ಆದರೆ ಈಗ ಅದು ಅಪರೂಪವಾಗ ತೊಡಗಿತ್ತು. ಪ್ರಮೋದ್, ಸಂಪೂರ್ಣವಾಗಿ ತನ್ನ ಕೆಲಸದಲ್ಲಿ ಮುಳುಗಿ ಹೋಗಿದ್ದ. ಅತ್ತೆ ಸಮಾಜಕ್ಕೆ ಓಡಾಡುವುದನ್ನು ಕಂಡು ಪದ್ಮಿನಿ ತಾನೂ ಮನೆಯ ಹತ್ತಿರವಿದ್ದ ಸಮಾಜಕ್ಕೆ ಸೇರಿದ್ದಳು. ಬೆಳಗ್ಗೆ ಅಲ್ಲಿ ಹಿಂದಿ ತರಗತಿ ನಡೆಯುತ್ತಿತ್ತು. ಸಾಯಂಕಾಲ ಸಂಗೀತ ಮತ್ತು ಹೊಲಿಗೆ

ತರಗತಿ ನಡೆಯುತ್ತಿದ್ದವು. ಅಲ್ಲಿ ಕೇರಂ, ಚೆಸ್, ಷಟ್ಲ್‌ಕಾಕ್ ಆಡುತ್ತಿದ್ದರು. ಎರಡು ಮೂರು ತಿಂಗಳು ಖುಷಿಯಾಗಿದ್ದಳು. ಆದರೆ ಆ ಆಸಕ್ತಿ ಕ್ರಮೇಣ ಮಾಯವಾಗಿತ್ತು. ಮಕ್ಕಳು ಹೊಸ ಹೊಸ ಆಟಗಳನ್ನು ಬಯಸುವಂತೆ, ಅವಳು ತನ್ನ ಬೇಸರ ನೀಗಿಸಿಕೊಳ್ಳಲು ನಾನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಳು. ಆದರೆ ಬಹು ಬೇಗ ಅವಳಿಗೆ 'ಬೋರ್' ಆಗುತ್ತಿತ್ತು. ಟಿ.ವಿ. ನೋಡಲು ಅವಳಿಗೆ ಆಸಕ್ತಿಯೇ ಇರಲಿಲ್ಲ. ಮನೆಯಲ್ಲಿ ವಿ.ಸಿ.ಪಿ., ವಿ.ಸಿ.ಆರ್. ಇದ್ದರೂ ಅವಳಿಗೆ ಸಿನಿಮಾ ನೋಡಬೇಕು ಎನ್ನಿಸುತ್ತಿರಲಿಲ್ಲ. 'ನನ್ನ ಸಂಬಳದಲ್ಲಿ ಹಣ ಉಳಿಸಿ ಲತಾಳ ಜೊತೆ ಸಿನಿಮಾ ನೋಡುವಾಗ ಸಿಗುತ್ತಿದ್ದ ಸಂತೋಷ ಈಗ ಸಿಗುವುದಿಲ್ಲವಲ್ಲ ಯಾಕೆ ?' ಎಂದುಕೊಳ್ಳುತ್ತಿದ್ದಳು.

ಪದ್ಮಿನಿ–ಪ್ರಮೋದರ ಮದುವೆಯಾಗಿ ವರ್ಷ ಉರುಳಿತು. ಪ್ರಮೋದ್ ಮದುವೆಯ ಮೊದಲನೇ ವರ್ಷದ ಸವಿನೆನಪಿಗಾಗಿ ಮೂರು ವಜ್ರಗಳಿದ್ದ ಉಂಗುರ ಪ್ರೆಸೆಂಟ್ ಮಾಡಿದ. ಜೊತೆಯಲ್ಲಿ ಒಂದು ಹೊಸ ಸೀರೆಯೂ ಬಂತು. ಆದರೆ ಅವಳಿಗೆ ಸಂತೋಷ ಉಂಟಾಗಲಿಲ್ಲ.

"ಯಾಕೆ ಪಮ್ಮಿ, ಒಂದು ತರಹ ಇದ್ದೀಯ ?"

"ನನಗೆ ತುಂಬಾ ಬೇಜಾರು....ಹೊತ್ತೇ ಹೋಗಲ್ಲ" ಅವಳು ಅವನ ಮಡಿಲಲ್ಲಿ ತಲೆ ಇಟ್ಟು ಹೇಳಿದಳು.

"ಬೇಜಾರೂಂದ್ರೆ ಏನರ್ಥ ಚಿನ್ನ ? ಮನೇಲಿ ಅಮ್ಮ ಇರ್‍ತಾರೆ. ಬೇಸರ ಕಳಿಯವುದಕ್ಕೆ ಟಿ.ವಿ. ವಿ.ಸಿ.ಪಿ , ವಿ.ಸಿ.ಆರ್. ಕ್ಯಾಸೆಟ್ಸ್ ಎಲ್ಲಾ ಇವೆ."

"ಅವೆಲ್ಲಾ ನನಗೆ 'ಬೋರ್' ಅನ್ನಿಸತ್ತೆ."

"ನಿನ್ನ ಫ್ರೆಂಡ್ಸ್ ಮನೆಗೆ ಹೋಗಿ ಬಾ."

"ಅವರಲ್ಲಿ ಹೆಚ್ಚಿನ ಜನ ಕೆಲಸಕ್ಕೆ ಹೋಗ್ತಾರೆ. ಸಾಯಂಕಾಲದ ಹೊತ್ತು ಹೋಗಿ ತೊಂದರೆ ಮಾಡುವುದಕ್ಕೆ ಇಷ್ಟವಾಗಲ್ಲ."

"ಸಮಾಜಕ್ಕೆ ಹೋಗು."

"ನನಗೆ ಹಿಂದಿ, ಹೊಲಿಗೆ, ಆಟಗಳಲ್ಲಿ ಆಕ್ತಿಯಿಲ್ಲ. ಅಲ್ಲಿಗೆ ಬರುವ ಹೆಂಗಸರು ಸುಮ್ಮನೆ 'ಗಾಸಿಪ್' ಮಾಡ್ತಾರೆ, ನಂಗದು ಇಷ್ಟವಾಗಲ್ಲ."

"ನನ್ನ ಏನ್ಮಾಡೊಂತೀಯ ?"

"ನಾನು ಕೆಲಸಕ್ಕೆ ಸೇರ್ತೀನಿ."

"ಆ ವಿಚಾರ ಈಗಾಗ್ಲೇ ತೀರ್ಮಾನವಾಗಿದೆಯಲ್ಲಾ ಪಮ್ಮಿ? ನೀನು ಹೊಂದಿಕೋಬೇಕು. ನಿಮ್ಮ ನೆಂಟರುಗಳು ಇದೇ ಊರ್ನಲ್ಲಿದ್ದಾರಲ್ಲಾ ಅವರ ಮನೆಗೆ ಹೋಗಿ ಬಾ."

ಪದ್ಮಿನಿ ಮಾತಾಡಲಿಲ್ಲ. ಅವಳಿಗೆ ಎಷ್ಟೋ ಸಲ ಹತ್ತಿರವೇ ಇದ್ದ ತನ್ನ ಚಿಕ್ಕಪ್ಪನ ಮನೆಗೆ ಹೋಗಬೇಕೆನ್ನಿಸುತ್ತಿತ್ತು. ಆದರೆ ಹಾಗೆ ಹೋಗುವುದರಿಂದ ಅವರೂ ಬರಲಾರಂಭಿಸುತ್ತಾರೆ. ಅವರ ಬರುವಿಕೆ ಅತ್ತೆಗೆ ಇಷ್ಟವಾಗುವುದಿಲ್ಲ. ಆದ್ದರಿಂದ ನಾನು ಅವರ ಮನೆಗೆ ಹೋಗದಿರುವುದೇ ವಾಸಿ ಎಂದುಕೊಂಡು ಸುಮ್ಮನಾಗಿದ್ದಳು.

ಒಂದು ದಿನ ದಾವಣಗೆರೆಯಲ್ಲಿದ್ದ ಅವಳ ತಾಯಿಯ ಅಣ್ಣ-ಅತ್ತಿಗೆ ಬೆಂಗಳೂರಿಗೆ ಬಂದರು. ಬೇರೆಯ ಕಡೆ ಇಳಿದುಕೊಂಡು ಪದ್ಮಿನಿಯನ್ನು ನೋಡಲು ಬಂದರು. ಪದ್ಮಿನಿಗೆ ಅಪರೂಪಕ್ಕೆ ಬಂದ ಮಾವ-ಅತ್ತೆಯರನ್ನು ಊಟಕ್ಕೆ ಕರೆಯುವ ಮನಸ್ಸಾಯ್ತು. ಪ್ರಮೋದ್‌ಗೆ ಹೇಳಿ ಭಾನುವಾರ ಬೆಳಗ್ಗೆ ಊಟಕ್ಕೆ ಬರುವಂತೆ ಒತ್ತಾಯಿಸಿದಳು. ಅವರು ಸಂತೋಷದಿಂದ ಒಪ್ಪಿಕೊಂಡರು. ಅತ್ತೆ-ಮಾವನಿಗೆ ಸೀರೆ-ಪಂಚೆ ಉಡುಗೊರೆ ತಂದಿಟ್ಟು ಭಾನುವಾರಕ್ಕಾಗಿ ಕಾದಿದ್ದಳು. ಭಾನುವಾರ ಬೆಳಗ್ಗೆ ಅವಳು ಏನು ಅಡಿಗೆ ಮಾಡಬೇಕೆಂದು ಭಟ್ಟರಿಗೆ ಸೂಚನೆ ಕೊಡುತ್ತಿದ್ದಾಗ ಗಾಯಿತ್ರಿದೇವಿ ಹೇಳಿದರು. "ಈಗ್ತಾನೆ ನಿಮ್ಮಾವನ ಫೋನ್ ಬಂದಿತ್ತಮ್ಮ, ಅವರು ಅರ್ಜೆಂಟಾಗಿ ಊರಿಗೆ ಹೋಗಬೇಕಂತೆ. ಊಟಕ್ಕೆ ಬರಕ್ಕಾಗಲ್ಲಾಂತ ಹೇಳಿದ್ರು."

ಪದ್ಮಿನಿಗೆ ತುಂಬಾ ಬೇಜಾರಾಯ್ತು. ಮಾವನ ಫೋನ್ ಬಂದಾಗ ತನ್ನನ್ನು ಕರೆಯಬಾರದಿತ್ತಾ ? ಎಂದುಕೊಂಡಳು. ಒಂದು ವಾರ ಉರುಳಿತು. ಒಂದು ದಿನ ಅವಳ ಗಂಡನ ಜೊತೆ ಬಟ್ಟೆ ಅಂಗಡಿಗೆ ಹೋದಾಗ ಸಿಕ್ಕಿದ ನೆಂಟರು ಅವಳನ್ನು ಪ್ರಶ್ನಿಸಿದರು. "ಏನಮ್ಮ, ಯಾವಾಗ ಊರಿಗೆ ಬಂದ್ರಿ ? ನಿಮ್ಮತ್ತೆ ತಮ್ಮ ಹೇಗಿದ್ದಾರೆ ?"

ಅವಳು ಉತ್ತರ ಕೊಡುವ ಮೊದಲೇ ಪ್ರಮೋದ್ ಹೇಳಿದ.

"ನಮ್ಮ ಮಾವ ಹುಷಾರಾಗಿದ್ದಾರೆ. ಮೈಲ್ಡ್ ಹಾರ್ಟ್ ಅಟ್ಯಾಕ್ ಆಗಿತ್ತು ಒಂದ್ವಾರ ನರ್ಸಿಂಗ್ ಹೋಂನಲ್ಲಿಟ್ಟುಕೊಂಡು ಕಳುಹಿಸಿದರು ನಾವು ನೆನ್ನೆ ಬಂದೆವು."

ಪದ್ಮಿನಿಗೆ ಅವರ ಮಾತಿನ ತಲೆ ಬುಡ ಅರ್ಥವಾಗಲಿಲ್ಲ.

"ಕಮಲ–ಮೂರ್ತಿ ನಿಮ್ಮನೆಗೆ ಊಟಕ್ಕೆ ಹೊರಟಿದ್ರು. ಪಾಪ, ನಿಮ್ಮತ್ತೆ ಫೋನ್‌ಮಾಡಿ ವಿಷಯ ತಿಳಿಸಿದ್ರು. 'ನಾವೆಲ್ಲಾ ಈಗ ಊರಿಗೆ ಹೊರಟಿದ್ದೇವೆ, ತಪ್ಪು ತಿಳಿಯಬೇಡಿ' ಅಂದ್ರು. ಪಾಪ ತುಂಬಾ ದುಃಖ ದಲ್ಲಿದ್ರು."

ತನ್ನ ಸೋದರಮಾವ–ಸೋದರತ್ತೆ ತಮ್ಮ ಮನೆಗೆ ಊಟಕ್ಕೆ ಬರದಿರಲು ತನ್ನ ಅತ್ತೆಯೇ ಕಾರಣ ಎಂದು ತಿಳಿದಾಗ ಅವಳ ಮುಖ ಊದಿತು. ಪ್ರಮೋದ್ ಅವಳನ್ನು ಹತ್ತಿರದ ಐಸ್‌ಕ್ರೀಂ ಪಾರ್ಲರ್‌ಗೆ ಕರೆದೊಯ್ದ

"ಪದ್ಮಿನಿ, 'ಫ್ರೂಟ್ ಸಲಾಡ್' ಹೇಳ್ಲಾ ?"

"ನಂಗೇನೂ ಬೇಡ."

"ನಿನಗೆ ಕೋಪ ಬಂದಿದೇಂತ ನನಗೆ ಗೊತ್ತು, ಕೂಲ್ ಆಗು."

"ನೀವು ನಿಮ್ಮಮ್ಮಂಗೆ ಬುದ್ಧಿ ಹೇಳುವವರೆಗೂ ಈ ತರಹ ಘಟನೆಗಳು ತಪ್ಪಿದ್ದಲ್ಲ. ನಾನೂ ಎಷ್ಟೂಂತ ತಾಳ್ಮೆ ತಂದುಕೊಳ್ಳಲಿ ?"

"ಅಮ್ಮನ್ನ ನಾನು ವಿಚಾರಿಸ್ತೇನೆ, ನೀನು ಸಮಾಧಾನ ತಂದ್ಕೋ."

ಮನೆ ತಲುಪಿದ ಮೇಲೂ ಪದ್ಮಿನಿಯ ಎದುರಿಗೆ ಅವನು ತಾಯಿಯನ್ನು ಏನೂ ಕೇಳಲಿಲ್ಲ. ಇದರಿಂದ ಪದ್ಮಿನಿಯ ಸಿಟ್ಟು ನೂರ್ಮಡಿಯಾಗಿತ್ತು.

ಮತ್ತೆ ಒಂದು ತಿಂಗಳು ಉರುಳಿತು. ಮದ್ರಾಸ್‌ನಿಂದ ಗಾಯಿತ್ರಿ ದೇವಿಯ ಅಕ್ಕನ ಮಗ–ಸೊಸೆ ಊರಿಗೆ ಬಂದರು....ಗಾಯಿತ್ರಿದೇವಿಗೆ ಸಂಭ್ರಮವೋ ಸಂಭ್ರಮ. ಮಗನನ್ನು ಒತ್ತಾಯಿಸಿ ನಾಲ್ಕು ದಿನ ಬಿಡುವು ಮಾಡಿಕೊಳ್ಳಲು ಹೇಳಿದರು.

"ಪ್ರಮೋದ್, ಕಾರು ತೆಗೆದುಕೊಂಡು ಹೋಗಿ ಹೇಮ ಮತ್ತು ಪ್ರಕಾಶ್‌ಗೆ ಬೆಂಗಳೂರು, ಮೈಸೂರು ತೋರಿಸು. ಇತ್ತೀಚೆಗೆ ಪದ್ಮಿನಿ ಕೂಡ ಎಲ್ಲೂ ಹೋಗಿಲ್ಲ....ಅವಳನ್ನೂ ಕರೆದುಕೊಂಡು ಹೋಗು."

ಪದ್ಮಿನಿಂಪೋ ಪ್ರೋಗ್ರಾಂ ಸಿದ್ಧಪಡಿಸಿದಳು....ಮರುದಿನ ಬೆಳಗ್ಗೆ ಹಾಸಿಗೆಯಿಂದ ಎದ್ದು ಕೆಳಗೆ ಪಾದ ಊರಿದ ಪದ್ಮಿನಿ ಜೋರಾಗಿ ಕಿರುಚಿದಳು.

"ಏನಾಯ್ತು ?"

"ರೀ ಬಲಗಾಲು ತುಂಬಾ ನೋವು, ಹೆಜ್ಜೆ ಊರಕ್ಕಾಗ್ತಿಲ್ಲ."

"ಉಳುಕಿದೇಂತ ಕಾಣತ್ತೆ....ಕೊಂಚ ಅಯೋಡೆಕ್ಸ್ ಹಚ್ಚಿ."

ಪ್ರಮೋದ್ ಅಯೋಡೆಕ್ಸ್ ಸವರಿದ.

"ನನ್ನ ಕೈಲಾಗಲ್ಲಾರಿ, ತುಂಬಾ ನೋವು."

"ಇರು, ಡಾಕ್ಟರ್‌ಗೆ ಫೋನ್ ಮಾಡ್ತೀನಿ."

"ನೋಡಿ, ನೀವು ಕಡ್ಡಿ ಗುಡ್ಡ ಮಾಡಬೇಡಿ. ನಾನು ಡಾಕ್ಟರ್‌ಗೆ ತೋರಿಸಿಕೊಳ್ತೀನೆ. ನೀವು ಹೇಮಾ–ಪ್ರಕಾಶ್ ಜೊತೆ ಹೋಗಿ ಬನ್ನಿ."

"ಆಗಲಿ, ನೀನು ಹೆಚ್ಚು ಓಡಾಡಬೇಡ. ರೆಸ್ಟ್ ತೊಗೋ."

ಹೇಮಾ–ಪ್ರಕಾಶ್ ಪ್ರಮೋದ್ ಜೊತೆ ಬೆಂಗಳೂರು ನೋಡಿ ಬಂದರು. ಮೈಸೂರು ಪ್ರೋಗ್ರಾಂ ಕ್ಯಾನ್ಸಲ್ ಆಯ್ತು. ಅವರುಗಳು ಇದ್ದಷ್ಟು ಕಾಲವೂ ಪದ್ಮಿನಿ ಕಾಲುನೋವಿನ ನೆಪ ಹೇಳಿ ರೂಮು ಬಿಟ್ಟು ಹೊರಗೆ ಬರಲಿಲ್ಲ.

ವಾರದ ನಂತರ ಅವರು ಊರಿಗೆ ಹೊರಟರು. ಅವರು ಹೊರಡುತ್ತಿದ್ದಂತೆ ಪದ್ಮಿನಿ ಕೆಳಗಿಳಿದು ಬಂದಳು.

"ಕಾಲು ನೋವು ವಾಸಿಯಾಯ್ತಾ ?" ಗಾಯಿತ್ರಿದೇವಿ ಅನುಮಾನದಿಂದ ಕೇಳಿದರು.

"ಕಾಲು ನೋವಿದ್ರಲ್ವಾ ವಾಸಿಯಾಗಕ್ಕೆ ? ನನಗೆ ನಿಮ್ಮ ನೆಂಟರ ಜೊತೆ ಸುತ್ತಾಡಕ್ಕೆ ಮನಸ್ಸಿರಲಿಲ್ಲ....ಅದಕ್ಕೆ ಈ ರೀತಿ ನಾಟಕ ಆಡಿದೆ."

"ನಾಟಕ ಆಡಿದೇಂತ ಹೇಳುವುದಕ್ಕೆ ನಿನಗೆ ನಾಚಿಕೆ ಆಗಲ್ಲವಾ ? ಎಂತಹ ದರಿದ್ರ ಬುದ್ಧಿ ನಿನ್ನದು ? ಪ್ರಮೋದ್ ಬರಲಿ ಹೇಳ್ತೀನಿ."

"ಮುಯ್ಯಿಗೆ ಮುಯ್ಯಿ, ನೀವೇ ಕಲಿಸಿದ ಪಾಠ ಇದು....ನನ್ನ ಸೋದರತ್ತೆ–ಮಾವ ಬಂದಾಗ ನೀವೇನು ಮಾಡಿದ್ರಿ ನೆನಪು ಮಾಡಿಕೊಳ್ಳಿ. ನಾನು ಅವರನ್ನು ಊಟಕ್ಕೆ ಕರೆದಿದ್ರೆ ಫೋನ್‌ಮಾಡಿ ಸಲ್ಲದ ಕಾರಣ ಹೇಳಿ ಅವರು ಬರುವುದನ್ನು ತಪ್ಪಿಸಿದ್ರಿ. ನಿಮ್ಮ ಮಗನಿಗೂ ಅವರು ಬರದೇ ಇರುವು

ದಕ್ಕೆ ನೀವೇ ಕಾರಣಾಂತ ಗೊತ್ತಾಗಿದೆ. ನೀವು ಏನು ಹೇಳಿದ್ರೂ ಅವರು ನಂಬಲ್ಲ."

"ನಿನ್ನ ಅತ್ತೆ ಮಾವ ನಮ್ಮ ಅಂತಸ್ಥಿಗೆ ಸರಿಹೋಗುವವರಲ್ಲ. ಅದಕ್ಕೆ ಅವರು ಬರುವುದನ್ನು ತಪ್ಪಿಸಿದೆ."

"ನಿಮ್ಮ ಅಣ್ಣನ ಮಗ–ಸೊಸೆ ಸ್ವರ್ಗದಿಂದ ನೇರವಾಗಿ ಇಳಿದು ಬಂದಿದ್ದಾರಾ ? ನನ್ನ ಕಡೆಯವರಿಗೆ ನೀವು ಮರ್ಯಾದ ಕೊಟ್ಟರೆ ನಾನೂ ನಿಮ್ಮ ಕಡೆಯವರಿಗೆ ಮರ್ಯಾದೆ ಕೊಡ್ತೀನಿ. ಇಲ್ಲದಿದ್ರೆ ಇಲ್ಲ."

"ಈ ಮನೆ ನನ್ನದು. ಈ ಮನೆಗೆ ಬರುವುದಕ್ಕೆ ಯಾರಿಗೆ ಅರ್ಹತೆ ಇದೇಂತ ನಿರ್ಧರಿಸೋದು ನಾನು ! ನೀನು ನಾನು ಹೇಳಿದಂತೆ ಕೇಳಿಕೊಂಡು ಬಿದ್ದಿರಬೇಕು."

"ನೀವು ನಿಮ್ಮ ಹಿರಿತನ ಉಳಿಸಿಕೊಳ್ಳಬೇಕಾದ್ರೆ ನಿಮ್ಮ ವಯಸ್ಸಿಗೆ ತಕ್ಕಂತೆ ವರ್ತಿಸಿ. ನಾನು ಈ ಮನೆ ಜವಾನಿ ಅಲ್ಲ, ಈ ಮನೆ ಸೊಸೆ. ನಿಮಗೆಷ್ಟು ಈ ಮನೆಯಲ್ಲಿ ಅಧಿಕಾರವಿದೆಯೋ ನನಗೂ ಅಷ್ಟೇ ಇದೆ."

"ಅಧಿಕಾರದ ಪ್ರಶ್ನೆ ಎತ್ತಬೇಡ ಪದ್ಮಿನಿ."

"ನೀವು ನನ್ನ ತಾಳ್ಮೆ ಪರೀಕ್ಷಿಸುವಂತೆ ವರ್ತಿಸಿದರೆ ನಾನು ಎಲ್ಲಾ ರೀತಿಯ ಪ್ರಶ್ನೆಗಳನ್ನು ಎತ್ತಬೇಕಾಗುತ್ತೆ....ನಿಮಗೂ ವಯಸ್ಸಾಯ್ತು.... ರಾಮಕೃಷ್ಣಾಂತ ಆರಾಮವಾಗಿರಿ. ನೀವು ಹಾಗಿದ್ರೆ ನಿಮಗೂ ನೆಮ್ಮದಿ, ನಮಗೂನೆಮ್ಮದಿ."

ಗಾಯಿತ್ರಿದೇವಿ ಸೊಸೆಯ ಮಾತುಗಳನ್ನು ಕೇಳಿ ತೆಪ್ಪಗಾದರು....ದಿನ ದಿನಕ್ಕೆ ಅತ್ತೆ–ಸೊಸೆಯರ ನಡುವಿನ ಬಿರುಕು ಹೆಚ್ಚಾಗುತ್ತಾ ಹೋಯಿತು. ದಸರೆಯಲ್ಲಿ ಪದ್ಮಿನಿ ತಾಯಿಮನೆಗೆ ಹೋಗಿ ಇಪ್ಪತ್ತು ದಿನಗಳಿದ್ದು ಬಂದಳು. ಅವಳು ವಾಪಸ್ಸು ಬರುವ ವೇಳೆಗೆ ಅವಳ ಆಪ್ತ ಗೆಳತಿ 'ಲತಾ' ಮೊದಲನೆ ಬಾಣಂತನಕ್ಕೆ ಬಂದಿದ್ದಳು. ಅವಳ ಮನೆ ಎದುರಿಗೇ ಇದ್ದುದರಿಂದ ಪದ್ಮಿನಿ ದಿನಕ್ಕೆರಡು ಸಲವಾದರೂ ಅವರ ಮನೆಗೆ ಹೋಗುತ್ತಿದ್ದಳು. ಅವಳ ಜೊತೆ ನಾಲ್ಕಾರು ಸಿನಿಮಾ ನೋಡಿದಳು. ಅವಳನ್ನು ಚೆಕಪ್‌ಗಾಗಿ ಡಾಕ್ಟರ್ ಬಳಿ ಕಾರ್‌ನಲ್ಲೇ ಕರೆದೊಯ್ದಳು....ಒಟ್ಟಿನಲ್ಲಿ ಲತಾಳ ಆಗಮನದಿಂದ ಅವಳಿಗೆ ನಿಧಿ ಸಿಕ್ಕಂತಾಗಿತ್ತು.

ಪದ್ಮಿನಿ ಆತ್ಮೀಯ ಗೆಳತಿ ಸಿಕ್ಕಾಗ ತನ್ನ ಮನದಳಲನ್ನು ತೋಡಿ ಕೊಂಡಳು.

"ಮದುವೆಯಾಗಿ ಒಂದೂ–ಒಂದೂವರೆ ವರ್ಷಗಳಾಗ್ತಾ ಬಂದರೂ ನಮ್ಮತ್ತೆಗೆ ನನ್ನ ಮೇಲೆ ಅಭಿಮಾನವೇ ಹುಟ್ಟಿಲ್ಲ. ನಾನು ಬಡವಳು, ಅವರ ಅಂತಸ್ಥಿಗೆ ಸರಿ ಹೊಂದುವವಳಲ್ಲ ಎನ್ನುವುದನ್ನು ಹೆಜ್ಜೆಹೆಜ್ಜೆಗೂ ತೋರಿಸ್ತಾರೆ. ಪ್ರಮೋದ್ ಜೊತೆ ಇದ್ದಾಗ ನನಗೇನೂ ಅನ್ನಿಸುವುದಿಲ್ಲ. ಆದರೆ ಅವರು ಇಲ್ಲದಿದ್ದಾಗ 'ಒಂಟಿ' ಅನ್ನುವ ಭಾವನೆ ನನ್ನನ್ನು ತುಂಬಾ ಕಾಡುತ್ತದೆ. ನಾನು ಪ್ರಮೋದ್‌ನ ಮದುವೆಯಾಗಬಾರದಿತ್ತು...."

"ಛೆ....ಹಾಗನ್ನಬೇಡ."

"ನಿಜ ಲತ. ನಾವು ನಮ್ಮ ಅಂತಸ್ಥಿಗೆ ತಕ್ಕವರ ಜೊತೆ ಸಂಬಂಧ ಬೆಳೆಸಬೇಕು....ಪ್ರಮೋದ್‌ನ ನಾನು ತುಂಬಾ ಪ್ರೀತಿಸ್ತೇನೆ. ಅವರೂ ನನ್ನನ್ನು ತುಂಬಾ ಪ್ರೀತಿಸ್ತಾರೆ. ಅದರಲ್ಲಿ ಸಂದೇಹವೇ ಇಲ್ಲ. ಆದರೆ ಅವರು ತಾಯಿಯನ್ನು ಯಾವುದಕ್ಕೂ ವಿರೋಧಿಸಲ್ಲ. ಒಂದೊಂದು ಸಲ ನನಗೆ ನಾನು ಮದುವೆಗೆ ಮುಂಚೇನೇ ಹಾಯಾಗಿದ್ದೆ ಅನ್ನಿಸತ್ತೆ."

"ಯಾಕೆ ಹಾಗಂತೀಯ ?"

"ಆಗ ಕಾಸಿಗೆ ಕಾಸು ಲೆಕ್ಕ ಹಾಕ್ತಿದ್ದೆವು. ಅದರಲ್ಲಿ ಹಣ ಉಳಿಸಿ ಒಂದು ಸಿನಿಮಾ ನೋಡಿದಾಗ ಸಿಗುತ್ತಿದ್ದ ಖುಷಿ ಈಗ ಸಿಗಲ್ಲ ಕಣೆ....ಗೌರಿ ಹಬ್ಬ ನಾಲ್ಕು ತಿಂಗಳಿದೆ ಅನ್ನುವಾಗಲೇ 'ಹೊಸಸೀರೆ'ಗೆ ಅಪ್ಲಿಕೇಷನ್ ಹಾಕ ಬೇಕಿತ್ತು. ನಮ್ಮ ತಂದೆ ಸೀರೆ ಹಣಾನ್ನ ಜೇಬಿನಿಂದ ಹೊರ ತೆಗೆಯುವ ವರೆಗೂ 'ಕೊಡಿಸ್ತಾರೋ ಇಲ್ವೋ ?' ಅನ್ನುವ ಸಂದೇಹ ಇರ್ತಿತ್ತು....ಆ ಹಣ ಕೈಗೆ ಬಂದಮೇಲೆ ಅದೆಷ್ಟು ಸಂತೋಷ ಇರ್ತಿತ್ತು ಗೊತ್ತಾ ?"

"ಈಗ ನಿನಗೇನು ಕಡಿಮೆಯಾಗಿರೋದು ?"

"ನೆಮ್ಮದಿ–ನಮ್ಮನೇಲಿ ಎಲ್ಲಾ ಇದೆ. ಆದರೆ ನೆಮ್ಮದಿ ಇಲ್ಲ; ಬೆಲೆ ಬಾಳುವ ಮೆತ್ತನೆಯ ಸೋಫಾಗಳಿವೆ, ಬೀರುವಿನಲ್ಲಿ ಬೆಲೆಬಾಳುವ ಸೀರೆ, ಒಡವೆಗಳಿವೆ. ತಿರುಗುವ ಫ್ಯಾನ್‌ಗಳು, ಟ್ರಿನ್ ಎನ್ನುವ ಫೋನುಗಳು.... ಬ್ಯಾಂಕ್‌ನಲ್ಲಿರುವ ಲಕ್ಷಗಟ್ಟಲೆ ಹಣ. ಯಾವುದೂ ನನ್ನ ಮನಸ್ಸಿನ ಬೇಸರ

ಕಳೆಸ್ತಿಲ್ಲ. ಲತಾ, ಒಂದೊಂದು ಸಲ ಮನೆಯಲ್ಲಿ ಕುಳಿತಿದ್ದಾಗ ಕಾಣದ ಕೈಗಳು ನನ್ನ ಕುತ್ತಿಗೆ ಹಿಚುಕಿದಂತಾಗತ್ತೆ, ಉಸಿರುಕಟ್ಟಿದಂತಾಗತ್ತೆ. ನಾನು ಅತ್ತೆಯ ರೀತಿ ನೀತಿಗಳನ್ನು ಪ್ರಮೋದ್ ಎದುರು ಹೇಳಬಾರದು ಎಂದು ಕೊಂಡರೂ ಕೆಲವು ಸಂದರ್ಭಗಳು ನನ್ನ ದೃಢನಿರ್ಧಾರವನ್ನು ಅಲುಗಾಡಿಸಿ ಬಿಡುತ್ತದೆ. ಏನ್ಮಾಡಬೇಕು ಅನ್ನೋದೇ ತಿಳಿಯುತ್ತಿಲ್ಲ. ಎಲ್ಲಿಗಾದ್ರೂ ಓಡಿ ಹೋಗೋಣ ಅನ್ನಿಸತ್ತೆ. ಮನುಷ್ಯರ ಸಂಬಂಧಗಳಿಗೆ ಅರ್ಥವೇ ಇಲ್ಲವೇನೋ, ಮಾನವೀಯತೆಗೆ ಬೆಲೆಯೇ ಇಲ್ಲವೇನೋಂತ ಅನ್ನಿಸತ್ತೆ...." ಮಾತನಾಡುತ್ತಿದ್ದಂತೆ ಅವಳ ಕಣ್ಣುಗಳಿಂದ ಪಳಪಳ ನೀರು ಸುರಿಯಿತು.

"ಸಮಾಧಾನ ತಂದ್ಕೋ ಪದ್ಮಿನಿ, ಪ್ರಮೋದ್ ನಿನ್ನನ್ನು ತುಂಬಾ ಪ್ರೀತಿಸ್ತಿರುವಾಗ ನೀನ್ಯಾಕೆ ನಿಮ್ಮತ್ತೆ ಬಗ್ಗೆ ಯೋಚಿಸ್ತೀಯ ? ಈ ಅತ್ತೆ ಸೊಸೆ ಜಗಳ ಎಲ್ಲ ಕಡೆ ಇರೋದೇನೆ. ನಿನ್ನ ಮದುವೆಯಾಗಿ ಎರಡು ವರ್ಷಗಳಾಗ್ತಾ ಬಂತು. ಇದನ್ನು ಎಷ್ಟು ದಿನ ಪ್ಲಾನಿಂಗ್ ಅಂತ ಒದ್ದಾಡ್ತೀರ ? ಮುದ್ದು ಮಗು ನಿಮ್ಮ ಮನೆಗೆ ಬಂದ್ರೆ ಎಲ್ಲಾ ಸರಿಹೋಗತ್ತೆ."

"ನಾವು ಪ್ಲಾನಿಂಗ್ ಮಾಡ್ತಿಲ್ಲ ಕಣೆ."

"ಹಾಗಾದ್ರೆ ನೀವು ಮೊದಲು ಡಾಕ್ಟರನ್ನು ಕನ್‌ಸಲ್ಟ್ ಮಾಡಿ."

"ನಮ್ಮಿಬ್ಬರಲ್ಲಿ ಏನಾದರೂ ದೋಷ ಇರಬಹುದೂಂತೀಯೆ ?" ಪೆಚ್ಚಾಗಿ ಕೇಳಿದಳು ಪದ್ಮಿನಿ.

"ಖಂಡಿತಾ ಹಾಗಲ್ಲ....ಕೆಲವರಿಗೆ ನಿಧಾನವಾಗಿ ಮಕ್ಕಳಾಗುತ್ತವೆ. ಏನೇ ಆಗಲಿ, ನೀವು ಒಂದು ಸಲ ತೋರಿಸಿಕೊಳ್ಳಿ."

ಅದೇ ದಿನ ರಾತ್ರಿ ಪದ್ಮಿನಿ ಪ್ರಮೋದ್ ಬಳಿ ಈ ವಿಷಯ ಹೇಳಿದಳು. "ರೀ ನಮ್ಮ ಮದುವೆಯ ನಂತರ ಮದುವೆಯಾದವರಿಗೆಲ್ಲಾ ಮಕ್ಕಳಿವೆ. ನಮಗೆ ಇಲ್ಲ "

ಅವನು ಅವಳ ಮೂಗೆಳೆದು ಹಾಸ್ಯಮಾಡಿದ. "ಅದಕೋಸ್ಕರ ಆಕಾಶ ತಲೆಯ ಮೇಲೆ ಬಿದ್ದಂತಾಡ್ತಿದ್ದೀಯಾ ?"

"ಪ್ಲೀಸ್, ತಮಾಷಬೇಡಿ. ನಂಗೆ ನಿಜವಾಗಿ ತುಂಬಾ ಯೋಚನೆಯಾಗಿದೆ."

"ಯೋಚನೆ ಯಾಕೆ ? ನಮಗೇನಂತಹ ವಯಸ್ಸಾಗಿರೋದು ? ಇವತ್ತಿಲ್ಲ ನಾಳೆ ಆಗತ್ತೆ."

ಪದ್ಮಿನಿ ಅವನೆದೆಗೆ ಒರಗಿ ಕಣ್ಮುಚ್ಚಿದ್ದಳು. ಈ ಮನೆಗೆ ನೆಮ್ಮದಿ ಸಿಗುವ ಜಾಗ ಇದೊಂದೇ ಎನ್ನಿಸಿತು.

"ಯಾಕೆ ಪಮ್ಮಿ, ತುಂಬಾ ಡಲ್ ಆಗಿದ್ದೀಯಾ ?"

"ನಾವು ಮದುವೆಯಾಗದೆ ಪ್ರೇಮಿಗಳೇ ಆಗಿದ್ದಿದ್ರೆ ಚೆನ್ನಾಗಿರ್ತಿತ್ತು"

"ಯಾಕೆ ?"

"ಮದುವೆಗೆ ಮುಂಚೆ ಪ್ರತಿಯೊಬ್ಬ ಹುಡುಗಿಯ ಹೃದಯದ ತುಂಬಾ ಕನಸುಗಳಿರುತ್ತವೆ. ನಾನೂ ಹಾಗೆ ಸುಂದರ ಕನಸು ಕಂಡಿದ್ದೆ—ಆದ್ರೆ...."

"ನಿನ್ನ ಕನಸು ನನಸಾಗಲಿಲ್ವಾ ?"

"ಹಾಗಲ್ಲ, ನಾನು ನಿಮ್ಮ ಕೈ ಹಿಡಿದರೆ ನಿಮ್ಮ ತಾಯಿ ಕೆಲಸ ದಿನಗಳು ಸಿಡಗುಟ್ತಿರಾರೆ, ಆಮೇಲೆ ಸರಿಹೋಗ್ತಾರೇಂತ ಭಾವಿಸಿದ್ದೆ. ಆದರೆ ಅವರು ಬದಲಾಗಲೇ ಇಲ್ಲ. ನೀವು ಆಫೀಸ್‌ಗೆ ಹೋದಮೇಲೆ ಒಂಟಿತನ ನನ್ನನ್ನು ಕಿತ್ತು ತಿನ್ನುತ್ತದೆ. ಹೀಗೇ ಇದ್ರೆ ನನಗೆ ಹುಚ್ಚು ಹಿಡಿದುಬಿಡತ್ತಷ್ಟೆ."

"ಹೋಗಲಿ, ಮುಂದಿನ ವರ್ಷ ನಿನ್ನ ಕೊನೆಯ ತಮ್ಮ ಆನಂದನ್ನು ಕರೆದುಕೊಂಡು ಬಂದು ಇಲ್ಲೀ ಸ್ಕೂಲ್‌ಗೆ ಸೇರಿಸು."

"ಅದು ಮಾತ್ರ ಸಾಧ್ಯವಿಲ್ಲ."

"ಹಾಗಾದ್ರೆ ನಾನೇನ್ಮಾಡಲಿ ಪಮ್ಮಿ ?"

"ದಯವಿಟ್ಟು ನಿಮ್ಮ ತಾಯಿಗೆ ಕೊಂಚ ಬುದ್ಧಿ ಹೇಳಿ."

"ನಿನಗೆ ಇಲ್ಲೇನು ಕಷ್ಟವಾಗಿರೋದು ? ಬೇರೆ ಮನೆಗಳ ಅತ್ತೆಯರ ತರಹ ನಮ್ಮಮ್ಮ ನಿನ್ನನ್ನು ಗೋಳಾಡಿಸ್ತಿದ್ದಾರಾ ?"

"ಹೊಡೆದು, ಬಡಿದು, ಮನೆಕೆಲಸ ಮಾಡಿಸೋದು ಒಂದು ಗುಂಪಿನ ಅತ್ತೆಯರ ರೀತಿ, ಕೆಲಸಗಿಲಸ ಹೇಳದೆ ಮೂರು ಹೊತ್ತೂ ದೂರ್ತಾ ಇರೋದು ಇನ್ನೊಂದು ಗುಂಪಿನ ಅತ್ತೆಯರ ರೀತಿ. ನಿಮ್ಮಮ್ಮ ಈ ಎರಡು ಗುಂಪಿಗೂ ಸೇರಿಲ್ಲ."

"ಏನು ಹಾಗಂದ್ರೆ ?"

"ನಿಮ್ಮೆದುರಿಗೆ, ಹೊರಗಿನವರ ಎದುರಿಗೆ ಸೊಸೆಯೆಂದ್ರೆ 'ಪ್ರಾಣದಪದಕ' ವೇನೋ ಅನ್ನುವ ರೀತಿ ನಡೆದುಕೊಳ್ತಾರೆ. ನಾನೊಬ್ಬಳೇ ಇದ್ದಾಗ ಯಾವುದಾದರೊಂದು ರೀತಿ ತಮ್ಮ ಅಸಹನೆ ತೋರಿಸ್ತಾರೆ."

"ಪ್ಲೀಸ್ ನಿಮ್ಮ ಜಗಳದ ವಿಚಾರ ನನಗೆ ಹೇಳಬೇಡ. ಇನ್ನೇನಾದ್ರೂ ಮಾತಾಡು."

ಪದ್ಮಿನಿ ಅಸಹಾಯಕಳಂತೆ ದಿಂಬಿನಲ್ಲಿ ಮುಖ ಹುದುಗಿಸಿ ಅತ್ತಳು. ಆ ಕ್ಷಣ ಪ್ರಮೋದ್‌ಗೂ ಕೂಡ ಒಂದು ಮಗುವಾದರೂ ಇದ್ದಿದ್ದರೆ ಚೆನ್ನಾಗಿ ರುತ್ತಿತ್ತು ಎನ್ನಿಸಿತು.

## ೧೦

ಮರುದಿನ ಬೆಳಗ್ಗೆ ಅವಳು ಎದ್ದಾಗ ತಡವಾಗಿತ್ತು. ಪ್ರಮೋದ್ ಆಫೀಸ್‌ಗೆ ಹೊರಟುನಿಂತಿದ್ದ. ಅವಳು ಮುಖ ತೊಳೆದು ಕಾಫಿ ಬಟ್ಟಲು ಹಿಡಿದು ಹೊರಗೆ ಬಂದಾಗ ಮುನಿಯಮ್ಮನ ಮಗಳು ಚೆಲುವಿ ಮನೆ ಕಸಗುಡಿಸುತ್ತಿರುವುದು ಕಾಣಿಸಿತು. ಚೆಲುವಿ ಬಾಣಂತನಕ್ಕೆಂದು ತವರು ಮನೆಗೆ ಬಂದಿದ್ದಳು....ಅಪರೂಪಕ್ಕೆ ಒಮ್ಮೊಮ್ಮೆ ಬಂದು ತಾಯಿಯ ಕೆಲಸ ಮಾಡುತ್ತಿದ್ದಳು. ಪದ್ಮಿನಿ ಕಾಫಿ ಕುಡಿದು ಪೇಪರ್ ಕೈಗೆ ತೆಗೆದು ಕೊಳ್ಳುವ ವೇಳೆಗೆ ಚೆಲುವಿಯು ಕಸಗುಡಿಸುವ ಕೆಲಸ ಮುಗಿದು, ಮನೆ ಒರೆಸಲಾರಂಭಿಸಿದ್ದಳು. ಅವಳು ವೆರಾಂಡಾ ಒರೆಸಿ, ಕೊಳೆಯಾದ ನೀರನ್ನು ಹಿಡಿದು ತರುತ್ತಿದ್ದಾಗ ಕಾಲುಜಾರಿ ಕೆಳಗೆ ಬಿದ್ದಳು. ಪದ್ಮಿನಿ ಗಾಬರಿ ಯಿಂದ ಓಡಿಹೋಗಿ ಅವಳನ್ನೆತ್ತಿದಳು. ಅವಳ ಸೀರೆ ಪೂರ್ತಿ ತೋಯ್ದು ಹೋಗಿತ್ತು. ಪದ್ಮಿನಿ ಅವಳ ಕೈಹಿಡಿದು ಕುರ್ಚಿಯಲ್ಲಿ ಕೂಡಿಸಿ, ಬೇಗ ತನ್ನ ಕೋಣೆಗೆ ಹೋಗಿ ಒಂದು ಸೀರೆ ಪೆಟ್ಟಿಕೋಟ್, ಬ್ಲೌಸ್ ತಂದಳು.

"ಮೊದಲು ಸೀರೆ ಬದಲಾಯಿಸು ಚೆಲುವಿ."

"ಬ್ಯಾಡ ಕಣ್ರವ್ವಾ, ಬಿಸ್ಲಾಗೆ ನಿಂತ್ರೆ ಆರೋಗ್ತದೆ ಬಿಡಿ."

"ನಾನು ಹೇಳಿದಂತೆ ಕೇಳು. ಮೊದಲು ಬಟ್ಟೆ ಬದಲಾಯಿಸು. ನಾಳೆ ಜ್ವರ-ಗಿರ ಬಂದ್ರೆ ಏನ್ಗತಿ ?"

"ಬ್ಯಾಡ ಬಿಡ್ರವ್ವ."

"ನಾನು ಹೇಳಿದಂತೆ ಕೇಳು. ಮೊದಲು ಬಟ್ಟೆ ಬದಲಾಯಿಸು."

ಅವಳು ಬಟ್ಟೆ ಬದಲಾಯಿಸಿ ಬಂದಳು.

"ತಿಂಡಿ ತಿಂದಾಯ್ತಾ ?"

"ಇಲ್ಲ ಕಣ್ರವ್ವಾ !"

ಪದ್ಮಿನಿ ಅಡಿಗೆ ಮನೆಗೆ ಹೋಗಿ ಒಂದು ತಟ್ಟೆಯಲ್ಲಿ ನಾಲ್ಕು ಇಡ್ಲಿ, ಚಟ್ನಿ ಹಾಕಿಕೊಂಡು ಬಂದಳು.

"ಇದನ್ನು ಬೇಗ ತಿನ್ನು, ಭಟ್ರು ಕಾಫಿ ಕೊಡ್ತಾರೆ. ಡಾಕ್ಟ್ರ ಹತ್ತಿರ ಹೋಗಿ ಬರೋಣ."

"ಬ್ಯಾಡ ಕಣವ್ವ" ಚೆಲುವಿ ದೇವರ ಕೋಣೆಯಲ್ಲಿದ್ದ ಗಾಯಿತ್ರಿದೇವಿ ಯತ್ತಾ ನೋಡುತ್ತಾ ಹೇಳಿದರು.

"ಅಷ್ಟು ಜೋರಾಗಿ ಬಿದ್ದಿದ್ದೀಯ. ಮಗೂಗೆ ಏನಾಗತ್ತೋ ಅನ್ನುವ ಹೆದರಿಕೆ ಬೇಡ್ವಾ ? ನಾನು ಸ್ನಾನ ಮಾಡಿಕೊಂಡು ಬರ್ತೀನಿ, ಹೋಗೋಣ."

ಪದ್ಮಿನಿ ಸ್ನಾನಮಾಡಿ, ತಿಂಡಿ ತಿಂದ ಶಾಸ್ತ್ರಮಾಡಿ ಚೆಲುವಿಯನ್ನು ಕರೆದುಕೊಂಡು ಹೊರಟಳು. ಪ್ರಮೋದ್ ಕಾರು ತೆಗೆದುಕೊಂಡು ಹೋಗಿದ್ದ. ಆಟೋದಲ್ಲಿ ಹೋಗಬೇಕಾಯ್ತು. ಡಾ|| ಉಷಾದೇವಿ ಚೆಲುವಿಯನ್ನು ಪರೀಕ್ಷಿಸಿ ಹೇಳಿದರು. "ಗಾಬರಿಗೆ ಅವಕಾಶವಿಲ್ಲ. ತುಂಬಾ ವೀಕ್ ಆಗಿದ್ದಾಳೆ. ಕೆಲವು ಟ್ಯಾಬ್‌ಲೆಟ್ಸ್, ಟಾನಿಕ್ ಬರೆದುಕೊಡ್ತೀನಿ. ದಿನಾ ತೆಗೆದುಕೊಳ್ಳಲಿ" ಎಂದರು.

ಪದ್ಮಿನಿ ಅವಳನ್ನು ಮನೆಗೆ ಬಿಟ್ಟು ಬರುವ ವೇಳೆಗೆ ಗಾಯಿತ್ರಿ ದೇವಿ ಅವಳ ಬರುವಿಕೆಗಾಗಿ ಕಾದಿದ್ದರು.

"ನಿನಗೆ ಹೇಳೋರು ಕೇಳೋ ಯಾರೂ ಇಲ್ವಾ ?"

"ಯಾಕತ್ತೆ ಹಾಗೆ ಕೇಳ್ತಿದ್ದೀರಾ ?"

"ಬೆಳಿಗ್ಗೆಯಿಂದ ನೀನು ಏನೇನು ಮಾಡ್ದೇಂತ ಚನ್ನಾಗಿಸ್ಕೋ ತಿಳಿಯು ತ್ತದೆ. ಚೆಲುವಿ ನಮ್ಮ ಸರೀಕಳಾ ? ಅವಳ ಸೀರೆ ಒದ್ದೆಯಾಯ್ತೂಂತ ಬೇರೆ ಸೀರೆ ಯಾಕೆ ಕೊಟ್ಟೆ ? ಅವಳನ್ನು ಡಾಕ್ಟರ್ ಹತ್ತಿರ ಕರೆದು ಕೊಂಡು ಹೋಗುವ ಅವಶ್ಯಕತೆ ಏನಿತ್ತು ? ಡಾಕ್ಟರ್ ನಿಮ್ಮ ಚಿಕ್ಕಪ್ಪನ

ಮಗಳಾ ? ಅವರು 50 ರೂ. ತೊಗೊಂಡ್ರು ತಾನೆ ? ದುಡ್ಡೇನು ಆಕಾಶದಿಂದ ಉದುರುತ್ತದಾ ?"

ಪದ್ಮಿನಿಗೆ ಅವರ ಪ್ರಶ್ನೆಗಳನ್ನು ಕೇಳಿ ಅಸಹ್ಯವಾಯ್ತು. ಅವಳು ಉತ್ತರಿಸದೆ ಸೋಫಾದಲ್ಲಿ ಕುಳಿತು 'ಭಟ್ಟರೇ....' ಎಂದಳು.

"ಅವರಿಲ್ಲ. ನೀನಿಲ್ಲಿರೋದು ಮಹಾರಾಣಿ ತರಹ ದರ್ಬಾರು ಮಾಡ ಕ್ಕಲ್ಲ. ನೀನು ಈ ಮನೇಲಿ ಏನೇ ಕೆಲಸ ಮಾಡಬೇಕಾದ್ರೂ ನನ್ನ ಪರ್ಮಿಷನ್ ತೆಗೆದುಕೊಳ್ಳಬೇಕು."

"ನೋಡಿ, ಮಾನವೀಯತೆ ದೃಷ್ಟಿಯಿಂದ ನಾನು ಚೆಲುವಿಗೆ ಸೀರೆ ಕೊಟ್ಟೆ, ಡಾಕ್ಟರ್ ಹತ್ತಿರ ಕರ್ಕೊಂಡು ಹೋದೆ. ಇದರಲ್ಲಿ ತಪ್ಪೇನಿದೆ ? ಶ್ರೀಮಂತಿಕೆ ಇದ್ರೆ ಸಾಲದು, ಶ್ರೀಮಂತ ಹೃದಯಾನೂ ಇರಬೇಕು."

"ನಿನ್ನಿಂದ ನಾನು ಪಾಠ ಕಲಿಯಬೇಕಿಲ್ಲ. ಆದ್ದರಿಂದಲೇ ಹೇಳ್ತಿ ರೋದು—ನಮ್ಮ ಸರಿಸಮಾನಸ್ಕರಲ್ಲಿ ಸಂಬಂಧ ಬೆಳೆಸಬೇಕೂಂತ. ನೀನು ನಿಮ್ಮನೆಯಲ್ಲಿ ಇದ್ದಂತೆ ಇಲ್ಲಿರಕ್ಕಾಗಲ್ಲ. ಈ ಮನೆಯ ಸೊಸೆಯಾಗಿ ನೀನು ನಿನ್ನ ಗೌರವ ಉಳಿಸಿಕೊಳ್ಳಬೇಕು."

" 'ಬಡವರ ಬಂಧು' ಅಂತ ಸನ್ಮಾನ ಮಾಡಿಸಿಕೊಂಡ ನಿಮ್ಮ ಬಾಯಲ್ಲಿ ಇಂತಹ ಮಾತುಗಳು ಬರಬಾರದು. ನಾನು ಹಿಂದೇನೆ ಹೇಳಿದ್ದೇನೆ. ನಾನು ಕೆಲಸದಾಳಲ್ಲ, ಈ ಮನೆಯ ಸೊಸೆ."

"ನಿನಗೆಷ್ಟು ಹೇಳಿದ್ರೂ ಅರ್ಥವಾಗಲ್ಲವಲ್ಲ. ಬೀದಿ ಭಿಕಾರಿಗಳ ಮನೆ ಯಿಂದ ಹೆಣ್ಣು ತಂದ್ರೆ ಹೀಗೇ ಆಗೋದು."

"ಅತ್ತೆ, ನಾಲಿಗೆಯ ಮೇಲೆ ಹತೋಟಿ ಇರಲಿ. ನಾನು ಬೀದಿ ಭಿಕಾರಿ ಅಲ್ಲ. ನಮ್ತಂದೆ ಯಾವತ್ತೂ ನಿಮ್ಮ ಮುಂದೆ ನಿಂತು, 'ನನ್ನ ಮಗಳನ್ನು ಸೊಸೆಯಾಗಿ ಸ್ವೀಕರಿಸಿ' ಅಂತ ಬೇಡಲಿಲ್ಲ. ಇನ್ನೂ ಒಂದ್ಮಾತು. ಬೀದಿ ಭಿಕಾರಿಗಳು ಕೂಡ ತಾವು ತಂದಿದ್ದನ್ನು ಹಸಿದವರಿಗೆ ಹಂಚಿ ತಿನ್ನುತ್ತಾರೆ. ಆ ದೃಷ್ಟಿಯಲ್ಲಿ ಅವರು ನಿಮಗಿಂತ ವಾಸಿ."

"ಮುಚ್ಚು ಬಾಯಿ....ನೀನು ಸೀತಮ್ಮನ ಮಗಳು ಅನ್ನುವ ಒಂದೇ ಕಾರಣದಿಂದ ಇಷ್ಟು ದಿನ ಬಾಯ್ಮುಚ್ಚಿಕೊಂಡಿದ್ದೆ. ಈ ದಿನ ಬಾಯಿ ಬಿಟ್ಟು ಹೇಳ್ತೀನಿ ಕೇಳು. ನೀನಲ್ಲ—ನಿನ್ನ ನೆರಳು ಕಂಡ್ರೂ ನನಗಾಗಲ್ಲ. ನಿನ್ನ

ತವರಿನವರನ್ನು ಕಂಡರೆ ನನ್ನ ಮೈ ಉರಿಯುತ್ತೆ. ನನ್ನ ಮಗನ ಬಾಳನ್ನು ಹಾಳ್ಮಾಡಿದ ನಿನ್ನನ್ನು ನಾನೊಂದೂ ಕ್ಷಮಿಸಲ್ಲ. ಇಲ್ಲಿರೋದು ನನ್ನ ಗಂಡ ಬೆವರು ಸುರಿಸಿ ಸಂಪಾದಿಸಿರುವ ಆಸ್ತಿ. ನಿನಗೆ ಈ ಮನೆಯ ಹುಲ್ಲುಕಡ್ಡಿಯೊಂದನ್ನೂ ಕೂಡ ದಾನಮಾಡುವ ಅಧಿಕಾರವಿಲ್ಲ" ಗಾಯಿತ್ರಿದೇವಿ ಆವೇಶದಿಂದ ಕೂಗಿದರು.

ಪದ್ಮಿನಿ ರೂಮು ಸೇರಿ ಮಂಚದ ಮೇಲೆ ಉರುಳಿ ಬಿಕ್ಕಿದಳು. ಅವಳಿಗೆ ತನ್ನ ಮೇಲೆ ಒಂದು ರೀತಿಯ ಜಿಗುಪ್ಸೆ ಮೂಡಿತು. 'ಈ ಸುಖಕ್ಕಾಗಿ ನಾನು ಪ್ರಮೋದನ ಕೈಹಿಡಿದೆನೆ ? ಈ ರೀತಿ ಎಷ್ಟು ದಿನ ? ಈ ಮನೆಯ ಸೊಸೆಯಾಗಿ ನನಗೆ ಯಾರಿಗೋ ಸಹಾಯ ಮಾಡುವ ಸ್ವಾತಂತ್ರ್ಯವಿಲ್ಲವೆ ? ಛಿ ನನ್ನದೆಂತಹ ಬಾಳು ?'

ಗಾಯಿತ್ರಿದೇವಿ ಪ್ರಮೋದ್ ಬಂದ ಮೇಲೆ ಪದ್ಮಿನಿ 'ರಾಮಾಯಣ' ಮಾಡಬಹುದೆಂದುಕೊಂಡಿದ್ದರು. ಆದರೆ ಹಾಗೇನೂ ಆಗಲಿಲ್ಲ.

ಒಂದು ಮಧ್ಯಾಹ್ನ ಪದ್ಮಿನಿ ಏನೋ ಓದುತ್ತಾ ತನ್ನ ರೂಂನಲ್ಲಿ ಕುಳಿತಿದ್ದಾಗ ಗಾಯಿತ್ರಿದೇವಿಯ ಗೆಳತಿ ರುಕ್ಮಿಣಮ್ಮನ ಆಗಮನವಾಯ್ತು. ಪದ್ಮಿನಿ ಹೊರಗೆ ಬಂದು ಅವರನ್ನು ಮಾತನಾಡಿಸಿ ಅತ್ತೆ ಬಂದ ಮೇಲೆ ಒಳಗೆದ್ದು ಹೋದಳು.

"ನಿಮ್ಮ ಸೊಸೆ ಈಗ ಹೇಗಿದ್ದಾಳೆ ?"

"ನಮ್ಮನೆಗೆ ಬಂದ ಮೇಲೆ ಅವಳಿಗೆ ಅತಿ ಸೋಮಾರಿತನ ಬಂದುಬಿಟ್ಟಿದೆ. ಮನೇಲ್ಲಂತೂ ಮಾಡಕ್ಕೆ ಕೆಲಸವಿಲ್ಲ. ಹೊರಗಡೆಯಾದ್ರೂ ಕೆಲವು ಹವ್ಯಾಸಗಳನ್ನಿಟ್ಕೋಂತ ಹೇಳಿದ್ರೆ ಕೇಳೋದೇ ಇಲ್ಲ. ನಾನು ಈ ವಯಸ್ಸಿನಲ್ಲಿ ಸಂಘ ಸಂಸ್ಥೆ ಅಂತ ಒದ್ದಾಡ್ತಿಲ್ವೆ, ನನ್ನ ಸೊಸೆಯಾಗಿ ಇವಳಿಗೆ 'ಸಮಾಜ ಸೇವೆ'ಯಲ್ಲಿ ಆಸಕ್ತೀನೇ ಇಲ್ಲವಲ್ಲಾ....ಏನ್ಮಾಡೋದು ?"

"ನೀವೇ ಕೊಂಚ ಬುದ್ಧಿ ಹೇಳಿ."

"ಅಯ್ಯೋ, ನಾನು ಬುದ್ಧಿ ಹೇಳಿದ್ರೂ ಅವಳಿಗೆ ಅರ್ಥಮಾಡಿಕೊಳ್ಳುವ ಶಕ್ತಿ ಇರಬೇಕಲ್ಲಾ ? ಬಡವರ ಮನೆ ಹುಡುಗಿಯರೇ ಹಾಗೆ! ತಾವೂ ತನ್ನಲ್ಲಿ ಬೇರೆಯವರಿಗೂ ಕೊಡಲ್ಲ, ಯಾವಾಗ್ಲೂ ಬೇಜಾರು ಅಂತಿರ್ತಾಳೆ. ನಮ್ಮ

ಸಮಾಜದಿಂದ ರೋಗಿಗಳಿಗೆ ಹಣ್ಣು ಹಂಚುವ ಕಾರ್ಯಕ್ರಮ ಇಟ್ಕೊಂಡಿದ್ದೆ ವಲ್ಲಾ....ಆಗ ಇವಳನ್ನೂ ಕರೆದೆ, ಆದ್ರೆ ಬರಲ್ಲ ಅಂದುಬಿಟ್ಳು."

"ಒಂದು ಮಗುವಾದ್ರೆ ಎಲ್ಲಾ ಸರಿಹೋಗತ್ತೆ ಬಿಡಿ."

"ದೇವರು ಯಾಕೋ ಇನ್ನೂ ಆ ವಿಚಾರದಲ್ಲಿ ಕರುಣೆ ತೋರಿಸೇ ಇಲ್ಲ. ನನ್ನ ಮಗನ ಮದುವೆಯ ನಂತರ ಮದುವೆಯಾದವರಿಗೆಲ್ಲಾ ಮಕ್ಕಳಿವೆ....ಇವರು ಈಗಿನ ಕಾಲದವರು ಪ್ಲಾನಿಂಗ್–ಗೀನಿಂಗ್ ಅಂತ...."

"ಛೆ....ಛೆ....ಪ್ಲಾನಿಂಗ್ ಬಡವರಿಗೆ ; ನಿಮ್ಮಂತಹವರಿಗಲ್ಲ. ನೀವು ದೊಡ್ಡವ್ರು ಮಗ–ಸೊಸೆಗೆ ಬುದ್ಧಿ ಹೇಳಿ. ನಿಮ್ಮ ಮನೆ ಯಾವಾಗಲೂ 'ನಂದಗೋಕುಲ'ದಂತಿರಬೇಕು."

ಪದ್ಮಿನಿಗೆ ಅವರ ಮಾತುಗಳೆಲ್ಲಾ ಕೇಳಿಸಿದವು ಮೆಲ್ಲಗೆ ಮಾತನಾಡ ಬೇಕೆಂಬ ಅಭಿಪ್ರಾಯ ಇಬ್ಬರಿಗೂ ಇದ್ದಂತೆ ತೋರಲಿಲ್ಲ. ಅತ್ತೆ ತಮಗೆ ಬುದ್ಧಿ ಹೇಳುವ ಮೊದಲೇ ತಾವು ಡಾಕ್ಟರನ್ನು ಭೇಟಿಯಾಗುವುದು ಒಳ್ಳೆಯದು ಅನ್ನಿಸಿತು.

ಪದ್ಮಿನಿ, ಪ್ರಮೋದ್‌ಗೆ ಹೇಳಿ, ಹಠಮಾಡಿ ಪ್ರಸಿದ್ಧ ಗೈನೋಕಾಲಿಜಿಸ್ಟ್ ಡಾ|| ಪ್ರಿಸಿಲ್ಲಾ ಬಳಿ ಹೋದಳು. ಅವರು ಪದ್ಮಿನಿಯನ್ನು ಪರೀಕ್ಷಿಸಿ ಹೇಳಿದರು. "ನನಗೆ ತಿಳಿದಂತೆ ನಿಮ್ಮಲ್ಲಿ ಯಾವ ತೊಂದರೆಯೂ ಇಲ್ಲ.... ನಾನು ನನ್ನ ಕಸಿನ್ ಫರ್ನಾಂಡೀಸ್‌ಗೆ ಒಂದು ಲೆಟರ್ ಕೊಡ್ತೀನಿ. ಅವನ ಮಿಸೆಸ್ ಲೀಲಾ ಕೂಡ ಡಾಕ್ಟರ್. ನೀವಿಬ್ಬರೂ ಅಲ್ಲಿ ಟೆಸ್ಟ್ ಮಾಡಿಸಿ ಕೊಳ್ಳಿ."

ಪ್ರಮೋದ್ ಫರ್ನಾಂಡೀಸ್‌ಗೆ ಫೋನ್ ಮಾಡಿ ಅಪಾಯಿಂಟ್‌ಮೆಂಟ್ ಫಿಕ್ಸ್ ಮಾಡಿಕೊಂಡ. ಅವರು ಗುರುವಾರ ಬೆಳಗ್ಗೆ ಒಂಭತ್ತು ಗಂಟೆಗೆ ಬರಲು ಹೇಳಿದರು. ಡಾ|| ಲೀಲಾ ಪದ್ಮಿನಿಯ ತಪಾಸಣೆ ನಡೆಸಿದರು. ಫರ್ನಾಂಡೀಸ್ ಪ್ರಮೋದ್‌ಗೆ ಕೆಲವು ಟೆಸ್ಟ್‌ಗಳನ್ನು ಮಾಡಿದರು.

"ಇನ್ನೊಂದು ವಾರ ಬಿಟ್ಟು ಬನ್ನಿ. ಫಲಿತಾಂಶ ತಿಳಿಯುತ್ತದೆ" ಎಂದರು.

ಡಾಕ್ಟರ್ ಬಳಿ ಹೋಗಿ ಬಂದ ಮೇಲೆ ಪದ್ಮಿನಿ ತುಂಬಾ ಪೆಚ್ಚಾಗಿ ಬಿಟ್ಟಳು. "ಡಾ|| ಪ್ರಿಸಿಲ್ಲಾ ನನಗೆ ಪರಿಚಿತ ಡಾಕ್ಟರಾಗಿರುವುದರಿಂದ ನನ್ನ

ಬಳಿ ಏನೂ ಹೇಳದಿರಬಹುದು. ನನ್ನಲ್ಲಿ 'ದೋಷವಿಲ್ಲದೆ ಇದ್ದಲ್ಲಿ ಪುನಃ ಟೆಸ್ಟ್ ಮಾಡಲು ಡಾ|| ಲೀಲಾಗೆ ಯಾಕೆ ಬರೆದುಕೊಡುತ್ತಿದ್ದರು ?' ಈ ಯೋಚನೆ ಬಂದೊಡನೆ ಅವಳು ಎಲ್ಲದರಲ್ಲೂ ಆಸಕ್ತಿ ಕಳೆದುಕೊಂಡಳು. ಅವಳ ಅನ್ಯಮನಸ್ಕತೆಯನ್ನು ಪ್ರಮೋದನೂ ಗಮನಿಸುವಂತಾಯ್ತು.

'ಒಂದು ವೇಳೆ ನನ್ನಲ್ಲಿ ದೋಷವಿದ್ದರೆ ಅತ್ತೆ ಸುಮ್ಮನಿರುತ್ತಾರೆಯೇ ? ನನ್ನನ್ನು ಹೊರಗೆ ಹಾಕಿ ಮಗನಿಗೆ ಬೇರೆ ಮದುವೆ ಮಾಡುತ್ತಾರೇನೋ ? ಪ್ರಮೋದ್ ನನ್ನನ್ನು ಎಷ್ಟೇ ಪ್ರೀತಿಸಿದರೂ, ವಂಶಗೌರವದ ದೃಷ್ಟಿಯಿಂದ ಈ ಮದುವೆಗೆ ಒಪ್ಪಬಹುದು. ಆಗ ಈ ಮನೆಯಲ್ಲಿ ನನ್ನ ಸ್ಥಾನವೇನು ?' ಅವಳು ಚಿಂತಿಸಿ ತಲೆಕೆಡಿಸಿಕೊಂಡಳು.

ಕೇವಲ ಯೋಚನೆಗಳಿಂದಲೇ ಅವಳ ಮೈ ನಡುಗುತ್ತಿತ್ತು. ತನ್ನ ಭವಿಷ್ಯ ಕತ್ತಲಿನಲ್ಲಿ ಮುಳುಗಿರುವಂತೆ ಅವಳಿಗೆ ಭಾಸವಾಗುತ್ತಿತ್ತು. ಒಮ್ಮೊಮ್ಮೆ ಅವಳು ಧೈರ್ಯ ತಂದುಕೊಳ್ಳಲು ಪ್ರಯತ್ನಿಸುತ್ತಿದ್ದಳು. 'ನಾನು ಧೈರ್ಯಗೆಡಬಾರದು. ಒಂದು ಪಕ್ಷ ನನ್ನಲ್ಲೇ ದೋಷವಿದ್ದರೆ ನಾನು ನಿಂತು ಪ್ರಮೋದ್‌ಗೆ ಇನ್ನೊಂದು ಮದುವೆ ಮಾಡಬೇಕು. ನಾನು ಇಲ್ಲಿಂದ ದೂರ ಹೋಗಿ ಓದಿ, ಕೆಲಸಕ್ಕೆ ಸೇರಿ, ನನ್ನ ಕಾಲ ಮೇಲೆ ನಾನು ನಿಲ್ಲಬೇಕು' ಎಂದುಕೊಳ್ಳುತ್ತಿದ್ದಳು.

ಒಂದು ದಿನ ಅವಳು ಪ್ರಮೋದ್‌ನನ್ನು ಕೇಳಿದಳು. "ರೀ, ಒಂದು ಪಕ್ಷ ನನ್ನಲ್ಲಿರುವ ದೋಷದಿಂದ ನನಗೆ ಮಕ್ಕಳಾಗದಿದ್ರೆ ನೀವು ನನ್ನನ್ನು ಡೈವೋರ್ಸ್ ಮಾಡ್ತೀರಾ ?"

"ನನ್ನಲ್ಲೇ ದೋಷವಿದ್ರೆ ನೀನು ಡೈವೋರ್ಸ್ ಮಾಡ್ತೀಯಾ ?"

"ಎಂತಹ ಪ್ರಶ್ನೆ ಕೇಳ್ತಿದ್ದೀರ ?"

"ಮತ್ತೇನು ಪಮ್ಮಿ ? ನಿನಗೊಂದು ಶಾಸನ, ನನಗೊಂದು ಶಾಸನಾನ ? ಧೈರ್ಯವಾಗಿರು; ನಿನ್ನಲ್ಲಿ ದೋಷವಿದೇಂತ ನಾನು ಡೈವೋರ್ಸ್ ಮಾಡಲ್ಲ, ಬೇರೆ ಮದುವೇನೂ ಆಗಲ್ಲ."

ಅವಳಿಗೆ ಕೊಂಚ ಸಮಾಧಾನವಾಯ್ತು. ಫಲಿತಾಂಶದ ದಿನ ಪರೀಕ್ಷೆಗೆ ಕುಳಿತಿರುವ ವಿದ್ಯಾರ್ಥಿನಿಯಂತೆ ಅವಳು ಚಡಪಡಿಸಿದಳು....ಬೆಳಗ್ಗೆ ಎದ್ದು

ಸ್ನಾನ ಮಾಡಿ ದೇವರ ಪೂಜೆಮಾಡಿ ತಿಂಡಿ ತಿಂದಳು. ತಿಂಡಿ ಗಂಟಲಿನಲ್ಲಿ ಇಳಿಯಲಿಲ್ಲ.

"ಅಮ್ಮ, ನನ್ನ ಫ್ರೆಂಡ್ ಹೆಂಡತಿಗೆ ಹುಷಾರಿಲ್ಲ. ನಾವು ನೋಡಿ ಕೊಂಡು ಬರ್ತೀವಿ" ಎಂದಷ್ಟೇ ಹೇಳಿದ ಪ್ರಮೋದ್.

ಕೊಂಚ ದೂರ ಹೋದ ಮೇಲೆ ಡ್ರೈವ್ ಮಾಡುತ್ತಿದ್ದ ಪ್ರಮೋದ್ ಹೇಳಿದ.

"ಪದ್ಮಿನಿ, ಒಂದು ಮಾತು ಹೇಳಲಾ ?"

"ಹೇಳಿ."

"ಡಾಕ್ಟರ್ ಏನು ಹೇಳ್ತಾರೋ ತಿಳಿಯದು. ಒಂದು ಪಕ್ಷ ನನ್ನಲ್ಲೇ ದೋಷವಿರಬಹುದು ಅಥವಾ ನಿನ್ನಲ್ಲೇ ದೋಷವಿರಬಹುದು ಅಥವಾ ಇಬ್ಬರಲ್ಲೂ ದೋಷವಿಲ್ಲದೇ ಇರಬಹುದು....ಆದರೆ ಈ ವಿಚಾರಾನ್ನ ನಾವು ನಮ್ಮಲ್ಲೇ ಇಟ್ಕೊಳ್ಳಬೇಕು....ಯಾವ ಕಾರಣಕ್ಕೂ ಅಮ್ಮನಿಗೆ ಈ ವಿಷಯ ತಿಳಿಯಬಾರದು....ಅಮ್ಮನಿಗೆ ಗೊತ್ತಾದ್ರೆ ಅವಳು ಎದೆ ಒಡೆದು ಕೊಂಡು ಬಿಡ್ತಾಳೆ."

"ಅವರಿಗೆ ಗೊತ್ತೇ ಆಗಲ್ವಾ ?"

"ಹೇಗೇ ಗೊತ್ತಾಗುತ್ತೆ ? ನಾವು ಹೇಳಿದ್ರೆ ತಾನೆ ಗೊತ್ತಾಗೋದು ?"

"ಸರಿ ನಿಮ್ಮಿಷ್ಟ ನಾನು ಯಾವ ಕಾರಣಕ್ಕೂ ಈ ವಿಚಾರಾನ್ನ ಯಾರಿಗೂ ಹೇಳಲ್ಲ." ಪದ್ಮಿನಿ ಆಶ್ವಾಸನೆ ನೀಡಿದಳು.

o o o o

ಪ್ರಮೋದ್–ಪದ್ಮಿನಿ ಡಾ|| ಫರ್ನಾಂಡೀಶ್ 'ನರ್ಸಿಂಗ್ ಹೋಂ' ತಲುಪಿದಾಗ ಸರಿಯಾಗಿ ಹತ್ತುಗಂಟೆ. ಅವರು ಅರ್ಧ ಗಂಟೆಯ ನಂತರ ಒಳಗೆ ಹೋದರು. ಆ ವೇಳೆಗೆ ಡಾ|| ಲೀಲಾ ಕೂಡ ಫರ್ನಾಂಡೀಸ್ ಜೊತೆ ಬಂದು ಕುಳಿತರು.

"ಮಿ|| ಪ್ರಮೋದ್, ನಾನು ಹೇಳುವ ವಿಚಾರ ಕೇಳಿ ನಿಮಗೆ ಬೇಸರ ವಾಗಬಹುದು. ನಿಮ್ಮ ಪತ್ನಿಯಲ್ಲಿ...."

ಪದ್ಮಿನಿ ಅವರ ಮಾತು ಕೇಳಿ ಬೆಚ್ಚಿದಳು. ಅವಳಿಗೆ ತಲೆ ತಿರುಗು ತ್ತಿದ್ದಂತೆ ಭಾಸವಾಗಿ ಜೋರಾಗಿ ಕಿರುಚಿದಳು.

"ರಿಲ್ಯಾಕ್ಸ್ ಮಿಸೆಸ್ ಪ್ರಮೋದ್. ನಿಮ್ಮಲ್ಲಿ ಯಾವ ದೋಷಾನೂ ಇಲ್ಲ."

"ಹಾಗಾದ್ರೆ....ಹಾಗಾದ್ರೆ...."

"ನಿಮಗೆ ತಾಯಿಯಾಗುವ ಶಕ್ತಿ ಇದೆ. ಆದರೆ ಮಿಸ್ಟರ್ ಪ್ರಮೋದ್ ನಿಮ್ಮ ಸ್ಪರ್ಮ್‌ನಲ್ಲಿ ಮಕ್ಕಳ ಜನನಕ್ಕೆ ಬೇಕಾದ ವೀರ್ಯಾಣುಗಳ ಕೊರತೆ ಇದೆ...."

"ವ್ಹಾಟ್ ?"

"ಹೌದು ಪ್ರಮೋದ್ ನಾನು ಹೇಳ್ತಿರೋದು ಅಕ್ಷರಶಃ ಸತ್ಯ."

ಪ್ರಮೋದ್ ಮುಖ ಬಿಳಿಚಿಕೊಂಡಿತು. ಅವನು ಎರಡು ಕೈಗಳಲ್ಲಿ ತನ್ನ ತಲೆ ಹಿಡಿದುಕೊಂಡು "ನೋ ನೋ, ಇದು ಸುಳ್ಳು" ಎಂದು ಕೂಗಿದ.

"ಮಿಸ್ಟರ್ ಪ್ರಮೋದ್, ನೀವು ವಿದ್ಯಾವಂತರು. ಈ ತರಹದ ವಿಚಾರ ಗಳಿಗೆ ತಲೆಕೆಡಿಸಿಕೊಳ್ಳಬಾರದು. ಸಮಾಧಾನ ತಂದುಕೊಳ್ಳಿ."

"ನಾನು ಹೇಗೆ ಸಮಾಧಾನ ತಂದುಕೊಳ್ಳಲಿ ಡಾಕ್ಟರ್ ? ನನ್ನಿಂದ ಪದ್ಮಿನಿಯ ಬಾಳು ಹಾಳಾಗಿಹೋಯ್ತಲ್ಲಾ ?"

"ನೀವು ತಪ್ಪು ತಿಳಿದಿದ್ದೀರಿ. ನೀವಿಬ್ಬರೂ ಮನಸ್ಸು ಮಾಡಿದ್ರೆ ನಿಮ್ಮ ಬಾಳನ್ನು ಸುಖಮಯವನ್ನಾಗಿ ಮಾಡಿಕೊಳ್ಳಬಹುದು."

"ಅದು ಹೇಗೆ ?"

"ಈಗ ಹೈದರಾಬಾದ್‌ನಲ್ಲಿ ಸ್ಪರ್ಮ್ ಬ್ಯಾಂಕ್ ಸ್ಥಾಪನೆಯಾಗಿದೆ. ಅಲ್ಲಿ ಆರೋಗ್ಯ ವ್ಯಕ್ತಿಗಳ ಸ್ಪರ್ಮ್ ಸಂಗ್ರಹಿಸಿಟ್ಟುಕೊಂಡಿರ್ತಾರೆ. ಅವರು ಯಾವ ವ್ಯಕ್ತಿಗಳಿಂದ ಸ್ಪರ್ಮ್ ಪಡೆದಿರ್ತಾರೋ, ಅವರ ವಿವರಗಳನ್ನು ಬರೆದಿಟ್ಟಿರ್ತಾರೆ."

"ಅವರ ವಿವರಗಳೊಂದ್ರೆ....?"

"ಅವರ ಬಣ್ಣ, ತೂಕ, ಗಾತ್ರ, ಎದೆಯಳತೆ, ಅವರ ಎತ್ತರ, ಇತ್ಯಾದಿ ಎಲ್ಲಾ ಬರೆದಿಟ್ಟಿರ್ತಾರೆ. 'ಆರ್ಟಿಫಿಷಿಯಲ್ ಇನ್‌ಸೆಮಿನೇಶ'ನಿಂದ ನಿಮ್ಮ ಪತ್ನಿ ಮಗುವನ್ನು ಪಡೆಯಬಹುದು."

"ಹಾಗಂದ್ರೆ ?" ಪದ್ಮಿನಿ ಕೇಳಿದಳು.

"ನಾನದನ್ನು ನಿಧಾನವಾಗಿ ಹೇಳ್ತೀನಿ" ಎಂದ ಪ್ರಮೋದ್.

"ಅಥವಾ ಯಾವುದಾದ್ರೂ ಸಣ್ಣ ಮಗುವೊಂದನ್ನು ನೀವು ದತ್ತು ತೆಗೆದುಕೊಳ್ಳಬಹುದು. ನಮ್ಮ ಮಕ್ಕಳನ್ನು ನಾವು ಸಾಕುವುದರಲ್ಲಿ ಏನು ಹೆಚ್ಚುಗಾರಿಕೆಯಿದೆ ? ನೀವು ನಿಮ್ಮದಲ್ಲದ ಮಗುವಿಗೆ ಬಾಳು ಕೊಡಿ. ಅದಕ್ಕಿಂತ ಪುಣ್ಯದ ಕೆಲಸ ಯಾವುದಿದೆ ?"

"ಥ್ಯಾಂಕ್‌ಯೂ ಡಾಕ್ಟರ್, ನಾವಿನ್ನು ಬರ್ತೀವಿ" ಎನ್ನುತ್ತಾ ಪ್ರಮೋದ್ ಎದ್ದ.

ದಾರಿಯಲ್ಲಿ ಇಬ್ಬರೂ ಏನೂ ಮಾತಾಡಲಿಲ್ಲ. ಮನೆ ಸೇರಿದೊಡನೆ ಪ್ರಮೋದ್ ಪದ್ಮಿನಿಯನ್ನು ಗೇಟಿನ ಬಳಿ ಇಳಿಸಿ ಹೇಳಿದ. "ಪದ್ಮಿನಿ, ನಾನು ಆಫೀಸ್‌ಗೆ ಹೋಗಿ ಬರ್ತೀನೆ...."

"ಒಂದೈದು ನಿಮಿಷ ಒಳಗೆ ಬಂದು ಹೋಗಿ...."

ಪದ್ಮಿನಿ ತಮ್ಮ ರೂಮು ಪ್ರವೇಶಿಸಿದಳು....ಗಾಯಿತ್ರಿದೇವಿ ಇರಲಿಲ್ಲ.

"ದೊಡ್ಡ ಮ್ಮಾವ್ರು ಸ್ನೇಹಿತರ ಜೊತೆ ಹೊರಗೆ ಹೋದರು" ಎಂದರು ಭಟ್ಟರು.

ರೂಮು ಪ್ರವೇಶಿಸಿ ಪ್ರಮೋದ್ ಕೇಳಿದ. "ಏನು ಪದ್ಮಿನಿ ?"

ಅವಳು ಅವನನ್ನಪ್ಪಿ ಜೋರಾಗಿ ಬಿಕ್ಕಿದಳು. ಅವನೂ ಅವಳ ಮಡಿಲಲ್ಲಿ ತಲೆಯಿಟ್ಟು ಗದ್ಗದ ಕಂಠದಿಂದ ನುಡಿದ.

"ನಾನು ಪಾಪಿ ಪಮ್ಮಿ, ನಿನ್ನ ಬಾಳು ನರಕ ಮಾಡಿಬಿಟ್ಟೆ."

"ಪ್ಲೀಸ್, ನೀನು ಹಾಗನ್ನಬೇಡ ಪ್ರಮೋದ್. ನೀನು ನೊಂದುಕೊಂಡ್ರೆ ನನಗೆ ಸಹಿಸಕ್ಕಾಗಲ್ಲ."

"ಬದುಕಿರುವವರೆಗೂ ನಾವಿಬ್ಬರೇ ಇರಬೇಕಲ್ಲಾ ಪಮ್ಮಿ? ನಾನೇನು ಮಾಡಲಿ ?" ಅವನು ಮುಖ ಮುಚ್ಚಿಕೊಂಡು ಬಿಕ್ಕಿದ.

"ನೀನು ಅಳಬೇಡ ಪ್ರಮೋದ್. ಪ್ರಪಂಚದಲ್ಲಿ ನಮ್ಮಂತಹ ಜೋಡಿಗಳು ಅದೆಷ್ಟಿವೆಯೋ ? ಜೀವನದಲ್ಲಿ ನಾವಂದುಕೊಂಡಂತೆ ಎಲ್ಲಾನೂ ನಡೆಯುವುದಿಲ್ಲ. ಕೊಂಚ ತಾಳ್ಮೆ ತಂದುಕೋ."

"ನಾನಿವತ್ತು ಕೆಲಸಕ್ಕೆ ಹೋಗಲ್ಲ. ಬಾ, ನಾವಿಬ್ಬರೂ ನಂದಿಬೆಟ್ಟಕ್ಕೆ ಹೋಗಿ ಬರೋಣ."

"ನೀನು ಕೆಲಸಕ್ಕೆ ಹೋಗಿ ಬಾ. ನಾವು ಇನ್ನ್ಯಾವತ್ತಾದ್ರೂ ನಂದಿ ಬೆಟ್ಟಕ್ಕೆ ಹೋಗಿಬರೋಣ....ಕೊಂಚ ಹೊತ್ತು ನಾನೊಬ್ಬಳೇ ಇರಬೇಕು."

ಪ್ರಮೋದ್ ಹೊರಟ, ಪದ್ಮಿನಿ ಪುನಃ ಕೂಗಿದಳು.

"ಬನ್ನಿ ಇಲ್ಲಿ."

"ಏನು ಪಮ್ಮಿ?"

"ನೀವು ನನ್ನನ್ನು ತುಂಬಾ ಪ್ರೀತಿಸ್ತೀರ ತಾನೆ?"

"ನಿಂಗೆ ಅನುಮಾನಾನಾ?"

"ಹಾಗಾದ್ರೆ ಮಾತು ಕೊಡಿ."

"ಏನದು ಹೇಳು?"

"ನಿಮಗೆಷ್ಟು ಆಘಾತವಾಗಿದೆ, ನಿರಾಶೆಯಾಗಿದೇಂತ ನನಗೆ ಗೊತ್ತು. ಯಾವ ಕಾರಣಕ್ಕೂ ನೀವು ಪ್ರಾಣಹತ್ಯೆ ಮಾಡಿಕೋಕೂಡದು. ಹಾಗೇನಾದ್ರೂ ನೀವು ಆತ್ಮಹತ್ಯೆ ಮಾಡಿಕೊಂಡ್ರೆ ನಿಮ್ಮ ಪಮ್ಮಿ ಉಳಿಯಲ್ಲ. ನಮ್ಮ ಪ್ರೀತಿಯ ಮೇಲೆ ಆಣೆಯಿಟ್ಟು ಮಾತುಕೊಡಿ."

ಅವನು ಅವಳ ಕೈ ಹಿಡಿದು ಮಾತುಕೊಟ್ಟು, ಆ ಕೈಯ್ಯನ್ನು ಕಣ್ಣಿಗೊತ್ತಿಕೊಂಡ.

ಪ್ರಮೋದ್ ಹೋದ ಮೇಲೆ ಪದ್ಮಿನಿ ಮಂಚದ ಮೇಲೆ ಉರುಳಿ ಮನಸಾರೆ ಅತ್ತಳು. ತನ್ನ ಬಾಳು ಸಂಪೂರ್ಣ ಕತ್ತಲೆಯಲ್ಲಿ ಮುಳುಗಿರುವಂತೆ ಅವಳಿಗೆ ಭಾಸವಾಯಿತು. ಅವಳಿಗೆ ಮೊದಲಿಂದಲೂ ಮಕ್ಕಳೆಂದರೆ ಅತಿ ಪ್ರೀತಿ. ಅಕ್ಕಪಕ್ಕದ ಮನೆಯ ಮಕ್ಕಳನ್ನು ತಂದು ಮುದ್ದು ಮಾಡುತ್ತಿದ್ದಳು. ಈಗ ತಾನು ತಾಯಿಯಾಗುವ ಕನಸು ಕಾಣುವಾಗ ಹೀಗಾಗಬೇಕೆ? ನನ್ನ ಬಾಳಿನಲ್ಲಿ ಇನ್ನು ಏನು ಉಳಿದಿದೆ? ನನ್ನ ಬಾಳಿಗೆ ಯಾವ ಅರ್ಥವಿದೆ? ನನ್ನ ಬಾಳು ಸುವಾಸನೆ ಇಲ್ಲದ, ಪೂಜೆಗೆ ಯೋಗ್ಯವಲ್ಲದ ಸುಮದಂತಾಯಿತಲ್ಲಾ? ತಿಂದು, ಕುಡಿದು, ಮಲಗಲು ನಾನು ಬದುಕಿರಬೇಕೆ? ಈ

ವಿಚಾರ ಅತ್ತೆಗೆ ತಿಳಿದರೆ ಏನ್ನಬಹುದು ? ತವರಿನವರು ಹೇಗೆ ಪ್ರತಿಕ್ರಿಯಿಸ ಬಹುದು ?

ನಾಲ್ಕು ದಿನ ಹೀಗೇ ಕಳೆಯಿತು. ಪ್ರಮೋದ್ ಅಪರಾಧಿ ಮನೋ ಭಾವದಿಂದ ಕುಗ್ಗಿಹೋಗಿದ್ದ. ಪದ್ಮಿನಿಯ ಮೌನಕ್ಕೆ ಕಾರಣ ತಿಳಿಯದೆ ಗಾಯಿತ್ರಿದೇವಿ ಒದ್ದಾಡಿದರು.

'ಏನಾಯಿತಿವಳಿಗೆ ? ಏನಾದರೂ ಕೆಲಸ ಹುಡುಕಿಕೊಂಡು ಉತ್ಸಾಹದ ಚಿಲುಮೆಯಂತೆ ಮನೆ ತುಂಬಾ ಓಡಾಡುತ್ತಿದ್ದ ಹುಡುಗಿ ಹೀಗ್ಯಾಕೆ ಇದ್ದಾಳೆ ?' ಎಂದುಕೊಂಡರು.

ಶನಿವಾರ ಸಾಯಂಕಾಲ ಪ್ರಮೋದ್ ಹೆಂಡತಿಗೆ ಫೋನ್ ಮಾಡಿದ. "ನಾನು ಆಫೀಸ್ ಮುಗಿಸಿಕೊಂಡು ಬರ್‍ತೀನಿ. ನರಸೀಪುರಕ್ಕೆ ಹೋಗೋಣ."

"ಮನೆಯಲ್ಲಿ ಅತ್ತೆ ಒಬ್ರೇ ಆಗ್ತಾರಲ್ಲಾ ?"

"ಚಿಂತೆಯಿಲ್ಲ, ಅವರ ಜೊತೆ ಮಲಗಕ್ಕೆ ಭಟ್ಟರ ತಂಗಿ ಶಾಂತಮ್ಮಂಗೆ ಹೇಳಿದರಾಯ್ತು."

ಪದ್ಮಿನಿ ತನ್ನ ಬಟ್ಟೆ ಬರೆ ಸಿದ್ಧಮಾಡಿಕೊಂಡಳು. ಪ್ರಮೋದ್ ಬರುವಾಗಲೇ ಶಾಂತಮ್ಮನನ್ನು ಕರೆತಂದ.

"ಅಮ್ಮ, ನಾನು ಪದ್ಮಿನಿ ಒಂದು ವಾರದ ಮಟ್ಟಿಗೆ ನರಸೀಪುರಕ್ಕೆ ಹೋಗ್ತಿದ್ದೇವೆ. ಶಾಂತಮ್ಮ ನಿನ್ನ ಜೊತೆ ಇರ್‍ತಾರೆ."

"ಆಫೀಸ್ ಯಾರು ನೋಡಿಕೊಳ್ತಾರೋ ?"

"ಭಗವಾನ್ ಅಂಕಲ್ ನೋಡಿಕೊಳ್ತಾರೆ. ನಿನಗೆ ಆ ಚಿಂತೆ ಬೇಡ."

ಗಾಯಿತ್ರಿದೇವಿಗೆ ಏನು ಹೇಳಲೂ ತೋರಲಿಲ್ಲ.

ಪದ್ಮಿನಿ–ಪ್ರಮೋದ್ ಟಿ. ನರಸೀಪುರ ತಲುಪಿದಾಗ ರಾತ್ರಿ 11 ಗಂಟೆ. ದಾರಿಯಲ್ಲೇ ಊಟಮಾಡಿದ್ದರು. ಅವೇಳೆಯಲ್ಲಿ ಬಂದ ಮಗಳು, ಅಳಿಯನ್ನು ನೋಡಿ ಶಾಸ್ತ್ರಿ ದಂಪತಿಗಳಿಗೆ ತುಂಬಾ ಗಾಬರಿಯಾಯಿತು ಪದ್ಮಿನಿ ತಾಯಿಯನ್ನಪ್ಪಿ ಜೋರಾಗಿ ಅತ್ತಳು.

"ಯಾಕಮ್ಮ ಅಳು ? ಏನಾಯ್ತು ?"

"ನಿನ್ನನ್ನು ನೋಡಿ ತುಂಬಾ ದಿನಗಳಾಗಿತ್ತಲ್ಲಮ್ಮಾ ? ಅದಕ್ಕೆ ಅಳು ಬಂತು."

ಒಂದು ವಾರ ಸುಖವಾಗಿ ಕಳೆಯಿತು. ಪ್ರಮೋದ್ ಅವರನ್ನೆಲ್ಲಾ ದಿನಕ್ಕೊಂಡು ಕಡೆ ಕರೆದೊಯ್ದ. ನಾಲ್ಕಾರು ಸಿನಿಮಾ ನೋಡಿದರು. ಅಕ್ಕನ ಮನೆ, ತಂಗಿ ಮನೆ ಎಂದು ಸುತ್ತಿದ್ದಾಯಿತು. ಬ್ಲಫ್, ತಲಕಾಡು, ಸೋಮನಾಥಪುರ, ಕೆ.ಆರ್.ಎಸ್. ಎಲ್ಲ ಕಡೆ ಹೋಗಿ ಬಂದರು. ಪ್ರಮೋದ್ ಅವರಿಗೆಲ್ಲಾ ಬಟ್ಟೆ ಬರೆ ತೆಗೆದುಕೊಟ್ಟ. ಒಂದು ವಾರದ ನಂತರ ಅವರು ಬೆಂಗಳೂರಿಗೆ ವಾಪಸ್ ಬಂದರು. ತವರುಮನೆಯಲ್ಲಿದ್ದಾಗ ಅರಳಿದ್ದ ಪದ್ಮಿನಿಯ ಮನಸ್ಸು ಮತ್ತೆ ಮುದುಡಿತು. ಹೆಂಡತಿಯ ದುಃಖ ದುಮ್ಮಾನ ಗಮನಿಸಿದ ಪ್ರಮೋದ್ ಒಂದು ದಿನ ಪದ್ಮಿನಿಯನ್ನು ಕೇಳಿದ. "ಪದ್ಮಿನಿ, ನಾವು ಯಾವುದಾದ್ರೂ ಮಗುವನ್ನ ದತ್ತು ತೆಗೆದು ಕೊಳ್ಳೋಣವಾ ?"

"ಯಾವ ಮಗೂನ್ನ ತೆಗೆದುಕೊಳ್ತೀರಾ ? ನಿಮ್ಮ ತಾಯಿ ಒಪ್ತಾರಾ?" ಮಲಗಿದ್ದ ಪದ್ಮಿನಿ ಎದ್ದು ಕುಳಿತು ಕೇಳಿದಳು.

"ನಮ್ಮ ಕಡೆ ನೆಂಟರಲ್ಲೋ ನಿಮ್ಮ ಕಡೆ ನೆಂಟರಲ್ಲೋ...."

"ತಂದೆ–ತಾಯಿ ಇರುವ ಮಕ್ಕಳು ನನಗಿಷ್ಟವಿಲ್ಲ."

"ಹಾಗಾದ್ರೆ ಯಾವುದಾದ್ರೂ ಅನಾಥಾಶ್ರಮದಿಂದ ಮಗೂನ್ನ ತರೋಣ."

ಪದ್ಮಿನಿ ವಿಷಾದದ ನಗೆ ಬೀರಿ ಹೇಳಿದಳು. "ಅದು ಸಾಧ್ಯವಿಲ್ಲಾರಿ. ನಾವದನ್ನು ನಮ್ಮ ಮಗೂಂತ ಒಪ್ಪಿದರೂ, ನಿಮ್ಮ ತಾಯಿ ಮೊಮ್ಮಗೂಂತ ಒಪ್ಪಲ್ಲ."

"ಯಾಕೆ ಒಪ್ಪಲ್ಲ ? ನಾನು ಒಪ್ಪಿಸ್ತೇನೆ."

"ನಾನು ನಿಮ್ಮ ಜಾತಿಯೇ ಆಗಿದ್ರೂ, ನಮ್ಮ ತಂದೆ–ತಾಯಿ ಚೆನ್ನಾಗಿ ಪರಿಚಯವಿದ್ರೂ, ನಾನು ಬಡವಳು ಅನ್ನುವ ಒಂದೇ ಒಂದು ಕಾರಣದಿಂದ ಈಗಲೂ ನಿಮ್ಮಮ್ಮ ದ್ವೇಷಿಸ್ತಿದ್ದಾರೆ. ಹೆಜ್ಜೆಹೆಜ್ಜೆಗೂ ತಮ್ಮ ಅಸಹನೆ ತೋರಿಸ್ತಿದ್ದಾರೆ. ಅಂತಹದ್ರಲ್ಲಿ ಕುಲಗೋತ್ರ ತಿಳಿಯದ ಅನಾಥ ಮಗೂನ್ನ ಮೊಮ್ಮಗೂಂತ ಒಪ್ಪಿಕೊಳ್ತಾರಾ ? ನಿಮ್ಮ ತಾಯಿ ಒಪ್ಪಿದ್ರೆ ಪ್ರಳಯ ಆಗಿಬಿಡತ್ತೆ."

"ಮಗು ಬೇಕಿರೋದು ನಮಗೆ, ನಾವು ಮಗು ತರೋಣ."

"ನಿಮ್ಮಮ್ಮನ್ನು ಎದುರಿಸಿ ಅವರ ಇಚ್ಛೆಗೆ ವಿರುದ್ಧವಾಗಿ ಮಗುವನ್ನು ತರುವ ಧೈರ್ಯ ನಿಮಗಿದೆಯೇನ್ರಿ ? ಅವರನ್ನು ಬಿಟ್ಟು ನೀವು ಇರಬಲ್ಲಿರಾ ? ನಾನು 'ತಾಯಿ' ಅನ್ನಿಸಿಕೊಳ್ಳುವ ಉತ್ಸಾಹದಲ್ಲಿ ನಿಮ್ಮಿಬ್ಬರನ್ನೂ ಅಗಲಿಸಲೆ ? ಛೆ....ಛೆ....ಅದು ನನ್ನಿಂದ ಸಾಧ್ಯವಿಲ್ಲ."

"ನಾನು ಅಮ್ಮನ್ನ ಒಪ್ಪಿಸ್ತೇನೆ."

"ದಯವಿಟ್ಟು ನೀವು ಆ ಸಾಹಸಕ್ಕೆ ಕೈ ಹಾಕೋದು ಬೇಡ. ಕೈ ತೋರಿಸಿ ಅವಲಕ್ಷಣ ಅನ್ನಿಸಿಕೊಳ್ಳೋದು ಬೇಡ."

"ನೀನಂತೂ ಹಠವಾದಿ" ಎಂದ ಪ್ರಮೋದ್ ದತ್ತುತೆಗೆದುಕೊಳ್ಳಲು ಹೆಂಡತಿ ಒಪ್ಪುವುದಿಲ್ಲವೆಂದು ಅವನಿಗೆ ಮನದಟ್ಟಾಯ್ತು.

ಮನೆಯಲ್ಲಿ ಸುಮ್ಮನೆ ಕುಳಿತರೆ ತನ್ನ ತಲೆ ರಣರಂಗವಾಗುತ್ತದೆಂದು ಪದ್ಮಿನಿಗೆ ತಿಳಿದಿತ್ತು. ಆದ್ದರಿಂದ ಅವಳು ತನ್ನನ್ನು ಒಂದಲ್ಲಾ ಒಂದು ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ನಿರ್ಧರಿಸಿದಳು. ಬೆಳಗ್ಗೆಯ ಹೊತ್ತು ತಿಂಡಿ ಮಾಡುವ ಹೊಣೆ ತಾನೇ ಹೊತ್ತುಕೊಂಡಳು. ತೋಟದಲ್ಲಿ ಹೆಚ್ಚು ಕಾಲ ಕಳೆಯುತ್ತಿದ್ದಳು. ತಾನೇ ಹೋಗಿ ಮನೆಯ ಸಾಮಾನು ತರಲಾರಂಭಿಸಿದಳು. ಸಮಾಜದಲ್ಲಿ 'ಯೋಗ' ತರಗತಿಗೆ ಸೇರಿದಳು. ನಂತರ ಟೆನ್ನಿಸ್ ಆಡುತ್ತಿದ್ದಳು. ಇಷ್ಟವಿರದಿದ್ದರೂ ಸಮಾಜದ ಚಟುವಟಿಕೆಗಳಲ್ಲಿ ಭಾಗವಹಿಸಲಾರಂಭಿಸಿದಳು. ಒಟ್ಟಿನಲ್ಲಿ ಅವಳು ಮನೆಯಲ್ಲಿರುವುದೇ ಅಪರೂಪವಾಯ್ತು. ಗಂಡ ಮನೆಗೆ ಬರುವ ವೇಳೆಗೆ ತಾನೂ ಮನೆಗೆ ಬರುತ್ತಿದ ಳು. ದಣಿದ ದೇಹ ನಿದ್ರೆ ಬಯಸುತ್ತಿತ್ತು. ಹಾಸಿಗೆಯ ಮೇಲೆ ತಲೆ ಇಟ್ಟೊಡನೆ ನಿದ್ರೆ ಬರುತ್ತಿತ್ತು.

ಒಂದು ತಿಂಗಳು ಕಳೆಯಿತು. ಒಂದು ದಿನ ಬೆಳಗಾಗುತ್ತಿದ್ದಂತೆ ಪ್ರಮೋದ್ ಕೇಳಿದ. "ನಿನಗೆ ನಾನೊಂದ್ರೆ ಅಸಹ್ಯಾನಾ ?"

"ಛೆ....ಎಂತಹ ಪ್ರಶ್ನೆ ಕೇಳ್ತಿದ್ದೀರಾ ?" ಅವಳು ನೊಂದು ನುಡಿದಳು.

"ಮತ್ತೆ ಯಾಕೆ ನೀನು ನನ್ನ ಜೊತೆ ಸರಿಯಾಗಿ ಮಾತೇ ಆಡಲ್ಲ ; ಯಾವಾಗಲೂ ಏನಾದರೂ ಮಾಡ್ತಿರ್ತೀಯ. ಇತ್ತೀಚೆಗೆ ನಾನು ಬೇಗ ಮನೆಗೆ ಬಂದ್ರೂ ನೀನು ಇರಲ್ಲ."

"ನನಗೆ ಹೊತ್ತು ಹೋಗುವುದಾದರೂ ಹೇಗೆ ? ಅದಕ್ಕೆ ಸಮಾಜಕ್ಕೆ ಕ್ಲಬ್‌ಗೆ ಹೋಗ್ತಿದ್ದೀನಿ. ಯೋಗ ಕ್ಲಾಸ್‌ಗೆ ಸೇರಿದ್ದೇನೆ."

"ನನ್ನ ಬದಲು ನೀನು ಒಬ್ಬ ಸಾಮಾನ್ಯ ಕೆಲಸದಲ್ಲಿರುವವನನ್ನು ಮದುವೆಯಾಗಿದ್ದಿದ್ರೂ ನೀನು ಸುಖವಾಗಿರ್ತಿದ್ದೆ ಪಮ್ಮಿ."

"ಯಾಕೆ ಹಾಗಂತೀರಾ ? ನನ್ನ ಸುಖಕ್ಕೇನು ಕಡಿಮೆಯಾಗಿರೋದು ?"

"ನಮ್ಮದಿ ಚಿನ್ನ. ಒಂದು ಕಾಲದಲ್ಲಿ ನಾನು ಹಣದಿಂದ ಎಲ್ಲಾ ಕೊಳ್ಳಬಹುದೂಂತ ಭಾವಿಸಿದ್ದೆ. ಆದರೆ ಈಗ ಅದು ಎಂತಹ ಹುಚ್ಚು ಅನ್ನಿಸತ್ತೆ. ನಾನೇನು ಮಾಡಲಿ ಪಮ್ಮಿ?" ಅವನು ಅಸಹಾಯಕನಂತೆ ಕೂದಲು ಕಿತ್ತುಕೊಂಡ.

"ನೋಡಿ, ನಾನೀಗ ಸುಖವಾಗಿದ್ದೇನೆ. ಇದುವರೆಗೂ 'ಕೂಪ ಮಂಡೂಕ ದಂತಿದ್ದು 'ಇಷ್ಟೇ ಪ್ರಪಂಚ' ಅಂದುಕೊಂಡಿದ್ದೆ. ಈಗ ಹೊರಗಿನ ಜನರ ಜೊತೆ ಹೆಚ್ಚು ಆತ್ಮೀಯತೆಯಿಂದ ಬೆರೆಯುತ್ತಿರುವುದರಿಂದ ನಮ್ಮ ಸಮಸ್ಯೆ ದೊಡ್ಡ ಸಮಸ್ಯೆ ಅಲ್ಲ ಅನ್ನುವುದು ನನಗರ್ಥವಾಗಿದೆ."

"ಪದ್ಮಿನಿ, ನಾನೊಂದು ಮಾತು ಹೇಳಲಾ ?"

"ಹೇಳಿ."

"ನಾನು ನಿನ್ನನ್ನು ಡೈವೋರ್ಸ್ ಮಾಡ್ತೀನಿ. ನೀನು ಯಾರಾದ್ರೂ ಒಳ್ಳೆಯ ಯುವಕನನ್ನು ಮದುವೆಯಾಗು."

"ನನ್ನನ್ನು ಅಷ್ಟು ಸುಲಭವಾಗಿ ಬೇರೊಬ್ಬರಿಗೆ ಬಿಟ್ಟುಕೊಡ್ತೀರಾ ?"

"ಮತ್ತೇನು ಮಾಡಲಿ ಪಮ್ಮಿ ? ನನಗೆ ನೀನು ಸುಖವಾಗಿರೋದು ಬೇಕು. ಪ್ರತಿಯೊಬ್ಬ ಹೆಣ್ಣು ತಾಯಿಯಾಗಕ್ಕೆ ಬಯಸ್ತಾಳೆ ಅಂತ ನನಗೆ ಗೊತ್ತು. ನನ್ನಿಂದ ನೀನು 'ಬಂಜೆ' ಅನ್ನಿಸಿಕೊಳ್ಳುವುದು ನನಗೆ ನೋಡಕ್ಕಾಗಲ್ಲ."

"ನಾನು ಬೇರೆ ಮದುವೆಯಾದ್ರೆ ನೀವೇನು ಮಾಡ್ತೀರಾ ?"

"ನಾನು....ನಾನು...." ಅವನು ಉತ್ತರ ಕೊಡದೆ ತಡವರಿಸಿದ.

"ನೀವು ಒಂಟಿಯಾಗಿ ಒದ್ದಾಡಲು ಬಿಟ್ಟು ನಾನು ಬೇರೆ ಮದುವೆ ಯಾಗಲಾ ? ನೀವು ನೊಂದು ನಿಟ್ಟುಸಿರು ಬಿಡ್ತಿರುವಾಗ ನಾನು ಸುಖ ವಾಗಿರ್ತೀನಾ ? ನಿಮ್ಮ ಜೊತೆ ಸುಖ ಹಂಚಿಕೊಳ್ಳಕ್ಕೆ ಮಾತ್ರ ನಾನು ನಿಮ್ಮ

ಕೈಹಿಡಿದಿಲ್ಲಾರಿ. ದುಃಖ ಹಂಚಿಕೊಳ್ಳುವ ಹೊಣೇನೂ ನನ್ನ ಮೇಲಿದೆ. ನನ್ನ ವಿಚಾರವಾಗಿ ತಲೆ ಕೆಡಿಸಿಕೊಂಡು ದುಃಖಪಡಬೇಡಿ."

"ನೀನು ಇತ್ತೀಚೆಗೆ ತುಂಬಾ ಮೊಂಡಾಗ್ತಿದ್ದೀಯ. ನಾನು ಸತ್ತ ಮೇಲಾದರೂ ನೀನು ಬೇರೆ ಮದುವೆಯಾಗ್ತಿಯೇನೋ ?"

ಅವನ ಮಾತು ಕೇಳಿ ಅವಳು ದಿಗ್ಭ್ರಾಂತಳಾದಳು 'ನನ್ನ ಪದ್ಮಿನಿ ಸುಖವಾಗಿರಬೇಕು' ಅನ್ನುವ ಉದ್ದೇಶ್ಯದಿಂದ ಈ ವ್ಯಕ್ತಿ ಆತ್ಯಹತ್ಯೆ ಮಾಡಿಕೊಂಡರೇನು ?' ಅನ್ನಿಸಿತು. ಅವಳು ಅವನನ್ನಪ್ಪಿ ಕಂಬನಿತುಂಬಿ ಕೊಂಡು ಹೇಳಿದಳು : "ರೀ, ನೀವು ನನಗೆ ಮಾತು ಕೊಟ್ಟಿರುವುದನ್ನು ನೆನಪು ಮಾಡಿಕೊಳ್ಳಿ. ಒಂದು ಪಕ್ಷ ನೀವು ಆತ್ಮಹತ್ಯೆಗೆ ಪ್ರಯತ್ನಿಸಿದ್ರೆ ನಿಮ್ಮ ಪದ್ಮಿನಿ ಉಳಿಯಲ್ಲಾರಿ. ನೀನಿಲ್ಲದ ಬಾಳು ಬಾಳೇನ್ರಿ ? ನಿಮ್ಮ ಜೊತೆ ನಾನೂ 'ಸಹಗಮನ' ಮಾಡಿಬಿಡ್ತೀನೆ."

ಅವನು ಮಾತನಾಡದೆ ಅವಳನ್ನಪ್ಪಿದ. ಅವಳ ಕೈಗಳು ಅವನ ತಲೆ ಗೂದಲಲ್ಲಾಡಿದವು.

ಒಮ್ಮೊಮ್ಮೆ ಪ್ರಮೋದನಿಗೆ ತಾನು ಪದ್ಮಿನಿಯನ್ನು ಅಷ್ಟು ಪ್ರೀತಿಸದಿದ್ದರೆ ಚೆನ್ನಾಗಿರುತ್ತಿತ್ತೇನೋ ಅನ್ನಿಸುತ್ತಿತ್ತು. ಅವಳನ್ನು ಒರಟಾಗಿ ನಡೆಸಿಕೊಂಡಿದ್ದರೆ, ಅವಳಿಗೂ ಇಲ್ಲಿಂದ ಓಡಿಹೋದರೆ ಸಾಕು ಎನ್ನುವ ಭಾವ ಮೂಡುತ್ತಿತ್ತು. ಈಗವಳು ಭಾವನೆಗಳ ಭಾರದಿಂದ ಕಟ್ಟಿಹಾಕಲ್ಪಟ್ಟಿದ್ದಾಳೆ. ಅವಳನ್ನು ಸುಖವಾಗಿಡಲು ಏನು ಮಾಡಲಿ ? ಅವನು ಪರಿಹಾರ ಕಾಣಲಾರದೆ ಒದ್ದಾಡಿದ.

ಗಾಯಿತ್ರಿದೇವಿಗೆ ಮಗ–ಸೊಸೆಯರು ತನ್ನಿಂದ ಏನೋ ಮುಚ್ಚಿಡುತ್ತಿದ್ದಾರೆಂಬ ಅನುಮಾನ ಹುಟ್ಟಿತ್ತು. ಅವರ ಸಮಾಜದ ಗೆಳತಿ ರಾಧಾರಾವ್ ಸೊಸೆ ಡಾ|| ಪ್ರಿಸಿಲ್ಲಾ ಬಳಿ ಕೆಲಸ ಮಾಡುತ್ತಿದ್ದಳು. ಅವಳಿಂದ ಪ್ರಮೋದ್–ಪದ್ಮಿನಿ ಡಾ|| ಪ್ರಿಸಿಲ್ಲಾ ಬಳಿ ಹೋಗಿದ್ದುದೂ ಪತ್ರ ತೆಗೆದುಕೊಂಡು ಡಾ|| ಫರ್ನಾಂಡೀಸ್ ಬಳಿ ಹೋಗಿದ್ದುದೂ ತಿಳಿದಿತ್ತು. ಅಲ್ಲಿಂದ ಬಂದ ಮೇಲೆ ಸೊಸೆಯ ನಡವಳಿಕೆಯಲ್ಲಿ ಬದಲಾವಣೆಯಾಗಿದೆ. ಅಂದರೆ ಅವಳಲ್ಲಿ ಏನೋ ದೋಷವಿರಬೇಕು. 'ದೇವರೇ, ಎಂತಹ ಸೊಸೆಯನ್ನು ನನ್ನ ಮನೆಗೆ ಕೊಟ್ಟೆ ?' ಎಂದು ಒದ್ದಾಡಿದರು.

ಒಂದು ದಿನ ಬೆಳಗ್ಗೆ ತಿಂಡಿ ತಿನ್ನುತ್ತಿದ್ದಾಗ ಅವರು ಇದ್ದಕ್ಕಿದ್ದಂತೆ ಕೇಳಿದರು. "ಏನಪ್ಪಾ, ನೀವಿಬ್ರೂ ಇನ್ನೆಷ್ಟು ದಿನ ಹೀಗಿರಬೇಕೆಂದುಕೊಂಡಿದ್ದೀರಾ ? ನನಗೂ ವಯಸ್ಸಾಯ್ತು. ಮೊಮ್ಮಗ್ಳನ್ನ ಆಟವಾಡಿಸದೆ ಸಾಯ್ತೀನೇನೋಂತ ಭಯವಾಗ್ತಿದೆ."

"ಆಗತ್ತೆ ಬಿಡಮ್ಮ. ನಾವೂ ಡಾಕ್ಟರ್ ಹತ್ತಿರ ಹೋಗಿದ್ದೆವು. ನಿಮ್ಮಲ್ಲಿ ಏನೂ ದೋಷವಿಲ್ಲ. ಕೆಲವರಿಗೆ ನಿಧಾನವಾಗಿ ಆಗತ್ತೆ ಬಿಡಿ" ಅಂದ್ರು.

"ನಿಧಾನ ಅಂದ್ರೆ ಎಷ್ಟು ನಿಧಾನ ? ನಿಮ್ಮ ಜೊತೆ ಮದುವೆಯಾದವರಿಗೆಲ್ಲಾ ಮಕ್ಕಳಿವೆ. ನೀವು ಮಕ್ಕಳು ಈಗಲೇ ಬೇಡಾಂತ ನಿರ್ಧಾರ ಮಾಡಿದ್ರೆ ಮುಂದೆ ತುಂಬಾ ಒದ್ದಾಡ್ತೀರ."

ಪ್ರಮೋದನಿಗೆ ಒಂದು ತರಹವಾಯ್ತು. ಪದ್ಮಿನಿಯನ್ನು ಎದುರಿಸಲು ಮುಜುಗರವಾಯ್ತು.

"ಅಮ್ಮ, ಮಕ್ಕಳಾದ್ರೆ ಸಂತೋಷ. ಒಂದು ಪಕ್ಷ ಆಗಲಿಲ್ಲಾಂತ ಇಟ್ಕೋ, ದುಃಖವೇನಿಲ್ಲ. ವಂಶ ನಿಂತುಹೋಗತ್ತೇಂತ ಅಳಕ್ಕೆ ನಮ್ಮದೇನು ಶ್ರೀರಾಮಚಂದ್ರನ ವಂಶಾನಾ ?"

"ಸಾಕೋ ಏನಾಮ್ರತೂಂತ ಆಡ್ತೀಯ ? ಮಕ್ಕಳು ಬೇಕೂಂತ ಎಲ್ಲರೂ ಹಂಬಲಿಸ್ತಾರೆ. ನಿಮ್ಮದ್ಯಾಕೋ ವಿಚಿತ್ರವಾಗಿದೆ."

ಅವನು ಉತ್ತರಿಸದೆ ಎದ್ದು ಹೋದ....ಗಾಯಿತ್ರಿದೇವಿಯ ಅನುಮಾನ ಮತ್ತೂ ಬಲವಾಯ್ತು. 'ಬಹುಶಃ ಪದ್ಮಿನಿಯಲ್ಲಿ ಮಕ್ಕಳಾಗದಂತಹ ದೋಷ ಇರಬೇಕು. ಅದಕ್ಕೆ ಡಾ|| ಫರ್ನಾಂಡೀಸ್ ಹತ್ತಿರ ಚಿಕಿತ್ಸೆ ಪಡೆಯುತ್ತಿದ್ದಾರೆ. ಅದನ್ನು ಮಗ ಮುಚ್ಚಿಡುತ್ತಿದ್ದಾನೆ' ಎನ್ನಿಸಿತು.

"ಈ ಅವಕಾಶವನ್ನು ಉಪಯೋಗಿಸಿಕೊಂಡು ಮಗನಿಗ್ಯಾಕೆ ಬೇರೆ ಮದುವೆ ಮಾಡಬಾರದು ?" ಎಂಬ ಯೋಚನೆಯೂ ಮೂಡಿತು.

ಮರುದಿನ ಸೊಸೆಯೊಬ್ಬಳೇ ಇದ್ದಾಗ ಅವರು ಅವಳ ರೂಮು ಪ್ರವೇಶಿಸಿದರು.

"ಪದ್ಮಿನಿ."

"ಬನ್ನಿ ಅತ್ತೆ, ಕುಳಿತುಕೊಳ್ಳಿ."

"ಪದ್ಮಿನಿ, ತಂದೆ–ತಾಯಿಗಳು ಮಕ್ಕಳಿಗೆ ಮದುವೆ ಮಾಡುವುದು ಯಾಕೆ ಹೇಳು ?"

"ಮಕ್ಕಳು ಸುಖವಾಗಿರಲೀಂತ."

"ಅಷ್ಟೇ ಅಲ್ಲ, ವಂಶ ಬೆಳೆಸಲೀಂತ."

"ನಿನ್ನ ಗಂಡ ನಿನ್ನನ್ನು ತುಂಬಾ ಪ್ರೀತಿಸ್ತಾನೇಂತ ನನಗೆ ಗೊತ್ತು. ನೀವಿಬ್ರೂ ಡಾಕ್ಟರ್ ಹತ್ತಿರ ಹೋಗಿ ಬಂದಿರುವುದೂ ನನಗೆ ಗೊತ್ತು. ಡಾಕ್ಟರ್ ಏನು ಹೇಳಿದ್ರು ?"

"ನಿಮ್ಮಿಬ್ಬರಲ್ಲೂ ಏನೂ ದೋಷವಿಲ್ಲ, ಕೆಲವರಿಗೆ ನಿಧಾನವಾಗಿ ಮಕ್ಕಳಾಗತ್ತೆ ಅಂದ್ರು."

"ನೀನು ಸುಳ್ಳು ಹೇಳಿದ್ರೆ ನಾನು ನಂಬಬೇಕಲ್ಲಾ ?"

"ಏನು ಹೇಳ್ತಿದ್ದೀರ ಅತ್ತೆ ? ನಾನು ನಿಮ್ಮಹತ್ರ ಸುಳ್ಳು ಹೇಳಿ ಸಾಧಿಸಬೇಕಿರುವುದೇನು ?"

"ಅರಗಿಳಿ ತರಹ ಮಾತಾಡಬೇಡ. ನೀನು ನನ್ನ ಸೊಸೆಯಾಗಿ ಬರುವುದೇ ನನಗಿಷ್ಟವಿರಲಿಲ್ಲ. ಆದ್ರೆ ಪ್ರಮೋದ್ ಹಠಮಾಡಿ ನಿನ್ನ ಮದುವೆಯಾದ. ನಿನಗೊಂದು ಮಗುವಾದ್ರೂ ಆಗಿದ್ದಿದ್ರೆ ನಮ್ಮ ನಡುವೆ ಸೌಹಾರ್ದಯುತ ಸಂಬಂಧ ಇರ್ತಿತ್ತೋ ಏನೋ ? ಹಣದ ಆಸೆಗೆ ಬಲಿಯಾಗಿ ನೀನು ತಪ್ಪು ಮಾಡ್ತಿದ್ದೀಯು. ನಿನಗೆ ಮಕ್ಕಳಾಗಲ್ಲಾಂತ ನನಗೆ ಗೊತ್ತು. ನೀನಾಗಿ ಪ್ರಮೋದ್‌ನಿಂದ ದೂರವಾಗು. ನಿನ್ನ ಜೀವನ ನಿರ್ವಹಣೆಗೆ ಬೇಕಾದ ಹಣ ನಾನು ಕೊಡ್ತೇನೆ. ನಾನವನಿಗೆ ಬೇರೆ ಮದುವೆ ಮಾಡ್ತೇನೆ."

"ಅತ್ತೆ, ನನಗೆ ಹೆಚ್ಚು ಮಾತಾಡುವುದಕ್ಕೆ ಇಷ್ಟವಿಲ್ಲ. ಒಂದ್ಮಾತು ಮಾತ್ರ ಹೇಳಬಲ್ಲೆ. ನಾನು ಬದುಕಿರುವವರೆಗೂ ಅವರಿಂದ ದೂರವಾಗಲ್ಲ. ಇದಕ್ಕಿಂತ ಹೆಚ್ಚಾಗಿ ನಾನು ಏನೂ ಹೇಳಲ್ಲ."

"ನೀನು ನಮ್ಮ ಪಾಲಿನ ರಾಕ್ಷಸಿ. ನಮ್ಮ ವಂಶ ನಾಶ ಮಾಡುವುದಕ್ಕೇ ನೀನು ಬಂದಿದ್ದೀಯು. ನೀನು ಬದುಕಿರುವವರೆಗೂ ಅವನು ಬೇರೆ ಮದುವೆಯಾಗಲ್ಲ. ನೀನು ಸಾಯುವವರೆಗೂ ನಮಗೆ ನೆಮ್ಮದಿಯಿಲ್ಲ."

ಅತ್ತೆ ಎದ್ದು ಹೋದ ಮೇಲೆ ಅವಳು ಗಂಟೆಗಟ್ಟಲೆ ಅತ್ತಳು. ವಿಷಯ ತಿಳಿಯದೆ ತನ್ನನ್ನು ವಿನಾಕಾರಣ ದೂಷಿಸುವುದನ್ನು ಕಂಡು ಅವಳಿಗೆ

ತುಂಬಾ ಬೇಸರವಾಯಿತು. ನಿಜ ಹೇಳಲಾರದೆ, ಅದನ್ನು ಬಚ್ಚಿಟ್ಟು ಕೊಳ್ಳಲಾರದೆ ಅವಳು ಒದ್ದಾಡಿದಳು. ಅತ್ತೆ ತನ್ನಲ್ಲೇ ದೋಷವಿದೆಯೆಂದು ಭಾವಿಸಿದ್ದಾರೆನ್ನುವುದರಲ್ಲಿ ಅವಳಿಗೆ ಯಾವ ಸಂದೇಹವೂ ಉಳಿಯಲಿಲ್ಲ. ತಮ್ಮ ನಡುವೆ ಆದ ಮಾತುಕಥೆಗಳನ್ನು ಅವಳು ಗಂಡನಿಗೆ ಹೇಳಲಿಲ್ಲ.

ಒಂದು ತಿಂಗಳು ಉರುಳಿತು. ಒಂದು ದಿನ ಅನಿರೀಕ್ಷಿತವಾಗಿ ಮಡಕೇರಿಯಿಂದ ಗಿರಿಜಮ್ಮ, ಅವರ ಮಗಳು ಗೀತಾ—ಆಕೆಯ ಗಂಡ ಸುರೇಶ್ ಬಂದಿಳಿದರು. ಗಿರಿಜಮ್ಮನಿಗೆ ದೊಡ್ಡ ಕಾಫಿ ಪ್ಲಾಂಟೇಷನ್ ಇತ್ತು. ಸುರೇಶ್ ಮನೆ ಅಳಿಯನಾಗಿದ್ದ. ಅವರ ಎರಡನೇ ಮಗಳು ಗೋಮತಿಯನ್ನು ಡೆಲ್ಲಿಯ ಇಂಜಿನಿಯರ್‌ಗೆ ಕೊಟ್ಟಿದ್ದರು. ಒಂದಾನೊಂದು ಕಾಲದಲ್ಲಿ ಗಿರಿಜಮ್ಮ–ಗಾಯಿತ್ರಿ ಬೆಂಗಳೂರಿನಲ್ಲಿ ತುಂಬಾ ಸ್ನೇಹಿತರಾಗಿದ್ದರು. ಗಿರಿಜಮ್ಮ ಮಡಕೇರಿಗೆ ಹೋದ ಮೇಲೂ ಅವರ ನಡುವೆ ಪತ್ರವ್ಯವಹಾರವಿತ್ತು. ಗೀತಾಗೆ ಐದು ವರ್ಷದ ಮಗಳು, ಹನ್ನೊಂದು ತಿಂಗಳ ಮಗ ಇದ್ದರು. ಗಂಡುಮಗು ಬಹಳ ಮುದ್ದಾಗಿತ್ತು. ಪದ್ಮಿನಿ ಮಗುವನ್ನು ಒಂದು ನಿಮಿಷವೂ ಕೆಳಗಿಳಿಸಲಿಲ್ಲ.

ಗೀತಾ–ಸುರೇಶ್ ಗಂಡುಮಗುವಾದರೆ ವರ್ಷಯೊಳಗೆ ತಿರುಪತಿಗೆ ಬರುವುದಾಗಿ ಹರಕೆ ಹೊತ್ತಿದ್ದರು. ಗೀತಾಳ ಸ್ವಭಾವ ಇಷ್ಟವಾದ್ದರಿಂದ ಪದ್ಮಿನಿ ಪ್ರಮೋದ್ ಜೊತೆ ಕಾರ್‌ನಲ್ಲಿ ಅವರ ಜೊತೆ ತಿರುಪತಿಗೆ ಹೋಗಿ ಬಂದರು. ಗಿರಿಜಮ್ಮ ಗಾಯಿತ್ರಿದೇವಿ ಜೊತೆ ಬೆಂಗಳೂರಿನಲ್ಲೇ ಉಳಿದರು. ತಿರುಪತಿಗೆ ಹೋಗಿ ಬರುವ ವೇಳೆಗೆ ಜ್ವರ–ಕೆಮ್ಮು ಶುರುವಾಯ್ತು. ಪದ್ಮಿನಿ ಮಗುವಿನ ಪಕ್ಕ ಬಿಟ್ಟು ಕದಲಲಿಲ್ಲ. ಎರಡು ದಿನಗಳಲ್ಲಿ ಜ್ವರ ಕಡಿಮೆಯಾಯ್ತು.

ಒಂದು ದಿನ ಅವಳು ಸ್ನಾನ ಮುಗಿಸಿಕೊಂಡು ಬಂದಾಗ ತಾಯಿ ಮಗಳು ಮಾತನಾಡುತ್ತಿದ್ದುದು ಕೇಳಿಸಿತು. ಗಿರಿಜಮ್ಮ ಹೇಳುತ್ತಿದ್ದರು. "ಗೀತಾ ಇನ್ಮೇಲೆ ಮಗುನ್ನ ಅವಳ ಕೈಯ್ಯಲ್ಲಿ ಕೊಡಬೇಡ. ಬಂಜೇರು ಮಕಳನ್ನು ಎತ್ತಿಕೊಂಡ್ರೆ ಮಕ್ಕಳಿಗೆ ಒಳ್ಳೆಯದಾಗಲ್ಲ."

"ಯಾರಮ್ಮ ನಿನಗೆ ಇದೆಲ್ಲಾ ಹೇಳಿದ್ದು ? ಪದ್ಮಿನಿ 'ಬಂಜೆ' ಅಂತ ಹೇಗೆ ಹೇಳ್ತೀಯ ? ಅವರಿಬ್ರೂ 'ನಾಲ್ಕು ದಿನ' ಹಾಯಾಗಿರೋಣಾಂತ ಅಂದ್ಕೊಂಡಿರಬಹುದು."

"ನಿನಗೇನು ಗೊತ್ತು ನಿಜಾಂಶ ? ಗಾಯಿತ್ರಿ ನಂಗೆಲ್ಲಾ ಹೇಳಿದ್ಲು. ಅವರಿಬ್ರೂ ಡಾಕ್ಟ್ರ ಹತ್ರ ಹೋಗಿ ಬಂದ್ರಂತೆ. ಇವಳಲ್ಲೇ ದೋಷ ಇರೋದ್ರಿಂದ ಮಕ್ಕಳಾಗಲ್ವಂತೆ."

"ಆಂಟಿ ಹೇಳಿದ್ರೂಂತ ನೀನು ನಂಬಿಬಿಡೋದಾ ?"

"ಗಾಯಿತ್ರಿಗೆ ಈ ಮದುವೆನೇ ಇಷ್ಟವಿರಲಿಲ್ವಂತೆ. ನಮ್ಮ ಗೋಮತೀನ್ನ ಈ ಮನೆ ಸೊಸೆ ಮಾಡ್ಕೊಬೇಕಂತಿದ್ರಂತೆ, ಆದ್ರೆ ಪ್ರಮೋದ್ ತುಂಬಾ ಹಠಮಾಡಿ ಪದ್ಮಿನೀನ್ನ ಮದುವೆಯಾದನಂತೆ. ಆಸ್ತಿ, ಅಂತಸ್ಥು ಯಾವುದರಲ್ಲೂ ಅವಳು ಇವರಿಗೆ ಸರಿಸಮಾನಳಲ್ಲ ಕಣೆ."

"ಒಳ್ಳೆಯದಾಯ್ತು ಬಿಡು. ಪದ್ಮಿನಿ ಏನಾಗಿದ್ದಾಳೆ ? ಶ್ರೀಮಂತರು ಶ್ರೀಮಂತರನ್ನೇ ಮದುವೆಯಾಗದೆ, ಬಡವರನ್ನು ಮದುವೆಯಾದ್ರೇ ಒಳ್ಳೆಯದು."

"ನಿನಗೆ ಹೇಳಿದ್ರೆ ಅರ್ಥವಾಗಲ್ಲ. ಗಾಯಿತ್ರಿ ಈ ಮದುವೆಗೆ ಒಪ್ಪಿ ಅವಳನ್ನು ಸೊಸೇಂತ ಒಪ್ಕೊಂಡಿದ್ದಾಳೆ ತಾನೆ ? ತನ್ನಿಂದ ಈ ವಂಶ ಬೆಳೆಯಲ್ಲವಲ್ಲಾ ಅನ್ನುವ ಕೊರಗು ಅವಳಿಗೆ ಬೇಡ್ವಾ ? 'ನೀನೂ ಇಲ್ಲೇ ಇರಮ್ಮ. ವಂಶೋದ್ಧಾರದ ದೃಷ್ಟಿಯಿಂದ ನಾನು ಪ್ರಮೋದ್‌ಗೆ ಇನ್ನೊಂದು ಮದುವೆ ಮಾಡ್ತೀನಿ' ಅಂದ್ರೆ ಪದ್ಮಿನಿ ಒಪ್ತಾನೇ ಇಲ್ಲವಂತೆ. 'ನಾನು ಬದುಕಿರುವವರೆಗೂ ಪ್ರಮೋದ್‌ನಿಂದ ದೂರವಾಗಲ್ಲ. ಅವನಿಗೆ ಬೇರೆ ಹೆಣ್ಣು ತರಕ್ಕೆ ಒಪ್ಪಲ್ಲ" ಅಂತಿದ್ದಾಳಂತೆ.

"ಯಾವ ಹುಡುಗಿ ಸಂತೋಷವಾಗಿ ತಾನೇ ನಿಂತು ಗಂಡನಿಗೆ ಇನ್ನೊಂದು ಮದುವೆ ಮಾಡಿಸ್ತಾಳಪ್ಪ ? ಮಕ್ಕಳಿಲ್ಲದ ದಂಪತಿಗಳೆಲ್ಲಾ ಹೀಗೆ ಮಾಡ್ತಾರಾ ? ಒಂದು ಪಕ್ಷ ಪ್ರಮೋದ್‌ನಲ್ಲೇ ದೋಷವಿದ್ದಿದ್ರೆ ಪದ್ಮಿನಿಗೆ ಇನ್ನೊಂದು ಮದುವೆ ಮಾಡ್ತಿದ್ರಾ ? ಮಕ್ಕಳಾಗದಿದ್ರೆ ಯಾವುದಾದ್ರೂ ಅನಾಥ ಮಗುವಿಗೆ ಬಾಳು ಕೊಡ್ತಾರೆ ಬಿಡು. ಆ ಮಗುವಿನ ಭವಿಷ್ಯ ಬೆಳಕಾಗುತ್ತದೆ."

"ನೀವೆಲ್ಲಾ ಒಂದೇ ತರಹ ಯಾವಾಗ್ಲೂ ನಿಮ್ಮ ಮೂಗಿನ ನೇರಕ್ಕೇ ಮಾತಾಡ್ತೀರ."

"ನೀವು ಹಳೆಯ ಕಾಲದವರೆಲ್ಲಾ ನಿಮ್ಮ ಮೂಗಿನ ನೇರಕ್ಕೆ ಮಾತಾಡಲ್ವಾ ? ಪಾಪ ಪದ್ಮಿನಿ ಹಗಲೂ ರಾತ್ರಿ ಮಗುನ್ನ ನೋಡಿಕೊಳ್ತಿದ್ದಾಳೆ. ಅವಳು ಮುಟ್ಟಿದ್ರಿಂದ ಮಗುಗೆ ಹುಷಾರು ತಪ್ಪಿತೂಂತ ಅವಿದ್ಯಾವಂತರಂತೆ ನೀವು ಮಾತಾಡಿದರೆ ಸಿಟ್ಟು ಬರುವುದಿಲ್ವಾ ? ಮಗುಗೆ ಅಲೆದಾಟ ಆಗಿದ್ರಿಂದ ಜ್ವರ-ಕೆಮ್ಮು ಬಂದಿರಬಹುದು. ಅದಕ್ಕೆ ಪದ್ಮಿ ನೀನ್ನ ದೂರೋದು ಯಾವ ನ್ಯಾಯ ?"

ಪದ್ಮಿನಿ ಉಕ್ಕಿ ಬಂದ ಅಳು ತಡೆದುಕೊಂಡು ತನ್ನ ಕೋಣೆಗೆ ಓಡಿದಳು. ತನ್ನದಲ್ಲದ ತಪ್ಪಿಗೆ ಗುರಿಯಾಗಬೇಕಲ್ಲಾ ? ಎಂದವಳಿಗೆ ತುಂಬಾ ದುಃಖವಾಯಿತು. "ಗೀತಾ ಅದೆಷ್ಟು ನ್ಯಾಯವಾಗಿ ಮಾತಾಡುತ್ತಾಳೆ ? ಅವಳು ತನಗೆ ಆತ್ಮೀಯಳಾಗಿದ್ದರೂ ಅವಳ ಬಳಿ ತಾನು ಏನೂ ಹೇಳುವಂತಿಲ್ಲ. ಈ ಚಿಂತೆ ತನ್ನನ್ನು ಒಳಗೇ ಕುದಿಯುವಂತೆ ಮಾಡಿ ಚಿತೆಯನ್ನೇರುವಂತೆ ಮಾಡುತ್ತದೇನೋ ? ಈಗೇನೋ ದೇವರು ನನಗೆ ಕೊಂಚ ತಾಳ್ಮೆ ಕೊಟ್ಟಿದ್ದಾನೆ. ಮುಂದೆಯೂ ಅದೇ ತಾಳ್ಮೆ ಉಳಿಯುತ್ತದೆಯಾ ?"

ಗೀತಾಳ ಫ್ಯಾಮಿಲಿ ಊರಿಗೆ ಹೊರಟಿತು. ಗೀತಾ ಊರಿಗೆ ಹೊರಡುವ ಮೊದಲು ಪದ್ಮಿನಿಯನ್ನು ಕರೆದು ಹೇಳಿದಳು. "ಪದ್ಮಿನಿ, ನಿಮ್ಮತ್ತೆ ನಿನ್ನ ಗಂಡಂಗೆ ಬೇರೆ ಮದುವೆ ಮಾಡಬೇಕೂಂತ ಯೋಚ್ನೆ ಮಾಡ್ತಿದ್ದಾರಂತೆ ಹುಷಾರಾಗಿರು."

"ಪ್ರಮೋದ್ ಇನ್ನೊಂದು ಮದುವೆಗೆ ಒಪ್ಪಲ್ಲಾಂತ ನನಗೆ ಗೊತ್ತು. ನಾನದಕ್ಕೆ ಧೈರ್ಯವಾಗಿದ್ದೇನೆ."

"ಅಮ್ಮನ ಹಠಕ್ಕೆ, ಕಣ್ಣೀರಿಗೆ ಮಣಿಯದೆ ಇರ್ತಾನಾ ? ನಿನ್ನ ಹುಷಾರಿನಲ್ಲಿ ನೀನಿರು."

"ಆಗಲಿ ಗೀತ. ನನ್ನ ಬಗ್ಗೆ ಇಷ್ಟು ಅಭಿಮಾನ ಇಟ್ಟಿರುವುದಕ್ಕೆ ಥ್ಯಾಂಕ್ಸ್."

ಅವರೆಲ್ಲಾ ಹೊರಟುಹೋದ ನಂತರ ಪದ್ಮಿನಿ ತುಂಬಾ ಪೆಚ್ಚಾದಳು. ಒಂದು ದಿನ ಬೆಳಗ್ಗೆ ಚೆಲುವಿ, ಮಗುವಿನ ಜೊತೆ ತಾಯಿಯನ್ನು ಹುಡುಕಿ ಕೊಂಡು ಗಾಯಿತ್ರಿದೇವಿ ಮನೆಗೆ ಬಂದಳು. ಮೂರು ತಿಂಗಳ ಹೆಣ್ಣು ಮಗು ದುಂಡುದುಂಡಾಗಿ ತುಂಬಾ ಮುದ್ದಾಗಿತ್ತು. ಅದಕ್ಕೆ ಹಾಕಿದ್ದ ಕೆಂಪುಸ್ವೆಟರ್, ಟೋಪಿ ಅದರ ಅಂದ ಹೆಚ್ಚಿಸಿದ್ದವು. ಪದ್ಮಿನಿ ಸಂಭ್ರಮ ದಿಂದ ಮಗುವನ್ನೆತ್ತಿಕೊಂಡು ಅದಕ್ಕೆ 50 ರೂ ಕೊಟ್ಟು, ಬಾಯಿಗೆ ಸಕ್ಕರೆ ಇಟ್ಟು, ತಲೆಗೆ ಕೊಬ್ಬರಿ ಎಣ್ಣೆ ಸವರಿದಳು. ಮಗುವನ್ನು ಕಾಲು ಗಂಟೆ ಆಟವಾಡಿಸಿ ಚೆಲುವಿಯ ಕೈಗೆ ಕೊಟ್ಟಳು.

ಅವಳು ಬೆಡ್‌ಸ್ಪ್ರೆಡ್ಸ್ ಒಗೆಯಲು ಹಾಕಲು ಹೋದಾಗ ಮುನಿಯಮ್ಮ ಮಗಳನ್ನು ಗದರಿಸುತ್ತಿದ್ದುದು ಕಿವಿಗೆ ಬಿತ್ತು. "ಚಿಕ್ಕ ಮ್ನೋರು ಬಂಜೆ. ಅವರ ಕೈಯಾಗೆ ಕೂಸು ಕೊಡಬ್ಯಾಡಾಂತ ಏಳಿರಲಿಲ್ವಾ ? ಯಾಕೆ ಕೊಟ್ಟೆ ?"

"ಅವ್ರು ಬಾಳಾ ಒಳ್ಳ್ಯೋರು ಕಣವ್ವಾ. ಅವರೆತ್ತಿಕೊಂಡ್ರೆ ಏನಾಯ್ತದೆ ?"

"ನಿಂಗೇನೂ ತಿಳೀದು. ಬಂಜೇರು ಕೂಸನ್ನೆತ್ತಿಕೊಂಡ್ರೆ ಕೂಸ್ಗೆ ಉಸಾರು ತಪ್ತದೆ. ನೀ ಅಟ್ಟಗ್ನಡಿ."

ಪದ್ಮಿನಿ ಕಣ್ತುಂಬಾ ನೀರು ತುಂಬಿಕೊಂಡು ತನ್ನ ರೂಮು ಸೇರಿದಳು. ಅವಳು ತಿಂಡಿ ತಿನ್ನಲು ಬಾರದಿದ್ದಾಗ ಪ್ರಮೋದ್ ಅವಳನ್ನು ಹುಡುಕಿಕೊಂಡು ಬಂದ. ಪದ್ಮಿನಿ ಕಿಟಕಿಯಾಚೆ ನೋಡುತ್ತಾ ನಿಂತಿದ್ದಳು. ಯೂನಿಫಾರಂ ಧರಿಸಿ ಆಯಾಳ ಕೈಹಿಡಿದು ಶಾಲೆಗೆ ಹೊರಟಿದ್ದ. ಮಕ್ಕಳ ಕಡೆ ಅವಳ ಗಮನವಿತ್ತು. ಅವನು ಅವಳ ಭುಜ ಹಿಡಿದು ತನ್ನ ಕಡೆಗೆ ತಿರುಗಿಸಿಕೊಂಡ. ಅವಳು ಅವನ ಭುಜಕ್ಕೆ ತಲೆ ಒರಗಿಸಿ ಬಿಕ್ಕಿದಳು.

"ನನ್ನನ್ನು ಕ್ಷಮಿಸು ಪಮ್ಮಿ. ನೀನು ಚೆಲುವಿ ಮಗು ಎತ್ತಿ ಕೊಂಡಾಗಲೇ ನಾನು ಏನಾದ್ರೂ ಆಗುತ್ತದೆ" ಅಂದುಕೊಂಡೆ. ಹಾಗೇ ಆಯ್ತು. ನನ್ನಿಂದ ನೀನು ತುಂಬಾ ಮಾತುಗಳನ್ನು ಕೇಳ್ತಿದ್ದೀಯ. ನಾನಿವತ್ತೇ ಅಮ್ಮನಿಗೆ ನಿಜಾಂಶ ಹೇಳ್ತೀನಿ."

"ಖಂಡಿತಾ ಬೇಡ. ನಿಮ್ಮಮ್ಮಂಗೆ ನಿಜಾಂಶ ತಿಳಿದರೆ ಎದೆ ಒಡೆದು ಕೊಂಡು ಬಿಡ್ತಾರೆ."

"ನಾನೇನು ಮಾಡಲಿ ಪಮ್ಮಿ? ಅಪರಾಧಿ ಮನೋಭಾವದಿಂದ ನಾನು ಕುಗ್ಗಿಹೋಗ್ಬಿದ್ದೇನೆ....ನಿನಗೆ ನನ್ಮೇಲೆ ಸಿಟ್ಟು ಬರಲ್ವಾ? ಅಸಹ್ಯ ಉಂಟಾಗಲ್ವಾ? ಏನಾದ್ರೂ ಮಾತನಾಡು....ನೀನು ತಾಳ್ಮೆಯ ಮಹಾ ಮೂರ್ತಿಯಂತೆ ಇದ್ರೆ ನನಗೆ ಭಯವಾಗತ್ತೆ. ನನಗೇನಾದ್ರೂ ಶಿಕ್ಷೆ ಕೊಡು ಪಮ್ಮಿ."

ಅವಳು ಮಾತಾಡಲಿಲ್ಲ.

"ಯಾಕೆ ಪಮ್ಮಿ ಮಾತಾಡ್ತಿಲ್ಲ?"

ಅವಳು ಕಣ್ಣೊರೆಸಿಕೊಂಡು ಹೇಳಿದಳು. "ದಯವಿಟ್ಟು ನನ್ನನ್ನು ಕ್ಷಮಿಸಿ. ನಿಮ್ಮೆದುರಿಗೆ ಅಳಬಾರದು ಅಂದುಕೊಂಡರೂ ಅಳದೇ ಇರಕ್ಕೆ ಆಗಲ್ಲ."

ನಾಲ್ಕಾರು ದಿನಗಳ ನಂತರ ಪ್ರಮೋದ್ ಹೆಂಡತಿಗೆ ಹೇಳಿದ. "ಪಮ್ಮಿ, ಹೈದರಾಬಾದ್‌ನಲ್ಲಿ ಸ್ಪರ್ಮ್ ಬ್ಯಾಂಕ್ ಇದೆಯಂತೆ."

"ನನ್ನ ಹತ್ರ ಯಾಕದನ್ನು ಹೇಳ್ತಿದ್ದೀರಾ?"

"ನಿನಗೆ ಡಾಕ್ಟರ್ ಹೇಳಿದ್ದು ನೆನಪಿಲ್ವಾ?"

"ಏನು ಹೇಳಿದ್ರು?"

"ನೀನು 'ಆರ್ಟಿಫಿಷಿಯಲ್ ಇನ್‌ಸೆಮಿನೇಷನ್' ನಿಂದ ಮಗುನ್ನ ಪಡೆಯಬಹುದು. ನನಗೆ ಬೇಕಾದ ಸ್ಪರ್ಮ್‌ನ ಆಯ್ಕೆಮಾಡಿದರೆ ಅವರು ಅದನ್ನು ನಿನ್ನ ದೇಹದೊಳಗೆ ಇಂಜೆಕ್ಟ್‌ಮಾಡ್ತಾರೆ. ನಿನಗೆ ತಾಯ್ತನದ ಅನುಭವವಾಗತ್ತೆ. ನಿನ್ನ ರಕ್ತ ಮಾಂಸ ಹಂಚಿಕೊಂಡು ಹುಟ್ಟಿದ ಮಗು ವಿನ ತಾಯಿ ನೀನಾಗಬಹುದು."

"ನೀವು ಅದಕ್ಕೆ ತಂದೆಯಾಗ್ತೀರಾ?"

"ನೀನು ಆ ಮಗುವಿಗೆ ತಾಯಿಯಾದ ಮೇಲೆ ನಾನು ತಂದೆಯಾಗದೆ ಇರ್ತೀನಾ?"

ಪದ್ಮಿನಿ ಮಾತಾಡಲಿಲ್ಲ.

"ನನಗೆ ನೀನು ಮಗುವಿನ ತಾಯಿಯಾಗುವುದನ್ನು ನೋಡುವುದಕ್ಕೆ ತುಂಬಾ ಆಸೆ ಪದ್ಮಿನಿ. ನನಗೇನೋ ಇದರಲ್ಲಿ ಏನೂ ತಪ್ಪಿಲ್ಲ ಅನ್ನಿಸತ್ತೆ. ಹಿಂದಿನ ಕಾಲದಿಂದ ಇದೇ ತಾನೇ ನಡೆದು ಬಂದಿರೋದು ? ನೀನು ಮಹಾ ಭಾರತ ಓದಿಲ್ವಾ ? ಅಲ್ಲಿ ಇಂತಹ ನೂರಾರು ಉದಾರಹಣೆಗಳಿವೆ."

"ನನಗೆ ಯೋಚನೆ ಮಾಡುವುದಕ್ಕೆ ಅವಕಾಶ ಕೊಡಿ" ಎಂದಳು ಪದ್ಮಿನಿ

ಗಂಡ ಕೆಲಸಕ್ಕೆ ಹೋದ ಮೇಲೆ ಪದ್ಮಿನಿ ಅವನು ಹೇಳಿದ ಮಾತುಗಳನ್ನು ಕುರಿತು ಯೋಚಿಸಿದಳು. ಮಹಾಭಾರತ ಪ್ರಸಂಗಗಳು ನೆನಪಾದವು. ಗಂಡನಾದವನು ಅಶಕ್ತನಾದರೆ ಅಥವಾ ಪುತ್ರನಿಲ್ಲದೆ ಸತ್ತುಹೋದರೆ, ಹೆಂಡತಿ ನಿಯೋಗದ ಮೂಲಕ ಮಗುವನ್ನು ಪಡೆಯಬಹುದು ಎಂದು ಎಲ್ಲೋ ಓದಿದ ನೆನಪು. ಬೇರೆ ಗಂಡಸಿನಿಂದ ಮಗುವನ್ನು ಪಡೆಯಲು ಹಿಂದಿನವರು ಧರ್ಮದ ಮುಸುಕನ್ನು ಹಾಕಿದ್ದಾರೇನೋ ಅನ್ನಿಸಿತು. ಮಹಾಭಾರತದ ಕುಂತಿ, ಸತ್ಯವತಿ, ಮದುವೆಗೆ ಮುಂಚೆಯೇ ಮಕ್ಕಳನ್ನು ಪಡೆದಿರಲಿಲ್ಲವೆ? ಸತ್ಯವತಿಯ ಮಕ್ಕಳು ಮಕ್ಕಳಿಲ್ಲದೆ ಸತ್ತಾಗ, ಸೊಸೆಯರು ನಿಯೋಗದ ಮೂಲಕ ಮಕ್ಕಳನ್ನು ಪಡೆಯಲಿಲ್ಲವೆ ? ಪಂಚ ಪಾಂಡವರಲ್ಲಿ ಪಾಂಡುವಿನ ಪುತ್ರರ್ಯಾರು ? ವಂಶೋದ್ಧಾರವೇ ಅಂದಿನ ವಿವಾಹದ ಗುರಿಯಾಗಿತ್ತು. ರಾಜ್ಯಕ್ಕೆ ವಾರಸುದಾರನನ್ನು ದೊರಕಿಸಿಕೊಡುವುದು ಹಿರಿಯರ ಮುಖ್ಯ ಉದ್ದೇಶ್ಯವಾಗಿತ್ತು. ಆದರೆ ಈಗ 'ನನ್ನ ಮಗ' ಯಾವ ರಾಜ್ಯ ಆಳಬೇಕಾಗಿದೆ ? ನಮ್ಮ ವಂಶ ಬೆಳೆಯದಿದ್ದರೆ ಮುಳುಗಿಹೋಗುವುದೇನು ?

'ವೈದ್ಯವಿಜ್ಞಾನ ಮುಂದುವರೆದಿರುವುದರಿಂದ ಪರುಪುರಷನ ಸಂಪರ್ಕ ಇಲ್ಲದೆ ಮಗುವನ್ನು ಪಡೆಯಬಹುದು. ಆ ಮಗುವಿನ ತಂದೆ ಯಾರೆಂದು ಯಾರಿಗೂ ತಿಳಿಯುವುದಿಲ್ಲ. ಆದರೆ ನಾನು ಹಾಗೆ 'ಮಗು'ವನ್ನು ಪಡೆದರೆ ಪ್ರಮೋದ್ ಅದು ತನ್ನ ಮಗುವೆಂದು ಒಪ್ಪಿಕೊಳ್ಳುತ್ತಾನೆಯೆ ? ಈಗ ಹೆಂಡತಿಯ ದುಃಖ ಕಡಿಮೆ ಮಾಡುವ ಉತ್ಸಾಹದಿಂದ ನನ್ನನ್ನು 'ಕೃತಕ ಗರ್ಭಧಾರಣೆ'ಯಿಂದ ಮಗುವನ್ನು ಪಡೆಯಲು ಪ್ರೋತ್ಸಾಹಿಸಬಹುದು. ನಂತರ ಒಂದು ರೀತಿಯ ಕೀಳರಿಮೆ ಬೆಳೆದು, ಸಹಜವಾದ ಪ್ರೀತಿ ತೋರಿಸಲಾಗದಿರಬಹುದು. "ಇದು ನನ್ನ ಮಗುವಲ್ಲ" ಎನ್ನುವ ಭಾವನೆ ನಾನಾ

ಸಮಸ್ಯೆಗಳಿಗೆ ಕಾರಣವಾಗಬಹುದು. ಈಗ 'ಮಕ್ಕಳಿಲ್ಲ' ಅನ್ನುವುದೊಂದೇ ಸಮಸ್ಯೆ. ಆದರೆ ಮಗುವಾದ ಮೇಲೆ ಹೊಸ ಹೊಸ ಹತ್ತಾರು ಸಮಸ್ಯೆಗಳು ತಲೆದೋರಬಹುದು. ಮಗುವಿನ ಕಾರಣದಿಂದ ಪ್ರಮೋದ್ ನನ್ನಿಂದ ದೂರವಾಗಬಹುದು, ಅವನಿಂದ ದೂರವಾಗಿ ನಾನು ಬದುಕಲು ಸಾಧ್ಯವೆ ?' ಪದ್ಮಿನಿ ಯೋಚಿಸಿ ತಲೆಕೆಡಿಸಿಕೊಂಡಳು.

'ಬೇರೆಯವರ ವೀರ್ಯದಿಂದ ಗರ್ಭಧರಿಸಿದ ನನಗಾದರೂ ನೆಮ್ಮದಿ ಇರುತ್ತದೆಯೆ ? ಒಂದು ರೀತಿಯ ಅಪರಾಧೀ ಮನೋಭಾವ ನನ್ನನ್ನು ಕಾಡದಿರುವುದೆ ? ಬೇಡ, ಈ ರೀತಿ ಮಗುವಾಗುವುದು ಖಂಡಿತಾ ಬೇಡ' ಎನ್ನಿಸಿತು.

ವಾರ ಕಳೆದರೂ ಹೆಂಡತಿ ಏನೂ ಉತ್ತರ ಹೇಳದಿದ್ದಾಗ ಪ್ರಮೋದ್ ಕೇಳಿದ. "ನಾನು ಹೇಳಿದ ವಿಚಾರ ಏನು ಯೋಚನೆ ಮಾಡಿದೆ ಪಮ್ಮಿ?"

"ನೀವು ಹೇಳಿದ್ದನ್ನು ನಾನು ಒಪ್ಪಲ್ಲ ಪ್ರಮೋದ್. ಆ ರೀತಿ ಮಗುನ್ನ ಪಡೆದರೂ ನಮಗೆ ನೆಮ್ಮದಿಯಿರುವುದಿಲ್ಲ. ನಾವು ಈಗಿರುವಂತೇ ಇರೋಣ."

"ಪದ್ಮಿನಿ"

"ದಯವಿಟ್ಟು ನನ್ನ ಒತ್ತಾಯ ಮಾಡಬೇಡಿ. ಹೊಸಹೊಸ ಸಮಸ್ಯೆಗಳನ್ನು ಬರಮಾಡಿಕೊಳ್ಳುವುದಕ್ಕೆ ನಾನು ಸಿದ್ಧಳಿಲ್ಲ."

"ನಿನಗೆ ನನ್ನ ಮೇಲೆ ಅನುಮಾನಾನಾ ?"

"ಇದರಲ್ಲಿ ಅನುಮಾನವೆಂತಹದ್ದು ? ಒಟ್ಟಿನಲ್ಲಿ ನನಗಿಷ್ಟವಿಲ್ಲ."

"ನಾನು ಪ್ರಮಾಣಮಾಡಿ ಹೇಳ್ತೀನಿ ಪಮ್ಮಿ. ಆ ಮಗುನ್ನ ನನ್ನ ಮಗು ತರಹಾನೇ ನೋಡಿಕೊಳ್ತೀನೆ ಖಂಡಿತಾ ನಾನು ಆ ಮಗುವಿಗೆ ತಂದೆ ಪ್ರೀತಿ ಕೊಡ್ತೀನಿ. ಆ ಮಗುವಿನ ಕಾರಣದಿಂದ ನಿನ್ನ ಮನಸ್ಸನ್ನು ನಾನು ಯಾವತ್ತೂ ನೋಯಿಸಲ್ಲ." ಪದ್ಮಿನಿ ಅವನ ತಲೆಯನ್ನು ಎದೆಗೊತ್ತಿಕೊಂಡು ಹೇಳಿದಳು.

"ಪ್ರಮೋದ್, ನೀನೊಂದು ಚಿನ್ನ ಆದರೆ ನಾನೇನು ಮಾಡಲಿ ನನಗೇ ಮನಸ್ಸಿನ ಮೇಲೆ ಹಿಡಿತವಿಲ್ಲ. ಈ ರೀತಿ ಮಗುವನ್ನು ಪಡೆದರೆ ಒಂದು ರೀತಿಯ ಅಪರಾಧಿ ಮನೋಭಾವ ನನ್ನನ್ನು ಕಾಡುತ್ತದೆ. ನಾನು

ಹುಚ್ಚಿಯಾಗಿಬಿಡಬಹುದು. ಹೊಸ ಸಮಸ್ಯೆಗಳನ್ನು ಬರಮಾಡಿಕೊಳ್ಳುವುದಕ್ಕಿಂತ ಸುಮ್ಮ ನಿರುವುದು ಒಳ್ಳೆಯದಲ್ವೆ ?"

"ನೀನು ತುಂಬಾ ವಿಚಿತ್ರ ಪದ್ಮಿನಿ. ಮಗುನ್ನ ದತ್ತು ತೆಗೆದುಕೊಳ್ಳುವುದಕ್ಕೂ ಒಪ್ತಿಲ್ಲ. ಕೃತಕ ಗರ್ಭಧಾರಣೆಗೂ ಒಪ್ತಿಲ್ಲ. ಹೀಗಾದರೆ ಹೇಗೆ? ಅಮ್ಮನ್ನ ನಾನು ಒಪ್ಪಿಸ್ತೀನೆ. ಒಂದು ಒಳ್ಳೆಯ ಮಗುನ್ನ ದತ್ತು ತೆಗೆದುಕೊಳ್ಳೋಣ."

"ಮಗುನ್ನ ದತ್ತು ತೆಗೆದುಕೊಳ್ಳುವುದು ಅಷ್ಟು ಸುಲಭವಲ್ಲಾರಿ. ನಾವು ಬಹಳ ವಿಚಾರಗಳ ಬಗ್ಗೆ ಯೋಚಿಸಬೇಕು.. ನಾವು ದತ್ತು ತೆಗೆದುಕೊಂಡಾಕ್ಷಣ ನಮ್ಮ ಜವಾಬ್ದಾರಿ ಮುಗಿಯಲ್ಲ. ನಾವು ದತ್ತು ತೆಗೆದುಕೊಂಡ ಮಗು ಯಾವುದೇ ಕಾರಣಕ್ಕೂ 'ಅನಾಥ' ಅನ್ನಿಸಿಕೊಳ್ಳದಂತೆ ನಾವು ನೋಡಿಕೊಳ್ಳಬೇಕು. ನಿಮ್ಮ ತಾಯಿಗೆ ಬಡವರ ಬಗ್ಗೆ ತುಂಬಾ ತಿರಾಸ್ಕಾರ. ಜಾತಿ-ಕುಲ ತಿಳಿಯದ ಅನಾಥ ಮಗುವನ್ನು ನಾವು ತಂದು ಸಾಕಿದ್ರೆ ಅವರು ಅವರು 'ಮೊಮ್ಮಗು' ಅಂತ ಒಪ್ಪಿಕೊಳ್ತಾರಾ ? ನಾವು ನಮ್ಮದೇ ಮಗುಂತ ಸಾಕಿರ್ತೀವೆ. ಅದು ಬೆಳೆದ ಮೇಲೆ ನಿಮ್ಮ ತಾಯಿಯಿಂದ ನಿಜಾಂಶ ತಿಳಿದರೆ ಆ ಮಗುವಿಗೆ 'ಶಾಕ್' ಆಗಲ್ವಾ ?"

"ನಾನೇನು ಮಾಡಲಿ ಪಮ್ಮಿ? ನಿನ್ನ ಮನಸ್ಸಿಗೆ ನಾನು ಹೇಗೆ ನೆಮ್ಮದಿ ಕೊಡಲಿ ?" ಪ್ರಮೋದ್ ಅವಳ ಮಡಿಲಲ್ಲಿ ಮುಖವಿಟ್ಟು ಬಿಕ್ಕಿದ. ಪದ್ಮಿನಿಯ ಕಣ್ಣಿಂದ ಜಾರಿದ ಕಂಬನಿ ಅವನ ಅಲೆಗೂದಲಲ್ಲಿ ಮರೆಯಯಿತು. ಪದ್ಮಿನಿ ಅವನನ್ನು ಸಂತೈಸುತ್ತಾ ಹೇಳಿದಳು "ದಯವಿಟ್ಟು ನೀವು ಕೊರಗಬೇಡಿ ನಾನೇ ನಿಮಗೆ ಮಗು. ನೀನೇ ನನಗೆ ಮಗು. ಇನ್ನು ಈ ಬಗ್ಗೆ ಚರ್ಚೆ ಬೇಡ."

## ೧೧

ನಾಲ್ಕಾರು ತಿಂಗಳುಗಳು ಉರುಳಿದವು. ಗಾಯಿತ್ರಿದೇವಿ ಮಾತು ಮಾತಿಗೂ ಸೊಸೆಯನ್ನು ಮಕ್ಕಳಿಲ್ಲವೆಂದು ಹಂಗಿಸತೊಡಗಿದ್ದರು. ಪದ್ಮಿನಿ ಸ್ಥಿತಪ್ರಜ್ಞಳಂತಿದ್ದಳು.

ಒಂದು ಭಾನುವಾರ ಬೆಳಗ್ಗೆ ಬೇಗ ಸ್ನಾನಮಾಡಿ ಸಿದ್ಧರಾದ ಗಾಯಿತ್ರಿದೇವಿ ಹೇಳಿದರು. "ಪ್ರಮೋದ್, ಬೇಗ ತಯಾರಾಗು. ಹೊರ ಗಡೆಗೆ ಹೋಗಬೇಕು."

"ಯಾಕಮ್ಮ , ಏನು ವಿಷಯ ?"

"ಎಲ್ಲಿಗಾದರೂ ಹೊರಟು ನಿಂತಿರುವಾಗ ಯಾಕೆ ? ಏನು ? ಅಂತ ಕೇಳಬಾರದು. ಏಳು ಹೊರಡೋಣ."

ಅವರ ಉತ್ಸಾಹ, ಮಾತು–ಕಥೆಯ ರೀತಿ ನೋಡಿ ಅವನಿಗೆ ಅನುಮಾನವಾಯ್ತು.

"ಅಮ್ಮ , ನೀನು ಇಂತಹ ಕಡೇಗೇಂತ ಹೇಳುವವರೆಗೂ ನಾನು ಹೊರಡಲ್ಲ,"

"ನೋಡು, ಇಷ್ಟುದಿನ ನೀನು ಹೇಳಿದಂತೆ ಕೇಳಿದ್ದಾಯ್ತು. ಹಠಹಿಡಿದು ಪದ್ಮನೀನ್ನ ಮದುವೆಯಾದೆ. ಅವಳಿಗೆ ಮಕ್ಕಳಾಗಲ್ಲಾಂತ ನನಗೆ ಗೊತ್ತು. ನಮ್ಮ ವಂಶ ಇಲ್ಲಿಗೇ ನಿಲ್ಲಬಾರದು. ಪದ್ಮನೀನೂ ಇರಲಿ. ನೀನು ಮಕ್ಕಳಿಗಾಗಿ ಇನ್ನೊಂದು ಮದುವೆ ಮಾಡ್ಕೋ."

"ಆಯ್ತಮ್ಮ, ಆ ಹುಡುಗೀಗೂ ಮಕ್ಕಳಾಗದಿದ್ರೆ ಏನ್ಮಾಡೋದು ? ಆಗ ಇನ್ನೊಂದು ಮದುವೆಯಾಗಲಾ ?"

"ತಮಾಷೆ ಸಾಕೋ. ಪದ್ಮನಿಗೆ ಮಕ್ಕಳಾಗಲಿಲ್ಲಾಂದ್ರೆ ಆ ಹುಡುಗಿಗೆ ಯಾಕೆ ಮಕ್ಕಳಾಗಲ್ಲಾ ?"

"ಅವಳಿಗೇ ಅಲ್ಲ ; ನಾನು ಇನ್ನೂ ಇಪ್ಪತ್ತು ಜನರನ್ನು ಮದುವೆ ಯಾದ್ರೂ ಅವರಿಗೆ ಮಕ್ಕಳಾಗಲ್ಲ."

"ಏನೋ ನೀನು ಹೇಳ್ತಿರೋದು ?"

"ಹೌದಮ್ಮ , ದೋಷ ಇರೋದು ಪದ್ಮನಿಯಲ್ಲಲ್ಲ, ನನ್ನಲ್ಲಿ........"

"ಸುಳ್ಳು" ಅವರು ಜೋರಾಗಿ ಕಿರುಚಿದರು.

"ಸತ್ಯ ಯಾವಾಗಲೂ ಕಹಿ ಅಮ್ಮ . ನಾನು ಹೇಳ್ತಿರೋದು ನಿನ್ನಾಣೆ ನಿಜ."

ಹುಚ್ಚಿಯಾಗಿಬಿಡಬಹುದು. ಹೊಸ ಸಮಸ್ಯೆಗಳನ್ನು ಬರಮಾಡಿಕೊಳ್ಳು ವುದಕ್ಕಿಂತ ಸುಮ್ಮ ನಿರುವುದು ಒಳ್ಳೆಯದಲ್ವೆ ?"

"ನೀನು ತುಂಬಾ ವಿಚಿತ್ರ ಪದ್ಮಿನಿ. ಮಗುನ್ನ ದತ್ತು ತೆಗೆದುಕೊಳ್ಳು ವುದಕ್ಕೂ ಒಪ್ತಿಲ್ಲ. ಕೃತಕ ಗರ್ಭಧಾರಣೆಗೂ ಒಪ್ತಿಲ್ಲ. ಹೀಗಾದರೆ ಹೇಗೆ? ಅಮ್ಮನ್ನ ನಾನು ಒಪ್ಪಿಸ್ತೀನಿ. ಒಂದು ಒಳ್ಳೆಯ ಮಗುನ್ನ ದತ್ತು ತೆಗೆದು ಕೊಳ್ಳೋಣ."

"ಮಗುನ್ನ ದತ್ತು ತೆಗೆದುಕೊಳ್ಳುವುದು ಅಷ್ಟು ಸುಲಭವಲ್ಲಾರಿ. ನಾವು ಬಹಳ ವಿಚಾರಗಳ ಬಗ್ಗೆ ಯೋಚಿಸಬೇಕು.. ನಾವು ದತ್ತು ತೆಗೆದು ಕೊಂಡಾಕ್ಷಣ ನಮ್ಮ ಜವಾಬ್ದಾರಿ ಮುಗಿಯಲ್ಲ. ನಾವು ದತ್ತು ತೆಗೆದು ಕೊಂಡ ಮಗು ಯಾವುದೇ ಕಾರಣಕ್ಕೂ 'ಅನಾಥ' ಅನ್ನಿಸಿಕೊಳ್ಳದಂತೆ ನಾವು ನೋಡಿಕೊಳ್ಳಬೇಕು. ನಿಮ್ಮ ತಾಯಿಗೆ ಬಡವರ ಬಗ್ಗೆ ತುಂಬಾ ತಿರಸ್ಕಾರ. ಜಾತಿ-ಕುಲ ತಿಳಿಯದ ಅನಾಥ ಮಗುವನ್ನು ನಾವು ತಂದು ಸಾಕಿದ್ರೆ ಅವರು ಅವರು 'ಮೊಮ್ಮಗು' ಅಂತ ಒಪ್ಪಿಕೊಳ್ತಾರಾ ? ನಾವು ನಮ್ಮದೇ ಮಗುಂತ ಸಾಕಿರ್ತೀವಿ. ಅದು ಬೆಳೆದ ಮೇಲೆ ನಿಮ್ಮ ತಾಯಿ ಯಿಂದ ನಿಜಾಂಶ ತಿಳಿದರೆ ಆ ಮಗುವಿಗೆ 'ಶಾಕ್' ಆಗಲ್ವಾ ?"

"ನಾನೇನು ಮಾಡಲಿ ಪಮ್ಮಿ? ನಿನ್ನ ಮನಸ್ಸಿಗೆ ನಾನು ಹೇಗೆ ನೆಮ್ಮದಿ ಕೊಡಲಿ ?" ಪ್ರಮೋದ್ ಅವಳ ಮಡಿಲಲ್ಲಿ ಮುಖವಿಟ್ಟು ಬಿಕ್ಕಿದ. ಪದ್ಮಿನಿಯ ಕಣ್ಣಿಂದ ಜಾರಿದ ಕಂಬನಿ ಅವನ ಅಲೆಗೂದಲಲ್ಲಿ ಮರೆಯಾಯಿತು. ಪದ್ಮಿನಿ ಅವನನ್ನು ಸಂತೈಸುತ್ತಾ ಹೇಳಿದಳು "ದಯವಿಟ್ಟು ನೀವು ಕೊರಗಬೇಡಿ ನಾನೇ ನಿಮಗೆ ಮಗು. ನೀನೇ ನನಗೆ ಮಗು. ಇನ್ನು ಈ ಬಗ್ಗೆ ಚರ್ಚೆ ಬೇಡ."

## ೧೮

ನಾಲ್ಕಾರು ತಿಂಗಳುಗಳು ಉರುಳಿದವು. ಗಾಯಿತ್ರಿದೇವಿ ಮಾತು ಮಾತಿಗೂ ಸೊಸೆಯನ್ನು ಮಕ್ಕಳಿಲ್ಲವೆಂದು ಹಂಗಿಸತೊಡಗಿದ್ದರು. ಪದ್ಮಿನಿ ಸ್ಥಿತಪ್ರಜ್ಞಳಂತಿದ್ದಳು.

ಒಂದು ಭಾನುವಾರ ಬೆಳಗ್ಗೆ ಬೇಗ ಸ್ನಾನಮಾಡಿ ಸಿದ್ಧರಾದ ಗಾಯಿತ್ರಿದೇವಿ ಹೇಳಿದರು. "ಪ್ರಮೋದ್, ಬೇಗ ತಯಾರಾಗು. ಹೊರ ಗಡೆಗೆ ಹೋಗಬೇಕು."

"ಯಾಕಮ್ಮ, ಏನು ವಿಷಯ ?"

"ಎಲ್ಲಿಗಾದರೂ ಹೊರಟು ನಿಂತಿರುವಾಗ ಯಾಕೆ ? ಏನು ? ಅಂತ ಕೇಳಬಾರದು. ಏಳು ಹೊರಡೋಣ."

ಅವರ ಉತ್ಸಾಹ, ಮಾತು–ಕಥೆಯ ರೀತಿ ನೋಡಿ ಅವನಿಗೆ ಅನುಮಾನವಾಯ್ತು.

"ಅಮ್ಮ, ನೀನು ಇಂತಹ ಕಡೇಗೇಂತ ಹೇಳುವವರೆಗೂ ನಾನು ಹೊರಡಲ್ಲ,"

"ನೋಡು, ಇಷ್ಟುದಿನ ನೀನು ಹೇಳಿದಂತೆ ಕೇಳಿದ್ದಾಯ್ತು. ಹಠಹಿಡಿದು ಪದ್ಮನ್ನ ಮದುವೆಯಾದೆ. ಅವಳಿಗೆ ಮಕ್ಕಳಾಗಲ್ಲಾಂತ ನನಗೆ ಗೊತ್ತು. ನಮ್ಮ ವಂಶ ಇಲ್ಲಿಗೇ ನಿಲ್ಲಬಾರದು. ಪದ್ಮನೇನೂ ಇರಲಿ. ನೀನು ಮಕ್ಕಳಿಗಾಗಿ ಇನ್ನೊಂದು ಮದುವೆ ಮಾಡ್ಕೋ."

"ಆಯ್ತಮ್ಮ, ಆ ಹುಡುಗೀಗೂ ಮಕ್ಕಳಾಗದಿದ್ರೆ ಏನ್ಮಾಡೋದು ? ಆಗ ಇನ್ನೊಂದು ಮದುವೆಯಾಗಲಾ ?"

"ತಮಾಷೆ ಸಾಕೋ. ಪದ್ಮನಿಗೆ ಮಕ್ಕಳಾಗಲಿಲ್ಲಾಂದ್ರೆ ಆ ಹುಡುಗಿಗೆ ಯಾಕೆ ಮಕ್ಕಳಾಗಲ್ಲಾ ?"

"ಅವಳಿಗೇ ಅಲ್ಲ ; ನಾನು ಇನ್ನೂ ಇಪ್ಪತ್ತು ಜನರನ್ನು ಮದುವೆ ಯಾದ್ರೂ ಅವರಿಗೆ ಮಕ್ಕಳಾಗಲ್ಲ."

"ಏನೋ ನೀನು ಹೇಳ್ತಿರೋದು ?"

"ಹೌದಮ್ಮ, ದೋಷ ಇರೋದು ಪದ್ಮನಿಯಲ್ಲಲ್ಲ, ನನ್ನಲ್ಲಿ........"

"ಸುಳ್ಳು" ಅವರು ಜೋರಾಗಿ ಕಿರುಚಿದರು.

"ಸತ್ಯ ಯಾವಾಗಲೂ ಕಹಿ ಅಮ್ಮ. ನಾನು ಹೇಳ್ತಿರೋದು ನಿನ್ನಾಣೆ ನಿಜ."

"ಯಾಕೋ ಹೀಗಾಯ್ತು ? ದೇವರೇ ನಮ್ಮ ಗತಿ ಏನು ?" ಅವರು ತಲೆಯ ಮೇಲೆ ಕೈ ಹೊತ್ತುಕೊಂಡರು.

"ಅಮ್ಮ ಯಾಕೆ ಸುಮ್ಮನಾಗಿಬಿಟ್ಟೆ ? ಪದ್ಮಿನಿಯಲ್ಲೇ ತಪ್ಪಿರೋದೂಂತ ಅವಳನ್ನು ನಾನಾ ರೀತಿ ಹಂಗಿಸ್ತಿದ್ದೆ. ಈಗ ಏನು ಹೇಳ್ತೀಯ ? ಪದ್ಮಿನಿಗೆ ಇನ್ನೊಂದು ಮದುವೆ ಮಾಡಲ್ವಾ ?"

"ಪ್ರಮೋದ್"

"ಪದ್ಮಿನಿ ಬಡವರ ಮನೆ ಹುಡುಗಿಯಾಗಿರಬಹುದು. ಆದರೆ ಅವಳು ದೇವತೆಯಮ್ಮ. 'ನಿನ್ನನ್ನು ಡೈವೋರ್ಸ್ ಮಾಡ್ತೀನಿ. ಬೇರೆ ಮದುವೆ ಯಾಗು' ಅಂತ ಹೇಳಿದ್ರೂ ಒಪ್ಪಲಿಲ್ಲಮ್ಮ."

ಗಾಯಿತ್ರಿದೇವಿಗೆ ನಿಜಾಂಶ ತಿಳಿದು ಸಿಡಿಲು ಬಡಿದಂತಾಯ್ತು. ತಮ್ಮ ವಂಶ ಇಲ್ಲಿಗೇ ಕೊನೆಯಾಗುತ್ತದೆಯೇ ? ಚೆಲುವ ಚೆನ್ನಿಗರಾಯನಂತಿರುವ ತನ್ನ ಮಗನಲ್ಲಿ ದೋಷವಿದೆಯೆ ? 'ನನಗೆ ಏನೂ ಕೊರತೆಯಿಲ್ಲ' ಎಂದು ಬೀಗುತ್ತಿದ್ದ ನನ್ನ ಅಹಂಕಾರಕ್ಕೆ ಎಂತಹ ಪೆಟ್ಟು ! ಇನ್ನು ನಮ್ಮ ಬಾಳೆಲ್ಲಾ ಬರೀ ಕತ್ತಲೆಯೆ ! ಮೊಮ್ಮಗನಿಗಾಗಿ ಹಂಬಲಿಸುತ್ತಿದ್ದ ನನ್ನ ಕನಸು ಕನಸಾಗೇ ಉಳಿಯಬೇಕೆ ? ನಮ್ಮ ವಂಶ ಇಲ್ಲಿಗೇ ಅಳಿಯಬೇಕೆ ? ಈ ಅಪಾರ ಆಸ್ತಿ ಪಾಸ್ತಿಗೆ ಯಾರು ಒಡೆಯರು ?

ಗಾಯಿತ್ರಿದೇವಿಯ ಕಣ್ಣೆದುರು ಪದ್ಮಿನಿಯ ಮುಖ ತೇಲಿಬಂತು. 'ಮೊದಲಿಂದ ನಾನವಳನ್ನು ದ್ವೇಷ ಮಾಡಿದೆ, ಹೆಜ್ಜೆಹೆಜ್ಜೆಗೂ ಅವಳ ಬಡತನ ಎತ್ತಾಡುತ್ತಿದ್ದೆ, ಬಂಜೆಯ ಪಟ್ಟಕಟ್ಟಿ ಹಂಗಿಸುತ್ತಿದ್ದೆ. ಆದರೆ ಆ ಹುಡುಗಿ ಹೃದಯ ಉರಿಯುತ್ತಿದ್ದರೂ, ನನ್ನ ಮಗನಲ್ಲಿರುವ ದೋಷವನ್ನು ತಾಯಿಯಾದ ನನ್ನ ಬಳಿಯೇ ಹೇಳಲಿಲ್ಲವಲ್ಲಾ ? ಅವಳಿಗೆ ಗಂಡನ ಮೇಲೆ ಅದೆಷ್ಟು ಪ್ರೀತಿ ! ಬೇರೆ ಯಾರಾದರೂ ಅವಳ ಸ್ಥಾನದಲ್ಲಿದ್ದಿದ್ದರೆ ಏನಾಗು ತ್ತಿತ್ತೋ ಏನೋ ? ನಮ್ಮ ಮನೆಯ ಮರ್ಯಾದೆ ಉಳಿಸಿದ ದೇವತೆಯನ್ನು ನಾನು ದ್ವೇಷಿಸುತ್ತಿದ್ದೆನಲ್ಲಾ ?' ಎಂದು ಪಶ್ಚಾತ್ತಾಪಪಟ್ಟರು. ಅವರಿಗೆ ತಮ್ಮ ಗೆಳತಿ ಸಂಗೀತ ವಿದುಷಿ ಆಂಡಾಳಮ್ಮನ ನೆನಪಾಯ್ತು. ಅವರ ಮಗನೋ ಪ್ರಸಿದ್ಧ ಸಂಗೀತಗಾರ. 'ವಸಂತ' ಎನ್ನುವ ಹುಡುಗಿಯನ್ನು ಪ್ರೀತಿಸಿ ಕೈಹಿಡಿದಿದ್ದ. ಮದುವೆಯಾಗಿ ನಾಲ್ಕಾರು ವರ್ಷಗಳು ಕಳೆದರೂ

ಮಕ್ಕಳಾಗದಿದ್ದಾಗ ಅವಳು ಅವನನ್ನು ಡೈವೋರ್ಸ್ ಮಾಡಿದ್ದಳು. ಪ್ರೊಫೆಸರ್ ಅನಂತಾಚಾರ್ ಸೊಸೆ 'ಗಂಡ'ನಲ್ಲಿ ದೋಷವಿದೆಯೆಂದು ತಿಳಿದ ಮೇಲೆ ರಾಜಾರೋಷವಾಗಿ ಮತ್ತೊಬ್ಬನ ಜೊತೆ ಓಡಾಡಲಾರಂಭಿಸಿದ್ದಳು. ಪದ್ಮಿನಿ ಹಾಗೇನೂ ಮಾಡಿರಲಿಲ್ಲ. ಚಿನ್ನದಂತಹ ಹುಡುಗಿಯನ್ನು ತಪ್ಪು ತಿಳಿದೆನಲ್ಲಾ ? ಎಂದು ದುಃಖವಾಯಿತು. ಆದರೆ ಕ್ಷಮೆ ಕೇಳಲು ಸ್ವಾಭಿಮಾನ ಅಡ್ಡಿಯಾಯ್ತು.

ಪದ್ಮಿನಿ ಈ ವಿಚಾರ ತಿಳಿದರೂ ತಿಳಿಯದವಳಂತೆ ಸುಮ್ಮನಿದ್ದಳು. ಪ್ರಮೋದ್‌ಗೂ ಒಂದು ರೀತಿಯ ಸಮಾಧಾನವಾಗಿತ್ತು. ಕಾರಣವಿಲ್ಲದೆ ತಾಯಿ ಪದ್ಮಿನಿಯನ್ನು ದೂಷಿಸುವ ವಿಚಾರ ಅವನಿಗೆ ತಿಳಿದಿತ್ತು. ಇನ್ನು ಮೇಲಾದರೂ ತಾಯಿಯ ಧೋರಣೆ, ಮನೋಭಾವ ಬದಲಾಗಬಹುದೇನೋ ಎನ್ನಿಸಿತು.

ಒಂದು ವಾರ ಕಳೆಯಿತು. ಗಾಯಿತ್ರಿದೇವಿ ಸಾಕಷ್ಟು ಯೋಚಿಸಿ ಮಗನಿಗೆ ಹೇಳಿದರು. "ಪ್ರಮೋದ್, ಈ ಆಸ್ತಿ-ಪಾಸ್ತಿ ಬೇರೆಯವರ ಪಾಲಾಗುವುದನ್ನು ನೆನಸಿಕೊಂಡ್ರೆ ನನಗೆ ಸಂಕಟವಾಗತ್ತೆ. ನಾವು ಯಾವುದಾದರೂ ಒಳ್ಳೆಯ ಕುಟುಂಬ ಮಗುನ್ನ ದತ್ತು ತೆಗೆದುಕೊಳ್ಳೋಣ. ನಮ್ಮ ಹಳ್ಳಿಯ ಕಡೆ ಹೆಚ್ಚು ಮಕ್ಕಳಿರುವ ಅನೇಕ ಬಡ ದಂಪತಿಗಳಿದ್ದಾರೆ. ಅವರ ಹತ್ತಿರ ಮಗುನ್ನ ದತ್ತು ತೆಗೆದುಕೊಳ್ಳೋಣ."

"ಪದ್ಮಿನಿ ಒಪ್ಪಲ್ಲ ; ತಂದೆ ತಾಯಿಗಳಿರುವ ಮಕ್ಕಳು ಬೇಡಾಂತಾಳೆ."

"ಹಾಗಾದ್ರೆ ಬೇರೆ ಯಾವುದಾದರೂ ಕಡೆಯಿಂದ ಅನಾಥಾಲಯದಿಂದಲೋ, ಅಬಲಾಶ್ರಮದಿಂದಲೋ ಒಂದು ಮುದ್ದಾಗ ಗಂಡು ಮಗುನ್ನ ದತ್ತು ತೆಗೆದುಕೊಳ್ಳೋಣ."

"ಪದ್ಮಿನಿ ಒಪ್ಪಲ್ಲ."

"ಆ ಮಗುವಿನ ತಾಯಿ-ತಂದೆ ಯಾರೂಂತ ಯಾರಿಗೂ ತಿಳಿದಿರಲ್ಲ. ಅಂತಹಾದ್ರಲ್ಲಿ ಯಾಕೆ ಒಪ್ಪಲ್ಲ ?"

"ಅವಳು ಒಪ್ಪದೇ ಇರುವುದಕ್ಕೆ ನೀನೇ ಕಾರಣ."

"ನಾನು ಕಾರಣಾನಾ ?"

"ಹೌದು ಪದ್ಮಿನಿ, ಬಡವರ ಮನೆ ಹುಡುಗೀಂತ ನೀನು ಈ ಮದುವೆಗೆ ಒಪ್ಪಿಗೆ ನೀಡಲು ಎಷ್ಟು ಸತಾಯಿಸಿದೆ ನೆನಪಿದೆಯಾ ? ಈ ಮದುವೆ ನಿಲ್ಲಿಸ ಬೇಕೂಂತ ಅವಳ ಮೇಲೆ ಎಂತಹ ಅಪವಾದ ಹೊರೆಸಿದ್ದೆ, ನೆನಪಿದೆಯಾ ? ಅವಳು ಸೊಸೆಯಾಗಿ ಬಂದಮೇಲೂ ನೀನು ಅವಳನ್ನು ವಿಶ್ವಾಸದಿಂದ ಕಾಣಲಿಲ್ಲ. ನಿನಗೆ ಬಡವರೂಂದ್ರೆ ಎಷ್ಟು ಅಸಹ್ಯ, ಎಷ್ಟು ತಿರಸ್ಕಾರಾಂತ ಅವಳಿಗೆ ಗೊತ್ತಿದೆ. ಹಾಗೆಯೇ ನಿನಗೆ ನಿನ್ನ ಜಾತಿ, ಅಂತಸ್ತು, ಮನೆತನದ ಬಗ್ಗೆ ಎಷ್ಟು ಹಮ್ಮಿದೆ ಅನ್ನುವುದೂ ಅವಳಿಗೆ ತಿಳಿದಿದೆ. ಅನಾಥಾಲಯ ದಿಂದ ತಂದ ಮಗುವನ್ನು ನೀನು 'ಮೊಮ್ಮಗು' ಅಂತ ಒಪ್ಪಿಕೊಳ್ತೀಯಾ ? ಜಾತಿ, ಕುಲ ತಿಳಿಯದ ಆ ಮಗುವಿಗೆ ನೀನು 'ಅಜ್ಜಿಯಾಗ್ತೀಯಾ ? ನವು ಗಂತೂ ನಂಬಿಕೆಯಿಲ್ಲ."

ಮಗನ ಮಾತು ಕೇಳಿ ಗಾಯಿತ್ರಿದೇವಿಯ ಕಪಾಳಕ್ಕೆ ಹೊಡೆ ದಂತಾಯ್ತು. ತಮ್ಮ ಹಿಂದಿನ ಕೃತ್ಯಗಳೆಲ್ಲಾ ನೆನಪಾಗಿ ತಲೆತಗ್ಗಿಸು ವಂತಾಯ್ತು. ಮಗನ ಜೊತೆ ಮಾತನಾಡುವುದರ ಬದಲು ಸೊಸೆಯ ಜೊತೆ ಮಾತನಾಡಿದ್ದರೆ ಚೆನ್ನಾಗಿರುತ್ತಿತ್ತು ಎನ್ನಿಸಿತು.

ಒಂದು ದಿನ ಬೆಳಗ್ಗೆ ಅವರು ಪದ್ಮಿನಿಯ ರೂಮು ಪ್ರವೇಶಿಸಿದರು. ಹೊರಗೆ ಹೋಗಲು ಸಿದ್ಧಳಾಗುತ್ತಿದ್ದ ಪದ್ಮಿನಿ ಅತ್ತೆಯನ್ನು ನೋಡಿ ಆಶ್ಚರ್ಯದಿಂದ ಕಣ್ಣರಳಿಸಿದಳು.

"ಪದ್ಮಿನಿ, ನಾನು ನಿನ್ನ ಜೊತೆ ಕೊಂಚ ಮಾತಾಡಬೇಕು."

"ಕೂತ್ಕೊಳ್ಳಿ ಅತ್ತೆ."

ಗಾಯಿತ್ರಿದೇವಿ ಕುರ್ಚಿಯಲ್ಲಿ ಕುಳಿತು ಹೇಳಿದರು : "ಪದ್ಮಿನಿ, ನಿನ್ನ ಬಾಳು ಹಾಳಾಗಲು ನನ್ನ ಮಗ ಕಾರಣವಾಗಿಬಿಟ್ಟ. ತಾಯ್ತನ ಪ್ರತಿಯೊಬ್ಬ ವಿವಾಹಿತ ಹೆಣ್ಣಿನ ಸುಂದರ ಕನಸು. ಆದರೆ ನಿನ್ನ ಅದೃಷ್ಟ ಚೆನ್ನಾಗಿಲ್ಲ– ನಿನ್ನ ಕನಸು ನನಸಾಗುವಂತೆಯೇ ಇಲ್ಲ."

"ನನ್ನ ಏನ್ಮಾಡೂಂತೀರಾ ? ನಿಮ್ಮ ಮಗನ್ನ ಡೈವೋರ್ಸ್ ಮಾಡಿ ಬೇರೆಯವರನ್ನು ಮದುವೆಯಾಗ್ಲಾ ?"

"ಪದ್ಮಿನಿ !"

"ನನ್ನಲ್ಲೇ ದೋಷವಿದ್ದಿದ್ರೆ ನೀವು ಅದೇ ತಾನೆ ಮಾಡ್ತಾ ಇದ್ದಿದ್ದು ? ನನ್ನನ್ನು ಓಡಿಸಿ ಬೇರೆ ಕಡೆಯಿಂದ ಹೆಣ್ಣು ತರ್ತಿದ್ರಿ."

"ಆ ವಿಚಾರ ಈಗ ಯಾಕಮ್ಮ ? ಈ ಪ್ರಪಂಚದಲ್ಲಿ ಮಕ್ಕಳಿಲ್ಲದ ದಂಪತಿಗಳು ಬೇಕಾದಷ್ಟು ಜನ ಇದ್ದಾರೆ. ಅವರೆಲ್ಲಾ ನಿನ್ನ ಹಾಗೇ ಹಠ ಮಾಡಿದ್ದರೆ ಸುಖವಾಗಿರಕ್ಕೆ ಆಗ್ತಿತ್ತಾ ?"

"ನಾನೇನು ಹಠ ಮಾಡಿದ್ದೇನೆ ?"

"ಮಗೂನ್ನ ದತ್ತು ತೆಗೆದುಕೊಳ್ಳುವುದು ಬೇಡ ಅಂತಿದ್ದೀಯಂತೆ ?"

"ಯಾಕೆ ಬೇಡ ಅಂತಿದ್ದೀನಿ ಅನ್ನುವ ಕಾರಣಾನೂ ತಿಳಿದಿರಬೇಕಲ್ವಾ ?"

"ನೆಂಟರು ಪರಿಚಿತರ ಹತ್ತಿರ ಬೇಡ. ಅನಾಥಾಲಯದಿಂದ ತೆಗೆದು ಕೊಳ್ಳೋಣ, ನಾನು ಒಪ್ತೀನಿ."

"ನಾನು ಒಪ್ಪಲ್ಲ. ನಿಮ್ಮ ಬುದ್ಧಿ ಒಂದೇ ತರಹ ಇರುತ್ತೆ೦ತ ಹೇಳ ಕ್ಕಾಗಲ್ಲ. ಇವತ್ತು ಖುಷಿಯಿಂದ ತರಬಹುದು. ನಾಳೆ ನಿಮ್ಮ ಸಮಾಜದಲ್ಲಿ ಏನಾದರೂ ಅಂದ್ರೆ ಅದನ್ನು ಹೊರಗೆ ಹಾಕುವುದಕ್ಕೂ ಹಿಂಜರಿಯುವವರಲ್ಲ ನೀವು...."

"ಇಲ್ಲಮ್ಮ, ನಾನು ಖಂಡಿತಾ ಹಾಗೆ ಮಾಡಲ್ಲ. ನನ್ನ ಮಗನ ಮೇಲೆ ಆಣೆ ಇಟ್ಟು ಹೇಳ್ತೀನಿ."

"ನಾನು ನಿಮ್ಮನ್ನು ಈಗ ನೋಡ್ತಿಲ್ಲ. ನಿಮ್ಮ ಮಡಿಲಲ್ಲೇ ಬೆಳೆದ ಮಗು ನಾನು. ನಿಮ್ಮ ವಾತ್ಸಲ್ಯದ ಕೈತುತ್ತುಗಳನ್ನು ತಿನ್ನುತ್ತಾ ನಿಮ್ಮ ಪ್ರೀತಿಯ ನೆರಳಲ್ಲಿ ಅರಳಿದ ಹೂವು ನಾನು. ನಿಮಗೆ ನಾನೆಂದರೆ ಅದೆಷ್ಟು ಪ್ರೀತಿ ಇತ್ತು ! ಅದೆಷ್ಟು ಅಭಿಮಾನವಿತ್ತು ಆದ್ರೆ ನಾನು ನಿಮ್ಮ ಸೊಸೆ ಯಾಗ್ತಿನೀಂತ ತಿಳಿದ ಕೂಡಲೇ ಅದು ಮಾಯವಾಗಿ ಆ ಜಾಗವನ್ನು ದ್ವೇಷ ಆಕ್ರಮಿಸಿತು. ನನಗನ್ನಿಸತ್ತೆ. ತಾಯಿಯಲ್ಲದೆ ಮತ್ತೆ ಯಾರೂ ಮಕ್ಕಳನ್ನು ನಿರ್ವಂಚನೆಯಿಂದ ಪ್ರೀತಿಸಲಾರರು. ಎಲ್ಲೋ ಹುಟ್ಟಿದ ಮಗುವಿಗೆ ನಾನು ತಾಯಿಯಾಗಲು ಸಾಧ್ಯವೇ ? ನಮ್ಮ ನಡುವೆ ಪ್ರೀತಿ–ವಿಶ್ವಾಸ ಬೆಳೆಯಲು ಸಾಧ್ಯವೆ ? ತಾಯಿ ತನ್ನ ಮಕ್ಕಳಿಗಾಗಿ ಎಷ್ಟೆಲ್ಲಾ ತ್ಯಾಗ ಮಾಡ್ತಾಳೆ. ಅಂತಹ ತ್ಯಾಗ ನಾನು ಮಾಡಲು ಸಾಧ್ಯವೆ ? ನನ್ನ ಹಾಗೂ ಆ ಅಪರಿಚಿತ ಮಗುವಿನ ನಡುವೆ ಅನುಬಂಧ ಬೆಳೆಯಲು ಸಾಧ್ಯವೆ ?....ಇಲ್ಲ....ನಾನು ಒಪ್ಪಲ್ಲ....ನಾವೀಗ ಇರುವ ರೀತಿಯೇ ಸಾಕು...."

"ಪದ್ಮಿನಿ, ನಾವು ಹಾಲ್‌ನಲ್ಲಿ ಹಾಕಿರುವ ಗಡಿಯಾರ ಎಷ್ಟು ವರ್ಷದ್ದು ಗೊತ್ತಾ ? ಸುಮಾರು 50 ವರ್ಷಗಳಿದ್ದಿರಬಹುದು....ನಿಮ್ಮ ಮಾವನಿಗೆ 'ಯಾವುದೋ ಗಣಪತಿ ಮಂಗಳಾರತಿ' ಯ ಲಾಟರೀಲಿ ಬಂದಿದ್ದು ಅದು ಹಳೆಯದಾದ್ರೂ ನಿಮ್ಮ ಮಾವನಿಗೆ ಅದರ ಮೇಲೆ ಅತಿ ಮೋಹವಿತ್ತು. ನನ್ನ ರೂಮ್‌ನಲ್ಲಿರುವ ಕನ್ನಡಿ 41 ವರ್ಷದ್ದು. ನಾನು ಸಂಸಾರ ಹೂಡಿದ ಹೊಸದರಲ್ಲಿ ಕೊಂಡಿದ್ದು, ಅದಾದ ನಂತರ ಬೇರೆ–ಬೇರೆ ರೀತಿಯ ಬೇಕಾದಷ್ಟು ಕನ್ನಡಿಗಳನ್ನು ಕೊಂಡಿದ್ದರೂ ನನಗೆ ಆ ಕನ್ನಡಿಯ ಮೇಲೆ ಅತಿ ಪ್ರೀತಿ ! ನಾನು ಇದನ್ನೆಲ್ಲಾ ಯಾಕೆ ಹೇಳ್ತಿದ್ದೀನಿ ಗೊತ್ತಾ ?"

ಪದ್ಮಿನಿ ಮಾತಾಡಲಿಲ್ಲ.

"ಮನೆಯಲ್ಲಿರುವ ವಸ್ತುಗಳ ಜೊತೆ ನಾವು ಭಾವನಾತ್ಮಕ ಸಂಬಂಧ ಬೆಳೆಸಿಕೊಳ್ಳಲ್ವಾ ? ನನ್ನ ಟೂತ್‌ಬ್ರಷ್, ನನ್ನ ಬೀರು ನನ್ನ ಪೆಟ್ಟಿಗೆ, ನನ್ನ ಪೆನ್ ಅಂತ ಸಣ್ಣ ಸಣ್ಣ ವಸ್ತುಗಳ ಜೊತೆಯೂ ನಾವು ಸಂಬಂಧ ಬೆಳೆಸಿ ಕೊಳ್ತೀವೆ. ಅವುಗಳು ಹಾಳಾಗದಂತೆ ಜೋಪಾನದಿಂದ ನೋಡಿಕೊಳ್ತೀವೆ. ಅಂತಹುದ್ರಲ್ಲಿ ಮನೆಯಲ್ಲಿರುವ ಜೀವಂತ ಮಗುವಿನ ಜೊತೆ ಸಂಬಂಧ ಬೆಳೆಸಿ ಕೊಳ್ಳುವುದು ಕಷ್ಟಾನಾ ?"

"ನೋಡಿ, ಏನೇನೋ ಹೇಳಿ ನೀವು ನನ್ನ ತಲೆ ಕೆಡಿಸಬೇಡಿ. ನಿಮಗೆ ಆಸ್ತಿ ಹಾಳಾಗುತ್ತದೆ, ಅನ್ನುವ ಭಯವಿದ್ರೆ ನೀವೇ ಮಗೂನ್ನ ತಂದು ಸಾಕಿ ಕೊಳ್ಳಿ. ನನ್ನನ್ನು ಏನೂ ಕೇಳಬೇಡಿ."

"ಸಾಕ್ಕೊಳ್ತೀನೆ ಕಣೆ. ನೀನು ಇಷ್ಟು ಹಠ ಹಿಡಿದರೆ ನಾನೂ ಹಠ ಹಿಡಿಯಬೇಕಾಗುತ್ತೆ. ಇಷ್ಟೊಂದು ಆಸ್ತಿ ಪಾಸ್ತಿ ಬೇರೆಯವರ ಪಾಲಾಗು ವುದನ್ನು ನಾನು ಹೇಗೆ ನೋಡಲಿ ?"

ಪದ್ಮಿನಿ ಅವರು ಎದ್ದು ಹೋಗುವುದನ್ನು ನೋಡುತ್ತಾ ನಿಟ್ಟುಸಿರು ಬಿಟ್ಟಳು. ಅವಳಿಗೆ ಮಕ್ಕಳ ಮೇಲೆ ಅತಿ ಪ್ರೀತಿ. ಅವು ತಮ್ಮ ಮನೆಯ ಮಕ್ಕಳೇ ಆಗಬೇಕೆಂಬ ಹಂಬಲ ಅವಳಿಗೆಂದೂ ಇರಲಿಲ್ಲ. ಆದರೆ ಅನಾಥಾ ಲಯದಿಂದ ಮಗುವನ್ನು ತರಲು ಅವಳಿಗೆ ಅಂಜಿಕೆಯಿತ್ತು. ಅತ್ತೆ ತಮ್ಮ ಆಸ್ತಿ–ಪಾಸ್ತಿಯ ರಕ್ಷಣೆಗಾಗಿ ಅನಾಥಾಲಯದಿಂದ ಮಗುವನ್ನು ತರಲು

ಅವಳಿಗೆ ಅಂಜಿಕೆಯಿತ್ತು. ಅತ್ತೆ ತಮ್ಮ ಆಸ್ತಿ–ಪಾಸ್ತಿ ರಕ್ಷಣೆಗಾಗಿ ಅನಾಥಾಲಯದ ಮಗುವನ್ನು ತರಲು ಒಪ್ಪುತ್ತಿದ್ದಾರೆಂಬೇ ಹೊರತು ಪ್ರೀತಿಯಿಂದಲ್ಲ ಎಂಬುದರ ಅರಿವು ಅವಳಿಗಿತ್ತು. ಅವರಿಗೆ ಅನಾಥಾಲಯದ ಮಗುವಿಗಿಂತ, ಕುಲಗೋತ್ರ ತಿಳಿದಿರುವ ಬಂಧು ಬಳಗದ ಮಗುವನ್ನು ದತ್ತು ತೆಗೆದುಕೊಳ್ಳಲು ಇಷ್ಟವೆಂದು ಅವಳೆಂದೊ, ಅರಿತಿದ್ದಳು. ಮಕ್ಕಳು ದೊಡ್ಡವರಾದ ಮೇಲೆ ಸಮಸ್ಯೆ ಉಂಟಾಗಬಹುದು ಅನ್ನಿಸಿತ್ತು. ತಂದೆ–ತಾಯಿ ಇರುವ ಮಗುವನ್ನು ದತ್ತು ತೆಗೆದುಕೊಂಡರೇ ಅವನು ಬೆಳೆದ ಮೇಲೆ ತಂದೆ–ತಾಯಿಗಳೇ ನೂರೆಂಟು ಹೇಳಿ ಅವನ ಮನಸ್ಸು ಕೆಡಿಸಬಹುದು. 'ಯಾವಾಗಲೂ ಹಿಟ್ಟು ಸಕ್ಕರೆ ಒಂದೇ, ಬಟ್ಟಲು ಬೇರೆ' ಎನ್ನುವಂತೆ ಸಾಕಿದವರು ಮೂಲೆಗುಂಪಾಗುತ್ತಾರೆ. ಅಂತಹ ಪಾಡು ನನಗೆ ಬೇಡ ಎನ್ನಿಸಿತು.

ಅನಾಥಾಲಯದಿಂದ ಮಗುವನ್ನು ದತ್ತು ತೆಗೆದುಕೊಳ್ಳಲು ಅವಳಿಗೆ ತುಂಬಾ ಇಷ್ಟವಿತ್ತು. ಅನಾಥಾಲಯಗಳಲ್ಲಿ ಮಗುವನ್ನು ಸುಲಭವಾಗಿ ದತ್ತು ಕೊಡುವುದಿಲ್ಲವೆಂದು ಅವಳಿಗೆ ಗೊತ್ತಿತ್ತು "ದತ್ತು ತೆಗೆದುಕೊಳ್ಳುವವರ ಬಗ್ಗೆ ಕೂಲಂಕಷವಾಗಿ ವಿಚಾರಿಸಿ ಕೊಡುತ್ತಾರೆ. ಆಮೇಲೆ ಆಗಾಗ್ಗೆ ಬಂದು ಯಾವ ರೀತಿ ನೋಡಿಕೊಳ್ಳುತ್ತಿದ್ದಾರೆಂದು ಗಮನಿಸುತ್ತಾರೆ' ಎಂದೆಲ್ಲಾ ಅವಳು ಕೇಳಿದ್ದಳು. ಆ ರೀತಿ ಮಗುವನ್ನು ದತ್ತು ತೆಗೆದುಕೊಂಡ ಮೇಲೆ ಮಗುವನ್ನು ಚೆನ್ನಾಗಿ ನೋಡಿಕೊಳ್ಳಬೇಕು. ನಾವು ನೋಡಿಕೊಳ್ಳಬಹುದು. ಆದರೆ ಅತ್ತೆಯ ಸ್ವಭಾವ ಯಾವಾಗಲೂ ಒಂದೇ ತರಹ ಇರುವುದೆಂದು ಏನು ನಂಬಿಕೆ ? ಯಾರಾದರೂ 'ಅನಾಥ ಮಗು ಯಾಕೆ ತಂದಿರಿ ? ಮಗು ತರುವಾಗ ಕುಲಗೋತ್ರ ನೋಡಬಾರದಿತ್ತೆ ?' ಎಂದು ಕೇಳಿದರೆ ಮುಗಿಯಿತು ಅದನ್ನು ದೂರಮಾಡಿ ನೆಂಟರಿಷ್ಟರ ಮಗು ತರುವುದಕ್ಕೂ ಹಿಂಜರಿಯುವವರಲ್ಲ. ಆಗ ಆ ಮಗುವಿನ ಗತಿಯೇನು ? ಈಗಿನ ಕಾಲದಲ್ಲಿ ಯಾರು ಯಾವಾಗ ಸಾಯ್ತಾರೇಂತ ಹೇಳುವಂತೆಯೇ ಇಲ್ಲ. ನಾಳೆ ನಾನೇ ಬೇಗ ಕಣ್ಣುಮುಚ್ಚಿದರೆ ಆ ಮಗುವಿನ ಗತಿಯೇನು ?— ಹೀಗೆ ನಾನಾ ರೀತಿಯ ಯೋಚನೆಗಳು ಅವಳನ್ನು ಕಾಡುತ್ತಿದ್ದವು.

ಗಾಯಿತ್ರಿದೇವಿ ಮಗನಿಗೆ ಹೇಳಿದರು. "ನಾನೊಂದು ಗಂಡುಮಗೂನ್ನ ದತ್ತು ತೆಗೆದುಕೊಳ್ಳುವುದೊಂತ ನಿಶ್ಚಯಿಸಿದ್ದೇನೆ. ಜಯನಗರದ ಪ್ರಖ್ಯಾತ ಸಂಸ್ಥೆ 'ಕಿರಣ'ದ ವ್ಯವಸ್ಥಾಪಕರಿಗೆ ಹೇಳಿದ್ದೇನೆ. ಬೇರೆಯವರಿಗೆ ಮಗೂನ್ನ ದತ್ತು ಕೊಡುವುದಕ್ಕೆ ಒಂದು ವರ್ಷ ತೊಗೋತಾರಂತೆ. ಆದರೆ ನನ್ನ ಪರಿಚಯ ಅವರಿಗೆ ಚೆನ್ನಾಗಿರುವುದರಿಂದ ಇನ್ನು 3–4 ತಿಂಗಳಲ್ಲೇ ಕೊಡ್ತಾರಂತೆ. ನೀನು ಪದ್ಮಿನೀನ್ನ ಒಪ್ಪಿಸು."

"ಸಾರಿ ಅಮ್ಮ....ನಿನಗಿಷ್ಟ ಬಂದ್ರೆ ನೀನು ಮಗೂನ್ನ ತೊಗೊಂಡು ಬಾ, ಪದ್ಮಿನಿ ಬೇಡ ಅಂದಿದ್ದನ್ನು ನಾನು ಮಾಡಲಾರೆ. ಅವಳನ್ನು ಯಾವ ಕಾರಣಕ್ಕೂ ಒತ್ತಾಯಿಸಲಾರೆ."

"ಸರಿಯಪ್ಪ, ನಿನ್ನಿಷ್ಟ" ಎಂದರು ಗಾಯಿತ್ರಿದೇವಿ ಮುಖ ಊದಿಸಿಕೊಂಡು.

ನಾಲ್ಕು ತಿಂಗಳು ಕಳೆದವು....ಗಾಯಿತ್ರಿದೇವಿ ಆಗಾಗ್ಗೆ 'ಕಿರಣ'ಕ್ಕೆ ಹೋಗಿಬರುತ್ತಿದ್ದರು. ಒಂದು ಶನಿವಾರ ಅವರು ಮಗನಿಗೆ ಹೇಳಿದರು. "ನಾಳೆ ಬೆಳಗ್ಗೆ ಹನ್ನೊಂದು ಗಂಟೆಗೆ 'ಕಿರಣ'ದವರು ಎಂಟು ತಿಂಗಳ ಗಂಡು ಮಗೂನ್ನ ದತ್ತು ಕೊಡ್ತಿದ್ದಾರೆ. ನೀವಿಬ್ರೂ ನನ್ನ ಜೊತೆ ಬನ್ನಿ."

ಪದ್ಮಿನಿ ಒಪ್ಪಲಿಲ್ಲ. ಆದರೆ ಗಾಯಿತ್ರಿದೇವಿ ತಮ್ಮ ಪಟ್ಟು ಬಿಡಲಿಲ್ಲ. "ನಾನು ನನ್ನ ಹೆಸರಿನಲ್ಲೇ ಮಗೂನ್ನ 'ದತ್ತು' ತೆಗೆದುಕೊಳ್ತಿದ್ದೇನೆ. ನೀವಿಬ್ರೂ ನನ್ನ ಜೊತೆ ಬನ್ನಿ ಸಾಕು" ಎಂದು ಹಠ ಹಿಡಿದರು. ಕೊನೆಗೆ ಪದ್ಮಿನಿ ಗಂಡನ ಒತ್ತಾಯಕ್ಕೆ ಹೊರಡಬೇಕಾಯ್ತು.

ಕಿರಣದಲ್ಲಿ ಗಾಯಿತ್ರಿದೇವಿ ಅಪ್ಲಿಕೇಷನ್ ಫಾರಂ ತುಂಬಿ ಮಗ–ಸೊಸೆಯರ ಸಹಿ ಮಾಡಿಸಿ ಕೊಟ್ಟರು. ಅಲ್ಲಿ ಅತ್ತೆಯನ್ನು 'ಪ್ರತಿಭಟಿಸಲಾರದೆ' ಪದ್ಮಿನಿ ಒದ್ದಾಡಿದಳು. ಒಂದು ಪಕ್ಷ ಮಗ–ಸೊಸೆ ಅಕಾಲ ಮರಣಕ್ಕೆ ತುತ್ತಾದರೆ ತಾವು ಮಗುವನ್ನು ನೋಡಿಕೊಳ್ಳುವುದಾಗಿ ಮುಚ್ಚಳಿಕೆ ಬರೆದು ಕೊಟ್ಟರು.

"ಮಗುವಿಗೆ 'ಪ್ರಜ್ವಲ್' ಅಂತ ನಾವೇ ಹೆಸರಿಟ್ಟಿದ್ದೇವೆ" ಎಂದರು ವ್ಯವಸ್ಥಾಪಕರು. ಅಲ್ಲಿಯ ದಾದಿಯರು ಮಗುವನ್ನು ನೋಡಿಕೊಳ್ಳುವುದರ ಬಗ್ಗೆ, ಅದರ ಆಹಾರದ ಬಗ್ಗೆ ತಿಳುವಳಿಕೆ ನೀಡಿದರು.

"ನೀವು ಮಗುವನ್ನು ಚೆನ್ನಾಗಿ ನೋಡಿಕೊಳ್ತೀರ ಎನ್ನುವ ನಂಬಿಕೆ ನಮಗೆ ಬಂದ್ರೆ ಇನ್ನು ಮೂರು ತಿಂಗಳ ನಂತರ ನಾವು 'ಕೋರ್ಟ್' ಮೂಲಕ ನಿಮಗೆ ಮಗುವನ್ನು ವಹಿಸುತ್ತೇವೆ. ನಿಮ್ಮ ಹತ್ತಿರ ಮಗು ಚೆನ್ನಾಗಿ ಬೆಳೆಯುತ್ತಿಲ್ಲ ಅನ್ನಿಸಿದರೆ ನಾವು ಮಗೂನ್ನ ವಾಪಸ್ಸು ತೆಗೆದು ಕೊಳ್ತೇವೆ."

ಮಗು ತುಂಬಾ ಮುದ್ದಾಗಿತು. ಮೈ ಕೈ ತುಂಬಿಕೊಂಡು ದುಂಡು ದುಂಡಾಗಿತ್ತು. ಅದಕ್ಕೆ ಹಾಕಿದ್ದ ಗುಲಾಬಿ ಬಣ್ಣದ ಟೋಪಿ, ಸ್ವೆಟರ್, ಕಾಲುಚೀಲ ಅದರ ಹಾಲುಬಣ್ಣಕ್ಕೆ ತುಂಬಾ ಚೆನ್ನಾಗಿ ಒಪ್ಪಿತ್ತು. ಅವರು ಗಾಯಿತ್ರಿದೇವಿಯ ಕೈಗೆ ಮಗು ಕೊಟ್ಟಾಗ ಅವರದನ್ನು ಎದೆಗೊತ್ತಿಕೊಂಡು ಮುದ್ದಿಸಿದರು. ನಂತರ ಪ್ರಮೋದ್ ಎತ್ತಿಕೊಂಡು ಕಾರು ಹತ್ತಿದ ಅವರು ಮನೆಗೆ ಬರುವ ಹೊತ್ತಿಗೆ ಸಮಾಜದ ಇಬ್ಬರು ಸ್ನೇಹಿತರು ಬಂದಿದ್ದರು. ಅವರು ಪದ್ಮಿನಿ–ಪ್ರಮೋದರನ್ನು ನಿಲ್ಲಿಸಿ ಆರತಿ ಎತ್ತಿದರು.

ಗಾಯಿತ್ರಿದೇವಿಯ ಆದೇಶದ ಮೇಲೆ ಅವರ ಕೋಣೆಯ ಪಕ್ಕದ ಕೋಣೆ ಮಗುವಿಗಾಗಿ ಸಿದ್ಧವಾಗಿತ್ತು. ಮಗುವಿಗಾಗಿ ತೊಟ್ಟಿಲು, ಬೇಬಿಕಾಟ್ ನೂರೆಂಟು ಬಗೆಯ ಆಟದ ಸಾಮಾನುಗಳು ಅಲ್ಲಿದ್ದವು. ಮಗುವನ್ನು ನೋಡಿ ಕೊಳ್ಳಲು ಹನ್ನೆರಡು ವರ್ಷದ 'ದೇವಿ' ಎಂಬ ಹುಡುಗಿಯನ್ನು ಗೊತ್ತು ಮಾಡಿದ್ದರು.

'ಪ್ರಜ್ವಲ್' ಎಂಟು ತಿಂಗಳ ಮಗು ಬೋರಲು ಬಿದ್ದು ಮುಂದೆ ಹೋಗುತ್ತಿದ್ದ, ಕುಳಿತುಕೊಳ್ಳುತ್ತಿದ್ದ. ಆ....ಆ ಎಂದು ಧ್ವನಿ ತೆಗೆಯು ತ್ತಿದ್ದ. ಕೈಗೆ ಸಿಕ್ಕ ಸಾಮಾನು ಎಲ್ಲ ಕಡೆ ಎಸೆಯುತ್ತಿದ್ದ. ಕೊಂಚ ಆಧಾರ ಸಿಕ್ಕರೆ ಸಾಕು ಎದ್ದು ನಿಲ್ಲಲು ಪ್ರಯತ್ನಿಸುತ್ತಿದ್ದ.

ಮಗು ಬಂದ ಮೇಲೆ ಗಾಯಿತ್ರಿದೇವಿಯೂ ಮಗುವಿನಂತಾದರು. ತಮ್ಮ ಮಂಚವನ್ನು ಮಗುವಿನ ಕೋಣೆಯಲ್ಲೇ ಹಾಕಿಸಿಕೊಂಡರು. ಬೆಳಗ್ಗೆ 5–30 ಗಂಟೆಗೆಲ್ಲಾ ಮಗು ಎದ್ದುಬಿಡುತ್ತಿತ್ತು....ಗಾಯಿತ್ರಿದೇವಿ ತಾವೇ ಅದನ್ನು ಎತ್ತಿಕೊಂಡು ಸಂತೈಸುತ್ತಿದ್ದರು. ಮಗುವನ್ನು ತೊಡೆಯ ಮೇಲೆ ಮಲಗಿಸಿಕೊಂಡು ಹಾಡು ಹೇಳಿ ತಟ್ಟಿ ಮಲಗಿಸುತ್ತಿದ್ದರು. ಅದಕ್ಕೆ ಸ್ನಾನ

ಮಾಡಿಸುವುದೇ ಒಂದು ಸಂಭ್ರಮದ ವಿಷಯವಾಗಿತ್ತು. ಅದಕ್ಕೋ ಸ್ನಾನ ವೆಂದರೆ ತುಂಬಾ ಇಷ್ಟ ಒಂದು ದೊಡ್ಡ ಟಬ್‌ನಲ್ಲಿ ಅವನನ್ನು ಕೂಡಿಸಿ ಸ್ನಾನ ಮಾಡಿಸುತ್ತಿದ್ದರು. ಅವನು ಕೇಕೆಹಾಕಿ ನಗುತ್ತಿದ್ದ....ಅವನ ನಗೆಯ ತರಂಗಗಳು ಪದ್ಮಿನಿಯ ಕಿವಿಗೆ ಬಿದ್ದು, ಅವಳು ವರ್ಣಿಸಲಾಗದ ಭಾವನೆ ಗಳಿಂದ ಮೈಮರೆಯುತ್ತಿದ್ದಳು. ಇಷ್ಟಾದರೂ ಅವಳು ಮಗುವನ್ನು ಕೈಯಿಂದ ಮುಟ್ಟುತ್ತಿರಲಿಲ್ಲ.

ಒಂದು ದಿನ ಬೆಳಗ್ಗೆ ಗಾಯಿತ್ರಿದೇವಿ ಸಮಾಜದ ಮೀಟಿಂಗ್‌ಗೆ ಹೋಗಲೇಬೇಕಾಯ್ತು. ಪ್ರಜ್ವಲ್ ಸ್ನಾನಮಾಡಿ ತೊಟ್ಟಿಲಲ್ಲಿ ಮಲಗಿದ್ದ.

"ಪದ್ಮಿನಿ ಮಗೂನ್ನ ಮಲಗಿಸಿದ್ದೀನೆ ದೇವಿ ಅಲ್ಲೇ ಇದ್ದಾಳೆ....ನಿನ್ನ ಗಮನಾನೂ ಕೊಂಚ ಆ ಕಡೆ ಇರಲಿ."

"ಆಗಲೀತ್ತೆ, ಹೋಗಿ ಬನ್ನಿ" ಎಂದಳು ಪದ್ಮಿನಿ.

"ಅವನು ಅಕಸ್ಮಾತ್ ಎದ್ರೆ ಹಾಲು–ನೀರು ಬೆರೆಸಿ ಕುಡಿಸಿಬಿಡು."

ಪದ್ಮಿನಿ 'ಹುಂ' ಎಂದಳು.

ಗಾಯಿತ್ರಿದೇವಿ ಹೋಗಿ ಅರ್ಧ ಗಂಟೆಯಾಗಿರಬಹುದು. ಮಗುವಿನ ಅಳು ಕೇಳಿಸಿತು. ಅವಳು ಗಡಿಬಿಡಿಯಿಂದ ರೂಮ್‌ಗೆ ಓಡಿದಳು. ಪ್ರಜ್ವಲ್ ಬಾಯಲ್ಲಿ ಬೆರಳಿಟ್ಟುಕೊಂಡು ಅಳುತ್ತಿದ್ದ. ದೇವಿ ಇರಲಿಲ್ಲ.

"ಯಾಕೋ ಏನಾಯ್ತು ? ಮನೆ ಹಾರಿಹೋಗುವಂತೆ ಅಳ್ತಿದ್ದೀಯಲ್ಲಾ ?" ಎನ್ನುತ್ತಾ ಅವಳು ಮಗುವನ್ನು ಎತ್ತಿಕೊಂಡಳು....ಅವನು ಹಾಕಿದ್ದ ಬಟ್ಟೆ, ತೊಟ್ಟಿಲಲ್ಲಿ ಹಾಸಿದ್ದ ಬಟ್ಟೆ ಎಲ್ಲವೂ ಒದ್ದೆಯಾಗಿತ್ತು.

"ಅಯ್ಯೋ ಪೆದ್ದ, ಬಟ್ಟೆಯನ್ನೆಲ್ಲಾ ಒದ್ದೆ ಮಾಡ್ಕೊಂಡಿದ್ದೀಯಲ್ಲೋ ?" ಎನ್ನುತ್ತಾ ಅವನ ಬಟ್ಟೆ ಬಿಚ್ಚಿ ಮೈ ಒರೆಸಿ, ಪೌಡರ್ ಹಾಕಿ ಬೇರೆ ಬಟ್ಟೆ ಹಾಕಿದಳು. ನಂತರ ಹಾಲಿಗೆ ಬಿಸಿನೀರು, ಸಕ್ಕರೆ ಬೆರೆಸಿ, ಅವನನ್ನು ತೊಡೆಯ ಮೇಲೆ ಮಲಗಿಸಿಕೊಂಡು ಕುಡಿಸಿದಳು. ಅವನು ಮೊದಮೊದಲು ಅತ್ತರೂ ನಂತರ ಕುಡಿದ. ಹೊಟ್ಟೆ ತುಂಬಿದ ಮೇಲೆ ಕೇಕೆ ಹಾಕಿದ. ಪದ್ಮಿನಿ ಅವನ ನ್ನೆತ್ತಿಕೊಂಡು ಮುದ್ದಿಸಿದಳು. ಅಷ್ಟರಲ್ಲಿ 'ದೇವಿ' ಬಂದಳು. ಅವಳು ಬಂದ ಕೂಡಲೇ ಪದ್ಮಿನಿ 'ಮಗೂನ್ನ ನೋಡಿಕೊಳ್ಳೆ' ಎಂದು ಹೇಳಿ ಹಾಲ್‌ನಲ್ಲಿ ಪೇಪರ್ ಓದುತ್ತಾ ಕುಳಿತಳು.

ಪ್ರಜ್ವಲ್ ಹಾಲ್ ತುಂಬಾ ಓಡಾಡಿದ. ಅವನು ಅಂಬೆಗಾಲಿಡುತ್ತಾ ಬಂದು ಸೀರೆ ಎಳೆದಾಗ ಅವಳಿಗೆ ಸುಮ್ಮನೆ ಕೂರಲಾಗಲಿಲ್ಲ. ಅವನನ್ನು ಎತ್ತಿಕೊಂಡು ಮುದ್ದಿಸಿದಳು.

ಅಡಿಗೆ ಮನೆಯಿಂದ ಇದನ್ನೆಲ್ಲಾ ನೋಡುತ್ತಿದ್ದ ಭಟ್ಟರು ಗಾಯಿತ್ರಿ ದೇವಿ ಬಂದೊಡನೆ ಎಲ್ಲವನ್ನೂ ವರದಿ ಒಪ್ಪಿಸಿದರು. ಅವರ ಮುಖ ಆನಂದ ದಿಂದ ಅರಳಿತು. ಅಂದಿನಿಂದ ಅವರು ಹೆಚ್ಚು ಹೆಚ್ಚು ಹೊರಗೆ ಹೋಗಿಬರಲು ಆರಂಭಿಸಿದರು. ಗಾಯಿತ್ರಿದೇವಿ ಇದ್ದಾಗ ಮಗುವಿನ ಬಳಿ ಸುಳಿಯದಿದ್ದ ಪದ್ಮಿನಿ, ಅವರಿಲ್ಲದಾಗ ತಾನೇ ಮಗುವನ್ನು ಹುಡುಕಿಕೊಂಡು ಹೋಗಿ ಎತ್ತಿ ಕೊಳ್ಳುತ್ತಿದ್ದಳು. ಒಮ್ಮೊಮ್ಮೆ ತಾನೇ ಸ್ನಾನಮಾಡಿಸಿ, ಪೌಡರ್ ಹಾಕಿ ಅಲಂಕರಿಸುತ್ತಿದ್ದಳು.

ಪ್ರಜ್ವಲ ನಿಲ್ಲಲು ಪ್ರಯತ್ನಿಸಿ, ದೊಪ್ಪೆಂದು ನೆಲದ ಮೇಲೆ ಕೂರು ತ್ತಿದ್ದ. ಮನೆ ತುಂಬಾ ಓಡಾಡುತ್ತಿದ್ದ. ಫೆರೆಕ್ಸ್ ಕಂಡೊಡನೆ ಕುಣಿಯು ತ್ತಿದ್ದ. ಗಾಯಿತ್ರಿದೇವಿ ತಾವೇ ಅವನಿಗೆ ಫೆರೆಕ್ಸ್ ತಿನ್ನಿಸುತ್ತಿದ್ದರು. ಅವನು ಕೈಕಾಲು ಬಡಿದು ತನ್ನ ಬಾಲಭಾಷೆಯಲ್ಲಿ ಆಂ, ಊಂ ಎನ್ನುತ್ತಿದ್ದ. ಅವರಿಲ್ಲದ ಸಮಯವನ್ನು ಚಾತಕಪಕ್ಷಿಯಂತೆ ಕಾಯುತ್ತಿರುತ್ತಿದ್ದ ಪದ್ಮಿನಿ ಮಗುವನ್ನೆತ್ತಿಕೊಂಡು, ಮನೆಯಲ್ಲೆಲ್ಲಾ ಓಡಾಡಿಕೊಂಡು ಊಟ ಮಾಡಿಸು ತ್ತಿದ್ದಳು. ಕ್ರಮೇಣ ಪದ್ಮಿನಿಯ ಅಭ್ಯಾಸ ಮಾಡಿಕೊಂಡ 'ಪ್ರಜ್ವಲ್' ಅವಳನ್ನು ನೋಡಿದರೆ ಕುಣಿಯುತ್ತಿದ್ದ, ಗುರುತಿಸಿ ಕೂಗುತ್ತಿದ್ದ, ಗಾಯಿತ್ರಿ ದೇವಿ ಎತ್ತಿಕೊಂಡಿದ್ದಾಗ ಅವಳು ಎದುರಿಗೆ ಬಂದರೆ 'ಎತ್ತಿಕೋ' ಎನ್ನು ವಂತೆ ಹಾರುತ್ತಿದ್ದ.

ಪ್ರಮೋದ್ ಹೆಚ್ಚುಕಾಲ ಮನೆಯಲ್ಲಿರದಿದ್ದರೂ ಇರುವಾಗ ಮಗುವಿನ ಬಳಿ ಬಂದು ಅದನ್ನು ಮಾತನಾಡಿಸುತ್ತಿದ್ದ. ಇತ್ತೀಚೆಗೆ ಅವನಿಗೆ ಮಗು ವನ್ನು ಎತ್ತಿಕೊಳ್ಳುವುದು ಅಭ್ಯಾಸವಾಗಿತ್ತು. ಬೇಗ ಮನೆಗೆ ಬಂದ ದಿನ ಎತ್ತಿಕೊಂಡು ಹೊರಗೆ ಕರೆದೊಯ್ಯುತ್ತಿದ್ದ. ಒಮ್ಮೊಮ್ಮೆ ಬೆಳಗಿನ ಹೊತ್ತು ಕಾರ್‌ನಲ್ಲಿ ದೇವಿಯ ಜೊತೆ ಮಗುವನ್ನು ಕೂಡಿಸಿಕೊಂಡು ಒಂದು ರೌಂಡ್ ಕರೆದೊಯ್ಯುತ್ತಿದ್ದ. ಪ್ರಜ್ವಲ್ ಕಾರನ್ನು ನೋಡಿದರೆ ಕುಣಿಯುತ್ತಿದ್ದ.

ಪದ್ಮಿನಿ ಬೆಳಗಿನ ಹೊತ್ತು ಹೊರಗೆ ಹೋಗುವುದನ್ನು ಸಂಪೂರ್ಣವಾಗಿ ನಿಲ್ಲಿಸಿದಳು....ಒಂದು ಸಾಯಂಕಾಲ ಅವಳು 'ಯೋಗ' ತರಗತಿಗೆ ಹೋಗಿ ವಾಪಸ್ಸು ಮನೆಗೆ ಬಂದಾಗ ಪ್ರಜ್ವಲ್ ಜೋರಾಗಿ ಅಳುತ್ತಿರುವುದು ಕೇಳಿಸಿತು. ಭಟ್ಟರು, ಕೆಲಸದ ಹುಡುಗಿ ಅವನನ್ನು ಸಮಾಧಾನ ಮಾಡಲು ಪ್ರಯತ್ನಿಸುತ್ತಿದ್ದರು. ಪದ್ಮಿನಿ ಒಳಗೆ ಓಡಿ ಬಂದವಳೇ, ಮಗುವನ್ನು ಎತ್ತಿಕೊಂಡು ಮೈ ಕೈ ನೋಡಿದಳು. ಅದು ಹಾಕಿಕೊಂಡಿದ್ದ ಬಟ್ಟೆಯಲ್ಲಿ ಕೆಂಪು ಇರುವೆಗಳಿದ್ದವು. ಪದ್ಮಿನಿಯ ತಾಳ್ಮೆ ಮಾಯವಾಯಿತು.

"ಅತ್ತೆ ಎಲ್ಲಿ ?"

"ಅವರಿಗೆ ಸಮಾಜದಿಂದ ಫೋನ್ ಬಂದಿತ್ತು. ಅದಕ್ಕೆ ಹೋದರು."

ಅವಳು ಮಗುವಿನ ಬಟ್ಟೆ ಬದಲಾಯಿಸಿ, ಮೈಕೈಗೆ ಪೌಡರ್ ಹಾಕಿದಳು. ಅದಕ್ಕೆ ಹಾಲು ಕುಡಿಸಿ ಬಿಸ್ಕತ್ ತಿನ್ನಿಸಿದಳು.

"ತೊಟ್ಟಿಲು ಕ್ಲೀನ್ ಮಾಡು. ಹಾಸಿಗೆ ಕೊಡವಿ ಹಾಕು."

"ನಾಳೆ ತೊಟ್ಟಿಲನ್ನು ಬಿಸಿಲಲ್ಲಿಡು. ಇರುವೆ ಹೋಗುತ್ತೆ" ಎಂದರು ಭಟ್ಟರು.

ಗಾಯಿತ್ರಿದೇವಿ ಎಷ್ಟು ಹೊತ್ತಾದರೂ ಮನೆಗೆ ಬರಲಿಲ್ಲ....ಪದ್ಮಿನಿ ತಾನೇ ಅದಕ್ಕೆ ಊಟ ಮಾಡಿಸಿದಳು. ಅವನು ಅವಳ ತೊಡೆಯ ಮೇಲೆ ಮಲಗಿ ಕೈ ಕಾಲು ಬಡಿಯುತ್ತಾ ನೀರು ಕುಡಿದ....ಅವಳು ಅವನನ್ನು ತೊಡೆಯ ಮೇಲೆ ಮಲಗಿಸಿಕೊಂಡು ತಟ್ಟಿದಳು.

"ಅವನ್ಗೆ ಹಾಡು ಹೇಳದೆ ನಿದ್ರೆ ಬರಲ್ಲಮ್ಮ. ಅಮ್ಮಾವ್ರು ದಿನ ಹಾಡು ಹೇಳ್ತಾರೆ" ಎಂದರು ಭಟ್ಟರು.

ಪದ್ಮಿನಿ ಮಗುವನ್ನು ತನ್ನ ಕೋಣೆಯಲ್ಲಿ ಮಲಗಿಸಿ ತಟ್ಟುತ್ತಾ ಹಾಡಿದಳು. ಅವನು ಗಲಾಟೆಯಿಲ್ಲದೆ ಮಲಗಿದ. ಅವನ ಪಕ್ಕ ಮಲಗಿದ್ದ ಪದ್ಮಿನಿಗೆ ನಿದ್ದೆ ಬಂದಂತಾಯ್ತು. ಒಂಭತ್ತು ಗಂಟೆಯ ಹೊತ್ತಿಗೆ ಬಂದ ಪ್ರಮೋದ್ ರೂಮು ಪ್ರವೇಶಿಸಿದನು. ಅಲ್ಲಿಯ ಅಪೂರ್ವ ದೃಶ್ಯವನ್ನು ನೋಡಿ ಬಾಗಿಲಲ್ಲೇ ನಿಂತನು. ಪದ್ಮಿನಿಯ ಮುಖದಲ್ಲಿ ಅವನು ಹಿಂದೆಂದೂ ಕಾಣದ ನೆಮ್ಮದಿ ಇತ್ತು.

ಅವನು ಬಟ್ಟೆ ಬದಲಾಯಿಸಿ, ಸದ್ದು ಮಾಡದೆ ಕೆಳಗೆ ಬಂದಾಗ

ಭಟ್ಟರು ಗಾಯಿತ್ರಿದೇವಿಯ ಬಳಿ ಸಾಯಂಕಾಲ ಪದ್ಮಿನಿ ಮಗುವನ್ನು ನೋಡಿಕೊಂಡಿದ್ದನ್ನು ವರ್ಣಿಸುತ್ತಿದ್ದರು.

ಪ್ರಜ್ವಲ್‌ಗೆ ಹತ್ತು ತಿಂಗಳು ತುಂಬಿತ್ತು. ಗಾಯಿತ್ರಿದೇವಿಗೆ ಅವನ ವರ್ಷದ ಹುಟ್ಟಿದಹಬ್ಬವನ್ನು ವಿಜೃಂಭಣೆಯಿಂದ ಮಾಡಬೇಕೆನ್ನುವ ಆಸೆ ಯಿತು. ಆದರೆ ಪದ್ಮಿನಿ ಏನನ್ನುವಳೋ ? ಅವಳು ಒಪ್ಪಿದರೆ ಪ್ರಮೋದ್‌ನನ್ನು ಒಪ್ಪಿಸುವುದು ಕಷ್ಟವಾಗಲಾರದು ಎನ್ನಿಸಿತ್ತು. ಪ್ರಜ್ವಲ್ ಈಗ ಅಮ್ಮ.... ಅಕ್ಕ ಎನ್ನುತ್ತಿದ್ದ ಪದ್ಮಿನಿಯನ್ನು ಅಮ್ಮ ಎನ್ನುತ್ತಿದ್ದ. ಗಾಯಿತ್ರಿದೇವಿ ಪದ್ಮಿನಿಯನ್ನು ತೋರಿಸಿ ಅಮ್ಮ ಎಂದು ಹೇಳಿಕೊಡುತ್ತಿದ್ದರು. ಅವನು ಗಾಯಿತ್ರಿದೇವಿಯನ್ನೂ 'ಅಮ್ಮ' ಎನ್ನುತ್ತಿದ್ದ. ಪದ್ಮಿನಿಯನ್ನು 'ಅಮ್ಮ' ಎನ್ನುತ್ತಿದ್ದ. ಪದ್ಮಿನಿ ಮೊದಲ ದಿನ ಅವನು ತನ್ನನ್ನು 'ಅಮ್ಮ' ಎಂದು ಕರೆದಾಗ ಆನಂದದಲ್ಲಿ ಮುಳುಗಿಹೋಗಿದ್ದಳು. ಅವಳೆದೆ ಹರ್ಷದಿಂದ ಬಿರಿದಿತ್ತು. ತಾಯ್ತನದ ವಾತ್ಸಲ್ಯ ಉಕ್ಕಿ ಹರಿದಿತ್ತು. ಮಗುವನ್ನೆತ್ತಿ ಕೊಂಡು ಹುಚ್ಚಿಯಂತೆ ಮುದ್ದಿಸಿದ್ದಳು. ಆದರೆ ಗಾಯಿತ್ರಿದೇವಿ ಮನೆ ಯಲ್ಲಿದ್ದಾಗ ಮಾತ್ರ ಅವಳು ಮಗುವನ್ನು ಕೈಯಿಂದಲೂ ಮುಟ್ಟುತ್ತಿರ ಲಿಲ್ಲ.

ಒಂದು ದಿನ ಅರ್ಧ ರಾತ್ರಿಯಲ್ಲಿ ಮಗು ಎದ್ದು ಅಳತೊಡಗಿತ್ತು. ಗಾಯಿತ್ರಿದೇವಿ ಮಗನನ್ನು ಕೂಗಿದರು. ಪ್ರಮೋದ್, ಪದ್ಮಿನಿ ಇಬ್ಬರೂ ಆತಂಕದಿಂದ ರೂಮು ಪ್ರವೇಶಿಸಿದರು. ಮಗುವಿಗೆ ಕೆಂಡಾಮಂಡಲ ಜ್ವರ ವಿತ್ತು.

"ಪದ್ಮಿ, ಮಗೂನ್ನ ಎತ್ತಿಕೋ ಶೆಣೈ ಮನೆಗೆ ಹೋಗಿ ಬರೋಣ."

ಡಾ|| ಶೆಣೈ ಮನೆಗೆ ಫೋನ್‌ಮಾಡಿ ಅವರು ಮಗುವನ್ನೆತ್ತಿಕೊಂಡು ಅವರ ಮನೆಗೆ ಹೋದರು. ಡಾಕ್ಟರ್ ಪರೀಕ್ಷಿಸಿ "ಗಂಟಲಿಗೆ ಇನ್‌ಫೆಕ್ಷನ್ ಆಗಿದೆ. ಆದ್ದರಿಂದ ಜ್ವರ ಬಂದಿದೆ. ನೀವು ಮಗೂನ್ನ ಅಡ್ಮಿಟ್ ಮಾಡಿ" ಎಂದರು. ಮಗುವನ್ನು ಅಡ್ಮಿಟ್ ಮಾಡುವುದು ಅನಿವಾರ್ಯವಾಯಿತು.

ಪ್ರಜ್ವಲ್ ಒಂದು ವಾರ ಆ ನರ್ಸಿಂಗ್ ಹೋಂನಲ್ಲಿ ಇರಬೇಕಾಯ್ತು. ಮಗುವಿಗೆ ಜ್ವರ ಕಡಿಮೆಯಾದರೂ ತುಂಬಾ ಸುಸ್ತಿತ್ತು. ಡ್ರಿಪ್ಸ್ ಹಾಕಲೇ

ಬೇಕಾಯ್ತು. ಜ್ವರ ಬಿಟ್ಟ ಮೇಲೆ ಮಗುವಿನ ಚಂಡಿ ಹೆಚ್ಚಾಗಿತ್ತು ಯಾವಾಗಲೂ ಯಾರಾದರೂ ತನ್ನನ್ನು ಎತ್ತಿಕೊಂಡಿರಬೇಕೆಂದು ಬಯಸುತ್ತಿತ್ತು. ಪದ್ಮಿನಿ ನರ್ಸಿಂಗ್ ಹೋಂನಲ್ಲಿ ಹಗಲೂ ರಾತ್ರಿ ಇದ್ದು ನೋಡಿಕೊಂಡಳು. ಮಗು ಅವಳನ್ನು ತುಂಬಾ ಹಚ್ಚಿಕೊಂಡುಬಿಟ್ಟಿತು. ಅದು ಬದುಕಿ ಬಂದಾಗ ಎಲ್ಲರೂ ಸಮಾಧಾನದ ನಿಟ್ಟುಸಿರು ಬಿಟ್ಟರು.

ಪ್ರಜ್ವಲ್ ನರ್ಸಿಂಗ್‌ಹೋಂನಿಂದ ಡಿಸ್ಚಾರ್ಜ್ ಆಗಿ ಬಂದು ಒಂದು ವಾರವಾಗಿತ್ತು. ಒಂದು ದಿನ ಬೆಳಗ್ಗೆ ಸ್ನಾನ ಮುಗಿಸಿಕೊಂಡು ಹೊರಗೆ ಬಂದ ಗಾಯಿತ್ರಿದೇವಿ ದೇವರ ಮನೆ ಹೊಕ್ಕರು. ಎರಡು ನಿಮಿಷ ಕಳೆದಿರಬಹುದು. ಅವರು ಜೋರಾಗಿ ಕೂಗಿದ್ದು ಕೇಳಿಸಿತು. ತಿಂಡಿ ತಿನ್ನುತ್ತಿದ್ದ ಪ್ರಮೋದ್ ಅಡಿಗೆ ಮನೆಯಲ್ಲಿದ್ದ. ಪದ್ಮಿನಿ ದೇವರ ಮನೆಗೆ ಧಾವಿಸಿದರು. ಗಾಯಿತ್ರಿದೇವಿ ಕೆಳಗೆ ಉರುಳಿಬಿದ್ದಿದ್ದರು. ಅವರ ಬಾಯಿ ಸೊಟ್ಟಗಾಗಿತ್ತು. ಭಟ್ಟರ ಸಹಾಯದಿಂದ ಅವರನ್ನು ಮಂಚದ ಮೇಲೆ ಮಲಗಿಸಲಾಯಿತು. ಫ್ಯಾಮಿಲಿ ಡಾಕ್ಟರ್ ನಟರಾಜ್ ಬಂದು ಅವರಿಗೆ 'ಸ್ಟ್ರೋಕ್' ಆಗಿದೆ ಎಂದು ಅವರನ್ನು ಹತ್ತಿರದಲ್ಲೇ ಇದ್ದ 'ನರ್ಸಿಂಗ್‌ಹೋಂ'ಗೆ ಸೇರಿಸಿದರು. ಪದ್ಮಿನಿಯ ಕೆಲಸದ ಹೊರೆ ಹೆಚ್ಚಾಯಿತು. ಪದ್ಮಿನಿ ಮಗುವನ್ನು ನೋಡಿಕೊಳ್ಳಲೇಬೇಕಾಯ್ತು. ಪ್ರಮೋದ್ ಬೆಳಗ್ಗೆ ಆರು ಗಂಟೆಗೆ ಹೋಗಿ ತಾಯಿಗೆ ಕಾಫಿ ಕೊಟ್ಟು ಬರುತ್ತಿದ್ದ. ಪದ್ಮಿನಿ ಮಗುವಿಗೆ ಸ್ನಾನಮಾಡಿಸಿ ಫೆರೆಕ್ಸ್ ತಿನ್ನಿಸಿ 'ದೇವಿ'ಯ ಕೈಗೆ ಕೊಟ್ಟು ನರ್ಸಿಂಗ್‌ಹೋಂಗೆ ಹೋಗಿ ತಿಂಡಿ ತಿನ್ನಿಸಿ ಬರುತ್ತಿದ್ದಳು. ಅವಳು 12 ಕ್ಕೆ ಬಂದು ಮಗುವಿಗೆ ಊಟಮಾಡಿಸಿ ಮಲಗಿಸಿ ಗಾಯಿತ್ರಿದೇವಿಗೆ ಊಟ ಕೊಟ್ಟು ಎರಡು ಗಂಟೆಗೆ ಬರುತ್ತಿದ್ದಳು. ಆ ವೇಳೆಗೆ ಪ್ರಜ್ವಲ್ ಮಲಗಿರುತ್ತಿದ್ದ. ನಾಲ್ಕು ಗಂಟೆಗೆ ಭಟ್ಟರು ಕಾಫಿ ತೆಗೆದುಕೊಂಡು ಹೋಗುತ್ತಿದ್ದರು. ರಾತ್ರಿ ಪ್ರಮೋದ್ ತಾಯಿಗೆ ಊಟ ತೆಗೆದುಕೊಂಡು ಹೋಗುತ್ತಿದ್ದ. ಮುನಿಯಮ್ಮ ಮಧ್ಯಾಹ್ನ ಎರಡು ಗಂಟೆಯಿಂದ ಬೆಳಗ್ಗೆ ಏಳುಗಂಟೆಯವರೆಗೂ ನರ್ಸಿಂಗ್ ಹೋಂನಲ್ಲಿರುತ್ತಿದ್ದಳು.

ಈ ಅವಧಿಯಲ್ಲಿ ಪ್ರಜ್ವಲ್ ದಂಪತಿಗಳಿಗೆ ಚೆನ್ನಾಗಿ ಹೊಂದಿಕೊಂಡ ಅವರ ಬಳಿಯೇ ಮಲಗುತ್ತಿದ್ದ ಬೆಳಗಿನ ಜಾವ ಎದ್ದು ಗಲಾಟೆ ಮಾಡುತ್ತಿದ್ದ. ಪದ್ಮಿನಿ ಎದ್ದು ಗಂಡನನ್ನು ಎಬ್ಬಿಸುತ್ತಿದ್ದಳು. ಸಾಯಂಕಾಲದ ಹೊತ್ತು

ಅವಳು ಅವನನ್ನೆತ್ತಿಕೊಂಡು ಮನೆಯ ಸುತ್ತ ಸುತ್ತಾಡುತ್ತಿದ್ದಳು. ಗಂಡ ಬಂದೊಡನೆ 'ರೀ, ಇವತ್ತು ನಮ್ಮ ಪ್ರಜ್ವಲ್ ಏನು ಮಾಡಿದ ಗೊತ್ತಾ ?' ಎಂದು ವರದಿ ಒಪ್ಪಿಸುತ್ತಿದ್ದಳು. ಅವಳಿಗೆ ಅವನ ಬಾಲ ಲೀಲೆಗಳನ್ನು ವರ್ಣಿಸಲು ಎಷ್ಟು ಉತ್ಸಾಹವಿರುತ್ತಿತ್ತೋ, ಅವುಗಳನ್ನು ಕೇಳಲು ಪ್ರಮೋದ್‌ಗೂ ಅಷ್ಟೇ ಉತ್ಸಾಹವಿರುತ್ತಿತ್ತು.

ಒಂದು ತಿಂಗಳ ನಂತರ ಗಾಯಿತ್ರಿದೇವಿಯನ್ನು ಮನೆಗೆ ಕಳುಹಿಸಿದರು. ಅವರ ಮಾತು ತೊದಲುತ್ತಿತ್ತು. ಕೋಲು ಹಿಡಿದು ಓಡಾಡುತ್ತಿದ್ದರು. ಅತ್ತೆ ಮನೆಗೆ ಬಂದೊಡನೆ ಪದ್ಮಿನಿ ಮಗುವನ್ನು ದೂರ ಮಾಡಿದಳು. ಅವನು ಅವಳು ಎತ್ತಿಕೊಳ್ಳದಿದ್ದರೆ ರಗಳೆ ಮಾಡುತ್ತಿದ್ದ. ಒಂದು ದಿನ ಅವಳು ದೇವಿಗೆ 'ಮಗೂನ್ನ ಆ ಕಡೆ ಕರೆದುಕೊಂಡು ಹೋಗು, ನಿನ್ನನ್ನು ಯಾಕೆ ಇಟ್ಕೊಂಡಿರೋದು ?' ಎಂದು ಗದರಿಸುತ್ತಿರುವುದು ಗಾಯಿತ್ರಿದೇವಿಯ ಕಿವಿಗೆ ಬಿತ್ತು. ಆ ದಿನ ಭಟ್ಟರು ಕೆಲಸಕ್ಕೆ ಬಂದಿರಲಿಲ್ಲ. ಪದ್ಮಿನಿಯೇ ಅಡಿಗೆ, ತಿಂಡಿ ಮಾಡಿ, ಅತ್ತೆಗೆ ಸ್ನಾನಮಾಡಿಸಿ, ತಿಂಡಿ ಕೊಟ್ಟು, ಔಷಧ ಕೊಟ್ಟು, ಒಂದು ಘಳಿಗೆ ಕುಳಿತು ಸುಧಾರಿಸಿಕೊಳ್ಳುತ್ತಿದ್ದಾಗ ಪ್ರಜ್ವಲ ಹಠ ತೆಗೆದಿದ್ದ. ತಿಂಡಿಯನ್ನೂ ತಿನ್ನದೆ ಒಂದೇ ಸಮನೆ ಕೆಲಸ ಮಾಡಿದ್ದ ಪದ್ಮಿನಿಗೆ ಸಹಜವಾಗಿ ರೇಗಿತ್ತು.

ಸೊಸೆಯ ಗದರುವಿಕೆ ಕೇಳಿದ ಗಾಯಿತ್ರಿದೇವಿಗೆ ತಮ್ಮ ಕನಸೆಲ್ಲಾ ಚೂರಾದಂತೆ ಭಾಸವಾಯಿತು. ತಮ್ಮ ಮಗ–ಸೊಸೆಯರಿಗೆ ಮಗುವಿನ 'ದತ್ತು ಸ್ವೀಕಾರ' ಮಾಡಿಕೊಂಡು ವರ್ಷದ ಹುಟ್ಟಿದ ಹಬ್ಬ ಆಚರಿಸಬೇಕೆಂದುಕೊಂಡಿದ್ದರು. ಆದರೆ ಸೊಸೆಯ ಮಾತು ಕೇಳಿ ಅವರ ಮನಸ್ಸಿಗೆ ಆಘಾತವಾಯ್ತು. ಒಂದು ವೇಳೆ ತಮಗೇನಾದರೂ ಆದರೆ ಪದ್ಮಿನಿ ಮಗುವನ್ನು ನೋಡಿಕೊಳ್ಳುತ್ತಾಳೋ ಇಲ್ಲವೋ ಎಂಬ ಅನುಮಾನವೂ ಮೂಡಿತು. ಅನಾಥಾಲಯದಲ್ಲಿ ಆರಾಮವಾಗಿರುತ್ತಿದ್ದ ಮಗುವನ್ನು ಕರೆತಂದು ತಾನು ತಪ್ಪು ಮಾಡಿದೆನೇನೋ ? ಅನ್ನಿಸಿತು. ಅವರು ಅಂದು ರಾತ್ರಿ ಪ್ರಮೋದ್‌ಗೆ ಹೇಳಿದರು.

"ಪ್ರಮೋದ್ ಊಟವಾದ ಮೇಲೆ ನೀನು ನನ್ನ ರೂಮ್‌ಗೆ ಬಾ, ನಾನು ನಿನ್ನ ಜೊತೆ ಮಾತಾಡಬೇಕು."

ಪ್ರಮೋದ್ ಆಶ್ಚರ್ಯದಿಂದ ಅವರತ್ತ ನೋಡಿದ.

"ಅಂತಹ ವಿಷಯ ಏನಮ್ಮಾ?"

"ನೀನು ಊಟ ಮುಗಿಸು, ಹೇಳ್ತೀನಿ."

ಅವನು ಊಟ ಮುಗಿಸಿ ತಾಯಿಯ ಕೋಣೆ ಪ್ರವೇಶಿಸಿದ.

"ಪ್ರಮೋದ್, ನಾನು ಈ ಇಳಿವಯಸ್ಸಿನಲ್ಲಿ ಮಗುವನ್ನು ದತ್ತು ತೆಗೆದುಕೊಂಡಿದ್ದು ನನಗಾಗಿ ಅಲ್ಲ, ನಿಮಗಾಗಿ."

"ನನಗದು ಗೊತ್ತಮ್ಮ."

"ಮಗು ಮನೆಯಲ್ಲೀ ಇದ್ದರೆ ಪದ್ಮಿನಿಯ ಮನಸ್ಸು ಬದಲಾಗಬಹುದೇನೋ" ಎಂಬ ಆಸೆ ನನಗಿತ್ತು. ಅವಳು ಮಗುವನ್ನು ನೋಡಿಕೊಳ್ತಾಳೆ, ಅದರ ಬೇಕು ಬೇಡ ಗಮನಿಸ್ತಾಳೇಂತ ನನಗೆ ತುಂಬಾ ಸಂತೋಷವಾಗಿತ್ತು. ಆದರೆ ಈಗ ಆ ಸಂತೋಷ ಉಳಿದಿಲ್ಲ."

"ಯಾಕಮ್ಮ ಹಾಗಂತೀಯ ?"

"ಅವಳಿಗೆ ಆ ಮಗು ನನ್ನದು ಅನ್ನುವ ಭಾವನೇನೇ ಬಂದಿಲ್ಲ ಅನ್ನಿಸತ್ತೆ. ಒಂದೊಂದು ಸಲ ಮಗುವನ್ನು ಹುಚ್ಚಿಯಂತೆ ಮುದ್ದಿಸ್ತಾಳೆ. ಕೆಲವು ಸಲ ಅದು ಅಳ್ತಿದ್ದರೂ ಕಿವಿಗೂ ಬೀಳದವಳಂತೆ ಕುಳಿತಿರ್‍ತಾಳೆ. ಅವನೋ ಅವಳನ್ನು ನೋಡಿದ್ರೆ 'ಅಮ್ಮ' ಅಂತ ಕುಣೀತಾನೆ, ಎಷ್ಟೋ ಸಲ ನನಗೆ ನಾನು ಕಣ್ಮುಚ್ಚಿದರೆ ಮಗುವಿನ ಗತಿಯೇನು ? ಅನ್ನಿಸತ್ತೆ."

"ನೀನು ತಪ್ಪು ತಿಳಿದಿದ್ದೀಯಮ್ಮ. ಪದ್ಮಿನಿಗೆ ಮಗೂನ್ನ ಕಂಡರೆ ತುಂಬಾ ಪ್ರೀತಿ ಇದೆ."

"ಮುದ್ದಾದ ಮಕ್ಕಳನ್ನು ಇಷ್ಟಪಟ್ಟು ಎತ್ತಿಕೊಂಡು ಮುದ್ದಿಸುವುದಕ್ಕೂ, ತಾಯಿಯಾಗಿ ಒಂದು ಮಗುವಿನ ಜವಾಬ್ದಾರಿ ತೆಗೆದುಕೊಳ್ಳುವುದಕ್ಕೂ ತುಂಬಾ ವ್ಯತ್ಯಾಸವಿದೆ. ತಾಯೀನೇ ತಂದೆಗಿಂತ ಮುಖ್ಯ ಕಣೋ. ಒಂದು ಸಂಸಾರದಲ್ಲಿ ತಂದೆ ಕಣ್ಮುಚ್ಚಿದರೂ, ತಾಯಿ–ತಂದೆ ಇಬ್ಬರ ಹೊಣೆಯನ್ನೂ ಹೊತ್ತಿಕೊಂಡು ಸಂಸಾರ ನಿರ್ವಹಿಸಿಕೊಂಡು, ಮಕ್ಕಳಿಗೆ ದಾರಿ ತೋರಿಸ್ತಾಳೆ. ಆದರೆ ಗಂಡಸರು ಹೆಂಡತಿ ಸತ್ತುಹೋದರೆ ಧೈರ್ಯ ಕಳೆದುಕೊಂಡು ಮಕ್ಕಳನ್ನು ಅನಾಥರನ್ನಾಗಿ ಮಾಡ್ತಾರೆ. ಇಲ್ಲ ಮಕ್ಕಳನ್ನು

ನೋಡಿಕೊಳ್ಳಕ್ಕಾಗಲ್ಲ ಅನ್ನುವ ನೆಪವೊಡ್ಡಿ ಇನ್ನೊಂದು ಮದುವೆ ಮಾಡಿ ಕೊಂಡುಬಿಡ್ತಾರೆ."

"ಅಮ್ಮ, ನೀನು ಪದ್ಮಿನೀನ್ನ ಅರ್ಥಮಾಡಿಕೊಂಡಿಲ್ಲ. ಅವಳಿಗೆ ಖಂಡಿತಾ ಪ್ರಜ್ವಲ್ ಮೇಲೆ ಪ್ರೀತಿ ಇದೆ."

"ನನಗೆ ಹಾಗೆ ತೋರುತ್ತಿಲ್ಲ. ನನಗ್ಯಾಕೋ ಇತ್ತೀಚೆಗೆ ನಾನು ಹೆಚ್ಚು ಕಾಲ ಬದುಕಲ್ಲ ಅನ್ನಿಸ್ತಿದೆ....ನಾನಿರುವಾಗಲೇ ಮಗುವಿಗೊಂದು ವ್ಯವಸ್ಥೆ ಮಾಡಬೇಕು."

"ನೀನು ಚಿಂತೆ ಮಾಡಬೇಡಮ್ಮ, ನಾನು ಮಗೂನ್ನ ನೋಡಿಕೊಳ್ತೀನಿ."

"ನೀನು ನೋಡಿಕೊಳ್ತೀನಿ ಅಂತ ಅನ್ನಬಹುದು. ಆದರೆ ಪದ್ಮಿನಿ ಒಪ್ಪದೆ ಇರಬಹುದು. ನೀನು ಕೆಲಸಕ್ಕೇ ಹೋಗದೆ ಮನೆಯಲ್ಲೇ ಕುಳಿತಿರಲು ಸಾಧ್ಯಾನಾ ? ಅದೂ ಅಲ್ಲದೆ ಮಗುವಿನ ಕಾರಣದಿಂದ ನಿಮ್ಮಿಬ್ಬರ ನಡುವೆ ಮನಸ್ತಾಪ ಬರುವುದು ನನಗಿಷ್ಟವಿಲ್ಲ. ಮಗೂನ್ನ 'ದತ್ತು' ಅಂತ ತಂದಿದ್ರೂ ಅದನ್ನು ನಮಗಿನ್ನೂ ಕೋರ್ಟ್ ಮೂಲಕ ಕೊಟ್ಟಿಲ್ಲ. ನೀನು ಮಗೂನ್ನ ಅನಾಥಾಲಯಕ್ಕೆ ವಾಪಸ್ಸು ಮಾಡಿಬಿಡು. ನಾನಿವತ್ತೇ ಫೋನ್ ಮಾಡೋಣಾಂತಿದ್ದೆ. ನಿನಗೆ ತಿಳಿಸಿ ಅವರಿಗೆ ಫೋನ್ ಮಾಡೋಣಾಂತ ಸುಮ್ಮನಾದೆ."

ಪ್ರಮೋದ್ ಮಾತಾಡಲಿಲ್ಲ. ಅವನು ರೂಂಗೆ ಬಂದಾಗ ಪದ್ಮಿನಿ ಕೇಳಿದಳು. "ಅತ್ತೆ ಯಾಕೆ ಕರೆದಿದ್ರು ?"

"ಯಾಕಿಲ್ಲ ಬಿಡು."

"ಯಾಕೆ, ನನ್ನ ಹತ್ತಿರ ಹೇಳಬಾರದೇನು ?"

"ಹೇಳಿ ಪ್ರಯೋಜನವಿಲ್ಲ."

"ಏನು ವಿಷಯ ಹೇಳಿ."

"ಅಮ್ಮ ಮಗೂನ್ನ ಅನಾಥಾಲಯಕ್ಕೇ ವಾಪಸ್ಸು ಮಾಡಬೇಕುಂತಿದ್ದಾರೆ."

"ಯಾಕೆ ?"

"ಅವರಿಗೆ ಸ್ಟ್ರೋಕ್ ಹೊಡೆದ ಮೇಲೆ ಹೆದರಿಕೆ ಶುರುವಾಗಿದೆ."

"ಹೆದರಿಕೆ ಯಾಕೆ ?"

"ನಾನೇನಾದ್ರೂ ಸತ್ತುಹೋದ್ರೆ ಮಗುವಿನ ಗತಿಯೇನು ? ಅನ್ನುವ ಯೋಚನೆ ಅವರನ್ನು ಕಾಡ್ತಾಯಿದೆ."

'ಯಾಕೆ ಅವರಿಗೆ ಆ ಅನುಮಾನ ಬಂತು ?' ಅವಳ ಮನಸ್ಸಿನಲ್ಲಿ ಪ್ರಶ್ನೆ ಎದ್ದಿತು. ಆದರವಳು ಹೊರಗೆ ಏನೂ ಹೇಳಲಿಲ್ಲ.

ಹೆಂಡತಿಯಿಂದ ಏನೂ ಪ್ರತಿಕ್ರಿಯೆ ಬಾರದಿದ್ದಾಗ ಪ್ರಮೋದ್‌ಗೆ ನಿರಾಶೆಯಾಯ್ತು.

"ಪ್ರಜ್ವಲ್ ಇಲ್ಲದೆ ಇರೋದು ಕಷ್ಟ....ನಾವೇ ಮಗೂನ್ನ ಸಾಕೋಣ. ನೀವು ನಿಮ್ಮಮ್ಮನಿಗೆ ಸಮಾಧಾನ ಹೇಳಿ" ಎಂಬ ಉತ್ತರ ನಿರೀಕ್ಷಿಸಿದ್ದವನಿಗೆ ಹೆಂಡತಿಯ ಮೌನ ಆಶ್ಚರ್ಯ ತಂದಿತು. 'ತಾಯಿಯ ಊಹೆಯೇ ಸರಿಯೆ ? ಮಗುವಿನ ಬಗ್ಗೆ ಪದ್ಮಿನಿಗೆ ಮಮತೆ ಇಲ್ಲವೆ ? ಮಗುವನ್ನು ವಾಪಸ್ಸು ಮಾಡಲು ಇವಳಿಗೆ ಒಪ್ಪಿಗೆಯಿದೆಯೇ ? ನಾನೇ ಅವಳು ಮಗುವನ್ನು ಮುದ್ದಿಸುವುದನ್ನೂ, ಮಗುವಿನ ಜೊತೆ ಆಡುವುದನ್ನೂ ನೋಡಿದ್ದೇನಲ್ಲಾ ....ನನ್ನ ಕಣ್ಣೇ ನನಗೆ ಮೋಸ ಮಾಡಿತೆ ?' ಅವನು ಉತ್ತರ ಕಾಣದೆ ತೊಳಲಾಡಿದ.

'ಪದ್ಮಿನಿ ವಿಚಾರ ಬಿಡು. ನಿನಗೆ ಮಗುವಿನ ಮೇಲೆ ಪ್ರೀತಿ ಇಲ್ಲವೆ ? ನೀನು ಮಗುವನ್ನು ಬಿಟ್ಟು ಇರಬಲ್ಲೆಯಾ ?' ಅವನ ಮನ ಪ್ರಶ್ನಿಸಿತು.

'ಪ್ರಜ್ವಲ್‌ನನ್ನು ಬಿಟ್ಟು ಹೇಗಿರುವುದು ? ಮರಳುಕಾಡಿನಂತಹ ನನ್ನ ಜೀವನಕ್ಕೆ ಚೈತನ್ಯ ಚುಂಬಿದ್ದಾನೆ. ವಾತ್ಸಲ್ಯದ ಮಹಾಪೂರ ಹರಿಯುವಂತೆ ಮಾಡಿದ್ದಾನೆ. ತನ್ನ ತೊದಲ್ನುಡಿಗಳಿಂದ ಕಟ್ಟಿಹಾಕಿದ್ದಾನೆ. ಅವನ ಆಟಪಾಟ ನೋಡಲು, ಅವನ ಬಾಲ ಭಾಷೆ ಕೇಳಲು ಅದೆಷ್ಟು ಚೆನ್ನ ! ಅವನಿಂದ ಈ ಮನೆಗೆ ಖಳೆ ಬಂದಿದೆ. ಅವನಿಂದ ನಮ್ಮ ನೋವು ಮರೆತಿದೆ. ನಮ್ಮ ಬಾಳಿಗೊಂದು ಅರ್ಥ ಸಿಕ್ಕಿದೆ. ಈ ವಿಚಾರ ಪದ್ಮಿನಿಗೆ ಗೊತ್ತಿಲ್ಲವೆ ? ಹಾಗಿದ್ದರೂ ಇವಳೇಕೆ ಸುಮ್ಮನಿದ್ದಾಳೆ ?'

ಪದ್ಮಿನಿಯ ಮನಸ್ಸು ಬಿರುಗಾಳಿಗೆ ಸಿಕ್ಕ ಹಡಗಿನಂತಾಗಿತ್ತು. ಅವಳೀಗ ಪ್ರಜ್ವಲನನ್ನು ಅತೀವವಾಗಿ ಪ್ರೀತಿಸುತ್ತಿದ್ದಳು. ಅದು ಬೇರೆ ಮಗು ಎಂಬ ಭಾವನೆಯೇ ಅವಳಿಗಿರಲಿಲ್ಲ. ಆ ಮುದ್ದು ಮಗುವಿನಿಂದ ಅವಳ ಬಾಳಿಗೊಂದು ಬೆಳಕು ಸಿಕ್ಕಿದಂತಾಗಿತ್ತು. ಅದನ್ನು ಲಾಲಿಸಿ ಪಾಲಿಸುವುದರಲ್ಲಿ

ಅವಳಿಗೆ ತುಂಬಾ ಸಂತೋಷವಾಗುತ್ತಿತ್ತು. ಅತ್ತೆ ಆ ಮಗುವನ್ನು ತಂದಿದ್ದರೂ ಅವರು ಅದನ್ನು ತಮಗಾಗಿ ತಂದಿದ್ದಾರೆಂಬ ಭಾವನೆ ಅವಳಲ್ಲಿ ಮೂಡಿತ್ತು. 'ಅದು ತನ್ನ ಮಗು' ಎಂದೇ ನಂಬಿ ಅವಳು ಅದನ್ನು ಮುದ್ದಿಸುತ್ತಿದ್ದಳು. ದತ್ತುಮಗು ಬೇಡವೆಂದು ಅತ್ತೆ ಎದುರು ಹಠ ಹಿಡಿದಿದ್ದು ನೆನಪಾಗುವಾಗ ಅವರೆದುರು ಸೋಲಲು ಸ್ವಾಭಿಮಾನ ಅಡ್ಡಿಯಾಗುತ್ತಿತ್ತು.

'ಪ್ರಜ್ವಲ್ ನಮಗೇ ಇರಲಿ ಎಂದರೆ ನಾನು ಸೋತಂತಾಗುವುದಿಲ್ಲವೇ ?' ಎನ್ನಿಸುತ್ತಿತ್ತು.

ನಾಲ್ಕಾರು ದಿನ ಕಳೆದರೂ ಮಗ–ಸೊಸೆ ಏನೊಂದೂ ಹೇಳದಿದ್ದಾಗ ಗಾಯಿತ್ರಿದೇವಿ ಕುಗ್ಗಿಹೋದರು. ಪ್ರಮೋದ್‌ಗೂ ಜೀವನವೇ ಅರ್ಥಹೀನ ಎನ್ನಿಸತೊಡಗಿತ್ತು. ಆದರೆ ಹೆಂಡತಿಯನ್ನು ಆ ಬಗ್ಗೆ ಪ್ರಶ್ನಿಸಲು ಧೈರ್ಯ ಬಂದಿರಲಿಲ್ಲ.

ಭಟ್ಟರು, ಕೆಲಸದವರು ಎಲ್ಲರಿಗೂ ಪ್ರಿಯವಾಗಿದ್ದ ಮಗು ಅದು. ಆ ಮಗು ಪುನಃ ಅನಾಥಾಶ್ರಮ ಸೇರುತ್ತದೆ ಎನ್ನುವ ವಿಚಾರ ಕೇಳಿಯೋ ಅವರಿಗೆ ಒಂದು ತರಹವಾಯ್ತು. ಒಂದು ದಿನ ಬೆಳಗ್ಗೆ ಪದ್ಮಿನಿ ಮಗನಿಗೆ ಫೆರೆಕ್ಸ್ ತಿನ್ನಿಸಿ, ಬಾಯಿ ಒರೆಸುತ್ತಿದ್ದಾಗ ಭಟ್ಟರು ಗಾಯಿತ್ರಿದೇವಿಯ ಜೊತೆ ಜೋರಾಗಿ ಮಾತಾಡುತ್ತಿದ್ದುದು ಕೇಳಿಸಿತು.

ಅವಳು ಮಗುವನ್ನೆತ್ತಿಕೊಂಡು ಕೊಠಡಿಯಿಂದ ಹೊರಗೆ ಬಂದಳು.

"ಅಮ್ಮಾವ್ರೆ, ನೀವು ಚಿಂತೆಮಾಡಬೇಡಿ. ಮಗೂನ್ನ ನಾನು ನೋಡಿಕೊಳ್ತೀನಿ."

"ನಾನಿರುವವರೆಗೂ ಚಿಂತೆಯಿರಲಿಲ್ಲ. ನಾನು ಅಕಸ್ಮಾತ್ ಕಣ್ಮುಚ್ಚಿದರೆ ಮಗುವಿನ ಗತಿಯೇನು ? ಯಾಕೋ ಪ್ರಮೋದ ಪದ್ಮಿನಿ ಇಬ್ಬರಿಗೂ ಮಗು ಬೇಡವಾಗಿದೆ. ನನಗಂತೂ ಹಗಲೂ ರಾತ್ರಿ ಮಗುವಿನದೇ ಚಿಂತೆ. 'ಮಗು ಬೇಡ' ಅಂತ ವಾಪಸ್ಸು ಮಾಡಿದ್ರೆ ನನ್ನ ಮರ್ಯಾದೆ ಏನಾಗಬಹುದು ಯೋಚಿಸಿ."

"ಅಮ್ಮಾವ್ರೆ, ನೀವು ಯೋಚನೆ ಮಾಡಬೇಡಿ. ದೇವರು ನನಗೆ ಬರೀ ಹೆಣ್ಣು ಸಂತಾನ ಕೊಟ್ಟಿದ್ದಾನೆ. ಇದನ್ನು ಕರೆದುಕೊಂಡು ಹೋಗಿ ಮಗ ಅಂದುಕೊಂಡು ಸಾಕ್ತೀನಿ."

"ಏನೋಪ್ಪ ಏನಾಗತ್ತೋ ?"

"ನೀವು ಚಿಂತೆ ಮಾಡಿದ್ರೆ ಆರೋಗ್ಯ ಹಾಳಾಗತ್ತೆ ಅಷ್ಟೆ."

"ಚಿಂತೆ ಮಾಡದೆ ಹೇಗಿರಲಿ ಭಟ್ರೆ ? ಮುಂದಿನ ತಿಂಗಳು ಮಗೂನ್ನ ದತ್ತು ತೆಗೆದುಕೊಂಡ ಶಾಸ್ತ್ರ ಮಾಡಿ, ಗಣಪತಿ ಹೋಮ ಮಾಡಿ, ಹುಟ್ಟಿದ ಹಬ್ಬ ಆಚರಿಸಿ, ಬಂಧುಬಳಗವನ್ನ ಕರೆಯಬೇಕೂಂತ ಇದ್ದೆ. ಆದ್ರೆ ಈಗ ಅದೆಲ್ಲಾ ಕನಸಾಗಿಹೋಯ್ತು."

"ಸಮಾಧಾನ ತಂದುಕೊಳ್ಳಿಮ್ಮ, ತಾಳ್ಮೆಯಿಂದ ಕಾಯೋಣ ಚಿಕ್ಕಮ್ಮಾವರ ಮನಸ್ಸು ಬದಲಾಗಬಹುದು" ಎಂದರು ಭಟ್ಟರು.

ಪ್ರಮೋದನಾಗಲಿ, ಪದ್ಮಿನಿಯಾಗಲಿ ಮಗುವಿನ ವಿಚಾರ ಯಾರ ಬಳಿಯೂ ಚರ್ಚಿಸಲಿಲ್ಲ. ಅವರಿಬ್ಬರೂ ಎಂದಿನಂತೆ ಮಗುವನ್ನು ಎತ್ತಿಕೊಳ್ಳುತ್ತಿದ್ದರು. ಇತ್ತೀಚೆಗೆ ವಾರದಿಂದ ಸಾಯಂಕಾಲದ ಹೊತ್ತು ಗಂಡ ಹೆಂಡತಿಯರ ಓಡಾಟ ಹೆಚ್ಚಾಗಿತ್ತು. ಅದರ ಕಾರಣ ತಿಳಿಯದೆ ಗಾಯಿತ್ರಿ ದೇವಿ ಒದ್ದಾಡಿದರು.

ಒಂದು ರಾತ್ರಿ ದಂಪತಿಗಳು ಹೊರಗಿನಿಂದ ಬಂದವರೇ ಗಾಯಿತ್ರಿ ದೇವಿಯ ಕೋಣೆಯ ಒಳಗೆ ಬಂದರು.

"ಅಮ್ಮಾ, ಈ ಕಾರ್ಡ್ ನೋಡು."

ಗಾಯಿತ್ರಿದೇವಿ ಲೈಟು ಹಾಕಿ ನೋಡಿದರು. ಏನೂ ಕಾಣಿಸಲಿಲ್ಲ.

"ಕನ್ನಡಕ ಇಲ್ಲಿಲ್ಲ, ನೀನೇ ಓದಿಹೇಳು."

**ಹುಟ್ಟಿದ ಹಬ್ಬದ ಮಮತೆಯ ಕರೆಯೋಲೆ**

ಅವನು ಓದುತ್ತಿದ್ದಂತೆ ಗಾಯಿತ್ರಿದೇವಿ ಕುತೂಹಲದಿಂದ ಕೇಳಿದರು.

"ಯಾರ ಹುಟ್ಟಿದ ಹಬ್ಬ ?"

ಅವನು ಕಾರ್ಡ್ ತೆಗೆದಿಟ್ಟು ಹೇಳಿದ : "ನಮ್ಮ ಮಗನದು. ನಿನ್ನ ಮೊಮ್ಮ ಪ್ರಜ್ವಲ್‌ದು."

ಪದ್ಮಿನಿ ಅತ್ತೆಯ ಕೈ ಹಿಡಿದು ಹೇಳಿದಳು : "ನಾನು ಮೂರ್ಖತನದಿಂದ ಮಗೂನ್ನ ದತ್ತು ತೆಗೆದುಕೊಳ್ಳುವುದು ಬೇಡಾಂತ ಹಠ ಹಿಡಿದಿದ್ದೆ. ಆದರೆ ನೀವು ನನ್ನ ಬರಿದಾದ ಬಾಳಿಗೆ ಅರ್ಥ ಕೊಟ್ರಿ. ನನ್ನ ಮಡಿಲು ತುಂಬಿ ನನ್ನ ಬದುಕಿಗೆ ಕಣ್ಣು ಕೊಟ್ರಿ, ಮುಂದಿನ ಭಾನುವಾರ ಬೆಳಗ್ಗೆ

ಗಣಪತಿ ಹೋಮಮಾಡಿ, ದತ್ತು ಸ್ವೀಕಾರ ಮಾಡಿಕೊಳ್ಳೋಣ. ಸಾಯಂಕಾಲ ಗ್ರ್ಯಾಂಡಾಗಿ ಪಾರ್ಟಿ ಕೊಡೋಣ. ಈ ಗುರುವಾರ 'ಪ್ರಜ್ವಲ್'ನ ಕೋರ್ಟ್ ಮೂಲಕ ಕೊಡ್ತಾರೆ. ಪ್ರಜ್ವಲ್‌ನ ಬಿಟ್ಟು ಇರುವುದಕ್ಕೆ ನಮಗಾಗಲ್ಲ ಅತ್ತೆ."

ಗಾಯಿತ್ರಿದೇವಿಯ ಕಣ್ಣುಗಳಿಂದ ಕಣ್ಣೀರ ಧಾರೆ ಸುರಿಯಿತು. ಅವರು ಖುಷಿಯಿಂದ ಮಗ-ಸೊಸೆಯರನ್ನು ಅಪ್ಪಿಕೊಂಡರು. ತಂದೆಯ ಭುಜ ಒರಗಿದ್ದ 'ಪ್ರಜ್ವಲ್' ಎಲ್ಲಾ ಅರ್ಥವಾದವನಂತೆ ಕೇಕೆಹಾಕಿ ನಕ್ಕ. ಪದ್ಮಿನಿ ಅತ್ತೆಗೆ ಸೋತಿದ್ದರೂ ಒಂದು ಅರ್ಥದಲ್ಲಿ ಗೆದ್ದಿದ್ದಳು.

—(ಮುಗಿಯಿತು)—

# ನಮ್ಮ ಜನಪ್ರಿಯ ಕಾದಂಬರಿಗಳು

| | | |
|---|---|---|
| ಬೀಸಿ ಬಂದ ತಂಗಾಳಿ | ಹೆಚ್. ಜಿ. ರಾಧಾದೇವಿ | 50–00 |
| ಚೈತ್ರ ರಾಗದ ಹಾಡು | ” | 45–00 |
| ಹೇಮಂತದ ಮಧುಪಾನ | ” | 40–00 |
| ಲಾವಣ್ಯ ಲಹರಿ | ” | 40–00 |
| ಬಣ್ಣದ ರಂಗೋಲಿ | ” | 35–00 |
| ಸ್ವಪ್ನಸಿರಿ ಕೈಗೆ ಬಂತು | ” | 35–00 |
| ಒಲವಿನ ಪೂಜೆ | ” | 35–00 |
| ಆಕಾಶದಿಂದ ಹೂಮಳೆ | ” | 35–00 |
| ಮನ ನಿನ್ನ ಬಯಸಿತ್ತು | ” | 35–00 |
| ನೂರು ದೀಪ ಬೆಳಗಿತು | ” | 35–00 |
| ಸುಂದರ ಸುಮಧುರ | ” | 35–00 |
| ಪಡೆದಷ್ಟೂ ಭಾಗ್ಯ | ” | 35–00 |
| ಜೋಡಿ ಹಕ್ಕಿ ಹಾರಿತು | ” | 30–00 |
| ರಾಗಜ್ವಾಲೆ | ” | 30–00 |
| ಕಲ್ಲರಳಿ ಹೂವಾಯ್ತು | ” | 30–00 |
| ಬೆಳಕಾಗಿ ಬಂದವಳು | ” | 28–00 |
| ಕನಸಿನ ಕಿರೀಟ | ” | 28–00 |
| ಬಯಸಿದ ಸಿರಿ ಸಿಕ್ಕಿತು | ” | 28–00 |
| ಬಾಳಿನ ಭಾಗ್ಯ ನಿಧಿ | ” | 32–00 |
| ವಿಜಯ ಧ್ವನಿ | ” | 28–00 |
| ಹಾಲಿನಲ್ಲಿ ಚಂದ್ರಬಿಂಬ | ” | 24–00 |
| ಮನೆ ಬೆಳಕಾಯ್ತು | ” | 26–00 |
| ನೈದಿಲೆ ನಕ್ಕಿತು | ” | 30–00 |
| ಸುರಪುಷ್ಪ ಅರಳಿತು | ” | 26–00 |
| ಕಾಂಚನ ಧಾರಾ | ” | 25–00 |
| ಹಾಲು ಕೊಳದ ಹಂಸ | ” | 16–00 |
| ಶುಭ ವಸಂತ | ” | 20–00 |

| | | |
|---|---|---|
| ಮಹಸು ಮಂದಾರ | ಸಿ. ಎನ್. ಮುಕ್ತಾ | 45–00 |
| ಚಿತ್ತಾರ–ದರ್ಪಣ | „ | 40–00 |
| ಭೂಮಿ ಕೊರೆದ ಬೇರು | „ | 40–00 |
| ಸಂಸಾರದಲ್ಲಿ ಸ....ರಿ....ಗ....ಮ | „ | 30–00 |
| ಅನುರಾಗ ತಂದ ಅನುಬಂಧ | „ | 45–00 |
| ಅಪರಿಚಿತರು | „ | 35–00 |
| ಮೂರು ಮನಸು ನೂರು ಕನಸು | „ | 35–00 |
| ಅಂತರಂಗದಾ ಮೃದಂಗ | „ | 25–00 |
| ಅಸ್ವೀಕೃತರು | „ | 25–00 |
| ಇದುವೇ ಜೀವ ಇದು ಜೀವನ | „ | 25–00 |
| ಚಿಗುರಿದ ಕನಸುಗಳು | „ | 30–00 |
| ಶೃತಿ ಸೇರದ ಹಾಡು | „ | 30–00 |
| ಅಪರಾಜಿತೆ | „ | 25–00 |
| ಪರಿವಾದಿನಿ | „ | 26–00 |
| ನನಸಾಗದ ಕನಸುಗಳು | „ | 15–00 |
| ಗೆಲುವಿನ ಹೆಜ್ಜೆ | „ | 15–00 |
| ಬದುಕಿನ ಬಲೆಯಲ್ಲಿ | „ | 15–00 |
| ಜೀವನ ತರಂಗ | „ | 15–00 |
| ಮೊದಲು ಮಾನವನಾಗು | ಉಷಾ ನವರತ್ನರಾಮ್ | 45–00 |
| ಕ್ಷಮೆಯಿರಲಿ ತಂದೆ | „ | 35–00 |
| ನಮ್ಮ ಮನೆ ಬೆಳಕು | „ | 30–00 |
| ಶುಭ ಹಾರೈಕೆ | „ | 30–00 |
| ಕರುಣಾಳು ಬಾ ಬೆಳಕೆ | „ | 30–00 |
| ಆಸೆಗಳು ನೂರಾರು | „ | 18–00 |
| ಸಂಗಾತಿ | ಎಲ್. ಸಿ. ಸುಮಿತ್ರಾ | 26–00 |
| ಪರಕೀಯರು | „ | 15–00 |
| ಅಂಜಿಕೆ | ಪ್ರೊ. ಕೆ. ಅನಂತರಾವ್ | 15–00 |

E CENTRAL LIBRARY, BANG

| | | |
|---|---|---|
| ಕಪ್ಪು ಕೊಳ | ಅಶ್ವಿನಿ | 16–00 |
| ಬಿಂದಿಯಾ | ” | 16–00 |
| ಪ್ರೇಮ ಸೋಪಾನ | ” | 12–00 |
| ಬಾಲ್ಯ ಸಖ | ” | 10–00 |
| ಮುಂಜಾನೆಯ ಮಂಜು | ಈಚನೂರು ಜಯಲಕ್ಷ್ಮಿ | 20–00 |
| ಕನಸು ಕಾಣದ ಕಣ್ಣು | ” | 16–00 |
| ಹಿಮ ತೊಳೆದ ಹೂ | ” | 15–00 |
| ಚಿತ್ರಪಾವನ | ” | 10–00 |
| ಬಾಳಿಗೆ ನೀನಾಗು ಆಸರೆ | ಪದ್ಮಜಾ ಸುಂದರೇಶ್ | 35–00 |
| ನೂರು ನೆನಪು ಮನದಲ್ಲಿ | ” | 30–00 |
| ಅಂಟಿದ ಅಪರಂಜಿ | ಡಾ| ಶಿವರಾಮ ಕಾರಂತ | 20–00 |
| ಸನ್ಯಾಸಿಯ ಬದುಕು | ” | 16–00 |
| ಕುಡಿಯರ ಕೂಸು | ” | 30–00 |
| ಇದ್ದರೂ ಚಿಂತೆ | ” | 20–00 |
| ಮದನ ಬಾಣ | ತ್ರಿ. ಪು. ವೆಂಕಟರಾಮ್ | 20–00 |
| ಮಂಜು ಮುಸುಕಿದ ಶಿಖರ | ” | 20–00 |
| ಕಲ್ಲು ಫಣಿ ನುಡಿಯಿತು | ” | 10–00 |
| ಶಾಂತಲಾ | ಕೆ. ವಿ. ಅಯ್ಯರ್ | 100–00 |
| ಲೀನಾ | ” | 15–00 |
| ಚಂದನದ ಗೊಂಬೆ | ತ. ರಾ. ಸು. | 15–00 |
| ರಾಜ್ಯಪ್ರಾಪ್ತಿ | ಮ. ನ. ಮೂರ್ತಿ | 10–00 |
| ಪಂಕಜ ಪರಿಣಯ | ದಾಶರಥಿ ದೀಕ್ಷಿತ್ | 25–00 |

ತಮಗೆ ಬೇಕಾದ ಇತರ ಕನ್ನಡ ಪುಸ್ತಕಗಳಿಗೆ ನಮ್ಮಲ್ಲಿಗೆ ಬನ್ನಿರಿ ಅಥವಾ ಬರೆಯಿರಿ

**ಗೀತಾ ಏಜನ್ಸೀಸ್**

(ಸಗಟು ಪುಸ್ತಕ ವ್ಯಾಪಾರಿಗಳು)

ಬಳೇಪೇಟೆ ಚೌಕ, ಬೆಂಗಳೂರು-53

✆ 2874226




ರಾಜಲಕ್ಷ್ಮೀ ಪ್ರಕಾಶನ